ಭಾನುವಾರ, ಫೆಬ್ರುವರಿ 20, 2022 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜ. 28ರ ಆದೇಶದಿಂದ 1,500 ಎಸ್‌ಸಿ, ಎಸ್‌ಟಿ ನೌಕರರ ಬಡ್ತಿಗೆ ತೊಂದರೆ

‘ಸುಪ್ರೀಂ’ ಆದೇಶ: ಮತ್ತೆ ಹಿಂಬಡ್ತಿ?

• ರಾಜೇಶ್ ರೈ ಚಟ್ಲ

ಬೆಂಗಳೂರು: ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಜ. 28ರಂದು ನೀಡಿರುವ ಮಧ್ಯಂತರ ಆದೇಶ ಜಾರಿಗೆ ರಾಜ್ಯ ಸರ್ಕಾರ ಮುಂದಡಿ ಇಟ್ಟಿದೆ. ಈ ಆದೇಶ ಜಾರಿಯಿಂದ 15ಕ್ಕೂ ಹೆಚ್ಚು ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಗೊಂಡ 1,500ಕ್ಕೂ ಹೆಚ್ಚು ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದ (ಎಸ್‌ಟಿ) ನೌಕರರ ಮುಂಬಡ್ತಿ ಮೇಲೆ ಪರಿಣಾಮ ಬೀಳುವ ಸಾಧ್ಯತೆ ಇದೆ. ಸ್ವಂತ ಅರ್ಹತೆಯಲ್ಲಿ ನೇಮಕಗೊಂಡು ಬಡ್ತಿ ಪಡೆದ ಎಸ್‌ಸಿ, ಎಸ್‌ಟಿ ನೌಕರರ ಬಡ್ತಿಗೂ ಸಮಸ್ಯೆ ಆಗಲಿದೆ.

‘ಸರ್ಕಾರಿ ನೌಕರಿಯಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದವರಿಗೆ (ಎಸ್‌ಟಿ) ಬಡ್ತಿಯಲ್ಲಿ ಮೀಸಲಾತಿ ನೀಡುವ ವೇಳೆ ಅಗತ್ಯ ಪ್ರಾತಿನಿಧ್ಯ ಇಲ್ಲ ಎಂಬುದನ್ನು ಇಡೀ ಸೇವೆಯಲ್ಲಿ ಅಥವಾ ವರ್ಗದಲ್ಲಿ ಇರುವ ಪ್ರಾತಿನಿಧ್ಯದ ಆಧಾರದಲ್ಲಿ ನಿರ್ಧರಿಸುವಂತಿಲ್ಲ. ಯಾವ ಶ್ರೇಣಿ ಅಥವಾ ಹುದ್ದೆಯ ವರ್ಗಕ್ಕೆ ಬಡ್ತಿ ಕೇಳಲಾಗಿದೆಯೋ ಆ ಶ್ರೇಣಿ ಅಥವಾ ಹುದ್ದೆ ವರ್ಗದಲ್ಲಿ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ನೋಡಿಕೊಂಡು ನಿರ್ಧರಿಸಬೇಕು’ ಎಂದು ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶದಲ್ಲಿ ತಿಳಿಸಿತ್ತು.

ರಾಜ್ಯದಲ್ಲಿ ಈ ಆದೇಶ ಜಾರಿಗೊಳಿಸುವ ಕುರಿತಂತೆ ಅಡ್ವೊಕೇಟ್ ಜನರಲ್ ಅವರಿಂದ ಸರ್ಕಾರ ಅಭಿಪ್ರಾಯ ಪಡೆದಿದೆ. ಅಲ್ಲದೆ, ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಎಸ್‌ಸಿ, ಎಸ್‌ಟಿ ನೌಕರರ ಸಂಖ್ಯೆಯ ಬಗ್ಗೆ ಮುಖ್ಯ ಕಾರ್ಯದರ್ಶಿ ಮಾಹಿತಿ ಪಡೆದುಕೊಂಡಿದ್ದಾರೆ ಎಂದು ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಪವಿತ್ರ-1’ ಪ್ರಕರಣದಲ್ಲಿ ‘ಬಡ್ತಿ ಮೀಸಲು ಕಾಯ್ದೆ-2002’ ಅನ್ನು ರದ್ದುಪಡಿಸಿ ಸುಪ್ರೀಂ ಕೋರ್ಟ್ 2017ರ ಫೆ. 9ರಂದು ನೀಡಿದ್ದ ತೀರ್ಪು ಜಾರಿಯಿಂದ 3,798 ಎಸ್‌ಸಿ, ಎಸ್‌ಟಿ ನೌಕರರು ಹಿಂಬಡ್ತಿಗೆ ಒಳಗಾಗಿದ್ದರು. 65 ಸಾವಿರಕ್ಕೂ ಹೆಚ್ಚು ನೌಕರರ ಜ್ಯೇಷ್ಠತೆಯ ಮೇಲೆ ಪರಿಣಾಮ ಉಂಟಾಗಿತ್ತು. ಹೀಗೆ ಹಿಂಬಡ್ತಿಗೆ ಒಳಗಾಗಿದ್ದ ಈ ನೌಕರರ ಹಿತರಕ್ಷಣೆಗೆ ರಾಜ್ಯ ಸರ್ಕಾರ, ‘ತತ್ಪರಿಣಾಮದ ಜ್ಯೇಷ್ಠತೆ ವಿಸ್ತರಿಸುವ ಕಾಯ್ದೆ-2017’ ರೂಪಿಸಿತ್ತು. ಈ ಕಾಯ್ದೆಯನ್ನು ‘ಪವಿತ್ರ- 2’ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸಿಂಧುಗೊಳಿಸಿದ್ದರಿಂದ ಹಿಂಬಡ್ತಿಗೆ ಒಳಗಾಗಿದ್ದ ನೌಕರರನ್ನು ಹಿಂಬಡ್ತಿ ಪೂರ್ವದಲ್ಲಿದ್ದ ಹುದ್ದೆಗೆ ಮರು ನಿಯುಕ್ತಿಗೊಳಿಸಲಾಗಿತ್ತು. ಅಲ್ಲದೆ, 1978ರ ಏಪ್ರಿಲ್ 27ರಿಂದ ಅನ್ವಯವಾಗುವಂತೆ ಈ ಕಾಯ್ದೆಯಲ್ಲಿರುವ ಅಂಶಗಳ ಆಧಾರದಲ್ಲಿ ಜ್ಯೇಷ್ಠತಾ ಪಟ್ಟಿ ಪುನರ್ ಅವಲೋಕಿಸಬೇಕಿತ್ತು.

ಇದೀಗ, ಜ. 28ರ ಆದೇಶ ಜಾರಿಯಾದರೆ, ಪ್ರತಿ ಇಲಾಖೆಯಲ್ಲಿ ಒಟ್ಟು ವೃಂದ ಬಲದ ಆಧಾರದಲ್ಲಿ ಬಡ್ತಿ ಮೀಸಲಾತಿ ನಿರ್ಧಾರ ಆಗಲಿದೆ. 15ಕ್ಕೂ ಹೆಚ್ಚು ಇಲಾಖೆಗಳಲ್ಲಿ ಖಾಲಿ ಮತ್ತು ನಿವೃತ್ತಿಯಾದ ಹುದ್ದೆಗಳಿಗೆ ನೇಮಕಾತಿ ನಡೆಯದೆ ಇರುವುದರಿಂದ, ಎಲ್ಲೆಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿದೆಯೊ ಅಲ್ಲಿ ಹಿಂಬಡ್ತಿ ಸಮಸ್ಯೆ ಸೃಷ್ಟಿಯಾಗಲಿದೆ. ಸುಮಾರು 20 ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆಗೆ ನೇಮಕಗೊಂಡ 846 ಸಹಾಯಕ ಎಂಜಿನಿಯರ್ ಮತ್ತು 516 ಜೂನಿಯರ್ ಎಂಜಿನಿಯರ್‌ಗಳ ಬಡ್ತಿ ಮೇಲೆ ಪರಿಣಾಮ ಉಂಟಾಗಲಿದೆ. ಅಲ್ಲದೆ, ಸ್ವಂತ ಅರ್ಹತೆ (ಮೆರಿಟ್) ಆಧಾರದಲ್ಲಿ ನೇಮಕಗೊಂಡ ಎಸ್‌ಸಿ ಮತ್ತು ಎಸ್‌ಟಿ ನೌಕರರನ್ನು ಕೂಡಾ ಶೇ 15:3 ಮೀಸಲಾತಿ ಕೋಟಾಕ್ಕೆ ಪರಿಗಣಿಸಬೇಕಾಗುತ್ತದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಸುಪ್ರೀಂಕೋರ್ಟ್‌ನ ಜ. 28ರ ತೀರ್ಪು ಅನುಷ್ಠಾನಗೊಳಿಸುವಂತೆ ‘ಅಹಿಂಸಾ’ (ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ) ನೌಕರರ ಒಕ್ಕೂಟ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ ಬೆನ್ನಲ್ಲೆ, ‘ಸುಪ್ರೀಂಕೋರ್ಟ್ ಮಧ್ಯಂತರ ಅಭಿಪ್ರಾಯ ನೀಡಿದೆ. ಅದನ್ನು ಆಧರಿಸಿ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದು’ ಎಂದು ಮುಖ್ಯ ಕಾರ್ಯದರ್ಶಿಗೆ ರಾಜ್ಯ ಸರ್ಕಾರಿ ಎಸ್‌ಸಿ ಹಾಗೂ ಎಸ್‌ಟಿ ನೌಕರರ ಸಂಘವು ಮನವಿಯನ್ನು ಸಲ್ಲಿಸಿದೆ.



ಸುಪ್ರೀಂಕೋರ್ಟ್ ಆದೇಶ ಕರ್ನಾಟಕಕ್ಕೆ ಸಂಬಂಧಿಸಿದ್ದಲ್ಲ. ರಾಜ್ಯದಲ್ಲಿ ಜ್ಯೇಷ್ಠತೆ ಸಂರಕ್ಷಣೆ ಕಾಯ್ದೆ ಜಾರಿಯಲ್ಲಿದೆ. ಕೋರ್ಟ್‌ನ ಈ ಆದೇಶ ಆಧರಿಸಿ ಕ್ರಮ ತೆಗೆದುಕೊಳ್ಳಬಾರದು


ಡಿ. ಚಂದ್ರಶೇಖರಯ್ಯ, ಅಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ



ಸುಪ್ರೀಂ ಆದೇಶದ ಬಗ್ಗೆ ಪರಿಶೀಲನೆ ನಡೆಸಬೇಕಿದೆ. ಅಡ್ವೊಕೇಟ್ ಜನರಲ್ ಅವರಿಂದ ನನಗೆ ಯಾವುದೇ ಸ್ಪಷ್ಟನೆ ಬಂದಿಲ್ಲ. ಸರ್ಕಾರ ಇನ್ನೂ ಯಾವುದೇ ತೀರ್ಮಾನ ಮಾಡಿಲ್ಲ

ಪಿ. ರವಿಕುಮಾರ್

ಮುಖ್ಯ ಕಾರ್ಯದರ್ಶಿ



ತೀರ್ಪನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅನೇಕ ಇಲಾಖೆಗಳಲ್ಲಿ ಎಸ್‌ಸಿ, ಎಸ್‌ಟಿ ಪ್ರಾತಿನಿಧ್ಯ ಶೇ 18ಕ್ಕಿಂತ ಹೆಚ್ಚು, ಕೆಲವು ಇಲಾಖೆಗಳಲ್ಲಿ ಶೇ 60, 70 ಇದೆ.

ಎಂ. ನಾಗರಾಜ್

ಅಧ್ಯಕ್ಷ, ಅಹಿಂಸಾ ಸಂಘಟನೆ

ಪ್ರಜಾವಾಣಿ ವಿಶೇಷ

ಒಟ್ಟು ಸರ್ಕಾರಿ ಹುದ್ದೆಗಳಲ್ಲಿ ಎಸ್‌ಸಿ, ಎಸ್‌ಟಿ ಪ್ರಾತಿನಿಧ್ಯ (ಶೇ)

ವರ್ಷ	ಎಸ್‌ಸಿ	ಎಸ್‌ಟಿ
2019	11.26	3.11
2020	11.24	3.18

ಲೋಕೋಪಯೋಗಿ ಇಲಾಖೆಯಲ್ಲಿ ವೃಂದ ಬಲ (ಶೇ)

ವೃಂದ	ಎಸ್‌ಸಿ	ಎಸ್‌ಟಿ
ಎಸ್‌ಇ	90.48	4.76
ಇಇ	19.39	6.80
ಎಇಇ-1	37.07	4.35
ಎಇಇ-2	17.90	5.26

ಜಲಸಂಪನ್ಮೂಲ ಇಲಾಖೆಯಲ್ಲಿ ವೃಂದ ಬಲ (ಶೇ)

ವೃಂದ	ಎಸ್‌ಸಿ	ಎಸ್‌ಟಿ
ಎಸ್‌ಇ	90.01	9.9
ಇಇ	19.6	12
ಎಇಇ-1	29.08	5.2
ಎಇಇ-2	17.6	3.6

ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೇಣಿಯಿಂದ ಅರಣ್ಯ ಸಂರಕ್ಷಣಾಧಿಕಾರಿ ಶ್ರೇಣಿಗೆ ಆರು ಐಎಫ್‌ಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಶನಿವಾರ ಆದೇಶ ಹೊರಡಿಸಲಾಗಿದೆ..

ವರ್ಗಾವಣೆಗೊಂಡವರು: ಎಂ.ಸಿ. ಸಿದ್ದರಾಮಪ್ಪ- ಚಿಕ್ಕಮಗಳೂರು ವೃತ್ತ. ಮಾಲತಿ ಪ್ರಿಯಾ- ಮೈಸೂರು ವೃತ್ತ. ಪಿ. ರಮೇಶ್ ಕುಮಾರ್- ನಿರ್ದೇಶಕರು, ಬಂಡೀಪುರ ರಾಷ್ಟ್ರೀಯ ಉದ್ಯಾನ; ಪ್ರಭಾಕರ್ ಪ್ರಿಯದರ್ಶಿ- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ; ಸುಮಿತ್‌ಕುಮಾರ್ ಸುಭಾಷ್‌ರಾವ್ ಪಾಟೀಲ್- ಬೆಂಗಳೂರು ಗ್ರಾ. ವಿಭಾಗ, ಸಂದೀಪ್ ಹಿಂದುರಾವ್ ಸೂರ್ಯವಂಶಿ- ಬಳ್ಳಾರಿ ವಿಭಾಗ.

ಕೋವಿಡ್: ಹೊಸ ಪ್ರಕರಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. 24 ಗಂಟೆಗಳ ಅವಧಿಯಲ್ಲಿ 1,137 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಶುಕ್ರವಾರ 1,333 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿತ್ತು. ಸೋಂಕು ದೃಢ ಪ್ರಮಾಣವು ಕೂಡಾ ಶೇ 1.43ಕ್ಕೆ ಇಳಿದಿದೆ. ರಾಜ್ಯದ 12 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆ ವರದಿಯಾಗಿವೆ.

ಉತ್ತರ ಕನ್ನಡ ಮತ್ತು ರಾಯಚೂರಿನಲ್ಲಿ ತಲಾ 9, ಕೊಪ್ಪಳ, ಚಿಕ್ಕಬಳ್ಳಾಪುರ ಮತ್ತು ಬಾಗಲಕೋಟೆಯಲ್ಲಿ ತಲಾ 7, ಕೋಲಾರದಲ್ಲಿ 6, ಬೆಂಗಳೂರು ಗ್ರಾಮಾಂತರ ಮತ್ತು ಬೀದರ್‌ನಲ್ಲಿ ತಲಾ 5, ಚಿಕ್ಕಮಗಳೂರಿನಲ್ಲಿ 3, ದಾವಣಗೆರೆ, ಯಾದಗಿರಿ ಮತ್ತು ಗದಗದಲ್ಲಿ 2 ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 646 ಮಂದಿ ಸೋಂಕಿತರಾಗಿದ್ದಾರೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 39.35 ಲಕ್ಷಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲೂ ಮತ್ತಷ್ಟು ಇಳಿಕೆಯಾಗಿದ್ದು, ಸದ್ಯ 13,431 ಸೋಂಕಿತರು ಇದ್ದಾರೆ. ಸೋಂಕಿತರಲ್ಲಿ 20 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲೇ 8 ಮಂದಿ ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 1.75ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,777ಕ್ಕೆ ತಲುಪಿದೆ.


ಬೆಂಗಳೂರಿನಲ್ಲಿ 1,901 ಮಂದಿ ಸೇರಿ ರಾಜ್ಯದಲ್ಲಿ 3,870 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.82 ಲಕ್ಷಕ್ಕೆ ತಲುಪಿದೆ.

ಭಾನುವಾರ, ಫೆಬ್ರುವರಿ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 51 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದೇಶ ಸುತ್ತುವುದರಿಂದ,
ಕೋಶ ಓದುವುದರಿಂದ
ದೊರಕುವ ಜ್ಞಾನಗಳು
ಬೇರೆ ಬೇರೆ. ಒಂದಕ್ಕೊಂದು
ಪೂರಕವಾದಾವೆಯೇ ಹೊರತು,
ಪರ್ಯಾಯವಂತೂ ಆಗಲಾರವು...



ಕಾಡುನಾಶದ ವೇಗಕ್ಕೆ ಉತ್ತೇಜನ ನೀಡಿದ ಸರ್ಕಾರದ ಎಡವಟ್ಟು ನಿರ್ಧಾರಗಳು

ಅರಣ್ಯದ 'ಅರಣ್ಯರೋದನ'

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಪಶ್ಚಿಮಘಟ್ಟದ ಮಲೆನಾಡಿನ ಯಾವುದೇ ಜಿಲ್ಲೆಗೆ ಹೋದರೂ ರಸ್ತೆಯ ಇಕ್ಕೆಲಗಳಲ್ಲಿ ಹಬ್ಬಿದ ಬೃಹತ್ ಮರಗಳು, ಸಸ್ಯ ಸಂಪತ್ತು ನೋಡಿ ಪ್ರವಾಸಿಗರು ಬೆರಗಾಗದೇ ಇರಲು ಸಾಧ್ಯವಿಲ್ಲ. ರಸ್ತೆಯಿಂದ ತುಸು ದೂರ ಸಾಗಿದರೆ ಸಾಕು, ಅರಣ್ಯ ಪ್ರದೇಶದ ನಿಜವಾದ ಬಂಡವಾಳ ಬಯಲಾಗುತ್ತದೆ. ಅಷ್ಟೊಂದು ಕಾಡು ನಾಶವಾಗಿರುವುದು ಆಘಾತ ತರುತ್ತದೆ.

ಭಾರತೀಯ ಅರಣ್ಯ ಸರ್ವೇಕ್ಷಣಾ ಸಂಸ್ಥೆ ಬಿಡುಗಡೆ ಮಾಡಿದ ರಾಜ್ಯದ ಅರಣ್ಯ ಸ್ಥಿತಿಗತಿಯ ವರದಿ ಪ್ರಕಾರ ರಾಜ್ಯದ 1.91 ಲಕ್ಷ ಚದರ ಕಿಲೋಮೀಟರ್ ಭೂ ಪ್ರದೇಶದಲ್ಲಿ ಶೇ 20.11 ಅರಣ್ಯ ಪ್ರದೇಶವಿದೆ. ಕಳೆದ ಒಂದು ದಶಕದಲ್ಲಿ ಆಗಿರುವ ಅರಣ್ಯ ನಾಶ, ಒತ್ತುವರಿಯನ್ನು ಸರ್ವೆ ಮೂಲಕ ಅಳತೆ ಮಾಡಿದರೆ ಶೇ 8ಕ್ಕಿಂತ ಹೆಚ್ಚು ಕಾಡು ನಾಶವಾಗಿರಬಹುದು ಎನ್ನುವುದು ಅರಣ್ಯ, ಪರಿಸರ ವಿಜ್ಞಾನಿಗಳ ಅಭಿಮತ.

ಕಂದಾಯ ಭೂಮಿ ಬರಿದಾಗಿಸಿದ ಬಗರ್‌ಹುಕುಂ: ರಾಜ್ಯದಲ್ಲಿರುವ 191 ಲಕ್ಷ ಹೆಕ್ಟೇರ್ ಭೂಪ್ರದೇಶದಲ್ಲಿ ಶೇ 65ರಷ್ಟು ಕೃಷಿ ಜಮೀನು, ಶೇ 20ರಷ್ಟು ಅರಣ್ಯ, ಶೇ 7ರಷ್ಟು ಜನವಸತಿ ಇದೆ. ಉಳಿದ ಶೇ 8ರಷ್ಟು ಸಾಮೂಹಿಕ

ಒಳನೋಟ
ಶೇ 20ರಷ್ಟು ಅರಣ್ಯ ಇದೆಯೇ?
ಪ್ರತಿಕ್ರಿಯಿಸಿ: 9606038256
feedback@prajavani.co.in

ಭೂಮಿ. ರಾಜ್ಯ ಸರ್ಕಾರದ ದಾಖಲೆಗಳ ಪ್ರಕಾರ 62.72 ಲಕ್ಷ ಹೆಕ್ಟೇರ್ ಸರ್ಕಾರಿ ಜಮೀನಿದೆ.

1990–92ರಲ್ಲಿ ಮೊದಲ ಬಾರಿ ಕಂದಾಯ ಜಮೀನುಗಳನ್ನು ಅನಧಿಕೃತವಾಗಿ ಸಾಗುವಳಿ ಮಾಡಿದ ರೈತರಿಗೆ ಭೂ ಮಂಜೂರಾತಿ ನೀಡಲು ಫಾರಂ 50 ಅಡಿ ಅವಕಾಶ ಕಲ್ಪಿಸಲಾಯಿತು. ಸ್ವಲ್ಪ ವರ್ಷಗಳಲ್ಲೇ ಮತ್ತೆ ಫಾರಂ 53 ಅಡಿ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಯಿತು. 50ರಲ್ಲಿ 10 ಲಕ್ಷಕ್ಕೂ ಹೆಚ್ಚು, 53ರಲ್ಲಿ 10 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಮೊದಲ ಅರ್ಜಿಗಳಲ್ಲಿ ಶೇ 30ರಷ್ಟು ಇತ್ಯರ್ಥವಾದರೆ, ಎರಡನೇ ಅವಕಾಶದಲ್ಲಿ ಶೇ 10ರಷ್ಟೂ ಇತ್ಯರ್ಥವಾಗಿಲ್ಲ. ಇತ್ಯರ್ಥವಾಗದ ಒತ್ತುವರಿ ಭೂಮಿ 9.97 ಲಕ್ಷ ಎಕರೆ ಇದೆ. 2005 ಜನವರಿ 1ಕ್ಕೂ ಮೊದಲು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂರಹಿತರು, ಸಣ್ಣ ರೈತರ ಜಮೀನುಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94 ಎ(4) ಅಡಿ ನಮೂನೆ 57ರ ಅಡಿ ಅರ್ಜಿ ಸಲ್ಲಿಸಲು 2018ರಲ್ಲಿ ಸರ್ಕಾರ ಮತ್ತೆ ಅವಕಾಶ ನೀಡಿತ್ತು. 2018ರ ಮಾರ್ಚ್ 17ರಿಂದ 2019ರ ಮಾರ್ಚ್ 16ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು.

4ನೇ ಪುಟ ನೋಡಿ


ಶಿವಮೊಗ್ಗ–ಸಾಗರ ರಸ್ತೆಯಲ್ಲಿ ಶುಂಠಿ ಬೆಳೆಗಾಗಿ ಅರಣ್ಯ ನಾಶ

ಬಗರ್‌ಹುಕುಂ ಅರ್ಜಿಗಳು

ನಮೂನೆ	ಸಲ್ಲಿಕೆಯಾದ ಅರ್ಜಿ	ತಿರಸ್ಕೃತ ಅರ್ಜಿ	ಬಾಕಿ ಇರುವ ಅರ್ಜಿ
50	10,89,268	6,98,220	10,568
53	10,98,397	7,37,435	1,45,845
57	8,02,198	-	-



ಸುಗಮ ಜೀವನ ನಿರ್ವಹಣೆಗೆ ಒಂದು ಕುಟುಂಬಕ್ಕೆ ಕನಿಷ್ಠ ಎರಡು ಎಕರೆ ಜಮೀನು ಅಗತ್ಯ. ಉಳುವ ರೈತನಿಗೆ ಭೂಹಕ್ಕು ಸಿಗಬೇಕು. ಹಿಂದೆ ಪಕ್ಷಾತೀತವಾಗಿ ನೀಡಿದ್ದ ಸಾಗುವಳಿ ಪತ್ರಗಳನ್ನು ಈಗಿನ ಸರ್ಕಾರ ರದ್ದು ಮಾಡುತ್ತಿರುವುದು ಸರಿಯಲ್ಲ
ಕಾಗೋಡು ತಿಮ್ಮಪ್ಪ, ಮಾಜಿ ಕಂದಾಯ ಸಚಿವ



ನಿಯಮ ದುರ್ಬಳಕೆ ಮಾಡಿಕೊಂಡ ಜನರು ಬೇಕಾಬಿಟ್ಟಿ ಅರಣ್ಯ ನಾಶ ಮಾಡಿದ್ದಾರೆ. 3 ಎಕರೆ ಒಳಗಿದ್ದರೆ ಕ್ರಮಕೈಗೊಳ್ಳದಂತೆ ಸರ್ಕಾರವೇ ಹೇಳಿದೆ. ಬೆಳೆಗಾಗಿಯೇ ಶೇ 80ರಷ್ಟು ಅರಣ್ಯ ನಾಶವಾಗಿದೆ
ಅಖಿಲೇಶ್ ಚಿಪ್ಪಳಿ, ಪರಿಸರವಾದಿ



ಅರ್ಹರಲ್ಲದ ಖಾಸಗಿ ವ್ಯಕ್ತಿಗಳು, ಸಂಘಟನೆಗಳಿಗೆ ಗೋಮಾಳ ಭೂಮಿ ಹಂಚುವ ಕುರಿತು ನಿಯಮಾವಳಿ ರಚಿಸಲು ಹೊರಟಿರುವುದು ಸಾರ್ವಜನಿಕ ಒಳಿತಿಗೆ ವಿರುದ್ಧದ ನಡೆ
ಕೇಶವ ಎಚ್‌.ಕೊರ್ಸೆ
ಪರಿಸರ ವಿಜ್ಞಾನಿ

ಇನ್ನಷ್ಟು ಸುದ್ದಿಗಳು 4

ಪಂಜಾಬ್ ವಿಧಾನಸಭೆಗೆ ಇಂದು ಮತದಾನ

ನವದೆಹಲಿ (ಪಿಟಿಐ): 117 ಸದಸ್ಯ ಬಲದ ಪಂಜಾಬ್ ವಿಧಾನಸಭೆಗೆ ಭಾನುವಾರ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. 1,304 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಉತ್ತರ ಪ್ರದೇಶ ವಿಧಾನಸಭೆಯ ಮೂರನೇ ಹಂತದ ಮತದಾನ ಭಾನುವಾರ ನಡೆಯಲಿದೆ. 59 ಕ್ಷೇತ್ರಗಳ 627 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಪಂಜಾಬ್‌ನಲ್ಲಿ ಬೆಳಿಗ್ಗೆ 8ರಿಂದ ಸಂಜೆ 6 ಗಂಟೆವರೆಗೆ ಹಾಗೂ ಉತ್ತರ ಪ್ರದೇಶದಲ್ಲಿ ಬೆಳಿಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದೆ.

ಪಂಜಾಬ್‌ನಲ್ಲಿ ಕಾಂಗ್ರೆಸ್ ಹಾಗೂ ಉತ್ತರ ಪ್ರದೇಶದಲ್ಲಿ ಬಿಜೆಪಿ ಸರ್ಕಾರಗಳು ಈಗ ಅಸ್ತಿತ್ವದಲ್ಲಿವೆ. ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಪ್ರಮುಖ ಎದುರಾಳಿ ಎಂದು ಬಿಂಬಿತವಾಗಿದೆ. ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷ (ಎಸ್‌ಪಿ) ಪ್ರಬಲ ಪೈಪೋಟಿ ನೀಡುವ ಸಾಧ್ಯತೆಯಿದೆ. ಮಾರ್ಚ್ 10ರಂದು ಮತ ಎಣಿಕೆ ನಡೆಯಲಿದೆ.

ಇನ್ನಷ್ಟು ಸುದ್ದಿಗಳು 8


15-4-1932 - 19-2-2022

'ವೈದ್ಯಕೀಯ ಕೋರ್ಸ್ ಪರೀಕ್ಷೆ ರದ್ದು ಅಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವಿದ್ಯಾಲಯದ ನೀತಿಗಳನ್ನು ವಿದ್ಯಾರ್ಥಿಗಳು ನಿರ್ದೇಶಿಸಲು ಸಾಧ್ಯವಿಲ್ಲ' ಎಂದು ಹೇಳಿರುವ ಹೈಕೋರ್ಟ್, ಪರೀಕ್ಷೆ ಮುಂದೂಡುವಂತೆ ಕೋರಿದ್ದ ವೈದ್ಯಕೀಯ ವಿದ್ಯಾರ್ಥಿಗಳ ಮನವಿಯನ್ನು ತಳ್ಳಿ ಹಾಕಿದೆ.

'ಕೋವಿಡ್ ಸಮಯದಲ್ಲಿ ನಾವು ಮುಂಚೂಣಿ ಯೋಧರಾಗಿ ಕೆಲಸ ಮಾಡಿದ್ದೇವೆ. ನಮಗೆ ಅಧ್ಯಯನ ನಡೆಸಲು ಸಮಯಾವಕಾಶ ಸಿಕ್ಕಿಲ್ಲ. ಹೀಗಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಪ್ರಕಟಿಸಿರುವ ಪರೀಕ್ಷಾ ವೇಳಾಪಟ್ಟಿ ರದ್ದುಗೊಳಿಸಬೇಕು' ಎಂದು ಕೋರಿ ತರುಣ್ ಕೆ. ರೆಡ್ಡಿ ಸೇರಿದಂತೆ 39 ವೈದ್ಯ ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

'ಪರೀಕ್ಷೆಗಳು ಹೇಗೆ, ಯಾವ ರೀತಿ ನಡೆಯಬೇಕು ಎಂಬುದನ್ನು ಆಯಾ ವಿಶ್ವವಿದ್ಯಾಲಯಗಳೇ ನಿರ್ಧರಿಸುತ್ತವೆ. ಶೈಕ್ಷಣಿಕ ನೀತಿಗಳು ಹೀಗೇ ಇರಬೇಕು ಎಂದು ವಿದ್ಯಾರ್ಥಿಗಳು ತಾಕೀತು ಮಾಡುವಂತಿಲ್ಲ. ಇಂಥ ಅರ್ಜಿಗಳನ್ನು ಶಾಸನಾತ್ಮಕ ಪರಿಧಿಯಲ್ಲಿ ನ್ಯಾಯಾಂಗದ ನಿಷ್ಕರ್ಷೆಗೆ ಒಳಪಡಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಒಳ ಪುಟಗಳು

'ಕಲಾತಪಸ್ವಿ' ರಾಜೇಶ್ ನಿಧನ

ಬೆಂಗಳೂರು: ಚಿತ್ರ ನಟ 'ಕಲಾತಪಸ್ವಿ' ರಾಜೇಶ್ (90) ಅವರು ಶನಿವಾರ ಬೆಳಗಿನ ಜಾವ ನಿಧನರಾದರು. ತೀವ್ರ ಅನಾರೋಗ್ಯಕ್ಕೊಳಗಾಗಿದ್ದ ಅವರನ್ನು ಇತ್ತೀಚೆಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ನಿಧನರಾದರು.

ಅವರಿಗೆ ಒಬ್ಬ ಪುತ್ರಿ ಇದ್ದಾರೆ.

ಅಭಿಮಾನಿಯಿಂದ ಅಂತ್ಯಕ್ರಿಯೆಗೆ ಜಾಗ: ರಾಜೇಶ್ ಅಂತ್ಯಕ್ರಿಯೆಗೆ ಅವರ ಅಭಿಮಾನಿ ಸಿದ್ದಲಿಂಗಯ್ಯ ಎಂಬುವವರು ತುಮಕೂರು ರಸ್ತೆಯ ಗೋವಿಂದಪುರದಲ್ಲಿ 10 ಗುಂಟೆಗಳಷ್ಟು ಜಾಗವನ್ನು ಉಚಿತವಾಗಿ ನೀಡಿದ್ದಾರೆ. ಅಲ್ಲಿಯೇ ಸಂಜೆ ಅಂತ್ಯಕ್ರಿಯೆ ನಡೆಸಲಾಯಿತು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಗರದ ಕಸ ವಿಲೇವಾರಿ ಪುನರ್ ಆರಂಭ

ಬೆಂಗಳೂರು: ನಗರದಲ್ಲಿ ಕಸ ವಿಲೇವಾರಿ ಮಾಡಿರುವ ಎಂಟು ತಿಂಗಳ ಬಿಲ್ ಬಾಕಿ ಪಾವತಿಗೆ ಆಗ್ರಹಿಸಿ ಪ್ರತಿಭಟನೆ ಆರಂಭಿಸಿದ್ದ ಕಸ ವಿಲೇವಾರಿ ಗುತ್ತಿಗೆದಾರರ ಜತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಶನಿವಾರ ಸಂಧಾನ ಸಭೆ ನಡೆಸಿದರು. ಮುಖ್ಯ ಆಯುಕ್ತರ ಭರವಸೆಗೆ ಒಪ್ಪಿದ ಗುತ್ತಿಗೆದಾರರು ಮತ್ತು ಕಾರ್ಮಿಕರು ಪ್ರತಿಭಟನೆ ಕೈಬಿಟ್ಟು ಕೆಲಸಕ್ಕೆ ಮರಳಿದ್ದಾರೆ.

'ವಿಶೇಷ ಆಯುಕ್ತರಾದ (ಹಣಕಾಸು) ತುಳಸಿ ಮದ್ದಿನೇನಿ ಅವರ ಸರ್ವಾಧಿಕಾರಿ ಧೋರಣೆಯಿಂದಾಗಿ, ಎಂಟು ತಿಂಗಳುಗಳಿಂದ ಸುಮಾರು ₹250 ಕೋಟಿ ಬಿಲ್ ಬಾಕಿ ಉಳಿದಿದೆ. ಕೂಡಲೇ ಬಿಲ್ ಪಾವತಿ ಮಾಡಬೇಕು' ಎಂದು ಆಗ್ರಹಿಸಿ ಬಿಬಿಎಂಪಿ ಕಚೇರಿ ಎದುರು ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಶುಕ್ರವಾರ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದರು.

ಕಸ ವಿಲೇವಾರಿಯನ್ನೂ ಸ್ಥಗಿತಗೊಳಿಸಿದ್ದರು. ಇದರಿಂದಾಗಿ ನಗರದಲ್ಲಿ ಎಲ್ಲೆಂದರಲ್ಲಿ ಕಸ ರಾಶಿ ಬೀಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಶನಿವಾರ ಬೆಳಿಗ್ಗೆ ಕ್ರಿಯಾ ಸಮಿತಿ ಪದಾಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳ ಜತೆ ಗೌರವ್ ಗುಪ್ತ ಅವರು ಸಭೆ ನಡೆಸಿ, ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಮುಖ್ಯ ಆಯುಕ್ತರ ಮನವಿ ಪರಿಗಣಿಸಿದ ಗುತ್ತಿಗೆದಾರರು, ಶನಿವಾರ ಮಧ್ಯಾಹ್ನದಿಂದಲೇ ಕಸ ವಿಲೇವಾರಿ ಕಾರ್ಯ ಆರಂಭಿಸಿದರು. ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರತಿಭಟನೆ ಹಿಂದಕ್ಕೆ ಪಡೆದಿದ್ದೇವೆ' ಎಂದು ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಎನ್. ಬಾಲಸುಬ್ರಹ್ಮಣ್ಯ ಹೇಳಿದರು.

ಕೋವಿಡ್ ಲಸಿಕೆ: ತಿಂಗಳ ಅವಧಿಯಲ್ಲಿ 10.79 ಲಕ್ಷ ಮಂದಿಗೆ ಮಾತ್ರ ಮೂರನೇ ಡೋಸ್

ಮುನ್ನೆಚ್ಚರಿಕೆ ಡೋಸ್‌ಗೆ ಹಿಂದೇಟು

• ವರುಣ ಹೆಗಡೆ

ಬೆಂಗಳೂರು: ತಗ್ಗಿದ ಕೊರೊನಾ ಸೋಂಕಿನ ತೀವ್ರತೆ ಹಾಗೂ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಿಂದಾಗಿ ರಾಜ್ಯದಲ್ಲಿ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆಯಲು ಹಲವರು ನಿರಾಸಕ್ತಿ ತೋರುತ್ತಿದ್ದಾರೆ. ಒಂದು ತಿಂಗಳ ಅವಧಿಯಲ್ಲಿ 10.79 ಲಕ್ಷ ಮಂದಿ ಮಾತ್ರ ಮೂರನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

ಮೂರನೇ ಅಲೆಯಲ್ಲಿ ಕೋವಿಡ್ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗಿದ್ದ ಜನವರಿ ತಿಂಗಳಲ್ಲಿ 7.51 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಪಡೆದುಕೊಂಡಿದ್ದರು. ಫೆಬ್ರವರಿ ತಿಂಗಳಲ್ಲಿ ಸೋಂಕು ನಿಯಂತ್ರಣಕ್ಕೆ ಬರುತ್ತಿದ್ದಂತೆ 16 ದಿನಗಳಲ್ಲಿ ಕೇವಲ 3.28 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಂಡಿದ್ದಾರೆ.

ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ರಾಜ್ಯದಲ್ಲೂ ಕಾಣಿಸಿಕೊಂಡಿದ್ದರಿಂದ ಮುನ್ನೆಚ್ಚರಿಕೆ ಡೋಸ್ ವಿತರಣೆಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಅದರಂತೆ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ 2022ರ ಜ.10ರಂದು ಮತ್ತೊಂದು ಡೋಸ್ ಲಸಿಕೆ ವಿತರಣೆಗೆ ರಾಜ್ಯದಲ್ಲಿ ಚಾಲನೆ ನೀಡಲಾಗಿತ್ತು. ಎರಡನೆ ಡೋಸ್ ಪಡೆದು ಒಂಬತ್ತು ತಿಂಗಳು ಪೂರೈಸಿದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ ಸಹ ಅಸ್ವಸ್ಥತೆ ಹೊಂದಿರುವ 60 ವರ್ಷಗಳ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ವಿತರಿಸಲಾಗುತ್ತದೆ.

30 ಲಕ್ಷಕ್ಕೂ ಅಧಿಕ ಮಂದಿ ಅರ್ಹ: ರಾಜ್ಯದಲ್ಲಿ 2021ರ ಜ.16 ರಿಂದ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಿದೆ. ಈವರೆಗೆ 5 ಕೋಟಿಗೂ ಹೆಚ್ಚು ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಅವರಲ್ಲಿ 4.50 ಕೋಟಿಗೂ ಹೆಚ್ಚು ಮಂದಿ ಎರಡನೆ ಡೋಸ್ ಹಾಕಿಸಿಕೊಂಡಿದ್ದಾರೆ. ಆರಂಭಿಕ ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕೋವಿಡ್ ಯೋಧರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲಾಗಿತ್ತು. ಸದ್ಯ 30 ಲಕ್ಷಕ್ಕೂ ಅಧಿಕ ಮಂದಿ ಮೂರನೇ ಡೋಸ್ ಪಡೆಯಲು ಅರ್ಹರಾಗಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.43 ಲಕ್ಷ ಮಂದಿ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.25 ಲಕ್ಷ ಮಂದಿ ಎರಡನೆ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ ಕ್ರಮವಾಗಿ 3.19 ಹಾಗೂ 1.38 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. 60 ವರ್ಷಗಳು ಮೇಲ್ಪಟ್ಟವರಲ್ಲಿ 5.95 ಲಕ್ಷ ಮಂದಿಗೆ ಮತ್ತೊಂದು ಡೋಸ್ ಲಸಿಕೆ ನೀಡಲಾಗಿದೆ.

'ಮುನ್ನೆಚ್ಚರಿಕೆ ಡೋಸ್ ಅಗತ್ಯ'

'ಕೋವಿಡ್ ಮೂರನೇ ಅಲೆಯಲ್ಲಿ ಕೊರೊನಾ ಸೋಂಕಿತರಲ್ಲಿ ಶೇ 5 ರಷ್ಟು ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದಾರೆ. ವೈರಾಣುವಿನ ವಿರುದ್ಧ ಲಸಿಕೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ. ಈಗ ಪ್ರಕರಣಗಳ ಸಂಖ್ಯೆ ಕಡಿಮೆಯಾದರೂ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆದುಕೊಳ್ಳಬೇಕು. ವೈರಾಣು ರೂಪಾಂತರಗೊಂಡು, ನಾಲ್ಕನೆ ಅಲೆ ಕಾಣಿಸಿಕೊಳ್ಳಲೂಬಹುದು' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

'18 ವರ್ಷಗಳು ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಶೇ 100 ರಷ್ಟು ಗುರಿ ಸಾಧಿಸಲಾಗಿದೆ. ಎರಡನೇ ಡೋಸ್ ವಿತರಣೆಯಲ್ಲಿ ಶೇ 92 ರಷ್ಟು ಮಂದಿ ಎರಡನೆ ಡೋಸ್ ಪಡೆದಿದ್ದಾರೆ. ರೋಗದ ತೀವ್ರತೆ ತಡೆಗೆ ಲಸಿಕೆ ಸಹಕಾರಿ. ಸೋಂಕಿನ ತೀವ್ರತೆ ಕಡಿಮೆಯಿದೆ ಎಂಬ ಕಾರಣಕ್ಕೆ ಕೆಲವರು ಸಂದೇಶ ಸ್ವೀಕರಿಸಿದರೂ ಮೂರನೇ ಡೋಸ್ ಪಡೆದುಕೊಳ್ಳುತ್ತಿಲ್ಲ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕೋವಿಡ್ ಲಸಿಕೆಯ ವಿವರ

9.90 ಕೋಟಿ ರಾಜ್ಯದಲ್ಲಿ ವಿತರಿಸಲಾದ ಒಟ್ಟು ಡೋಸ್‌ಗಳು

5.20 ಕೋಟಿ ಮೊದಲ ಡೋಸ್ ಲಸಿಕೆ ಪಡೆದವರು

4.59 ಕೋಟಿ ಎರಡನೇ ಡೋಸ್ ಲಸಿಕೆ ಪಡೆದವರು

10.79 ಲಕ್ಷ ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದವರು



ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆಯುವುದರಿಂದ ರೋಗದ ತೀವ್ರತೆ ಕಡಿಮೆ ಆಗಲಿದೆ. ರೂಪಾಂತರಿ ತಳಿಯಿಂದ ರಕ್ಷಣೆ ಪಡೆಯಲು ಮೂರನೇ ಡೋಸ್ ಅಗತ್ಯ

ಡಾ.ಸಿ.ಎನ್. ಮಂಜುನಾಥ್,
ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಶ್ರವಣ ದಿನ: ಮಾ.3ಕ್ಕೆ ವಿಚಾರ ಸಂಕಿರಣ

ಬೆಂಗಳೂರು: ವಿಶ್ವ ಶ್ರವಣ ದಿನಾಚರಣೆ ಪ್ರಯುಕ್ತ ಎಸ್.ಜಿ.ಎಸ್.ವಾಗ್ದೇವಿ ಸಂಸ್ಥೆಯು 'ನವಜಾತ ಶಿಶುಗಳ ಶ್ರವಣ ಪರೀಕ್ಷೆ, ಪ್ರಾಮುಖ್ಯತೆ ಮತ್ತು ಪ್ರಸ್ತುತ ಸನ್ನಿವೇಶ' ಕುರಿತ ವಿಚಾರ ಸಂಕಿರಣವನ್ನು ಸಂಸ್ಥೆಯ ಕಚೇರಿಯಲ್ಲಿ ಮಾರ್ಚ್ 3ರಂದು ಬೆಳಿಗ್ಗೆ 10.30ಕ್ಕೆ ಆಯೋಜಿಸಿದೆ. ಆಸಕ್ತರು vagdevitrust@gmail.com ಮೂಲಕ ಫೆಬ್ರುವರಿ 25ರೊಳಗೆ ನೋಂದಣಿ ಮಾಡಿಕೊಳ್ಳಬಹುದು.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್ / ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	42.29 ಕೋಟಿ ▲	4.28 ಕೋಟಿ ▲
ಸಕ್ರಿಯ ಪ್ರಕರಣ	6.93 ಕೋಟಿ ▼	2.53 ಲಕ್ಷ ▼
ಗುಣಮುಖ	34.77 ಕೋಟಿ ▲	4.20 ಕೋಟಿ ▲
ಸಾವು	58.96 ಲಕ್ಷ ▲	5.11 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	19.36 ಲಕ್ಷ ▼	22,270 ▼
ಗುಣಮುಖ	23.94 ಲಕ್ಷ ▼	60,298 ▼
ಸಾವು	10,460 ▼	325 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

2.06 ಲಕ್ಷ ಜರ್ಮನಿ | 1.80 ಲಕ್ಷ ರಷ್ಯಾ | 82,553 ಫ್ರಾನ್ಸ್ ▼

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

2.76 ಕೋಟಿ ಅಮೆರಿಕ ▼ | 36.43 ಲಕ್ಷ ಜರ್ಮನಿ | 33.42 ಲಕ್ಷ ಫ್ರಾನ್ಸ್ ▼

ಎಲ್ಲಿ ಹೆಚ್ಚು ಸಾವು (ಒಟ್ಟು)

1.43 ಲಕ್ಷ ಮಹಾರಾಷ್ಟ್ರ
63,529 ಕೇರಳ ▲
37,970 ತಮಿಳುನಾಡು ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

78.55 ಮಹಾರಾಷ್ಟ್ರ ▲
64.56 ಕೇರಳ ▲
34.42 ತಮಿಳುನಾಡು ▲

ಭಾರತದ ಕೋವಿಡ್ ಸಂಖ್ಯೆ ವಿವರ: ಶನಿವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಸುದ್ದಿ 2 ನಿಮಿಷ

ಸ್ಮಾರ್ಟ್ ಸಿಟಿ: ಬೆಂಗಳೂರಿಗೆ ಎರಡು ಪ್ರಶಸ್ತಿ

ಬೆಂಗಳೂರು: ಭಾರತದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಸ್ಮಾರ್ಟ್ ಸಿಟಿ ನಗರಗಳ ನಡುವೆ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ 'ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್' ಸಂಸ್ಥೆಯು ಎರಡು ಬಹುಮಾನಗಳನ್ನು ಪಡೆದಿದೆ.

ಸ್ಮಾರ್ಟ್ ಸಿಟಿ ನಗರಗಳ ನಾಗರಿಕರಲ್ಲಿ ನಡಿಗೆ, ಓಟ ಮತ್ತು ಸೈಕಲ್ ಬಳಕೆ ಬಗ್ಗೆ ಜಾಗೃತಿ ಮೂಡಿಸಲು ಫ್ರೀಡಂ2 ವಾಕ್, ಫ್ರೀಡಂ2 ರನ್ ಹಾಗೂ ಫ್ರೀಡಂ2 ಸೈಕಲ್ ಪರಿಕಲ್ಪನೆಯಡಿ ಮೂರು ವಿಭಿನ್ನ ರೀತಿಯ ಸ್ಪರ್ಧೆಗಳನ್ನು ಜ 1ರಿಂದ ಜ 26ರವರೆಗೆ ದೇಶದಾದ್ಯಂತ ನಡೆಸಲಾಗಿತ್ತು. ಇದರಲ್ಲಿ ನಡಿಗೆ ಮತ್ತು ಓಟದ ಸ್ಪರ್ಧೆಗಳಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯು, 'ಮುಂಚೂಣಿ ನಗರ' ವಿಶೇಷ ಪ್ರಶಸ್ತಿಗೆ ಭಾಜನವಾಗಿದೆ.

ದೇಶದ 130 ಸ್ಮಾರ್ಟ್ ಸಿಟಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಬೆಂಗಳೂರು ಸ್ಮಾರ್ಟ್ ಸಿಟಿಗೆ ಪ್ರಶಸ್ತಿ ಲಭಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿದ ಸಂಸ್ಥೆಯ ಮುಖ್ಯಸ್ಥ ರಾಕೇಶ್ ಸಿಂಗ್, ಈ ಸಾಧನೆಗೆ ಸಹಕರಿಸಿದ ಅಧಿಕಾರಿಗಳು, ನೌಕರರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಪತ್ರಿಕಾ ವಿತರಕರಿಗೆ 'ಇ-ಶ್ರಮ' ಕಾರ್ಡ್



ಬೆಂಗಳೂರು: 'ರಾಜ್ಯದ ಶ್ರಮಿಕ ವರ್ಗದ ಜನರ ಅಭ್ಯುದಯಕ್ಕಾಗಿ ಸರ್ಕಾರ ಜಾರಿಗೊಳಿಸಿರುವ 'ಇ-ಶ್ರಮ' ಕಾರ್ಡ್‌ನ ಪ್ರಯೋಜನವನ್ನು ಎಲ್ಲ ಪತ್ರಿಕಾ ವಿತರಕರು ಪಡೆದುಕೊಳ್ಳಬೇಕು' ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ರಾಜ್ಯ ಪತ್ರಿಕಾ ವಿತರಕರ ಒಕ್ಕೂಟವು ಮಹಾಲಕ್ಷ್ಮೀ ಬಡಾವಣೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪತ್ರಿಕಾ ವಿತರಕರಿಗೆ 'ಇ-ಶ್ರಮ' ಕಾರ್ಡ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪತ್ರಕರ್ತರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. 'ಇ-ಶ್ರಮ' ಕಾರ್ಡ್‌ನ ಮೂಲಕ ಸಾಮಾಜಿಕ ಭದ್ರತೆ ಸೇರಿದಂತೆ ಸರ್ಕಾರದ ವಿವಿಧ ಪ್ರಯೋಜನಗಳನ್ನು ಪಡೆಯಬಹುದು' ಎಂದರು.

'ಮಹಾಲಕ್ಷ್ಮೀ ಬಡಾವಣೆಯ ನಿವಾಸಿಗಳಿಗೆ ಸರ್ಕಾರದ ವಿವಿಧ ಯೋಜನೆಯಡಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲಾಗಿದೆ' ಎಂದು ಹೇಳಿದರು.

'ಪತ್ರಿಕಾ ವಿತರಕರಿಗೆ ಸ್ಥಳದಲ್ಲೇ ನೋಂದಣಿ ಮಾಡಿಸಿ 'ಇ-ಶ್ರಮ' ಕಾರ್ಡ್ ವಿತರಿಸಲಾಯಿತು. 500ಕ್ಕೂ ಹೆಚ್ಚು ಮಂದಿ ಇದರ ಪ್ರಯೋಜನ ಪಡೆದುಕೊಂಡರು. ಭಾನುವಾರವೂ ಈ ಕಾರ್ಯಕ್ರಮ ನಡೆಯಲಿದೆ' ಎಂದು ಒಕ್ಕೂಟ ತಿಳಿಸಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಂ ಪಾಷ, ಜಂಟಿ ಆಯುಕ್ತ ರವಿ ಕುಮಾರ್, ಹೇಮಲತಾ ಗೋಪಾಲಯ್ಯ, ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ, ಉಪಾಧ್ಯಕ್ಷ ಪ್ರಶಾಂತ್ ಕುಮಾರ್ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

17,75,342 ▲ ಒಟ್ಟು ಸೋಂಕಿತರು
(17,74,696 ನಿನ್ನೆಯ ವಿವರ)

6,398 ▼	17,52,135 ▲	16,808 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	646 ▼
ಗುಣಮುಖ	1,901 ▲
ಸಾವು	08 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಂಪ್ಯೂಟರ್ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯು ಮಹಿಳೆಯರಿಗಾಗಿ 15 ದಿನಗಳ ಕಂಪ್ಯೂಟರ್ ಕಲಿಕಾ ಉಚಿತ ತರಬೇತಿ ಶಿಬಿರ ಆಯೋಜಿಸಿದೆ.

ಮಾರ್ಚ್ ಮೊದಲ ವಾರದಲ್ಲಿ ತರಬೇತಿ ಪ್ರಾರಂಭವಾಗಿದೆ. ಸ್ಥಳ-ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, 15ನೇ ಅಡ್ಡರಸ್ತೆ, ಮಲ್ಲೇಶ್ವರ ಸಂಪರ್ಕ:9900158885

ನಗರದಲ್ಲಿ ಇಂದು

ಪುಸ್ತಕಗಳ ಬಿಡುಗಡೆ: ಪುಸ್ತಕಗಳು–ಸಿ.ಆರ್.ಗೋಪಾಲ್ ಅವರ 'ಸಾಮಾಜಿಕ ಕ್ರಿಯಾಚರಣೆ', ಲೋಕೇಶ್–ಪವಿತ್ರ ಅವರ 'ಮನೋ ವೈದ್ಯಕೀಯ ಸಮಾಜಕಾರ್ಯ', ಎಚ್.ಎನ್.ಯಾದವಾಡ ಅವರ 'ಶಿಕ್ಷಣ ರಥ ನೀತಿ ಪಥ', ಅತಿಥಿ–ಶ್ರೀನಿವಾಸ ಅರ್ಕ, ಅಧ್ಯಕ್ಷತೆ–ರುತ್ ಮನೋರಮಾ, ಕೃತಿ ಪರಿಚಯ–ಬಿ.ಕೆ.ಕೆಂಪೇಗೌಡ, ಎಚ್.ಕುಸುಮಾ, ಪ್ರಕಾಶ್, ರಮೇಶ್, ಆಯೋಜನೆ–ನಿರುತ ಪ್ರಕಾಶನ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಚಾಮರಾಜಪೇಟೆ, ಬೆಳಿಗ್ಗೆ 10

ಅಂಧರ ರಾಜ್ಯಮಟ್ಟದ ಸಮಾವೇಶ ಮತ್ತು ಸಂಗೀತರತ್ನ, ಸೇವಾರತ್ನ ಪ್ರಶಸ್ತಿಗಳ ಪ್ರದಾನ: ಉದ್ಘಾಟನೆ–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪ್ರಶಸ್ತಿ ಪುರಸ್ಕೃತರು–ಬಿ.ಕೆ.ಸುಮಿತ್ರ, ಲಕ್ಷ್ಮೀನಾರಾಯಣ ನಾಗವಾರ, ಅಧ್ಯಕ್ಷತೆ–ಬಿ.ಟಿ. ಲಲಿತಾ ನಾಯಕ್, ಅತಿಥಿಗಳು–ಎಸ್.ಜಿ.ಸಿದ್ಧರಾಮಯ್ಯ, ಬಿ.ವಿ. ಮಲ್ಲಿಕಾರ್ಜುನಯ್ಯ, ಆಯೋಜನೆ–ಆಶ್ರಯ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಸ್ಥೆ, ಕರ್ನಾಟಕ ಅಂಧರ ವಿಮೋಚನಾ ವೇದಿಕೆ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 10

'ರಾಜಪ್ಪ ದಳವಾಯಿ ಅನುಸಂಧಾನ' ವಿಚಾರ ಸಂಕಿರಣ ಮತ್ತು ಸಂವಾದ: ಉದ್ಘಾಟನೆ–ಬರಗೂರು ರಾಮಚಂದ್ರಪ್ಪ, ಎಲ್.ಹನುಮಂತಯ್ಯ, ಎಚ್.ಎನ್.ಆರತಿ, ಎನ್.ರಮೇಶ್, ಆಯೋಜನೆ–ರಂಗಮಂಡಲ ಮತ್ತು ಸಿವಗಂಗ ಟ್ರಸ್ಟ್, ಸ್ಥಳ–ಸಿವಗಂಗ ರಂಗಮಂದಿರ, ಕೆಂಗೇರಿ ಉಪನಗರ, ಬೆಳಿಗ್ಗೆ 10.30

ಎಚ್.ಎಸ್.ಸೂರಿ ಜನ್ಮ ಶತಮಾನೋತ್ಸವ ರಮ್ಮಿ ಟೂರ್ನಿ ಮತ್ತು ಬಿ.ಎಸ್. ರಂಗನಾಥ್ ಅವರ 'ಸೂರಿ–100' ಪುಸ್ತಕ ಬಿಡುಗಡೆ: ಅತಿಥಿಗಳು–ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಎಡಿಜಿಪಿ ಭಾಸ್ಕರ್ ರಾವ್, ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ರೋಜರ್ ಬಿನ್ನಿ, ಸ್ಥಳ–ಪ್ರೆಸ್‌ಕ್ಲಬ್, ಬೆಳಿಗ್ಗೆ 11

'ಕಾಮರೂಪಿಗಳ್' ನಾಟಕ ಪ್ರದರ್ಶನ: ನಿರ್ದೇಶನ–ಗಣೇಶ್ ಮಂದಾರ್ತಿ, ಆಯೋಜನೆ–ಸಂಚಯ ನಾಟಕ ತಂಡ, ಸ್ಥಳ–ರಂಗಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30 ಮತ್ತು ಸಂಜೆ 7.30ಕ್ಕೆ

ಐಸಿಡಿಎಸ್: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: 'ಮಕ್ಕಳ ಸಮಗ್ರ ಅಭಿವೃದ್ಧಿ ಸೇವೆಗಳ (ಐಸಿಡಿಎಸ್) ಯೋಜನೆಯಡಿ ಮಕ್ಕಳು, ಗರ್ಭಿಣಿಯರು, ಹಾಲುಣಿಸುವ ತಾಯಂದಿರಿಗೆ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಲಾಗುತ್ತಿದೆ' ಎಂದು ಆಕ್ಷೇಪಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹುನಗುಂದದ ಅಮರಾವತಿ ಗ್ರಾ. ಪಂ. ಅಧ್ಯಕ್ಷೆ ಸಂಗೀತಾ ಗದುಗಿನ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತು ರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಪ್ರತಿವಾದಿಗಳಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಹರಿಹರೇಶ್ವರ ಮಹಿಳಾ ಉದ್ಯೋಗ ಮತ್ತು ಸೇವಾ ಸಂಘ, ರೇಣುಕಾದೇವಿ ಪ್ರಗತಿಪರ ಮಹಿಳಾ ಸೇವಾ ಸಂಘ, ಅಧ್ಯಕ್ಷರಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಮಹಾದೇವ ಶಂಕನಪುರ

'ಬರಹಗಾರನಾಗಲು ಅಂಬೇಡ್ಕರ್ ಪ್ರೇರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಶೋಧನೆ ಮತ್ತು ಅಧ್ಯಯನ ಮಾಡಲು ಡಾ.ಬಿ.ಆರ್. ಅಂಬೇಡ್ಕರ್ ಅವರೇ ಪ್ರೇರಣೆ. ಅಂಬೇಡ್ಕರ್ ಅವರ ಸಾಹಿತ್ಯವನ್ನು ಓದದೇ ಇದ್ದಿದ್ದರೆ ನಾನು ಬರಹಗಾರನಾಗಲು ಮತ್ತು ಇತಿಹಾಸ ಪ್ರಾಧ್ಯಾಪಕನಾಗಲು ಸಾಧ್ಯವಾಗುತ್ತಿರಲಿಲ್ಲ' ಎಂದು ಸಾಹಿತಿ ಮಹಾದೇವ ಶಂಕನಪುರ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಆಯೋಜಿಸಿದ್ದ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ಅವರು ತಮ್ಮ ಜೀವನ, ಸಾಹಿತ್ಯ ರಚನೆ, ಸಂಘಟನೆ, ಹೋರಾಟ ಮತ್ತು ಇತಿಹಾಸ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ಅನುಭವಗಳನ್ನು ಹಂಚಿಕೊಂಡರು.

'ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳನ್ನು ಎಲ್ಲರೂ ಓದಬೇಕು. ಅದರಲ್ಲೂ ಬೋಧಕ ವೃತ್ತಿಯಲ್ಲಿರುವವರು ಕಡ್ಡಾಯವಾಗಿ ಅಧ್ಯಯನ ಮಾಡಬೇಕು. ಇದರಿಂದ, ಸಮಾಜದ ಬಗೆಗಿನ ದೃಷ್ಟಿಕೋನ ಬದಲಾಗುತ್ತದೆ' ಎಂದು ಪ್ರತಿಪಾದಿಸಿದರು.


'ಮೌಖಿಕ ಪರಂಪರೆಗೆ ಸಂಬಂಧಿಸಿದಂತೆ ಹೆಚ್ಚು ಕೆಲಸ ಮಾಡಿದ್ದೇನೆ. ದೇಶದ ಇತಿಹಾಸದಲ್ಲಿ ಇದುವರೆಗೆ ದಾಖಲಾಗದಿರುವ ಅಂಶಗಳು ಮತ್ತು ಕಳೆದು ಹೋಗಿರುವವರ ಬಗ್ಗೆ ಬರೆಯಬೇಕು ಎನ್ನುವ ಉದ್ದೇಶದಿಂದ ಸಂಶೋಧನೆ ಕೈಗೊಂಡಿದ್ದೇನೆ. ದಾಖಲಾಗದ ಅಂಶಗಳನ್ನು ದಾಖಲಿಸುವ ಕಾರ್ಯ ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

'ದಲಿತ ಚಳವಳಿಗಾರರು ಮತ್ತು ಸಾಹಿತಿಗಳ ಒಡನಾಟವೂ ನನಗಿದೆ. ಅರೆಕಾಲಿಕ ಉಪನ್ಯಾಸಕನಾಗಿದ್ದ ಸಂದರ್ಭದಲ್ಲಿ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ವಿದ್ಯಾರ್ಥಿನಿಲಯ ಇರಲಿಲ್ಲ. ಆಗ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲ ಅವರ ಮನೆಗೆ ಬೆಳಿಗ್ಗೆ 5 ಗಂಟೆಗೆ ವಿದ್ಯಾರ್ಥಿಗಳು ಘೇರಾವ್ ಹಾಕಿದ್ದರು. ಈ ಹೋರಾಟದ ಬಳಿಕ ನಮ್ಮ ಕಾಲೇಜಿಗೆ ಹಾಗೂ ರಾಜ್ಯದಾದ್ಯಂತ ಹಲವು ವಿದ್ಯಾರ್ಥಿ ನಿಲಯಗಳನ್ನು ಸರ್ಕಾರ ಮಂಜೂರು ಮಾಡಿತ್ತು' ಎಂದು ವಿವರಿಸಿದರು.

'ಪ್ರಜಾವಾಣಿ ನನಗೆ ಪ್ರೇರಣೆ ನೀಡಿದ ಮತ್ತು ನನ್ನ ಮೇಲೆ ಪ್ರಭಾವ ಬೀರಿದ ದಿನಪತ್ರಿಕೆ. ಮೂರು ಬಾರಿ 'ಪ್ರಜಾವಾಣಿ' ಕಾವ್ಯ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ' ಎಂದು ಇದೇ ಸಂದರ್ಭದಲ್ಲಿ ನೆನಪಿಸಿಕೊಂಡರು.

'ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಶಂಕನಪುರ ನಮ್ಮ ಊರು. ಕೊಳ್ಳೇಗಾಲ ವ್ಯಾಪಾರ, ಸಾಹಿತ್ಯ ಮತ್ತು ಜಾನಪದ ಸಂಸ್ಕೃತಿಗೆ ಪ್ರಸಿದ್ಧವಾಗಿದೆ. ಜಾನಪದ ಕ್ಷೇತ್ರಕ್ಕೆ ಚಾಮರಾಜನಗರ ಜಿಲ್ಲೆ ಅಪಾರ ಕೊಡುಗೆ ನೀಡಿದೆ' ಎಂದು ವಿವರಿಸಿದರು.

'ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯಗಳು ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಜನಪದ ತಜ್ಞರಿಂದ ಆಸಕ್ತ ಯುವಕರಿಗೆ ಶಿಬಿರಗಳ ಮೂಲಕ ತರಬೇತಿ ನೀಡಬೇಕು ಹಾಗೂ ಸಂರಕ್ಷಿಸುವ ಕಾರ್ಯಗಳು ನಡೆಯಬೇಕು' ಎಂದು ಸಲಹೆ ನೀಡಿದರು.



ಮಹಾದೇವ ಶಂಕನಪುರ

'ಸಂವಿಧಾನ ಅಧ್ಯಯನ ಕಡ್ಡಾಯ ಆಗಬೇಕು'

'ಪದವಿ ಹಂತದಲ್ಲಿ ಸಂವಿಧಾನದ ಬಗ್ಗೆ ಒಂದು ವಿಷಯವನ್ನು ಅಧ್ಯಯನ ಮಾಡುವುದನ್ನು ಸರ್ಕಾರ ಅಥವಾ ವಿಶ್ವವಿದ್ಯಾಲಯಗಳು ಕಡ್ಡಾಯಗೊಳಿಸಬೇಕು. ಇಂದಿನ ಪರಿಸ್ಥಿತಿಗೂ ಇದು ಅಗತ್ಯವಾಗಿದೆ' ಎಂದು ಮಹಾದೇವ ಶಂಕನಪುರ ಪ್ರತಿಪಾದಿಸಿದರು.





ಅಲಯನ್ಸ್: ಕಲಾ ಶಿಕ್ಷಣ ಶಾಲೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ವಿಭಾಗವನ್ನು (ಕಲಾ ಶಿಕ್ಷಣ ಶಾಲೆ) ಆರಂಭಿಸಲಾಗಿದೆ. ಆನ್‌ಲೈನ್ ಕಾರ್ಯಕ್ರಮದಲ್ಲಿ ಬರಹಗಾರ ಚೇತನ್ ಭಗತ್ ಈ ಹೊಸ ವಿಭಾಗಕ್ಕೆ ಇತ್ತೀಚೆಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು,'ಕಲಾ ಶಿಕ್ಷಣವು ಭಾರತೀಯ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 'ಕಲಾಶಾಸ್ತ್ರಗಳ ತಿರುವು' ಇದ್ದಂತೆ. ಕಲೆ ಮತ್ತು ವಿಜ್ಞಾನ ಎರಡೂ ಸಂಸ್ಕೃತಿಗಳ ನಡುವಿನ ವಿಭಜನೆಯನ್ನು ಸೇತುವೆ ಮಾಡಲು ಕಲಾ ಶಿಕ್ಷಣವನ್ನು ಬಳಸಬಹುದಾಗಿದೆ' ಎಂದರು.

ಉಪ ಕುಲಪತಿ ಅನುಭಾ ಸಿಂಗ್, 'ಅಂತರಶಿಸ್ತಿಗೆ ಮೀರಿದ ಶಿಕ್ಷಣ ಶಾಸ್ತ್ರದ ಮರುಶೋಧನೆಯ ಅಗತ್ಯವಿದೆ. ಕಲಾ ಶಿಕ್ಷಣ ಕಾರ್ಯಕ್ರಮವು ಬಹುಬೋಧನ ಶಾಖೆಯ ವಿಶೇಷ ಲಕ್ಷಣ ಹೊಂದಿದೆ' ಎಂದರು.

ಸಹ ಕುಲಾಧಿಪತಿ ಅಭಯ್ ಚೆಬ್ಬಿ,'ಅಲಯನ್ಸ್ ರಾಜ್ಯದ ಮೊದಲ ಖಾಸಗಿ ವಿಶ್ವವಿದ್ಯಾಲಯವಾಗಿ ಮತ್ತು ಕಲಾ ಶಿಕ್ಷಣಕ್ಕಾಗಿ ಈಗ ಶಾಲೆ ಪ್ರಾರಂಭಿಸುತ್ತಿದೆ. ಇಲ್ಲಿನ ಶಿಕ್ಷಣ ಅನನ್ಯತೆಯಿಂದ ಕೂಡಿದೆ' ಎಂದರು.

'ಅಲಯನ್ಸ್‌ನಲ್ಲಿ ಕಲಾ ಶಿಕ್ಷಣವು ಒಂದೇ ತತ್ವಶಾಸ್ತ್ರದ ಮೇಲೆ ಕೇಂದ್ರೀಕರಿಸುತ್ತದೆ. ವಿದ್ಯಾರ್ಥಿಗಳಿಗೆ ಹೇಗೆ ಯೋಚಿಸಬೇಕು? ಮತ್ತು ಏನನ್ನು ಯೋಚಿಸಬೇಕು ಎಂಬುದನ್ನು ಇಲ್ಲಿ ಕಲಿಸಲಾಗುತ್ತದೆ' ಎಂದು ಹೇಳಿದರು.



ಶಾಸಕರ ರಾಜೀನಾಮೆಗೆ ಆಗ್ರಹ 23ಕ್ಕೆ ಎಎಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಾಮಗಾರಿಗಳಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿರುವುದು ಲೋಕಾಯುಕ್ತ ತನಿಖೆಯಲ್ಲಿ ಸಾಬೀತಾಗಿದೆ. ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಸಚಿವ ಮುನಿರತ್ನ ಇದಕ್ಕೆ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಇದೇ 23ರಂದು ಆಮ್ ಆದ್ಮಿ ಪಕ್ಷದ (ಎಎಪಿ) ವತಿಯಿಂದ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ' ಎಂದು ಪಕ್ಷದ ರಾಜಕೀಯ ಚಟುವಟಿಕೆ ಘಟಕದ ಅಧ್ಯಕ್ಷ ಚೆನ್ನಪ್ಪಗೌಡ ನೆಲ್ಲೂರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ನವ ನಗರೋತ್ಥಾನ ಯೋಜನೆಯಡಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ನಡೆಸಲಾದ ಕಾಮಗಾರಿಗಳಲ್ಲಿ ₹118.26 ಕೋಟಿ ಮೊತ್ತದ ಭ್ರಷ್ಟಾಚಾರ ನಡೆದಿದೆ. ನಕಲಿ ಬಿಲ್ ಸೃಷ್ಟಿಸಿ ಜನರ ತೆರಿಗೆ ಹಣವನ್ನು ಲೂಟಿ ಮಾಡಲಾಗಿದೆ' ಎಂದರು.

'ಸಚಿವರು ರಾಜೀನಾಮೆ ನೀಡದಿದ್ದರೆ ಆರ್.ಆರ್.ನಗರದ ಬಿಬಿಎಂಪಿ ಕಚೇರಿಯಿಂದ ಗಾಂಧಿ ಪ್ರತಿಮೆಯವರೆಗೆ ಇದೇ 23ರಂದು ಪ್ರತಿಭಟನಾ ಮೆರವಣಿಗೆ ನಡೆಸಲಿದ್ದೇವೆ' ಎಂದರು.

ಅನಗತ್ಯವಾಗಿ ನನ್ನ ಹೆಸರು ಬಳಕೆ: ಮುನಿರತ್ನ

'ಲೋಕಾಯುಕ್ತ ವರದಿಯಲ್ಲಿ ನನ್ನ ಹೆಸರು ಇಲ್ಲ. ಆಗ ನಾನು ಶಾಸಕನೂ ಆಗಿರಲಿಲ್ಲ. ಎಎಪಿ ಮುಖಂಡರು ಅನಗತ್ಯವಾಗಿ ನನ್ನ ಹೆಸರು ಎಳೆದು ತಂದಿದ್ದಾರೆ' ಎಂದು ಸಚಿವ ಮುನಿರತ್ನ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ರಾಜಕೀಯ ದುರುದ್ದೇಶದಿಂದ ಸಂಸದ ಡಿ.ಕೆ.ಸುರೇಶ್ ದೂರು ನೀಡಿದ್ದರು. ಅವರೂ ಅದೇ ಕ್ಷೇತ್ರದ ಸಂಸದರು. ಅವರಿಗೆ, ನಿಜವಾದ ಕಾಳಜಿ ಇದ್ದರೆ, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕಿತ್ತು' ಎಂದರು.

'ಎಎಪಿಯವರು ಡಿ.ಕೆ.ಸುರೇಶ್ ವಿರುದ್ಧ ಏಕೆ ಆರೋಪ ಮಾಡಿಲ್ಲ' ಎಂದು ಮುನಿರತ್ನ ಪ್ರಶ್ನಿಸಿದರು.





'ಮುಂದಿನ ವರ್ಷಕ್ಕೆ ರಾಮಮಂದಿರ ಪೂರ್ಣ'

ಮಡಿಕೇರಿ: 'ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಕೆಲಸಗಳು ಪ್ರಗತಿಯಲ್ಲಿದ್ದು, 2023ರ ಡಿಸೆಂಬರ್ ಅಂತ್ಯಕ್ಕೆ ಭವ್ಯ ರಾಮಮಂದಿರ ನಿರ್ಮಾಣ ಆಗಲಿದೆ' ಎಂದು ವಿಶ್ವ ಹಿಂದೂ ಪರಿಷತ್ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಹಾಗೂ ರಾಮಮಂದಿರ ನಿರ್ಮಾಣದ ಉಸ್ತುವಾರಿ ಗೋಪಾಲ ನಾಗರಕಟ್ಟೆ ಇಲ್ಲಿ ಹೇಳಿದರು.

ನಗರದ ಅಶ್ವಿನಿ ಆಸ್ಪತ್ರೆಯಲ್ಲಿ ನವೀಕೃತ ಶಸ್ತ್ರಚಿಕಿತ್ಸಾ ಕೊಠಡಿ ಹಾಗೂ ಐದು ಡಯಾಲಿಸಿಸ್ ಘಟಕಗಳನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

'ರಾಮಮಂದಿರ ನಿರ್ಮಾಣಕ್ಕೆ ದುಡ್ಡಿನ ಕೊರತೆ ಇರಲಿಲ್ಲ. ₹ 3,300 ಕೋಟಿಯಷ್ಟು ದೇಣಿಗೆ ಸಂಗ್ರಹವಾದೆ. ರಾಷ್ಟ್ರದ ಮೂಲೆಮೂಲೆಯಿಂದ 11,500 ಕೋಟಿ ಜನರು ತಮ್ಮ ಭಕ್ತಿ ಸಮರ್ಪಿಸಿದ್ದಾರೆ' ಎಂದು ಅವರು ಹೇಳಿದರು.



ತಾಜ್ ಮಹಲ್ ಮೀರಿಸಿದ ಮೈಸೂರು ಅರಮನೆ!

ಮೈಸೂರು: ಜಗತ್ತಿನ ಅಸಂಖ್ಯಾತ ಪ್ರವಾಸಿಗರನ್ನು ಸೆಳೆಯುತ್ತಿರುವ ಆಗ್ರಾದ ತಾಜ್ ಮಹಲ್‌ಗಿಂತ ಮೈಸೂರು ಅರಮನೆಯು ಗೂಗಲ್ ಮ್ಯಾಪ್‌ನಲ್ಲಿ ಹೆಚ್ಚು ಪರಾಮರ್ಶೆಗೊಳಪಟ್ಟಿದೆ. ಅತ್ಯಧಿಕ ಪರಾಮರ್ಶೆಗೊಳಪಟ್ಟ ಪ್ರವಾಸಿ ತಾಣಗಳಲ್ಲಿ ವಿಶ್ವದಲ್ಲೇ ಅರಮನೆಯು 15ನೇ ಸ್ಥಾನದಲ್ಲಿದೆ.

ಗೂಗಲ್‌ಮ್ಯಾಪ್‌ನಲ್ಲಿ ಅತಿ ಹೆಚ್ಚು ಪರಾಮರ್ಶಿತವಾದ ಅಗ್ರ 20 (ಮೋಸ್ಟ್ ರಿವ್ಯೂವ್ಡ್) ತಾಣಗಳ ಪಟ್ಟಿಯನ್ನು www.top-rated.online ವೆಬ್‌ಸೈಟ್ ಪ್ರಕಟಿಸಿದ್ದು, ಅರಮನೆಗೆ 1.93 ಲಕ್ಷ ಹಾಗೂ ಪ್ರೇಮಸೌಧ ತಾಜ್ ಮಹಲ್‌ಗೆ 1.87 ಲಕ್ಷ ಪರಾಮರ್ಶೆ ದೊರಕಿದೆ.

ಮೆಕ್ಕಾದ ಮಸೀದ್ ಅಲ್ ಹರಮ್ ಮೊದಲ ಸ್ಥಾನ ಪಡೆದಿದ್ದು, 3.31 ಲಕ್ಷ ಪರಾಮರ್ಶೆಗಳು ಲಭಿಸಿವೆ. ಮುಂಬೈನ ಗೇಟ್‌ವೇ ಆಫ್ ಇಂಡಿಯಾ (2.58 ಲಕ್ಷ ಪರಾಮರ್ಶೆ) 5ನೇ ಸ್ಥಾನ ಹಾಗೂ ನವದೆಹಲಿಯ ಇಂಡಿಯಾ ಗೇಟ್ (2.01 ಲಕ್ಷ ಪರಾಮರ್ಶೆ) 14ನೇ ಸ್ಥಾನ ಗಿಟ್ಟಿಸಿಕೊಂಡಿವೆ.

'ದಸರೆ, ಮಾಗಿ ಉತ್ಸವ, ಯುಗಾದಿ ಸಂಗೀತ, ಯೋಗ ದಿನ ಸೇರಿ ಅರಮನೆಯಲ್ಲಿ ವರ್ಷಕ್ಕೆ ನಾಲ್ಕು ಕಾರ್ಯಕ್ರಮ ಆಯೋಜಿಸುತ್ತೇವೆ. ವಾರದಲ್ಲಿ ಆರು ದಿನ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ನಡೆಯುತ್ತಿದ್ದು, ಪ್ರವಾಸಿಗರಿಗೆ ಬಹಳ ಇಷ್ಟವಾಗುತ್ತಿದೆ' ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಏಜೆನ್ಸಿ ಮೂಲಕ ಠಾಣೆ ನಿರ್ವಹಣೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯದ ಪೊಲೀಸ್ ಠಾಣೆಗಳ ನಿರ್ವಹಣೆ ಜವಾಬ್ದಾರಿಯನ್ನು ಖಾಸಗಿ ಏಜೆನ್ಸಿಗೆ ನೀಡಲು ನಿರ್ಧರಿಸಲಾಗಿದೆ. ಹೀಗಾಗಿ ಠಾಣೆಗಳಿಗೆ ನೀಡುತ್ತಿದ್ದ ನಿರ್ವಹಣಾ ವೆಚ್ಚ ನಿಲ್ಲಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಪ್ರಸಕ್ತ ವರ್ಷ 100 ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ ಕಟ್ಟಲು ನಿರ್ಧರಿಸಿದ್ದು, ಇದಕ್ಕಾಗಿ ₹ 200 ಕೋಟಿ, ಪೊಲೀಸರ ಚಿಕಿತ್ಸೆಗಾಗಿ ₹ 111 ಕೋಟಿ ಮೀಸಲಿಡಲಾಗಿದೆ. ಮಾನಸಿಕ ಒತ್ತಡ ನಿವಾರಣೆಗೆ ಯೋಗ, ಧ್ಯಾನಕ್ಕೂ ಆದ್ಯತೆ ನೀಡಲಾಗುತ್ತಿದೆ. ಮೂರು ವರ್ಷಗಳಲ್ಲಿ 16,811 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ' ಎಂದು ಅವರು ತಿಳಿಸಿದರು.

ಸೈಬರ್ ಅಪರಾಧ ಕೃತ್ಯಗಳ ನಿಯಂತ್ರಣಕ್ಕಾಗಿ ಬಳ್ಳಾರಿ ಮತ್ತು ಬೆಳಗಾವಿಯಲ್ಲಿ ವಿಧಿವಿಜ್ಞಾನ ಪ್ರಯೋಗಾಲಯ ಹಾಗೂ ₹ 80 ಕೋಟಿ ವೆಚ್ಚದಲ್ಲಿ ಬೆಂಗಳೂರಿನಲ್ಲಿ ಕಮಾಂಡ್ ಸೆಂಟರ್ ಸ್ಥಾಪಿಸಲಾಗುತ್ತಿದೆ' ಎಂದೂ ಹೇಳಿದರು.

ಪಶ್ಚಿಮ ಬಂಗಾಳ: ಶಿಫಾರಸು ವಾಪಸ್ ಕಳುಹಿಸಿದ ರಾಜ್ಯಪಾಲ

ಕೋಲ್ಕತ್ತ (ಪಿಟಿಐ): ಮಾರ್ಚ್ 7ರಿಂದ ವಿಧಾನಸಭೆ ಅಧಿವೇಶನ ಕರೆಯುವ ಸಂಬಂಧ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಳುಹಿಸಿದ್ದ ಶಿಫಾರಸನ್ನು ರಾಜ್ಯಪಾಲ ಜಗದೀಪ್ ಧನ್ಕರ್ ಅವರು ಶನಿವಾರ ವಾಪಸ್ ಕಳುಹಿಸಿದ್ದಾರೆ.

ರಾಜ್ಯ ಸಚಿವ ಸಂಪುಟವು ಸಾಂವಿಧಾನಿಕ ಮಾನದಂಡಗಳನ್ನು ಅನುಸರಿಸದೆ ಶಿಫಾರಸು ಮಾಡಿದ ಕಾರಣ ಅದನ್ನು ಹಿಂದಿರುಗಿಸಲಾಗಿದೆ ಎಂದು ರಾಜ್ಯಪಾಲರು ಟ್ವೀಟ್ ಮಾಡಿದ್ದಾರೆ. ಕಡತವನ್ನು ವಾಪಸ್ ಕಳುಹಿಸುವಾಗ ಅದರ ಜೊತೆ ರಾಜ್ಯ ಸರ್ಕಾರಕ್ಕೆ ಪತ್ರವೊಂದನ್ನೂ ಕಳುಹಿಸಿದ್ದಾರೆ.

ರಾಜ್ಯಪಾಲರ ನಡೆ ಆಡಳಿತ ಕಾರ್ಯವನ್ನು ಸ್ಥಗಿತಗೊಳಿಸುವ ಯತ್ನ ಎಂದು ಟಿಎಂಸಿ ವಕ್ತಾರ ಸುಖೇಂದು ಶೇಖರ್ ರಾಯ್ ಪ್ರತಿಕ್ರಿಯಿಸಿದ್ದಾರೆ.

ಕೆಪಿಟಿಸಿಎಲ್ ನೇಮಕಾತಿ: ಕುಷ್ಠರೋಗದಿಂದ ಗುಣಮುಖ ಆದವರಿಗೂ ಮೀಸಲಾತಿ ಅಲಭ್ಯ

ಮಾನಸಿಕ ಅಸ್ವಸ್ಥರಿಗೆ ಅವಕಾಶವಿಲ್ಲ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೆಪಿಟಿಸಿಎಲ್‌ನಲ್ಲಿ ಖಾಲಿ ಇರುವ ಎಂಜಿನಿಯರ್ ಮತ್ತು ಕಿರಿಯ ಸಹಾಯಕರ ಹುದ್ದೆಗಳ ನೇಮಕಾತಿಯಲ್ಲಿ ಅಂಗವಿಕಲರ ಮೀಸಲಾತಿ ಒಳ ವರ್ಗೀಕರಣ ಅಸಮರ್ಪಕವಾಗಿದ್ದು, ಕುಷ್ಠರೋಗದಿಂದ ಗುಣಮುಖರಾದವರು, ಬುದ್ಧಿಮಾಂದ್ಯರು, ಮಾನಸಿಕ ಅಸ್ವಸ್ಥತೆ ಉಳ್ಳವರಿಗೆ ಅವಕಾಶವೇ ಅಲಭ್ಯವಾಗಿದೆ.

ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್, ಕಿರಿಯ ಸಹಾಯಕರು ಸೇರಿ ಒಟ್ಟು 1,492 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು ಕೆಪಿಟಿಸಿಎಲ್ ಹೊರಡಿಸಿದೆ. ಇದರಲ್ಲಿ 360 ಕಿರಿಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಶೇ 5 ರಷ್ಟು ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಿರಿಸಲಾಗಿದೆ. ಅಂಗವಿಕರಿಗೆ ಲಭ್ಯ ಇರುವ 20 ಹುದ್ದೆಗಳಲ್ಲಿ ಅಂಧರಿಗೆ 11, ಚಲನ ಸಂಬಂಧ ವೈಕಲ್ಯ (ಕೈ ಅಥವಾ ಕಾಲುಗಳ ವಿಕಲರಾದವರು) ಉಳ್ಳವರಿಗೆ 5 ಹುದ್ದ, ಶ್ರವಣದೋಷ ಉಳ್ಳವರಿಗೆ 4 ಹುದ್ದೆಗಳನ್ನು ವಿಭಾಗಿಸಲಾಗಿದೆ.

'ಕುಷ್ಠರೋಗದಿಂದ ಗುಣಮುಖರಾದವರು ಮತ್ತು ಮಾನಸಿಕ ಅಸ್ವಸ್ಥರಿಗೆ ಮೀಸಲಾತಿಯನ್ನೇ ಕಲ್ಪಿಸಿಲ್ಲ. ಈ ವರ್ಗದವರನ್ನು ನೇಮಕಾತಿ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ. ಇದು ಅವರ ಮೂಲಭೂತ ಹಕ್ಕಿನ ಉಲ್ಲಂಘನೆ' ಎಂದು ಉದ್ಯೋಗಾಕಾಂಕ್ಷಿಯ ಪೋಷಕರೊಬ್ಬರು 'ಪ್ರಜಾವಾಣಿ' ಬಳಿ ಅಳಲು ತೋಡಿಕೊಂಡರು.

'ಆಟಿಸಂ, ಬೌದ್ಧಿಕ ಅಸಾಮರ್ಥ್ಯ, ಕಲಿಕೆಯಲ್ಲಿ ಅಸಮರ್ಥತೆ ಮತ್ತು ಮಾನಸಿಕ ಅಸ್ವಸ್ಥತೆ ಶೇ 40ಕ್ಕಿಂತ ಹೆಚ್ಚಿಗೆ ಇದ್ದವರಿಗೆ ಮಾತ್ರ ಬುದ್ಧಿಮಾಂದ್ಯರ ಪ್ರಮಾಣ ಪತ್ರ ನೀಡಲಾಗುತ್ತದೆ. 2016ರ ಅಂಗವಿಕಲರ ಹಕ್ಕುಗಳ ಕಾಯ್ದೆ ಪ್ರಕಾರ ಅಂತವರಿಗೆ ಮಾನವೀಯತೆ ಆಧಾರದಲ್ಲಿ ಉದ್ಯೋಗ ಅವಕಾಶ ಕಲ್ಪಿಸಬೇಕು ಮತ್ತು ಸೂಕ್ತ ಹುದ್ದೆಯನ್ನು ಸೃಷ್ಟಿಸಿಕೊಡಬೇಕು. ಬುದ್ಧಿಮಾಂದ್ಯರೆಂದ ಕೂಡಲೇ ಕೆಲಸ ಮಾಡಲು ಅಸಮರ್ಥರು ಎಂಬ ನಿರ್ಧಾರಕ್ಕೆ ಬಂದು ಅವಕಾಶ ನಿರಾಕರಿಸಿದರೆ ಕಾಯ್ದೆಯ ಉದ್ದೇಶವೇ ಬುಡಮೇಲಾಗುತ್ತದೆ' ಎಂದು ಅವರು ಹೇಳಿದರು.

'ಕಿರಿಯ ಸಹಾಯಕ ಹುದ್ದೆಗೆ ದ್ವಿತೀಯ ಪಿಯುಸಿ ವಿದ್ಯಾರ್ಹತೆ ನಿಗದಿ ಮಾಡಲಾಗಿದೆ. ಅಷ್ಟು ವಿದ್ಯಾಭ್ಯಾಸ ಮಾಡಿದವರಿಗೆ ಕೆಲಸ ಮಾಡುವ ಸಾಮರ್ಥ್ಯ ಇದ್ದೇ ಇರುತ್ತದೆ, ಸ್ವಲ್ಪ ನಿಧಾನ ಆಗಬಹುದು ಅಷ್ಟೆ' ಎಂದರು.

'ಅವಕಾಶ ಕಲ್ಪಿಸದಿರುವ ಬಗ್ಗೆ ಪ್ರಶ್ನೆ ಮಾಡಿದರೆ ಕೆಪಿಟಿಸಿಎಲ್ ಅಧಿಕಾರಿಗಳು ಉಡಾಫೆ ಉತ್ತರ ನೀಡುತ್ತಿದ್ದಾರೆ. ಕೆಲ ವರ್ಗದ ಅಂಗವಿಕಲರನ್ನು ನೇಮಕಾತಿಯಿಂದ ಹೊರಗಿಡಲು ವಿನಾಯಿತಿ ಇದೆ ಎಂದು ಹೇಳುತ್ತಿದ್ದಾರೆ. ಸರ್ಕಾರ ಮೀಸಲಾತಿ ವರ್ಗೀಕರಣ ಮಾಡಿ ಹೊರಡಿಸಿರುವ ಅಧಿಸೂಚನೆ ಉಲ್ಲಂಘಿಸಿ ವಿನಾಯಿತಿ ಪಡೆದುಕೊಳ್ಳಲು ಕೆಪಿಟಿಸಿಎಲ್‌ಗೆ ಅಧಿಕಾರ ಎಲ್ಲಿದೆ' ಎಂದು ಪ್ರಶ್ನಿಸಿದರು.

'ಅಧಿಸೂಚನೆ ರದ್ದುಗೊಳಿಸಿ ಹೊಸದಾಗಿ ಮೀಸಲಾತಿ ಒಳ ವರ್ಗೀಕರಣ ಮಾಡದಿದ್ದರೆ ಕಾನೂನು ಹೋರಾಟ ನಡೆಸಲಾಗುವುದು' ಎಂದು ಅವರು ಎಚ್ಚರಿಸಿದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಕೆಪಿಟಿಸಿಎಲ್ ಅಧಿಕಾರಿಗಳು ಸಂಪರ್ಕಕ್ಕೆ ಬರಲಿಲ್ಲ.

ಒಳ ವರ್ಗೀಕರಣವೂ ಅಸಮರ್ಪಕ

'ಕೆಪಿಟಿಸಿಎಲ್ ಅವಕಾಶ ನೀಡದೇ ಮಾಡಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಅಂಗವಿಕಲರ ಹಕ್ಕುಗಳ ಕಾಯ್ದೆ 2016ರ ಅಡಿಯಲ್ಲಿ ಮೀಸಲಾತಿ ಒಳ ವರ್ಗೀಕರಣ ಮಾಡಿ 2020ರಲ್ಲಿ ಸರ್ಕಾರ ಹೊರಡಿಸಿರುವ ಅಧಿಸೂಚನೆಯನ್ನೂ ಕೆಪಿಟಿಸಿಎಲ್ ಉಲ್ಲಂಘಿಸಿದೆ. 2009ರ ಆದೇಶವನ್ನೇ ಪಾಲನೆ ಮಾಡಲಾಗಿದೆ' ಎಂದು ದೂರಿದರು.

'ಹೊಸ ಆದೇಶದ ಪ್ರಕಾರ ಚಲನ ಸಂಬಂಧಿ ವೈಕಲ್ಯ ಉಳ್ಳವರಿಗೆ ಶೇ 2ರಷ್ಟು ಮೀಸಲಾತಿ ನಿಗದಿಯಾಗಿದೆ. ಕೆಪಿಟಿಸಿಎಲ್ ಅಧಿಸೂಚನೆಯಲ್ಲಿ 2009ರ ಆದೇಶದಂತೆ ಇವರಿಗೆ ಶೇ 1ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಅಂಧರಿಗೆ ಶೇ 2ರಷ್ಟು ಮೀಸಲಾತಿ ದೊರಕಿಸಲಾಗಿದೆ. ಕೆಪಿಟಿಸಿಎಲ್ ತನ್ನ ತಪ್ಪು ಸರಿಪಡಿಸಿಕೊಂಡು 2020ರ ಅಧಿಸೂಚನೆಯಂತೆ ಮೀಸಲಾತಿ ಒಳ ವರ್ಗೀಕರಣ ಮಾಡಬೇಕಿದೆ' ಎಂದು ಉದ್ಯೋಗಾಕಾಂಕ್ಷಿಯ ಪೋಷಕರು ಒತ್ತಾಯಿಸಿದರು.

ಪ್ರಜಾವಾಣಿ ವಿಶೇಷ

ಸುದ್ದಿ 2 ನಿಮಿಷ

ಬೇಕರಿ, ಹೋಟೆಲ್‌ನಲ್ಲಿ ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ಬೇಕರಿ, ಕಿರಾಣಿ ಹಾಗೂ ಹೋಟೆಲ್‌ಗಳ ಷಟರ್ ಮುರಿದು ಕಳ್ಳತನ ಮಾಡುತ್ತಿದ್ದ ಆರೋಪಿ ಕಾರ್ತಿಕ್ ಅಲಿಯಾಸ್ ಕಾಟು (27) ಎಂಬಾತನನ್ನು ಸುಬ್ರಹ್ಮಣ್ಯಪುರ ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಗೌಡನಪಾಳ್ಯದ ಕಾರ್ತಿಕ್, ಹಲವು ದಿನಗಳಿಂದ ಕೃತ್ಯ ಎಸಗುತ್ತಿದ್ದ. ಆತನನ್ನು ಬಂಧಿಸಿ ₹ 3.75 ಲಕ್ಷ ಮೌಲ್ಯದ ಬೆಳ್ಳಿ ಸಾಮಗ್ರಿ, ಆರು ದ್ವಿಚಕ್ರ ವಾಹನ ಹಾಗೂ ₹54 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯ ಅಂಗಡಿಯೊಂದರಲ್ಲಿ ಫೆ. 7ರಂದು ರಾತ್ರಿ ಕಳ್ಳತನವಾಗಿತ್ತು. ಈ ಬಗ್ಗೆ ಮಾಲೀಕರು ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ಸಿ.ಸಿ. ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ಆರೋಪಿ ಸುಳಿವು ಸಿಕ್ಕಿತ್ತು. ಆತನ ಫೋಟೊವನ್ನು ವಿವಿಧ ಠಾಣೆಗಳಿಗೆ ಕಳುಹಿಸಲಾಗಿತ್ತು. ಅದೇ ಫೋಟೊ ಆಧರಿಸಿ ಗಸ್ತಿನಲ್ಲಿದ್ದ ಪೊಲೀಸರು, ಆರೋಪಿಯನ್ನು ಇತ್ತೀಚೆಗೆ ಬೆನ್ನಟ್ಟಿ ಹಿಡಿದಿದ್ದಾರೆ' ಎಂದೂ ತಿಳಿಸಿವೆ.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿ, ಅಂಗಡಿಗಳನ್ನು ಗುರುತಿಸುತ್ತಿದ್ದ. ರಾತ್ರಿ ವೇಳೆ ಅಂಗಡಿಗೆ ಹೋಗಿ ಷಟರ್ ಮುರಿದು ಒಳನುಗ್ಗಿ ಕಳ್ಳತನ ಮಾಡುತ್ತಿದ್ದ. ಗಿರಿನಗರ, ಚನ್ನಮ್ಮನ ಕೆರೆ ಅಚ್ಚುಕಟ್ಟು ಹಾಗೂ ಜೆ.ಪಿ.ನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ಹೇಳಿವೆ.



ಡಾನ್ಸ್ ಬಾರ್: 28 ಮಹಿಳೆಯರ ರಕ್ಷಣೆ

ಬೆಂಗಳೂರು: ಕೋರಮಂಗಲ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಡಾನ್ಸ್ ಬಾರ್ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, 28 ಮಹಿಳೆಯರನ್ನು ರಕ್ಷಣೆ ಮಾಡಿದ್ದಾರೆ.

'ಕೋರಮಂಗಲದ ಆರನೇ ಹಂತದ 80 ಅಡಿ ರಸ್ತೆಯಲ್ಲಿರುವ 'ಸಿಕ್ಸ್ ಡೀಸ್ ಪಬ್ ಬಾರ್ ಆ್ಯಂಡ್ ರೆಸ್ಟೋರೆಂಟ್'ನಲ್ಲಿ ಡಾನ್ಸ್ ಬಾರ್ ನಡೆಸಲಾಗುತ್ತಿತ್ತು. ಮಾಹಿತಿ ಬರುತ್ತಿದ್ದಂತೆ ದಾಳಿ ನಡೆಸಿ, 21 ಗ್ರಾಹಕರನ್ನು ವಶಕ್ಕೆ ಪಡೆಯಲಾಗಿದೆ. ₹ 8,900 ನಗದು ಹಾಗೂ ವಿವಿಧ ಸೌಲಭ್ಯಗಳ 2,325 ಬಿಲ್ಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ನೀಡಿರುವ ಉದ್ದಿಮೆ ಪರವಾನಗಿಯನ್ನು ರದ್ದುಪಡಿಸುವಂತೆ ಬಿಬಿಎಂಪಿಗೆ ತನಿಖಾ ವರದಿ ಸಮೇತ ಪತ್ರ ಬರೆಯಲಾಗಿದೆ' ಎಂದೂ ತಿಳಿಸಿದರು.

ಜೂಜಾಟ ಉಪಕರಣ ಮಾರಾಟ: ಬಂಧನ

ಬೆಂಗಳೂರು: ಜೂಜು ಆಡುವವರಿಗೆ ಆಧುನಿಕ ಉಪಕರಣ ಮಾರಾಟ ಮಾಡುತ್ತಿದ್ದ ಆರೋಪದಡಿ ಫರ್ದಿನ್ ಖಾನ್ ಎಂಬಾತನನ್ನು ಯಶವಂತಪುರ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಯಾದ ಫರ್ದಿನ್ ಖಾನ್, ದೆಹಲಿಯಿಂದ ಉಪಕರಣಗಳನ್ನು ಖರೀದಿಸಿ ತಂದು ನಗರದಲ್ಲಿ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಜೂಜಾಟಕ್ಕೂ ಮುನ್ನ ಎಲ್ಲ ಕಾರ್ಡ್‌ಗಳನ್ನು ಉಪಕರಣದ ಮೂಲಕ ಸ್ಕ್ಯಾನ್ ಮಾಡಬೇಕು. ನಂತರ ಆಟ ಶುರು ಮಾಡಬೇಕು. ಯಾವ ಕಾರ್ಡ್, ಯಾರ ಬಳಿ ಇದೆ ಯಾರು ಗೆಲ್ಲುತ್ತಾರೆ ಎಂಬುದು ಉಪಕರಣದಿಂದ ಗೊತ್ತಾಗುತ್ತದೆ. ಇದನ್ನು ನಂಬಿ, ಹಲವರು ಉಪಕರಣ ಖರೀದಿಸಿದ್ದರು' ಎಂದೂ ತಿಳಿಸಿದರು.

'ಕಾರ್ಮೋಡಗಳ ನಡುವೆ' ಪುಸ್ತಕ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವೀಯತೆ ಎನ್ನುವುದು ಕಾರ್ಮೋಡಗಳ ನಡುವೆ ಇರುವ ಬೆಳ್ಳಿ ರೇಖೆಯಂತೆ. ಮಾನವೀಯತೆ ಹೆಚ್ಚಿದಷ್ಟು ವಿಶ್ವ ಸಹನೀಯವಾದ ಸ್ಥಳವಾಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಕೋವಿಡ್–19 ಸಂದರ್ಭದಲ್ಲಿನ ಹೋರಾಟದ ಕಥೆಗಳ ಬಗ್ಗೆ ಅದಮ್ಯ ಚೇತನ ಹೊರತಂದಿರುವ 'ಕಾರ್ಮೋಡಗಳ ನಡುವೆ' ಪುಸಕ್ತವನ್ನು ಶನಿವಾರ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

'ಪ್ರತಿ ವಿಚಾರದಲ್ಲಿಯೂ ಮಾನವೀಯತೆಗೆ ಪ್ರಾಮುಖ್ಯತೆ ನೀಡಬೇಕು. ದುಃಖದಲ್ಲಿಯೂ ಸಾಧಿಸಿ ಜಯಿಸಬಹುದು ಎಂಬ ಪಾಠವನ್ನು ಆಪತ್ಕಾಲ ನಮಗೆ ಕಲಿಸುತ್ತದೆ' ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ 'ಕಾರ್ಮೋಡಗಳ ನಡುವೆ' ಪುಸಕ್ತವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ಸಪ್ನಾ ಬುಕ್ ಹೌಸ್‌ನ ನಿತಿನ್ ಶಾ, ನಟಿ ಸಂಯುಕ್ತಾ ಹೊರನಾಡು, ಪತ್ರಕರ್ತ ವಿನಾಯಕ ಭಟ್ ಮೂರೂರು, ಅದಮ್ಯ ಚೇತನದ ಮುಖ್ಯಸ್ಥರಾದ ತೇಜಸ್ವಿನಿ, ಟ್ರಸ್ಟಿ ಐಶ್ವರ್ಯಾ, ವನ್ಯಜೀವಿ ತಜ್ಞ ಉಲ್ಲಾಸ್ ಕಾರಂತ್, ರಂಗಕರ್ಮಿ ಅಭಿಷೇಕ್ ಅಯ್ಯಂಗಾರ್ ಇದ್ದರು

'ಕೋವಿಡ್ ಸಂದರ್ಭದಲ್ಲಿ ಎಲೆಮರೆಯ ಕಾಯಿಯಂತೆ ಜನರ ಸಹಾಯಕ್ಕೆ ಅನೇಕರು ಮುಂದಾಗಿದ್ದಾರೆ. ಅವರ ಪೈಕಿ ಹಲವು ಕಥೆಗಳನ್ನು ಪುಸ್ತಕದಲ್ಲಿ ದಾಖಲಿಸಿರುವುದು ಶ್ಲಾಘನೀಯ. ಸಂಕಷ್ಟದ ಸಮಯದಲ್ಲಿ ಸಮಾಜ ಸ್ಪಂದಿಸಬೇಕು. ಈ ಕಾರಣಕ್ಕಾಗಿಯೇ ನಾಗರಿಕ ಸಂಘಗಳು ಹುಟ್ಟಿಕೊಳ್ಳಬೇಕು. ಜನಾಭಿಪ್ರಾಯ ರೂಪಿಸಲು, ನಾಗರಿಕ ಸಂಘಗಳ ಅಗತ್ಯವಿದೆ' ಎಂದು ಹೇಳಿದರು.

ಕೋವಿಡ್–19 ಸಂದರ್ಭದಲ್ಲಿ ಸಂಕಷ್ಟಗಳು, ಹೋರಾಟದ ಕಥೆಗಳನ್ನು ಪ್ರಣೀತಾ ಸುಭಾಷ್ ಮತ್ತು ಐಶ್ವರ್ಯಾ ಅನಂತಕುಮಾರ್ ಮತ್ತು ಶರಣ ಸೆಟ್ಟಿ ಅವರು ಈ ಪುಸ್ತಕದ ಮೂಲಕ ತೆರೆದಿಟ್ಟಿದ್ದಾರೆ.

ಶಾಂತಾರಾಮ್ ಸಿದ್ಧಿ, ತೇಜಸ್ವಿನಿ ಅನಂತಕುಮಾರ್, ವಿನಾಯಕ್ ಭಟ್ ಮುರೂರು, ಅಭಿಷೇಕ್ ಅಯ್ಯಂಗಾರ್, ಕೃತಿ ಕಾರಂತ್, ಎಂ.ಸಿ.ವಿನಯ ಕುಮಾರ್, ಸಂಯುಕ್ತಾ ಹೊರನಾಡು, ಚೈತ್ರಾ ಎಂ.ಎಸ್, ತನ್ಮಯ ಪ್ರಕಾಶ್, ರಾಜೇಶ ಪದ್ಮಾರ್, ಭಾಸ್ಕರ್ ರಾವ್ ಮತ್ತು ಗೌತಮ್ ಗೌಡ ಮುಂತಾದವರು ತಮ್ಮ ಅನುಭವಗಳನ್ನು ಈ ಕೃತಿಯಲ್ಲಿ ಹಂಚಿಕೊಂಡಿದ್ದಾರೆ. ಈ ಪುಸ್ತಕದಿಂದ ಸಂಗ್ರಹಿಸಿದ ಹಣವನ್ನು ಸಂಕಷ್ಟದ ಸಮಯದಲ್ಲಿ ಸಮಾಜಕ್ಕೆ ಮರಳಿ ನೀಡಲು ನಿರ್ಧರಿಸಲಾಗಿದೆ.

₹ 9.82 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ವಿದೇಶದಿಂದ ಕೊರಿಯರ್ ಮೂಲಕ ನಗರಕ್ಕೆ ತರಿಸಿಕೊಂಡಿದ್ದ ₹ 9.82 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿರುವ ಕಸ್ಟಮ್ಸ್ ಅಧಿಕಾರಿಗಳು, ನೈಜೀರಿಯಾ ಪ್ರಜೆ ಸೇರಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೊರಿಯರ್‌ನಲ್ಲಿ ಡ್ರಗ್ಸ್ ಪಾರ್ಸೆಲ್ ಬಂದಿರುವ ಮಾಹಿತಿ ಲಭ್ಯವಾಗಿತ್ತು. ಸರಕು ಸಾಗಣೆ (ಕಾರ್ಗೊ) ವಿಭಾಗದಲ್ಲಿ ಕೊರಿಯರ್ ಪೊಟ್ಟಣಗಳ ಪರಿಶೀಲನೆ ನಡೆಸಲಾಯಿತು. ಇದೇ ವೇಳೆ ಎರಡು ಪೊಟ್ಟಣಗಳಲ್ಲಿ ₹ 7 ಕೋಟಿ ಮೌಲ್ಯದ ಹೆರಾಯಿನ್ ಹಾಗೂ ₹ 2.82 ಕೋಟಿ ಮೌಲ್ಯದ ಎಂಡಿಎಂಎ ಮಾತ್ರೆಗಳು ಪತ್ತೆಯಾದವು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ನಗರದಲ್ಲಿ ವಾಸವಿದ್ದ ಇಬ್ಬರ ಹೆಸರಿಗೆ ಬೆಲ್ಜಿಯಂ ಹಾಗೂ ತಾಂಜಾನಿಯಾ ದೇಶಗಳಿಂದ ಬಂದಿದ್ದ ಎರಡು ಕೊರಿಯರ್‌ಗಳಲ್ಲಿ ಡ್ರಗ್ಸ್ ಸಿಕ್ಕಿದೆ. ಅಂತರರಾಷ್ಟ್ರೀಯ ಪೆಡ್ಲರ್‌ಗಳು, ಕೊರಿಯರ್ ಕಳುಹಿಸಿರುವ ಮಾಹಿತಿ ಇದೆ' ಎಂದೂ ತಿಳಿಸಿವೆ.



ಜಪ್ತಿ ಮಾಡಿರುವ ಡ್ರಗ್ಸ್

ತಮಿಳುನಾಡಿನಲ್ಲಿ ವಾಸ: 'ತಮಿಳುನಾಡಿನಲ್ಲಿ ವಾಸವಿರುವ ನೈಜೀರಿಯಾ ಪ್ರಜೆ ವಿಳಾಸಕ್ಕೆ ಕೊರಿಯರ್ ಬಂದಿತ್ತು. ಆತನನ್ನು ಈಗಾಗಲೇ ಬಂಧಿಸಲಾಗಿದೆ' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

ಕಾಂಗ್ರೆಸ್ ಪ್ರತಿಭಟನೆಯಲ್ಲಿ ಪ್ರಾಣಿ ಹಿಂಸೆ: ಕ್ರಮಕ್ಕೆ ಕಮಿಷನರ್‌ಗೆ ಪತ್ರ

ಬೆಂಗಳೂರು: 'ಮಲ್ಲೇಶ್ವರದಲ್ಲಿ ಫೆ.17ರಂದು ನಡೆದ ಯುವ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಪ್ರಾಣಿ ಹಿಂಸೆ ನಡೆದಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಪಶುಸಂಗೋಪನಾ ಇಲಾಖೆ ಉಪ ನಿರ್ದೇಶಕರು ಹೇಳಿದ್ದಾರೆ.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿರುವ ಅವರು,'ಪ್ರಾಣಿ ಹಿಂಸೆ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಅಧೀನ ಅಧಿಕಾರಿಗಳಿಗೆ ಸೂಚನೆ ನೀಡಬೇಕು. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು' ಎಂದಿದ್ದಾರೆ.

'ಯುವ ಕಾಂಗ್ರೆಸ್ ನಡೆಸಿದ್ದ ಪ್ರತಿಭಟನೆಯಲ್ಲಿ ಕತ್ತೆಯನ್ನು ಬಳಸಿಕೊಳ್ಳಲಾಗಿದೆ. ಕತ್ತೆ ಮೇಲೆ ವ್ಯಕ್ತಿಯನ್ನು ಕೂರಿಸಿ ಮೆರವಣಿಗೆ ಮಾಡಲಾಗಿದೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಇಂತಹ ಕೃತ್ಯಗಳು ಕಾನೂನು ಬಾಹಿರ. ಪ್ರಾಣಿ ಹಿಂಸೆ ಮಾಡುವ ಪ್ರತಿಭಟನೆಗಳನ್ನು ತಡೆಯುವುದು ಪೊಲೀಸರ ಕರ್ತವ್ಯ. ಆದರೆ, ಪೊಲೀಸರು ತಡೆಯದಿರುವುದು ವಿಷಾದನೀಯ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಭಾರಿ ಮೆರವಣಿಗೆ: ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ ಮಾಡಿರುವ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ಸೇವೆಯಿಂದ ವಜಾ ಮಾಡಬೇಕು' ಎಂದು ಒತ್ತಾಯಿಸಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ನೇತೃತ್ವದಲ್ಲಿ ಶನಿವಾರ ನಡೆದ ಪ್ರತಿಭಟನಾ ಮೆರವಣಿಗೆ ಸಂದರ್ಭದಲ್ಲಿ ಮೆಜೆಸ್ಟಿಕ್ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ವಿಪರೀತ ಸಂಚಾರ ದಟ್ಟಣೆ ಉಂಟಾಯಿತು.

ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಸಾಗಿದ ಮೆರವಣಿಗೆಯಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು. ಮೆರವಣಿಗೆ ಸಾಗುತ್ತಿದ್ದ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ, ಶೇಷಾದ್ರಿ ರಸ್ತೆಯಲ್ಲಿ ವಾಹನಗಳ ಸಂಚಾರ ಬಂದ್ ಮಾಡಲಾಯಿತು. ಕೆಲವೆಡೆ ಸಂಚಾರ ಮಾರ್ಗ ಬದಲಾವಣೆ ಮಾಡಲಾಯಿತು. ಮೆಜೆಸ್ಟಿಕ್, ಗಾಂಧಿನಗರ, ಓಕಳಿಪುರ, ಶೇಷಾದ್ರಿಪುರ, ರೇಸ್‌ಕೋರ್ಸ್ ರಸ್ತೆ, ಬಸವೇಶ್ವರ ವೃತ್ತ, ಕೆ.ಆರ್.ಪುರ ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳು ನಿಧಾನವಾಗಿ ಸಾಗಿದವು. ಬಿಎಂಟಿಸಿ ಬಸ್‌ಗಳು ಕೆಲ ನಿಮಿಷ ನಿಂತಲ್ಲೇ ನಿಂತಿದ್ದವು.

ರೇಸ್‌ಕೋರ್ಸ್ ರಸ್ತೆ, ಅರಮನೆ ರಸ್ತೆ, ಕೆ.ಆರ್.ಪುರ, ಕಾರ್ಪೊರೇಷನ್ ವೃತ್ತ, ಕೆಂಪೇಗೌಡ ರಸ್ತೆ, ಗಾಂಧಿನಗರ, ಬಸವೇಶ್ವರ ವೃತ್ತ, ಸ್ಯಾಂಕಿ ರಸ್ತೆ, ಕುಮಾರಕೃಪಾ ರಸ್ತೆ, ವಿಂಡ್ಸರ್ ಮ್ಯಾನರ್ ಕೆಳಸೇತುವೆ ಹಾಗೂ ಬಳ್ಳಾರಿ ರಸ್ತೆಯಲ್ಲಿ ವಿಪರೀತ ದಟ್ಟಣೆ ಕಂಡುಬಂತು.

ಕೆಲವೆಡೆ ಆಂಬುಲೆನ್ಸ್‌ಗಳು ವಾಹನ ದಟ್ಟಣೆ ನಡುವೆ ಸಿಲುಕಿದ್ದವು. ಅವುಗಳಿಗೆ ದಾರಿ ಮಾಡಿಕೊಡಲು ಪೊಲೀಸರು ಹರಸಾಹಸಪಟ್ಟರು.



ಬಳ್ಳಾರಿ ರಸ್ತೆಯಲ್ಲಿ ಶನಿವಾರ ದಟ್ಟಣೆ ಉಂಟಾಗಿದ್ದರಿಂದ ವಾಹನಗಳು ಸಾಲುಗಟ್ಟಿ ನಿಂತಿದ್ದವು – ಪ್ರಜಾವಾಣಿ ಚಿತ್ರ



ಸುರಾನಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಚಂದ್ರಶೇಖರಪ್ಪ ವಿದ್ಯಾರ್ಥಿಗಳಿಗೆ ಚೆಕ್ ವಿತರಿಸಿದರು. ಸಂಸ್ಥಾಪಕ ಡಾ.ಕೆ.ವಿ.ಮುನಿಸ್ವಾಮಿ, ತಾಲ್ಲೂಕು ಸರ್ಕಾರಿ ಆಸ್ಪತ್ರೆಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀಶೈಲಂ, ಪ್ರೊ.ವಿ.ಎಂ.ರವಿ, ಪುಟ್ಟರಾಜು, ಡಾ.ಸತ್ಯಶೀಲನಾಯರ್, ಡಾ.ಪ್ರಕಾಶ್, ಜಿ.ಇ.ಚಂದ್ರಯ್ಯ, ಮದನ್ ಕುಮಾರ್ ಇದ್ದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಕೆ.ಆರ್.ಪುರ: ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು ಸಂಯಮ ಸದ್ಗುಣಗಳನ್ನು ರೂಡಿಸಿಕೊಂಡರೆ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ಸಾಧ್ಯ ಎಂದು ಸುರಾನ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಚಂದ್ರಶೇಖರಪ್ಪ ತಿಳಿಸಿದರು.

ಕೆ.ಆರ್.ಪುರದ ಶ್ರೀವೆಂಕಟೇಶ್ವರ ಸಮೂಹ ವಿದ್ಯಾಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅತಿಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಚೆಕ್ ವಿತರಿಸಿ ಮಾತನಾಡಿದರು.

ವೆಂಕಟೇಶ್ವರ ಸಮೂಹ ವಿದ್ಯಾಸಂಸ್ಥೆಗಳ ಸಂಸ್ಥಾಪಕ ಡಾ.ಕೆ.ವಿ.ಮುನಿಸ್ವಾಮಿ ಮಾತನಾಡಿ, ಸಂಸ್ಥೆಯ ವತಿಯಿಂದ ಪ್ರತಿಭಾ ಪುರಸ್ಕಾರ ಹಮ್ಮಿಕೊಂಡು 250 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಗಿದೆ ಎಂದರು.

ಸಿಐಎಸ್‌ಎಫ್: ನಾಯಿಗಳಿಗೆ ಬೀಳ್ಕೊಡುಗೆ

ಬೆಂಗಳೂರು: ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಕೆಲಸಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದ ಮೂರು ನಾಯಿಗಳನ್ನು ಶುಕ್ರವಾರ ಬೀಳ್ಕೊಡಲಾಯಿತು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಭದ್ರತೆ ಜವಾಬ್ದಾರಿಯನ್ನು ಸಿಐಎಸ್‌ಎಫ್ ವಹಿಸಿಕೊಂಡಿದೆ. ಬಾಂಬ್ ನಿಷ್ಕ್ರಿಯ ದಳದಲ್ಲಿ ತಪಾಸಣೆ ಕೆಲಸಕ್ಕೆಂದು ಮೂರು ನಾಯಿಗಳನ್ನು ಬಳಸಿಕೊಳ್ಳಲಾಗಿತ್ತು. ಹತ್ತು ವರ್ಷಗಳವರೆಗೆ ಇವುಗಳು ಸಿಬ್ಬಂದಿಗೆ ನೆರವಾಗಿದ್ದವು.

'ಎರಡು ಲ್ಯಾಬ್ರಡಾರ್ ಒಂದು ಗೋಲ್ಡನ್ ರಿಟ್ರೀವರ್ ನಾಯಿಗಳು ಅತ್ಯುತ್ತಮವಾದ ಸೇವೆ ನೀಡಿವೆ. ಪಡೆಯ ನಿಯಮದಂತೆ ಮೂರು ನಾಯಿಗಳು ನಿವೃತ್ತಿ ಆಗಿವೆ' ಎಂದು ಸಿಐಎಸ್‌ಎಫ್ ಅಧಿಕಾರಿ ಹೇಳಿದರು.

ಆಹಾರ ಸುರಕ್ಷತೆ: ಬೀದಿ ಬದಿ ವ್ಯಾಪಾರಿಗಳಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಪದಾರ್ಥಗಳನ್ನು ಮಾರಾಟ ಮಾಡುವ ಬೀದಿ ಬದಿ ವ್ಯಾಪಾರಿಗಳಿಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಅಧಿಕಾರಿಗಳಿಂದ ತರಬೇತಿ ಕೊಡಿಸಿ ಪ್ರಮಾಣಪತ್ರ ನೀಡುವ ಕಾರ್ಯಕ್ರಮವನ್ನು ಬಿಬಿಎಂಪಿಯು ಹಮ್ಮಿಕೊಂಡಿದೆ. ಎಫ್‌ಎಸ್‌ಎಸ್‌ಎಐ ಪ್ರಮಾಣಪತ್ರ ಹೊಂದಿಲ್ಲದ ಬೀದಿ ಬದಿ ವ್ಯಾಪಾರಿಗಳು ಆಹಾರ ಪದಾರ್ಥಗಳನ್ನು ಮಾರಾಟ ಮಾಡಲು ಅನುಮತಿ ನೀಡಲಾಗುವುದಿಲ್ಲ ಎಂದೂ ಬಿಬಿಎಂಪಿ ಎಚ್ಚರಿಸಿದೆ.

'ಬೀದಿ ಬದಿ ವ್ಯಾಪಾರಿಗಳು ತಯಾರಿಸಿ ಮಾರಾಟ ಮಾಡುವ ಆಹಾರ ಪದಾರ್ಥಗಳ ಸುರಕ್ಷತೆ, ಸ್ವಚ್ಛತೆ ಮತ್ತು ಗುಣಮಟ್ಟ ಕಾಪಾಡಲು ಪಾಲಿಸಬೇಕಾದ ಕ್ರಮಗಳ ಬಗ್ಗೆ ಹಾಗೂ ಸಾರ್ವಜನಿಕ ಆರೋಗ್ಯ ರಕ್ಷಣೆಯ ಮಹತ್ವದ ಬಗ್ಗೆ ಎಫ್‌ಎಸ್‌ಎಸ್‌ಎಐ ಅಧಿಕಾರಿಗಳು ಮಾಹಿತಿ ನೀಡಲಿದ್ದಾರೆ. ಈ ತರಬೇತಿ ಪಡೆದ ಬೀದಿ ಬದಿ ವ್ಯಾಪಾರಿಗಳಿಗೆ ಪ್ರಮಾಣಪತ್ರವನ್ನೂ ನೀಡಲಾಗುವುದು.' ಬಿಬಿಎಂಪಿ ಹೇಳಿದೆ.

ಆರ್‌ಆರ್‌ನಗರ ವಲಯದ ವ್ಯಾಪ್ತಿಯಲ್ಲಿ ಬರುವ ಆರ್‌ಆರ್‌ನಗರ ವಿಧಾನಸಭಾ ಕ್ಷೇತ್ರದ 9 ವಾರ್ಡ್‌ಗಳು ಹಾಗೂ ಯಶವಂತಪುರ ವಿಧಾನಸಭಾ ಕ್ಷೇತ್ರದ 5 ವಾರ್ಡ್‌ಗಳ ಬೀದಿ ಬದಿ ವ್ಯಾಪಾರಿಗಳಿಗೆ ಶೀಘ್ರವೇ ತರಬೇತಿ ಏರ್ಪಡಿಸಲಾಗುತ್ತದೆ. ಆಸಕ್ತರು ತಮ್ಮ ವಿವರಗಳೊಂದಿಗೆ ಇದೇ 28ರ ಒಳಗೆ ಆರ್‌ಆರ್‌ನಗರದ ಬಿಬಿಎಂಪಿಯ ಕಲ್ಯಾಣಾಧಿಕಾರಿ ಕಚೇರಿಯಲ್ಲಿ ಹೆಸರು ನೋಂದಾಯಿಸಬಹುದು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ವಿಳಾಸ: ಬಿಬಿಎಂಪಿ ಕಲ್ಯಾಣಾಧಿಕಾರಿ (ಕಲ್ಯಾಣ ಶಾಖೆ), 18ನೇ ಕ್ರಾಸ್, ಐಡಿಯಲ್ ಹೋಮ್ಸ್ ಟೌನ್ ಶಿಪ್, ಬೆಂಗಳೂರು-98



ಚಾಲಾಕಿ ಚಾಲಕರು..

ನಗರದ ಕೇಂದ್ರ ವಾಣಿಜ್ಯ ಪ್ರದೇಶದ ಪ್ರಮುಖ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯನ್ನು ಬಿಬಿಎಂಪಿ ಜಾರಿಗೆ ತಂದಿದೆ. ಪಾರ್ಕಿಂಗ್ ಶುಲ್ಕ ಪಾವತಿಯನ್ನು ತಪ್ಪಿಸಲು ಕಾರು ಚಾಲಕರು ಇನ್ನೂ ಚಾಣಾಕ್ಷ ದಾರಿಯನ್ನು ಕಂಡುಕೊಂಡು ಚಾಲಾಕಿತನ ತೋರಿಸಿದ್ದಾರೆ. ಮಹಾತ್ಮ ಗಾಂಧಿ ರಸ್ತೆಯಲ್ಲಿ ವಾಹನ ನಿಲುಗಡೆಗೆ ಗೊತ್ತುಪಡಿಸಲಾದ ಜಾಗದಲ್ಲಿ ಶುಲ್ಕ ಪಾವತಿಸದೇ ವಾಹನ ನಿಲ್ಲಿಸಿದರೆ ಸ್ಮಾರ್ಟ್ ಪಾರ್ಕಿಂಗ್ ನಿರ್ವಹಣೆ ಮಾಡುವ ಸಂಸ್ಥೆಯವರು ಚಕ್ರಕ್ಕೆ ಬೀಗ ಹಾಕುತ್ತಾರೆ. ಅದನ್ನು ತಪ್ಪಿಸಲು ಆ ಜಾಗ ಬಿಟ್ಟು, ಅದರ ಪಕ್ಕದ ರಸ್ತೆಯಲ್ಲೇ ಕಾರುಗಳನ್ನು ನಿಲ್ಲಿಸಿರುವುದು ಶನಿವಾರ ಕಂಡುಬಂತು

–ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಅತ್ಯಾಚಾರ ಆರೋಪ: ಮರು ವಿಚಾರಣೆಗೆ ಆದೇಶ

'ವಕೀಲರ ನೆರವು ಆರೋಪಿಯ ಹಕ್ಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಂಧನದಲ್ಲಿರುವ ಆರೋಪಿಯ ಪರ ವಕೀಲರು ಕೋರ್ಟ್‌ಗೆ ಹಾಜರಾಗದೇ ಇದ್ದಾಗ ವಿಚಾರಣಾ ನ್ಯಾಯಾಲಯ ಆರೋಪಿಗೆ ಕಾನೂನು ನೆರವು ಒದಗಿಸುವ ಮೂಲಕ ವಕೀಲರನ್ನು ನೇಮಿಸಿಕೊಡುವ ಬದ್ಧತೆ ಹೊಂದಿರುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅತ್ಯಾಚಾರ ಆರೋಪದಡಿ ವಿಚಾರಣಾ ನ್ಯಾಯಾಲಯ ನೀಡಿದ ಶಿಕ್ಷೆ ರದ್ದುಪಡಿಸುವಂತೆ ಕೋರಿ ಬೆಂಗಳೂರಿನ ಸೋಮಶೇಖರ ಅಲಿಯಾಸ್ ಸೋಮ ಎಂಬುವವರು ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದ್ದು, 'ಅರ್ಜಿದಾರನಿಗೆ ವಕೀಲರ ನೆರವು ನೀಡಬೇಕು. ಪ್ರಕರಣವನ್ನು ಪುನಃ ವಿಚಾರಣೆ ನಡೆಸಿ ವಿಲೇವಾರಿ ಮಾಡಬೇಕು' ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.



ಸಂವಿಧಾನದ 39 (ಎ) ವಿಧಿಯ ಅನುಸಾರ ಆರ್ಥಿಕ ಕಾರಣಗಳೂ ಸೇರಿ ಯಾವುದೇ ಅಸಮರ್ಥತೆಗಳಿಂದಾಗಿ ನಾಗರಿಕರು ನ್ಯಾಯ ಪಡೆಯಬೇಕಾದ ಅವಕಾಶವನ್ನು ನಿರಾಕರಿಸುವಂತಿಲ್ಲ.
ಕೆ.ಎಸ್.ಮುದಗಲ್ ನ್ಯಾಯಮೂರ್ತಿ



ಮುಖ್ಯಾಂಶಗಳು

- ಅತ್ಯಾಚಾರ ಆರೋಪ ಪ್ರಕರಣ
- ಅಮಿಕಸ್ ಕ್ಯೂರಿ ಸೇವೆಗೆ ಶ್ಲಾಘನೆ

'ಅರ್ಜಿದಾರ ನ್ಯಾಯಾಂಗ ಬಂಧನಕ್ಕೆ ಒಳಗಾದ ನಂತರ ಆತನ ಪರ ವಕೀಲರು ಪಾಟಿ ಸವಾಲಿನ ವಿಚಾರಣೆಗೆ ಹಾಜರಾಗಿಲ್ಲ. ಇಂತಹ ಸಂದರ್ಭದಲ್ಲಿ ಅರ್ಜಿದಾರನಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಉಚಿತವಾಗಿ ಕಾನೂನು ನೆರವು ನೀಡಬೇಕಿತ್ತು. ಆದರೆ, ನೀಡಿಲ್ಲ. ಸಾಕ್ಷಿಗಳ ಪಾಟಿ ಸವಾಲು ನಡೆಯದ ಕಾರಣ ಸೋಮಶೇಖರನಿಗೆ ವಿಚಾರಣಾ ನ್ಯಾಯಾಲಯ ವಿಧಿಸಿರುವ ಶಿಕ್ಷೆ ರದ್ದುಪಡಿಸಲಾಗಿದೆ' ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.

'ಅಗತ್ಯ ಸಂದರ್ಭಗಳಲ್ಲಿ ಉಚಿತ ಕಾನೂನು ನೆರವು ನೀಡಲೆಂದೇ ಕಾನೂನು ಸೇವಾ ಪ್ರಾಧಿಕಾರ ರೂಪಿಸಲಾಗಿದೆ. ಈ ಪ್ರಾಧಿಕಾರವು ರಾಷ್ಟ್ರೀಯ ಮಟ್ಟದಿಂದ ತಾಲ್ಲೂಕು ಹಂತದವರೆಗೆ ಇದ್ದು, ಸಿಆರ್‌ಪಿಸಿ ಕಲಂ 304ರ ಪ್ರಕಾರ ಸರ್ಕಾರದ ವೆಚ್ಚದಲ್ಲಿ ಉಚಿತವಾಗಿ ವಕೀಲರ ನೆರವು ನೀಡಬೇಕಿದೆ' ಎಂದು ನ್ಯಾಯಪೀಠ ತೀರ್ಪಿನಲ್ಲಿ ಮನಗಾಣಿಸಿದೆ.

ಉನ್ನತಾಧಿಕಾರ ಸಮಿತಿ ಸಭೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ–2009 ಅನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಸಲ್ಲಿಸಿರುವ ಅನುಪಾಲನಾ ವರದಿಯ ಶಿಫಾರಸುಗಳನ್ನು ಜಾರಿಗೊಳಿಸಲು ಉನ್ನತಾಧಿಕಾರ ಸಮಿತಿ ಸಭೆ ನಡೆಸಿ' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೈಕೋರ್ಟ್ ಸೂಚಿಸಿದೆ.

ರಾಜ್ಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದ ವಿಚಾರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ 2013ರಲ್ಲಿ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಮಿಕಸ್ ಕ್ಯೂರಿಯೂ ಆದ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ಖಾಲಿಯಿರುವ ಶೈಕ್ಷಣಿಕ ಸಮನ್ವಯಕಾರರ ಹುದ್ದೆಗಳನ್ನು ಒಂದು ತಿಂಗಳ ಅವಧಿಯಲ್ಲಿ ಭರ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಅಂತೆಯೇ ಇನ್ನೂ ಹಲವು ವಿಚಾರಗಳ ಕುರಿತು ಉನ್ನತಾಧಿಕಾರ ಸಭೆಯಲ್ಲಿ ಚರ್ಚೆ ನಡೆಸಬೇಕಿದೆ. ಈ ಕುರಿತು ಸಭೆ ನಡೆಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಪರ ವಕೀಲ ವಿ. ಶ್ರೀನಿಧಿ, 'ಶಾಲೆ ತೊರೆದಿರುವ 6–14 ವಯಸ್ಸಿನ ಮಕ್ಕಳ ದತ್ತಾಂಶ ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಮನೆಮನೆ ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಿದೆ. ಆದರೆ, ಸಮೀಕ್ಷಾ ವರದಿಯಲ್ಲಿ ಕೆಲವು ದೋಷಗಳಿದ್ದು ಅವುಗಳನ್ನು ಸರಿಪಡಿಸಲು ಎರಡು ವಾರಗಳ ಕಾಲಾವಕಾಶ ಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 21ಕ್ಕೆ ಮುಂದೂಡಿದೆ.

ಹರಿಪ್ರಸಾದ್ ಅಭಿನಂದನಾ ಸಮಾರಂಭಕ್ಕೆ ಫ್ಲೆಕ್ಸ್: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅಭಿನಂದನಾ ಸಮಾರಂಭದ ಫ್ಲೆಕ್ಸ್‌ಗೆ ಸಂಬಂಧಪಟ್ಟಂತೆ ಹಲಸೂರು ಗೇಟ್ ಠಾಣೆಯಲ್ಲಿ ಎರಡು ಎಫ್‌ಐಆರ್‌ಗಳು ದಾಖಲಾಗಿವೆ.

'ಅಶೋಕನಗರದ ಸಾಯಿದತ್ತ ಹಾಗೂ ಬಿಬಿಎಂಪಿ ಕಂದಾಯ ಅಧಿಕಾರಿ ಚಂದ್ರಕಾಂತ್ ಅವರು ಪ್ರತ್ಯೇಕ ದೂರು ನೀಡಿದ್ದಾರೆ. ಸಾರ್ವಜನಿಕ ಸ್ಥಳಗಳು ಹಾಗೂ ಮೈದಾನಗಳ (ಸಂರಕ್ಷಣೆ) ಕಾಯ್ದೆ ಅಡಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿ.ಕೆ. ಹರಿಪ್ರಸಾದ್ ಅವರು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಕ್ಕೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಇದಕ್ಕೆ ಸಂಬಂಧಪಟ್ಟ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ಹಲವೆಡೆ ಅಳವಡಿಸಲಾಗಿತ್ತು. ಇದು ನಿಯಮಬಾಹಿರವೆಂದು ದೂರುದಾರರು ಆರೋಪಿಸಿದ್ದಾರೆ' ಎಂದೂ ತಿಳಿಸಿವೆ.

'ಅನಧಿಕೃತ ಜಾಹೀರಾತು, ಫ್ಲೆಕ್ಸ್, ಬ್ಯಾನರ್, ಬಂಟಿಂಗ್ ತೆರವುಗೊಳಿಸುವಂತೆ ಹೈಕೋರ್ಟ್ ನಿರ್ದೇಶನ ನೀಡಿದೆ. ಇದರನ್ವಯ ಬಿಬಿಎಂಪಿ ಆದೇಶ ಹೊರಡಿಸಿದೆ. ಇದನ್ನು ಉಲ್ಲಂಘಿಸಿ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರುದಾರರು ಒತ್ತಾಯಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಹಾಗೂ ಇತರರು, ಫ್ಲೆಕ್ಸ್ ಅಳವಡಿಸಿದ್ದರೆಂಬ ಮಾಹಿತಿ ಇದೆ. ಈ ಬಗ್ಗೆ ಅವರನ್ನು ವಿಚಾರಣೆ ನಡೆಸಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

ಹಂದಿ ಮಾಂಸ ಮಾರಾಟದಲ್ಲಿ 94 ವರ್ಷಗಳಿಂದ ವಿಶಿಷ್ಟ ಛಾಪು • ತರಹೇವಾರಿ ಉತ್ಪನ್ನ

ಹ್ಯಾಮ್ ಶಾಪ್– ವಿಶ್ವಾಸವೇ ಬಂಡವಾಳ

• ವಿಜಯಕುಮಾರ್ ಎಸ್.ಕೆ.





ಎಂ.ಜಿ. ರಸ್ತೆಯಲ್ಲಿರುವ ದಿ ಬೆಂಗಳೂರು ಹ್ಯಾಮ್ ಶಾಪ್ (ಎಡಚಿತ್ರ) ಮಳಿಗೆಯಲ್ಲಿ ಮಾರಾಟಕ್ಕಿರುವ ಹಂದಿ ಮಾಂಸದ ಉತ್ಪನ್ನಗಳು
–ಪ್ರಜಾವಾಣಿ ಚಿತ್ರಗಳು/ಎಂ.ಎಸ್‌.ಮಂಜುನಾಥ್

ಬೆಂಗಳೂರು: ಹಂದಿ ಮಾಂಸ ಮಾರಾಟದಲ್ಲೂ ಅನೇಕ ಹೊಸತನಗಳನ್ನು ಪರಿಚಯಿಸಿದ 'ದಿ ಬೆಂಗಳೂರು ಹ್ಯಾಮ್ ಶಾಪ್' ಈ ವಹಿವಾಟಿನಲ್ಲಿ ವಿಶಿಷ್ಟ ಛಾಪು ಮೂಡಿಸಿದೆ. ಬ್ರಿಟಿಷರ ಕಾಲದಲ್ಲೇ ಆರಂಭವಾದ ಈ ಮಳಿಗೆ ಗ್ರಾಹಕರ ನೆಚ್ಚಿನ ತಾಣವಾಗಿ 94 ವರ್ಷಗಳಿಂದಲೂ ವಿಶ್ವಾಸ ಉಳಿಸಿಕೊಂಡಿದೆ. ತರಹೇವಾರಿ ಉತ್ಪನ್ನಗಳು ಹಾಗೂ ಸೇವೆಯಲ್ಲಿನ ಗುಣಮಟ್ಟಗಳೇ ಯಶಸ್ಸಿನ ಗುಟ್ಟು ಎನ್ನುತ್ತಾರೆ ಇದರ ಮಾಲೀಕರು.

ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗ್ರಾಮದ ಬಿ.ಆಂಜನಪ್ಪ ಅವರು ತಮ್ಮ 14ನೇ ವಯಸ್ಸಿನಲ್ಲಿ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬರುತ್ತಾರೆ. ಬ್ರಿಟಿಷ್ ವ್ಯಾಪಾರಿ ಆ್ಯಂಡ್ರೂಸ್ ಎಂಬುವವರ ಮನೆಯಲ್ಲಿ ಕೆಲಸಕ್ಕೆ ಸೇರುತ್ತಾರೆ. 1928ರಲ್ಲಿ ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿ ಹಂದಿ ಮಾಂಸ ಮಾರಾಟ ಮಳಿಗೆ ತೆರೆಯುವ ಆ್ಯಂಡ್ರೂಸ್, ಆಂಜನಪ್ಪ ಅವರನ್ನು ಅಲ್ಲಿ ಕೆಲಸಕ್ಕೆ ನೇಮಿಸುತ್ತಾರೆ.

ಶಿಕ್ಷಣ ಪಡೆಯದ ಆಂಜನಪ್ಪ ಅವರಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯಷ್ಟೇ ಬಂಡವಾಳ. ತಿಂಗಳಿಗೆ ₹4 ಸಂಬಳ ಪಡೆದು ಕೆಲಸ ಮುಂದುವರಿಸುತ್ತಾರೆ. 1942ರಲ್ಲಿ ಆ್ಯಂಡ್ರೂಸ್ ಭಾರತ ಬಿಟ್ಟು ಲಂಡನ್‌ಗೆ ಮರಳುತ್ತಾರೆ. ಆಗ ಅಂಗಡಿ ಮಾರಾಟ ಮಾಡಲು ಮುಂದಾಗುತ್ತಾರೆ. ಆಂಜನಪ್ಪ ಅವರನ್ನು ಕೆಲಸದಲ್ಲೇ ಉಳಿಸಿಕೊಳ್ಳುವ ಷರತ್ತಿಗೆ ಬದ್ಧರಾದರೆ ಮಾತ್ರ ಅಂಗಡಿ ಮಾರಾಟ ಮಾಡುವುದಾಗಿ ತಿಳಿಸುತ್ತಾರೆ. ಅದಕ್ಕೆ ಒಪ್ಪುವ ಬರ್ಮಾ ದೇಶದ ಬ್ರೌನ್ ಎಂಬುವವರು ಮಳಿಗೆ ಖರೀದಿಸುತ್ತಾರೆ. ಅವರ ಜೊತೆಯೂ ಆಂಜನಪ್ಪ ನಿಷ್ಠೆಯಿಂದ ಕೆಲಸ ಮಾಡುತ್ತಾರೆ.

1950ರಲ್ಲಿ ಬ್ರೌನ್ ಅವರೂ ಮಳಿಗೆಯನ್ನು ಮಾರಾಟ ಮಾಡುತ್ತಾರೆ. ಅವರು ಕೂಡ ಇದೇ ಷರತ್ತು ವಿಧಿಸಿ ಸಿ.ಎಂ. ರಾಸ್ ಎಂಬುವವರಿಗೆ ವಹಿಸುತ್ತಾರೆ. ಕಣ್ಣು ಕಾಣಿಸದ ಖಾಯಿಲೆಗೆ ತುತ್ತಾಗುವ ಸಿ.ಎಂ. ರಾಸ್ ಕೂಡ 1960ರಲ್ಲಿ ಮಳಿಗೆ ಮಾರಾಟ ಮಾಡಲು ಮುಂದಾಗುತ್ತಾರೆ. ಬಳಿಕ ಆಂಜನಪ್ಪ ಅವರಿಗೇ ಅದನ್ನು ವಹಿಸುತ್ತಾರೆ. ಅಂದಿನಿಂದ 'ದಿ ಬೆಂಗಳೂರು ಹ್ಯಾಮ್ ಶಾಪ್'ಗೆ ಮಾಲೀಕರಾಗುವ ಆಂಜನಪ್ಪ ಅವರು ಗ್ರಾಹಕರ ಮನ ಗೆಲ್ಲುವಲ್ಲಿಯೂ ಯಶಸ್ವಿಯಾಗುತ್ತಾರೆ. 1974ರಲ್ಲಿ ಆಂಜನಪ್ಪ ಅವರ ಮಗ ಸುಬ್ರಹ್ಮಣ್ಯ ಅವರು ಸಹೋದರರಾದ ವಿ.ಎ. ಗೋವಿಂದರಾಜು ಮತ್ತು ಲಕ್ಷ್ಮಣ್ ಅವರ ಜತೆಗೂಡಿ ವಹಿವಾಟು ವಹಿಸಿಕೊಳ್ಳುತ್ತಾರೆ. ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ ಸಹೋದರರು ವಹಿವಾಟು ವಿಸ್ತರಿಸಿದ್ದಾರೆ.



ಕೋಲಾರದ ಬಳಿ ತಮ್ಮದೇ ಹಂದಿ ಸಾಕಾಣಿಕೆ ಕೇಂದ್ರವೊಂದನ್ನು ನಡೆಸುತ್ತಿದ್ದಾರೆ. ಮಾಂಸವನ್ನಷ್ಟೇ ಮಾರಾಟ ಮಾಡದೆ, ಅದನ್ನು ಸಂಸ್ಕರಿಸಿ ವಿವಿಧ ರೂಪಗಳಲ್ಲಿ ಗ್ರಾಹಕರಿಗೆ ತಲುಪಿಸುತ್ತಿದ್ದಾರೆ. ಬೇಯಿಸಿ ಸಂಸ್ಕರಿಸಿದ ಹಂದಿ ಮಾಂಸದ ಖಾದ್ಯಗಳನ್ನೂ ಇಲ್ಲಿ ಕೆ.ಜಿ ಲೆಕ್ಕದಲ್ಲಿ ಮಾರಾಟ ಮಾಡಲಾಗುತ್ತದೆ. ಬೇಬಿ ರಿಪ್ಸ್, ಮಸಾಲಾ ಸಾಸೇಜಸ್, ಪೋರ್ಕ್ ಬೆಲ್ಲಿ ಸೇರಿ 14 ಬಗೆಯ ಉತ್ಪನ್ನಗಳು ಇಲ್ಲಿ ಲಭ್ಯ. ಪ್ರತಿಯೊಂದು ಉತ್ಪನ್ನದ ತಾಜಾತನ ಕಾಪಾಡುವುದಕ್ಕೆ ಆದ್ಯತೆ ನೀಡುತ್ತಾರೆ. ಸ್ವಚ್ಛತೆಗೂ ಅಷ್ಟೇ ಮಹತ್ವ ನೀಡುವ ಇವರು ಯಾವತ್ತೂ ಮಾಂಸವನ್ನು ತೆರೆದಿಟ್ಟು ಮಾರಾಟ ಮಾಡುವುದಿಲ್ಲ. ಇಂಥ ವಿಷಯದಲ್ಲಿ ವಹಿಸುವ ವಿಶೇಷ ಕಾಳಜಿಗಳಿಂದಾಗಿಯೇ ಈ ಮಳಿಗೆ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆ.

'ಹಂದಿಗಳನ್ನು ವೈಜ್ಞಾನಿಕವಾಗಿ ಸಾಕುವ ಕೇಂದ್ರ, ಸಂಸ್ಕರಣಾ ಕೇಂದ್ರಗಳನ್ನು ನಿರ್ವಹಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಹಂದಿ ಮಾಂಸದ ಎಷ್ಟೇ ಮಳಿಗೆಗಳಿದ್ದರೂ, ಇಲ್ಲಿಗೆ ಹುಡುಕಿಕೊಂಡು ಬರುವ ಗ್ರಾಹಕರ ಸಂಖ್ಯೆ ಕಡಿಮೆಯಾಗಿಲ್ಲ. ಕೋವಿಡ್ ಪೂರ್ವದಲ್ಲಿ ದಿನಕ್ಕೆ 400 ಕೆ.ಜಿಯಿಂದ 500 ಕೆ.ಜಿ ಮಾಂಸ ಮಾರಾಟವಾಗುತ್ತಿತ್ತು. ಬಳಿಕ ವಹಿವಾಟು ಸ್ವಲ್ಪ ಕಡಿಮೆಯಾಗಿದ್ದು, ಮತ್ತೆ ಚೇತರಿಕೆ ಕಾಣುತ್ತಿದೆ' ಎಂದು ವಿ.ಎ.ಸುಬ್ರಹ್ಮಣ್ಯ ಹೇಳುತ್ತಾರೆ.

'ಲ್ಯಾಂಡ್‌ರೇಸ್, ಆ್ಯಕ್ಸರ್ ಮತ್ತು ಡುರಾಕ್ ತಳಿಯ ಹಂದಿಗಳನ್ನು ಸಾಕುತ್ತಿದ್ದೇವೆ. ಅವುಗಳಿಗೆ ಆಹಾರ ನೀಡಲು ನಮ್ಮದೇ ಜಮೀನಿನಲ್ಲಿ ಮರಗೆಣಸು ಬೆಳೆದಿದ್ದೇವೆ. ತರಕಾರಿ, ಅಕ್ಕಿನುಚ್ಚು, ಸೋಯಾ, ತೌಡು ತಿನ್ನಿಸುತ್ತೇವೆ. ಇಲ್ಲಿ ಒಮ್ಮೆ ಹಂದಿ ಮಾಂಸ ಖರೀದಿ ಮಾಡಿಕೊಂಡು ಹೋಗಿ ರುಚಿ ನೋಡಿದವರು ಬೇರೆಲ್ಲೂ ಹೋಗುವುದಿಲ್ಲ. ಬೆಂಗಳೂರು ಮಾತ್ರವಲ್ಲ ದೂರದ ಊರುಗಳಿಂದಲೂ ಬಂದು ಮಾಂಸ ಖರೀದಿ ಮಾಡುತ್ತಾರೆ' ಎಂದು ಅವರು ವಿವರಿಸಿದರು.

ಪೌಂಡ್ ಮಾಂಸಕ್ಕೆ 65 ಪೈಸೆ ಇತ್ತು

'1928ನೇ ಇಸವಿಯಲ್ಲಿ ಪೌಂಡ್ ಲೆಕ್ಕದಲ್ಲಿ ಮಾಂಸ ಮಾರಾಟ ಮಾಡಲಾಗುತ್ತಿತ್ತಂತೆ. ಒಂದು ಪೌಂಡ್ (400 ಗ್ರಾಂ) ಮಾಂಸಕ್ಕೆ 65 ಪೈಸೆ ನಿಗದಿ ಮಾಡಲಾಗಿತ್ತು ಎಂದು ತಂದೆಯವರು ಹೇಳುತ್ತಿದ್ದರು' ಎಂದು ಸುಬ್ರಹ್ಮಣ್ಯ ಹೇಳಿದರು.


ಸುಬ್ರಹ್ಮಣ್ಯ

'1974ರಲ್ಲಿ ನಾನು ಅಂಗಡಿ ನೋಡಿಕೊಳ್ಳಲು ಬಂದಾಗ ಕೆ.ಜಿಗೆ ₹3.50 ಇತ್ತು. ದಿನದಿಂದ ದಿನಕ್ಕೆ ಬೆಲೆ ಏರಿಕೆಯಾಗುತ್ತಾ ಈಗ ₹400 ಆಗಿದೆ' ಎಂದು ಅವರು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.


ಮಲ್ಲೇಶ್ವರದಲ್ಲಿ ನಿರ್ಮಾಣವಾಗುತ್ತಿರುವ ಹೂವುಹಣ್ಣು ಮಾರುಕಟ್ಟೆ ಕಟ್ಟಡ

ಮಲ್ಲೇಶ್ವರ ಮಾರುಕಟ್ಟೆ ಡಿಸೆಂಬರ್‌ಗೆ ಸಿದ್ಧ

ಬೆಂಗಳೂರು: 'ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಮಲ್ಲೇಶ್ವರದ ಹೂವು-ಹಣ್ಣು ಮಾರುಕಟ್ಟೆ ಸಂಕೀರ್ಣದ ಕಾಮಗಾರಿಗೆ ವೇಗ ನೀಡಲಾಗಿದ್ದು, ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ಇದನ್ನು ಲೋಕಾರ್ಪಣೆ ಮಾಡಲಾಗುವುದು' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್ ತಿಳಿಸಿದರು.

ಕಟ್ಟಡ ಕಾಮಗಾರಿಯನ್ನು ಶನಿವಾರ ಪರಿಶೀಲಿಸಿದ ವಿಶ್ವನಾಥ್, 'ಕಾಮಗಾರಿ ತುಂಬಾ ವಿಳಂಬವಾಗಿರುವುದರಿಂದ ವ್ಯಾಪಾರಿಗಳಿಗೆ ತೊಂದರೆ ಉಂಟಾಗಿದೆ. ಮತ್ತಷ್ಟು ವಿಳಂಬ ಮಾಡುವುದು ಬೇಡ' ಎಂದು ಗುತ್ತಿಗೆದಾರರಿಗೆ ತಾಕೀತು ಮಾಡಿದರು.

ಕಟ್ಟಡದ ಎರಡು ನೆಲಮಹಡಿಗಳಲ್ಲಿ ಸಾರ್ವಜನಿಕ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಮೊದಲ ಮಹಡಿಯಲ್ಲಿ ಹೂವು-ಹಣ್ಣು ವ್ಯಾಪಾರಿಗಳಿಗೆ 181 ಮಳಿಗೆಗಳು ಮತ್ತು 1 ರಿಂದ 4ನೇ ಮಹಡಿವರೆಗೆ ವಾಣಿಜ್ಯ ಸಂಕೀರ್ಣಗಳು ನಿರ್ಮಾಣವಾಗಲಿವೆ. ಐದನೇ ಮಹಡಿಯಲ್ಲಿ ಮತ್ತು ಟೆರೇಸ್‌ನಲ್ಲಿ ವಾಹನ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮೊದಲ ಮಹಡಿಯಿಂದ ನಾಲ್ಕನೇ ಮಹಡಿವರೆಗೆ ನಿರ್ಮಾಣವಾಗಲಿರುವ ಮಳಿಗೆಗಳು ಬಿಡಿಎಗೆ ಸೇರಿರುತ್ತವೆ. ಇವುಗಳನ್ನು ಬಾಡಿಗೆ ಅಥವಾ ಗುತ್ತಿಗೆ ಆಧಾರದಲ್ಲಿ ಮಾಲ್‌ಗಳಿಗೆ ಅಥವಾ ಇತರ ವಾಣಿಜ್ಯ ಚಟುವಟಿಕೆಗಳಿಗೆ ನೀಡಲಾಗುತ್ತದೆ. ಇದರಿಂದ ಬಿಡಿಎಗೆ ಆದಾಯ ಬರಲಿದೆ ಎಂದು ವಿವರಿಸಿದರು.

ಬಿಡಿಎ ಆಯುಕ್ತ ರಾಜೇಶ್ ಗೌಡ, ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಇದ್ದರು.

'ಹಣಕಾಸಿನ ಕೊರತೆ ಇಲ್ಲ': 'ಮಾರುಕಟ್ಟೆ ನಿರ್ಮಾಣಕ್ಕೆ ಹಣಕಾಸಿನ ತೊಂದರೆ ಇಲ್ಲ. ನೇಮಿಸಿದ್ದ ಸಲಹೆಗಾರರಿಂದ ಯೋಜನೆಗೆ ಹಿನ್ನಡೆಯಾಗಿತ್ತು. ಹಾಗಾಗಿ ಸಲಹಾ ಸಂಸ್ಥೆಯನ್ನು ಬದಲಿಸಲು ಕ್ರಮ ಕೈಗೊಳ್ಳುವಂತೆ ಆಯುಕ್ತರಿಗೆ ಸೂಚನೆ ನೀಡಿದ್ದೇನೆ' ಎಂದು ವಿಶ್ವನಾಥ್ ತಿಳಿಸಿದರು.

ಶಿವಾಜಿ ಭಾರತದ ಸ್ವಾಭಿಮಾನದ ಪ್ರತೀಕ: ಸಿ.ಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಛತ್ರಪತಿ ಶಿವಾಜಿ ಮಹಾರಾಜರು ಭಾರತದ ಸ್ವಾಭಿಮಾನ, ಏಕತೆ, ಅಖಂಡತೆಯ ಪ್ರತೀಕ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ಮರಾಠ ಅಸೋಸಿಯೇಷನ್ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಮೊಘಲ್ ಸಾಮ್ರಾಜ್ಯದ ವಿರುದ್ಧ ಸಮರ ಸಾರುವ ಮೂಲಕ ಇಡೀ ದೇಶವನ್ನು ಶಿವಾಜಿ ಮಹಾರಾಜರು ರಕ್ಷಣೆ ಮಾಡಿದರು. ಅವರ ದಿಟ್ಟತನದಿಂದ ದೇಶದಲ್ಲಿ ಹಿಂದೂ ಸಾಮ್ರಾಜ್ಯ ಗಟ್ಟಿಯಾಗಿ ಉಳಿಯಲು ಸಾಧ್ಯವಾಯಿತು' ಎಂದರು.

'ಛತ್ರಪತಿ ಶಿವಾಜಿ ಅವರು ಎಲ್ಲರಿಗೂ ಸ್ಫೂರ್ತಿ ಹಾಗೂ ಪ್ರೇರಣೆಯಾಗಿದ್ದಾರೆ. ಸಮಾಜದ ಎಲ್ಲ ವರ್ಗದವರನ್ನು ಸಮಾನವಾಗಿ ಕಂಡ ಶಿವಾಜಿ ಅವರನ್ನು ಪ್ರತಿಯೊಬ್ಬ ಭಾರತೀಯ ಪೂಜನೀಯ ಭಾವದಿಂದ ಕಾಣುತ್ತಾರೆ' ಎಂದು ವಿವರಿಸಿದರು.

'ಶಿವಾಜಿ ಮಹಾರಾಜರ ಮೇಲಿನ ಅಭಿಮಾನದ ಸಂಕೇತವಾಗಿ ಅವರ ಜನ್ಮದಿನವನ್ನು ಆಚರಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಇಡೀ ರಾಜ್ಯದಲ್ಲಿ ಶಿವಾಜಿ ಮಹಾರಾಜರ ತತ್ವಾದರ್ಶಗಳನ್ನು ಹಾಗೂ ರಾಷ್ಟ್ರಭಕ್ತಿಯ ಭಾವನೆ ತುಂಬುವ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಧ್ವನಿ ಇಲ್ಲದ ದುರ್ಬಲ ವರ್ಗಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ' ಎಂದು ತಿಳಿಸಿದರು.


ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶಿವಾಜಿ ಜಯಂತ್ಯುತ್ಸವದಲ್ಲಿ ಸಚಿವ ಸಿ.ಎನ್‌. ಅಶ್ವತ್ಥ ನಾರಾಯಣ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೋಸಾಯಿ ಮಹಾಸಂಸ್ಥಾನ ಮಠದ ಮಂಜುನಾಥ ಭಾರತಿ ಸ್ವಾಮೀಜಿ, ಶಾಸಕ ಶ್ರೀನಿವಾಸ್ ಮಾನೆ, ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾರುತಿ ರಾವ್ ಜಿ. ಮೂಳೆ ಇದ್ದರು

'ಕಾಂಗ್ರೆಸ್ ಶಾಶ್ವತ ನಿದ್ದೆಗೆ ಜಾರಲಿದೆ'

ಬೆಂಗಳೂರು: 'ಕಾಂಗ್ರೆಸ್ ಶಾಸಕರು ಅಹೋರಾತ್ರಿ ನಿದ್ರಾ ಧರಣಿ ಮೂಲಕ ರಾಜ್ಯದ ಜನರನ್ನು ದಿಕ್ಕು ತಪ್ಪಿಸುತ್ತಿದ್ದರೆ, ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಬಳಿಕ ರಾಜ್ಯದಲ್ಲೂ ಕಾಂಗ್ರೆಸ್ ಪಕ್ಷ ಶಾಶ್ವತ ನಿದ್ದೆಗೆ ಜಾರಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಶನಿವಾರ ಸರಣಿ ಟ್ವೀಟ್ ಮೂಲಕ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿರುವ ಅವರು, 'ಜವಾಬ್ದಾರಿಯುತ ರಾಜಕೀಯ ಪಕ್ಷ ಯಾವ ವಿಷಯಕ್ಕೆ ಹೋರಾಟ ನಡೆಸುತ್ತದೆ ಎಂಬುದನ್ನು ರಾಜ್ಯದ ಜನರು ಗಮನಿಸುತ್ತಾರೆ. ವಿವಾದವೇ ಇಲ್ಲದ ವಿಷಯಗಳಿಗೆ ಸದನದಲ್ಲಿ ಮಲಗುವುದರಿಂದ ರಾಜ್ಯದ ಜನರಿಗೆ ಏನು ಅನುಕೂಲ ಆಗುತ್ತದೆ ಎಂಬ ಪ್ರಶ್ನೆಗೆ ಕಾಂಗ್ರೆಸ್ ನಾಯಕರಲ್ಲಿ ಉತ್ತರವಿಲ್ಲ. ಬೌದ್ಧಿಕವಾಗಿ ಕಾಂಗ್ರೆಸ್ ದಿವಾಳಿ ಆಗಿರುವುದಕ್ಕೆ ಈ ಧರಣಿ ಸಾಕ್ಷಿ' ಎಂದಿದ್ದಾರೆ.

'ಕಾಂಗ್ರೆಸ್ ಶಾಸಕರು ಸದನದಲ್ಲಿ ಮಲಗುವುದಕ್ಕೆ ಮಾತ್ರ ಲಾಯಕ್ಕು ಎಂಬುದು ಜನರಿಗೆ ಅರ್ಥವಾಗಿದೆ. ಇವರನ್ನು ಆರಿಸಿ ಕಳುಹಿಸಿದ ಮತದಾರರು ಭ್ರಮನಿರಸನಗೊಂಡಿದ್ದಾರೆ. ಕಾಂಗ್ರೆಸ್ ಪಕ್ಷವು ಸದನದಲ್ಲಿ ಕಲಾಪಕ್ಕೆ ಅಡ್ಡಿಪಡಿಸುವ ಮೂಲಕ ಜನರಿಗೆ ಅನ್ಯಾಯ ಮಾಡಿದೆ. ಬಿಜೆಪಿ ಸರ್ಕಾರದ ಯಶಸ್ಸನ್ನು ಕಂಡು ಕಂಗೆಟ್ಟಿರುವ ಕಾಂಗ್ರೆಸ್ ನಾಯಕರು, ಪಲಾಯನವಾದ ಮಾಡುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

ಸಂವಾದದಲ್ಲಿ ಸಮಾನ ಮನಸ್ಕ ಸಾಹಿತಿಗಳು, ಚಿಂತಕರ ನಿರ್ಧಾರ

'ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯಗೊಳಿಸುವ ನಿಯಮಾವಳಿಗಳನ್ನು ಕೈಬಿಡುವಂತೆ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಸಮಾನ ಮನಸ್ಕ ಸಾಹಿತಿಗಳು, ಚಿಂತಕರು ನಿರ್ಧರಿಸಿದ್ದಾರೆ.

ರೋಶನಿ ಫೌಂಡೇಷನ್ ಮತ್ತು ಪ್ರಗತಿಪರ ಚಿಂತಕರ ವೇದಿಕೆ ಶನಿವಾರ ಏರ್ಪಡಿಸಿದ್ದ ಸಂವಾದದಲ್ಲಿ ಅವರು, ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬರುವುದನ್ನು ನಿರ್ಬಂಧಿಸುವ ವಿಚಾರದಲ್ಲಿ ಭುಗಿಲೆದ್ದಿರುವ ವಿವಾದವನ್ನು ಬಗೆಹರಿಸುವ ಬಗ್ಗೆ ಸಮಾಲೋಚನೆ ನಡೆಸಿದರು.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, 'ಅವಕಾಶ ವಂಚಿತರಿಗೆ ಶಿಕ್ಷಣವನ್ನು ನಿರಾಕರಿಸುವುದು ಅಪರಾಧ. ಧರ್ಮ ಹಾಗೂ ನಂಬಿಕೆಗಳ ಪಾಲಿಸುವ ಎಲ್ಲ ಹಕ್ಕುಗಳೂ ನಮಗಿವೆ. ಏಕರೂಪತೆಯನ್ನು ಸಾಧಿಸುವುದು ಅಥವಾ ನಂಬಿಕೆಯ ಕುರುಹುಗಳನ್ನು ಅಳಿಸುವುದು ಜಾತ್ಯತೀತತೆ ಅಲ್ಲ. ಸಮಾಜದ ಎಲ್ಲ ವರ್ಗದವರಿಗೂ ಗೌರವ ಸಲ್ಲಿಸುವುದರಲ್ಲಿ ನಿಜವಾದ ಜಾತ್ಯತೀತ ತತ್ವ ಅಡಗಿದೆ' ಎಂದರು.

'ಮುಸ್ಲಿಮರು ಹಿಂದಿನಿಂದಲೂ ಹಿಜಾಬ್ ಧರಿಸುತ್ತಿದ್ದರು. ಇದರಿಂದ ಯಾರಿಗೂ ಎಲ್ಲೂ ಸಮಸ್ಯೆ ಉಂಟಾಗಿಲ್ಲ. ಹಿಜಾಬ್ ಧರಿಸಿದವರಿಗೆ ತರಗತಿ ಪ್ರವೇಶವನ್ನು ನಿರಾಕರಿಸುವುದರಲ್ಲಿ ಅರ್ಥವಿಲ್ಲ. ಈ ವಿವಾದದ ಹಿಂದಿನ ಕಾರ್ಯಸೂಚಿ ಏನು ಎಂಬುದನ್ನು ಜನರಿಗೆ ಮನವರಿಕೆ ಮಾಡಿಸಬೇಕು' ಎಂದರು.

'ತೀವ್ರವಾದಿ ಗುಂಪುಗಳು ಸಮಾಜದಲ್ಲಿ ಆತಂಕದ ವಾತಾವರಣ ನಿರ್ಮಿಸುತ್ತಿವೆ. ಕೆಲವರು ರಾಷ್ಟ್ರಧ್ವಜಕ್ಕೆ ಅಗೌರವ ತೋರಿಸುತ್ತಿದ್ದರೂ, ನಾಗರಿಕ ಸಮಾಜ ಅದಕ್ಕೆ ಪ್ರತಿಕ್ರಿಯಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಕೆ.ಶರೀಫಾ, 'ಹಿಜಾಬ್ ಹಾಗೂ ಶಿಕ್ಷಣ ಎರಡೂ ಮುಸ್ಲಿಂ ಹೆಣ್ಣುಮಕ್ಕಳ ಸಂವಿಧಾನ ಬದ್ಧ ಹಕ್ಕು. ಹಿಜಾಬ್ ಮತ್ತು ಶಿಕ್ಷಣದ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಅವರಿಗೆ ಸೂಚಿಸುವಂತೆಯೇ ಇಲ್ಲ. ಹಿಜಾಬ್ ವಿವಾದದ ಕಾರಣಕ್ಕೆ ಅವರು ಶಿಕ್ಷಣವನ್ನು ತ್ಯಜಿಸಬಾರದು. ಅದನ್ನು ಅವರಿಗೆ ಮನವರಿಕೆ ಮಾಡಿಸಬೇಕು' ಎಂದರು.

ಕಾಂಗ್ರೆಸ್ ಮುಖಂಡ ಸಿ.ಎಸ್. ದ್ವಾರಕನಾಥ್, 'ಹಿಜಾಬ್ ಈಗ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಸಂಬಂಧಿಸಿದ ವಿಚಾರವಾಗಿ ಉಳಿದಿಲ್ಲ. ಅವರ ಹಕ್ಕನ್ನು ಕೊಡಿಸಲು ಕಾನೂನಾತ್ಮಕ, ಪ್ರಜಾಸತ್ತಾತ್ಮಕ ಹೋರಾಟ ಅಗತ್ಯ. ಆದಿವಾಸಿಗಳು, ದಲಿತರು, ಮಹಿಳೆಯರು, ಹಿಂದುಳಿದ ವರ್ಗಕ್ಕೆ ಸೇರಿದ ಹೆಚ್ಚು ಹೆಚ್ಚು ಸಂಘಟನೆಗಳು ಈ ಹೋರಾಟದಲ್ಲಿ ತೊಡಗುವಂತೆ ಮಾಡುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

ಲೇಖಕಿ ಬಿ.ಟಿ.ಲಲಿತಾ ನಾಯಕ್, 'ಹಿಜಾಬ್ ಸರ್ಕಾರ ಕ್ರಮ ಕೈಗೊಳ್ಳುವಂತಹ ವಿವಾದವಲ್ಲ. ಸರ್ಕಾರ ಬಗೆಹರಿಸಬೇಕಾದ ಅನೇಕ ಸಮಸ್ಯೆಗಳಿವೆ. ಇಂತಹ ನೈಜ ಸಮಸ್ಯೆಗಳ ಬಗ್ಗೆ ಜನರಿಗೆ ಅಭಿವೃದ್ಧಿ, ಶಿಕ್ಷಣ ಮುಂತಾದ ತಿಳಿ ಹೇಳಬೇಕು. ಎಲ್ಲರಿಗೂ ಶಿಕ್ಷಣ ಒದಗಿಸುವುದು ಸರ್ಕಾರದ ಕರ್ತವ್ಯ' ಎಂದರು.

ಸಾಮಾಜಿಕ ಕಾರ್ಯಕರ್ತರಾದ ಡಾ.ವಾಸು, ಪ್ರೊ.ಎ.ಆರ್‌.ವಾಸವಿ, ಗೀತಾ ಮೆನನ್, ಮೆಹರೋಜ್ ಖಾನ್ ಭಾಗವಹಿಸಿದ್ದರು.


ಸಂವಾದದಲ್ಲಿ ಬಿ.ಟಿ.ಲಲಿತಾನಾಯಕ್‌, ಸಿ.ಎಸ್‌.ದ್ವಾರಕನಾಥ್‌, ವಾಸು ಮತ್ತಿತರರು ಭಾಗವಹಿಸಿದ್ದರು

ಪಾದಯಾತ್ರೆಯಿಂದ ನೀರು ಬರುವುದಿಲ್ಲ: ತೇಜಸ್ವಿ ಸೂರ್ಯ

ಪ್ರಜಾವಾಣಿ ವಾರ್ತೆ


ತೇಜಸ್ವಿ ಸೂರ್ಯ

ಬೆಂಗಳೂರು: 'ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಮೇಕೆದಾಟು ಪಾದಯಾತ್ರೆಯಿಂದ ಕಾವೇರಿ ನದಿಯ ನೀರು ಬೆಂಗಳೂರಿಗೆ ಬರುವುದಿಲ್ಲ' ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಪಾದಯಾತ್ರೆಯಿಂದ ನೀರು ಬರುವುದೇ ಆಗಿದ್ದರೆ ಎಲ್ಲರೂ ಪಾದಯಾತ್ರೆ ಮಾಡುತ್ತಿದ್ದರು. ಬೆಂಗಳೂರಿಗೆ ಕಾವೇರಿ ನೀರು ಬಂದಿರುವುದು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಬಿಜೆಪಿಯ ಪ್ರಯತ್ನಗಳಿಂದ. ಕಾಂಗ್ರೆಸ್ ಪಕ್ಷದ ಪಾದಯಾತ್ರೆಯಿಂದ ಅಲ್ಲ' ಎಂದರು.

'ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆ ಮಾಡುವ ವಿಷಯದಲ್ಲಿ ಬಿಜೆಪಿಗೆ ಕಾಂಗ್ರೆಸ್ ಪಕ್ಷದ ಸಲಹೆ ಬೇಕಿಲ್ಲ. ಈ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದಿಂದ ಏನು ಕೆಲಸ ಆಗಿದೆ ಎಂಬುದನ್ನು ಆ ಪಕ್ಷದ ನಾಯಕರು ಬಹಿರಂಗವಾಗಿ ಹೇಳಲಿ' ಎಂದು ಸವಾಲು ಹಾಕಿದರು.

'ಬೆಂಗಳೂರಿನ ಸಂಸದರು ನಗರಕ್ಕಾಗಿ ಏನು ತಂದಿದ್ದಾರೆ ಎಂದು ಕೆಲವು ಪ್ರಶ್ನಿಸುತ್ತಿದ್ದಾರೆ. ಹಿಂದಿನ ಒಂದು ವರ್ಷದ ಅವಧಿಯಲ್ಲಿ ಬೆಂಗಳೂರಿನಲ್ಲಿ 40 ಜನೌಷಧಿ ಕೇಂದ್ರಗಳನ್ನು ತೆರೆಯಲಾಗಿದೆ. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ 75 ಜನೌಷಧಿ ಕೇಂದ್ರಗಳಿವೆ. ಇದರಿಂದ ಲಕ್ಷಾಂತರ ಜನರು ಕಡಿಮೆ ದರದಲ್ಲಿ ಔಷಧಿ ಖರೀದಿಸಲು ಸಾಧ್ಯವಾಗಿದೆ' ಎಂದರು.

'ದೇಶದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿಲ್ಲ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಆದರೆ, ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯಲ್ಲಿ (ಇಪಿಎಫ್‌ಒ) ಒಂದು ವರ್ಷದ ಅವಧಿಯಲ್ಲಿ 13 ಲಕ್ಷ ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ 1.68 ಲಕ್ಷ ಮಂದಿ ನೋಂದಣಿ ಮಾಡಿಸಿದ್ದಾರೆ. ನವೋದ್ಯಮಗಳಿಗೂ ಕೇಂದ್ರ ಸರ್ಕಾರದಿಂದ ಹೆಚ್ಚಿನ ಉತ್ತೇಜನ ದೊರಕಿದೆ' ಎಂದು ತೇಜಸ್ವಿ ಹೇಳಿದರು.

'ಕೇಂದ್ರ ಸರ್ಕಾರದ ಪ್ರಸಕ್ತ ವರ್ಷದ ಬಜೆಟ್ ಮುಂದಿನ 25 ವರ್ಷಗಳ ಅವಧಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡಿದೆ. ಮೂಲಸೌಕರ್ಯ ಅಭಿವೃದ್ಧಿಗಾಗಿಯೇ ₹ 25 ಲಕ್ಷ ಕೋಟಿ ಮೀಸಲಿಡಲಾಗಿದೆ. ಈ ಬಜೆಟ್ ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಜನೆಗೆ ಕಾರಣವಾಗಲಿದೆ' ಎಂದರು.

'ಕಾಂಗ್ರೆಸ್ ಜವಾಬ್ದಾರಿ ಮರೆತಿದೆ'

'ಕಾಂಗ್ರೆಸ್ ಪಕ್ಷವು ವಿರೋಧ ಪಕ್ಷವಾಗಿ ತನ್ನ ಜವಾಬ್ದಾರಿ ಮರೆತಿದೆ. ಯಾರಿಗೂ ಉಪಯೋಗವಿಲ್ಲದ ವಿಷಯ ಮುಂದಿಟ್ಟುಕೊಂಡು ವಿಧಾನಮಂಡಲ ಕಲಾಪಕ್ಕೆ ಅಡ್ಡಿಪಡಿಸಿ, ಜನರ ತೆರಿಗೆ ಹಣವನ್ನು ವ್ಯರ್ಥ ಮಾಡುತ್ತಿದೆ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

'ಹಿಜಾಬ್– ಕೇಸರಿ ಶಾಲು ವಿವಾದ ಹೈಕೋರ್ಟ್‌ನಲ್ಲಿದೆ. ಈ ಬಗ್ಗೆ ನಾನು ಮಾತನಾಡುವುದು ಸರಿಯಲ್ಲ. ನ್ಯಾಯಾಲಯದ ತೀರ್ಪು ಬಂದ ಬಳಿಕ ಪ್ರತಿಕ್ರಿಯಿಸುವೆ' ಎಂದರು.

'ಸಚಿವ ಕೆ.ಎಸ್. ಈಶ್ವರಪ್ಪ ಅವರ ಹೇಳಿಕೆ ಕುರಿತು ಪಕ್ಷದ ನಾಯಕರು ಈಗಾಗಲೇ ಮಾತನಾಡಿದ್ದಾರೆ. ಅದು ಈಶ್ವರಪ್ಪನವರ ವೈಯಕ್ತಿಕ ಹೇಳಿಕೆ. ಆ ಬಗ್ಗೆ ನಾನು ಮಾತನಾಡುವಂತಹದ್ದು ಏನೂ ಇಲ್ಲ' ಎಂದು ಹೇಳಿದರು.



ಭಾರತ ವಾಕ್ ಮತ್ತು ಶ್ರವಣ ಸಂಘದ ಸಮ್ಮೇಳನದಲ್ಲಿ ಡಾ.ಯು.ಅಜಿತ್ ಕುಮಾರ್‌, ಡಾ.ಎಂ.ಪುಷ್ಪಾವತಿ ಮತ್ತು ರಾಜಪಾಂಡಿಯನ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ.ವೈ.ಕೃಷ್ಣ, ಡಾ.ಎಂ.ಜಯರಾಮ್‌, ಸುಮನ್ ಕುಮಾರ್‌, ಎ.ಎಂ.ಅಚ್ಚಯ್ಯ ಇದ್ದಾರೆ

'ಬೆಳವಡಿ ಮಲ್ಲಮ್ಮ ವಿಜಯೋತ್ಸವ ಆಚರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶಿವಾಜಿ ಜಯಂತಿ ಆಚರಿಸುವುದನ್ನು ವಿರೋಧಿಸಿ, ಅದರ ಬದಲು ಶಿವಾಜಿಯನ್ನು ಸೋಲಿಸಿದ ಬೆಳವಡಿ ಮಲ್ಲಮ್ಮನ ವಿಜಯೋತ್ಸವ ಆಚರಿಸಬೇಕು ಎಂದು ಪ್ರತಿಪಾದಿಸಿ ಶನಿವಾರ ಹಲವರು ಟ್ವೀಟ್ ಮಾಡುವ ಮೂಲಕ ಗಮನ ಸೆಳೆದರು.

'ಶಿವಾಜಿಯನ್ನು ಸೋಲಿಸಿದ ಕನ್ನಡತಿ, ಹೆಮ್ಮೆಯ ಬೆಳವಡಿ ಮಲ್ಲಮ್ಮ' ಎಂದು ಪ್ರತಾಪ್ ಕಣಗಾಲ್ ಸೇರಿದಂತೆ ಹಲವರು ಟ್ವೀಟ್‌ನಲ್ಲಿ ಪೋಸ್ಟ್ ಮಾಡಿದ್ದರು.

ನಾಗಮಂಗಲ ಶಾಸಕ ಸುರೇಶ್ ಗೌಡ ಅವರು, 'ಬೆಳವಡಿ ಮಲ್ಲಮ್ಮ ಕರ್ನಾಟಕದ ಬೆಳಗಾವಿ ಜಿಲ್ಲೆಯ ವೀರ ರಾಣಿ, ಮರಾಠರ ವಿರುದ್ಧ ಹೋರಾಡಲು ಮಹಿಳಾ ಸೇನೆಯನ್ನು ಸಂಘಟಿಸಿದ ಮೊದಲ ಮಹಿಳೆ' ಎಂದು ಟ್ವೀಟ್ ಮಾಡಿದ್ದಾರೆ.

'ನಮಗೆ ನಮ್ಮ ಕನ್ನಡಿಗರೇ ಮುಖ್ಯ. ನಾವು ಗುಲಾಮರಲ್ಲ, ಸ್ವಾಭಿಮಾನಿ ಕನ್ನಡಿಗರು' ಎಂದು ರೂಪೇಶ್ ರಾಜಣ್ಣ ಎನ್ನುವವರು ಟ್ವೀಟ್ ಮಾಡಿದ್ದಾರೆ.

'ಶಿವಾಜಿ, ರಾಣಾಪ್ರತಾಪ ಸಿಂಹ ಅವರು ಆಯಾ ನಾಡುಗಳ ಆದರ್ಶ ಪುರುಷರಾಗಿರಬಹುದು. ಇವರನ್ನು ಯಾವ ಕಾರಣಕ್ಕೆ ಆದರ್ಶ ಎನ್ನುತ್ತಾರೋ ಅದೇ ಕಾರಣಕ್ಕಾಗಿ ಇವರಿಗಿಂತ ಹೆಚ್ಚಿನ ಧೀರತನ, ಶೂರತನ, ತ್ಯಾಗ, ಸಾಧನೆ ಮಾಡಿದ ಕನ್ನಡಿಗರೇ ಇದ್ದಾಗ ಅವರನ್ನು ಕಡೆಗಣಿಸುವುದು ಯಾವ ದೃಷ್ಟಿಯಿಂದ ನೋಡಿದರೂ ದೇಶಭಕ್ತಿ ಅಲ್ಲ, ಗುಲಾಮಗಿರಿ' ಎಂದು ಆನಂದ್ ಜಿ. ಎನ್ನುವವರು ಟ್ವೀಟ್ ಮಾಡಿದ್ದಾರೆ.

'ನಮ್ಮ ಕನ್ನಡಿಗರು ಬೆಳವಡಿ ಮಲ್ಲಮ್ಮ ಬಗ್ಗೆ ಮೊದಲು ಅಧ್ಯಯನ ಮಾಡಲಿ. ನಮ್ಮ ಮಲ್ಲಮ್ಮ, ನಮ್ಮ ಹೆಮ್ಮೆ' ಎಂದು ನವೀನ್ ಶಾಂಡಿಲ್ಯ ಎನ್ನುವವರು ಟ್ವೀಟ್ ಮಾಡಿದ್ದಾರೆ.

ಪಿ.ಎಫ್‌. ಕಂತು ಪಾವತಿಗೆ ಒತ್ತಾಯ

ಗಾರ್ಮೆಂಟ್ಸ್ ಕಾರ್ಮಿಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಆಕ್ಟೀವ್ ನೀಟ್ ಗಾರ್ಮೆಂಟ್ಸ್ ಕಾರ್ಮಿಕರ ಸಂಬಳದಲ್ಲಿ ಆಡಳಿತ ಮಂಡಳಿಯು ಕಡಿತ ಮಾಡಿರುವ ಭವಿಷ್ಯ ನಿಧಿಯ ಹಣವನ್ನು ಪೂರ್ಣ ಪ್ರಮಾಣದಲ್ಲಿ ಮರಳಿಸುವಂತೆ ಒತ್ತಾಯಿಸಿ ನೂರಾರು ಮಹಿಳಾ ಕಾರ್ಮಿಕರು ಗಾರ್ಮೆಂಟ್ಸ್ ಎದುರು ಪ್ರತಿಭಟನೆ ನಡೆಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಗೋಕುಲದಾಸ್ ಕಂಪನಿಯ ಅಂಗ ಸಂಸ್ಥೆಯಾದ ಆಕ್ಟೀವ್ ನೀಟ್ ಕಂಪನಿ ಏಳೆಂಟು ವರ್ಷಗಳಿಂದ ಕಾರ್ಮಿಕರ ವೇತನದಲ್ಲಿ ಭವಿಷ್ಯ ನಿಧಿ ಕಂತುಗಳ ಹಣವನ್ನು ಕಡಿತ ಮಾಡಿಕೊಂಡಿತ್ತು. ಆದರೆ ಅದನ್ನು ಭವಿಷ್ಯ ನಿಧಿ ಖಾತೆಗೆ ಜಮೆ ಮಾಡಿಲ್ಲ ಎಂದು ನೌಕರರು ದೂರಿದರು. ಕಚೇರಿಯಲ್ಲಿ ಈ ಬಗ್ಗೆ ವಿಚಾರಿಸಿದಾಗ, 'ಆಡಳಿತ ಮಂಡಳಿಯವರು ಇಂದು ನಾಳೆ ಎನ್ನುತ್ತಾ ಕಾಲಹರಣ ಮಾಡಿದ್ದಾರೆ' ಎಂದು ಪ್ರತಿಭಟನಾಕಾರರು ಆರೋಪಿಸಿದರು.

'ಈಗಾಗಲೇ ನಮ್ಮನ್ನೆಲ್ಲಾ ಕೆಲಸದಿಂದ ತೆಗೆದುಹಾಕಿದ್ದಾರೆ. ನಮ್ಮ ಸಂಬಳದಿಂದ ಕಡಿತಗೊಳಿಸಿರುವ ಭವಿಷ್ಯನಿಧಿಯ ಪೂರ್ತಿ ಹಣವನ್ನು ಮರಳಿಸಬೇಕು' ಎಂದು ಕಾರ್ಮಿಕರರು ಒತ್ತಾಯಿಸಿದರು.

'ಒಂಬತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನಗೆ ಬರಬೇಕಾದ ಬಾಕಿ ಹಣ ಬಂದಿಲ್ಲ. ಈ ನಡುವೆ ನಮ್ಮಣ್ಣ ತೀರಿಕೊಂಡರು. ಬಾಕಿ ಹಣಕ್ಕಾಗಿ ಕಣ್ಣೀರು ಹಾಕಿದರೂ ಇವರು ಕೊಟ್ಟಿಲ್ಲ' ಎಂದು ಕಾರ್ಮಿಕ ಮಹಿಳೆ ಸಾಕಮ್ಮ ಎಂ.ಜಿ ಆಕ್ರೋಶ ವ್ಯಕ್ತಪಡಿಸಿದರು.

'ನಾವು ಕೆಲಸ ಮಾಡುತ್ತಿದ್ದ ಕಾರ್ಖಾನೆಯ ಇಲ್ಲಿನ ಕಚೇರಿ ಮುಚ್ಚಿ ಎರಡು ವರ್ಷಗಳೇ ಕಳೆದಿವೆ. ಅದನ್ನು ತೆಲಂಗಾಣಕ್ಕೆ ಸ್ಥಳಾಂತರಿಸಿದ್ದಾರೆ. ಇನ್ನೊಂದು ವಾರಕ್ಕೆ ಈ ಕಾರ್ಖಾನೆಯನ್ನೂ ಮುಚ್ಚುತ್ತಾರೆ. ನಾಲ್ಕು ವರ್ಷಗಳಿಂದ ನಮಗೆ ಸಂದಾಯ ಆಗಬೇಕಾದ ಸಂಬಳ ಮತ್ತು ಪಿ.ಎಫ್ ಕಂತುಗಳ ಹಣವನ್ನು ಇನ್ನೂ ಕೊಟ್ಟಿಲ್ಲ' ಎಂದು ಸುನಿತಾ ದೂರಿದರು.


ಆಕ್ಟೀವ್ ನೀಟ್ ಗಾರ್ಮೆಂಟ್ಸ್ ಎದುರು ಮಹಿಳಾ ಕಾರ್ಮಿಕರು ಪ್ರತಿಭಟನೆ ನಡೆಸಿದರು

ಭಾರತ ವಾಕ್ ಮತ್ತು ಶ್ರವಣ ಸಂಘದ ವಾರ್ಷಿಕ ಸಮ್ಮೇಳನ

'91 ಸಾವಿರ ಕ್ಷೇಮ ಕೇಂದ್ರ ಸ್ಥಾಪನೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಆಯುಷ್ಮಾನ್ ಭಾರತ್ ಅಡಿಯಲ್ಲಿ ದೇಶದಾದ್ಯಂತ 1.5 ಲಕ್ಷ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಸ್ಥಾಪಿಸುವ ಗುರಿಯಿದ್ದು, ಈಗಾಗಲೇ 91 ಸಾವಿರ ಕೇಂದ್ರಗಳನ್ನು ಆರಂಭಿಸಲಾಗಿದೆ' ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನಿರ್ದೇಶಕ ವಿಕಾಸ್ ಶೀಲ್ ಹೇಳಿದರು.

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ (ಆಯಿಷ್) ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಭಾರತ ವಾಕ್ ಮತ್ತು ಶ್ರವಣ ಸಂಘದ (ಇಶಾ) 53ನೇ ವಾರ್ಷಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು.


'ಆರೋಗ್ಯ ಕ್ಷೇತ್ರದ ಸುಧಾರಣೆಗೆ ಕೇಂದ್ರ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ವಹಿಸಬೇಕಿದೆ. 2011ರ ಜನಗಣತಿ ಪ್ರಕಾರ ದೇಶದಲ್ಲಿ 50 ಲಕ್ಷಕ್ಕೂ ಅಧಿಕ ಮಂದಿ ಸಂವಹನ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಕಳೆದ 10 ವರ್ಷಗಳಲ್ಲಿ ಈ ಸಂಖ್ಯೆ ಇನ್ನಷ್ಟು ಹೆಚ್ಚಿರುವ ಸಾಧ್ಯತೆಯಿದೆ' ಎಂದರು.

'ಕೇಂದ್ರ ಸರ್ಕಾರವು ಸ್ವದೇಶಿ ತಂತ್ರಜ್ಞಾನ ಅಭಿವೃದ್ಧಿ ಮತ್ತು ಸ್ವಂತ ಉದ್ಯಮ ಆರಂಭಿಸುವುದನ್ನು ಪ್ರೋತ್ಸಾಹಿಸಲು 'ಸ್ಟಾರ್ಟ್ ಅಪ್ ಇಂಡಿಯಾ' ಹಾಗೂ 'ಮೇಕ್ ಇನ್ ಇಂಡಿಯಾ' ಅಭಿಯಾನ ನಡೆಸುತ್ತಿದೆ. ಸಂವಹನ ತೊಂದರೆಯಿಂದ ಬಳಲುತ್ತಿರುವವರಿಗೆ ನೆರವಾಗಲು ಯುವ ಸಮೂಹವು ಸರ್ಕಾರದ ಈ ಯೋಜನೆಗಳನ್ನು ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸನ್ಮಾನ: ಆಯಿಷ್ ನಿರ್ದೇಶಕರಾದ ಡಾ.ಎಂ.ಪುಷ್ಪಾವತಿ ಅವರಿಗೆ 'ಡಾ. ಎನ್‌.ರತ್ನ ಒರೇಷನ್' ಪ್ರಶಸ್ತಿ, ಶ್ರವಣ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಯು.ಅಜಿತ್ ಕುಮಾರ್ ಅವರಿಗೆ 'ಪ್ರೊ.ಎಸ್.ಕಾಮೇಶ್ವರನ್ ಎಂಡೋಮೆಂಟ್ ಒರೇಷನ್' ಪ್ರಶಸ್ತಿ ಹಾಗೂ ರಾಜಪಾಂಡಿಯನ್ ಅವರಿಗೆ 'ಪ್ರೊ.ಆರ್.ಕೆ.ಓಜಾ ಒರೇಷನ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಎರಡು ದಿನಗಳ ಸಮ್ಮೇಳನದಲ್ಲಿ ದೇಶ ಹಾಗೂ ವಿದೇಶದ 16 ತಜ್ಞರು ಉಪನ್ಯಾಸ ನೀಡಲಿದ್ದಾರೆ. 36 ಸಂಶೋಧನಾ ವಿಷಯ ಮಂಡನೆ ಹಾಗೂ 115 ಪೋಸ್ಟರ್ ಪ್ರೆಸೆಂಟೇಷನ್ ನಡೆಯಲಿದೆ.

ಇಶಾ ಕಾರ್ಯದರ್ಶಿ ಸುಮನ್ ಕುಮಾರ್, ಖಜಾಂಚಿ ಎ.ಎಂ.ಅಚ್ಚಯ್ಯ, ನಿರ್ಗಮಿತ ಅಧ್ಯಕ್ಷ ಡಾ.ವೈ.ಕೃಷ್ಣ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.



ಗಾಡ್ಗೀಳ್, ಕಸ್ತೂರಿರಂಗನ್ ವರದಿಗಳ ಸಾರ ಏನು?

● ರವಿಪ್ರಕಾಶ್ ಎಸ್.

ವಿಶ್ವದ ಜೀವವೈವಿಧ್ಯಗಳ ಕಣಜ, ನಿತ್ಯ ಹರಿದ್ವರ್ಣ ಕಾನನದ ತವರು ಎಂದೆಲ್ಲ ಗುರುತಿಸುವ ಪಶ್ಚಿಮಘಟ್ಟ ನಾಶವಾಗುತ್ತದೆ ಎನ್ನುವ ಆತಂಕದ ಮಾತುಗಳು ಎಲ್ಲೆಡೆ ಕೇಳಿಬಂದ ಪರಿಣಾಮ ಕೇಂದ್ರ ಸರ್ಕಾರವು 2009ರಲ್ಲಿ ಖ್ಯಾತ ವಿಜ್ಞಾನಿ ಮಾಧವ್ ಗಾಡ್ಗೀಳ್ ನೇತೃತ್ವದಲ್ಲಿ ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿಯನ್ನು ರಚಿಸಿತು. ಗಾಡ್ಗೀಳ್ ವರದಿ ಬಂದ ನಂತರ ಸಮಾಜದ ವಿವಿಧ ಸ್ತರದ ಜನ ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರಿಂದ ಪಶ್ಚಿಮಘಟ್ಟ ಕಾಪಾಡಲು ಅನುಸರಿಸಬೇಕಾದ ಕ್ರಮಗಳನ್ನು ಸೂಚಿಸಲು ಬಾಹ್ಯಾಕಾಶ ವಿಜ್ಞಾನಿ ಡಾ.ಕಸ್ತೂರಿರಂಗನ್ ನೇತೃತ್ವದಲ್ಲಿ ಪಶ್ಚಿಮ ಘಟ್ಟ ಉನ್ನತ ಮಟ್ಟದ ಕಾರ್ಯತಂಡವನ್ನು 17.08.2012 ರಲ್ಲಿ ಕೇಂದ್ರ ಸರ್ಕಾರ ರಚಿಸಿತು.

'ವಿವಿಧ ರಾಜಕೀಯ ಪಕ್ಷಗಳು, ರಾಜಕಾರಣಿಗಳು, ಟಿಂಬರ್, ಗಣಿ ಮಾಫಿಯಾಗಳು ಮತ್ತು ವಿವಿಧ ಹಿತಾಸಕ್ತಿಗಳ ಗುಂಪುಗಳು ಎರಡೂ ವರದಿಗಳನ್ನು ವಿರೋಧಿಸುತ್ತಾ ಬಂದಿವೆ. ಕೇರಳ ಮತ್ತು ಕರ್ನಾಟಕದಲ್ಲಿ ಕಳೆದ ಕೆಲವು ವರ್ಷಗಳಿಂದ ಪ್ರಾಕೃತಿಕ ವಿಕೋಪದ ರೌದ್ರತೆಯನ್ನು ನೋಡಿದ ಬಳಿಕ ಗಾಡ್ಗೀಳ್ ವರದಿ ಮತ್ತೆ ಚರ್ಚೆಗೆ ಬಂದಿತು. ಆದರೆ, ರಾಜಕೀಯ ಪಕ್ಷಗಳಿಗೆ ಆ ಪ್ರದೇಶಗಳ ಮತಗಳ ಜತೆಗೆ ಜೇಬು ತುಂಬುವ ಬೃಹತ್ ಯೋಜನೆಗಳೂ ಬೇಕು. ವರದಿಗಳಲ್ಲಿ ಇಲ್ಲದ ಅಂಶಗಳನ್ನು ಪ್ರಸ್ತಾಪಿಸಿ ಭಯವನ್ನು ಬಿತ್ತಿ ಜನರನ್ನು ಎತ್ತಿಕಟ್ಟುವ ಕೆಲಸ ನಡೆದಿದೆ' ಎಂಬುದು ಈ ವರದಿಗಳನ್ನು ಬೆಂಬಲಿಸುವವರ ವಾದ.

ಗಾಡ್ಗೀಳ್ ವರದಿ ಸಾರವೇನು: ಮಾಧವ್ ಗಾಡ್ಗೀಳ್ ವರದಿ ಪರಿಸರ ಮತ್ತು ಪರಿಸರವಾದಿಗಳಿಗೆ ಪೂರಕವಾಗಿದ್ದು, ಅಭಿವೃದ್ಧಿ ಪರವಾಗಿಲ್ಲ ಎಂಬುದು ವರದಿಯನ್ನು ವಿರೋಧಿಸುವವರ ಆರೋಪ. ಈ ವರದಿಯಲ್ಲಿ ಪಶ್ಚಿಮಘಟ್ಟದ ಶೇ 64ರಷ್ಟು ಪ್ರದೇಶವನ್ನು ವಿಸ್ತೃತವಾಗಿ ವರ್ಗೀಕರಿಸಿದ್ದಾರೆ. ಆರು ರಾಜ್ಯಗಳ 44 ಜಿಲ್ಲೆಗಳ 142 ತಾಲ್ಲೂಕುಗಳು ಇದರಡಿ ಬರುತ್ತವೆ. ಪರಿಸರ ಸೂಕ್ಷ್ಮ ವಲಯಗಳನ್ನು ಇಎಸ್‌ಝಡ್1, ಇಎಸ್‌ಝಡ್ 2 ಮತ್ತು ಇಎಸ್‌ಝಡ್ 3 ಎಂದು ಹೆಸರಿಸಿದ್ದರು.

ವಿಶ್ವ ಜೈವಿಕ ವೈವಿಧ್ಯಗಳ ಪ್ರಮುಖ ಎಂಟು ತಾಣಗಳಲ್ಲಿ ಪಶ್ಚಿಮಘಟ್ಟವೂ ಒಂದು ಎಂದು ಯುನೆಸ್ಕೋ ಗುರುತಿಸಿದೆ. ಸರಿಸೃಪ, ಉಭಯಚರ, ಮೀನುಗಳು, ಪಕ್ಷಿಗಳು ಮತ್ತು ಸಸ್ತನಿಗಳ ಪ್ರಭೇದಗಳ ಪೈಕಿ ದೇಶದ ಶೇ 30ರಷ್ಟು ಪಶ್ಚಿಮಘಟ್ಟದಲ್ಲಿವೆ. ಹೀಗಾಗಿ ಅಪರೂಪದ ಜೀವವೈವಿಧ್ಯಗಳ ಕಣಜ ಎಂದೇ ಕರೆಯಲಾಗುತ್ತದೆ. ಇಎಸ್‌ಝಡ್ 1 ಅಡಿ ಅಭಿವೃದ್ಧಿ ಚಟುವಟಿಕೆಗಳಾದ ಗಣಿಗಾರಿಕೆ, ಉಷ್ಣ ವಿದ್ಯುತ್ ಸ್ಥಾವರಗಳು, ಅಣೆಕಟ್ಟುಗಳು ಸ್ಥಾಪನೆಗೆ ನಿಷೇಧ ಮತ್ತು ಚಾಲ್ತಿಯಲ್ಲಿರುವ ಯೋಜನೆಗಳನ್ನು ನಿಲ್ಲಿಸಬೇಕು ಮತ್ತು ಅವಧಿ ಮುಗಿದ ಯೋಜನೆಗಳನ್ನು ಮುಂದುವರಿಸಬಾರದು. ಹೊಸ ಗಿರಿಧಾಮಗಳನ್ನು ಸೃಷ್ಟಿಸಬಾರದು. ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಬಾರದು ಹಾಗೂ ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಇದ್ದ ಹಾಗೆಯೇ ಸಂರಕ್ಷಿಸಲು ನದಿ ತಿರುವು ಯೋಜನೆಗಳನ್ನು ಕೈಗೊಳ್ಳಬಾರದು. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಆಡಳಿತವನ್ನು ಸ್ಥಳೀಯ ಮಟ್ಟದಲ್ಲಿ ಕೈಗೊಳ್ಳಬೇಕು ಹಾಗೂ ಹೆಚ್ಚು ಅಧಿಕಾರವನ್ನು ನೀಡಬೇಕು. ಮೇಲ್ತಸರದಿಂದ ಅಧಿಕಾರ ಚಲಾಯಿಸುವ ಬದಲು ಕೆಳ ಹಂತದಲ್ಲಿ ಅಧಿಕಾರ ನೀಡಬೇಕು. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡುವ ಮೂಲಕ ಅಧಿಕಾರ ವಿಕೇಂದ್ರೀಕರಣಗೊಳಿಸಬೇಕು. ಪರಿಸರ (ಸಂರಕ್ಷಣೆ) ಕಾಯ್ದೆ 1986 ಕಾಯ್ದೆಯಲ್ಲಿ ದತ್ತವಾಗಿರುವ ಅಧಿಕಾರವನ್ನು ಬಳಸಿ ಪಶ್ಚಿಮಘಟ್ಟ ಪರಿಸರ ಪ್ರಾಧಿಕಾರ ಸ್ಥಾಪಿಸುವಂತೆಯೂ ವರದಿಯಲ್ಲಿ ಸಲಹೆ ನೀಡಲಾಗಿತ್ತು.

ಆರು ರಾಜ್ಯಗಳ ಮುಖ್ಯಮಂತ್ರಿಗಳು, ಎಲ್ಲ ರಾಜಕೀಯ ಪಕ್ಷಗಳು, ಕೇರಳದಲ್ಲಿ ವಿಶೇಷವಾಗಿ ಚರ್ಚ್‌ಗಳು ಗಾಡ್ಗೀಳ್ ವರದಿಯನ್ನು ವಿರೋಧಿಸಿದವು. ಗಾಡ್ಗೀಳ್ ಅವರನ್ನು ರಹಸ್ಯ ಕಾರ್ಯಸೂಚಿ ಹೊಂದಿರುವ ಪರಿಸರ ಭಯೋತ್ಪಾದಕ ಎಂದೆಲ್ಲ ಹಣೆಪಟ್ಟಿ ಕಟ್ಟಿದವು.

ಕಸ್ತೂರಿರಂಗನ್ ವರದಿಯ ಮುಖ್ಯ ಶಿಫಾರಸುಗಳು

- ಪಶ್ಚಿಮಘಟ್ಟದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ 37 ರಷ್ಟು ಪ್ರದೇಶವನ್ನು ನೈಸರ್ಗಿಕ ಭೂ ಪ್ರದೇಶವನ್ನು ಪಾರಿಸರಿಕ ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾಗಿದೆ. ಈ ಪ್ರದೇಶದ ಕುರಿತು ಅಧಿಸೂಚನೆ ಹೊರಡಿಸಬೇಕು. ಈ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆ ಮೇಲೆ ನಿರ್ಬಂಧ ಹೇರಬೇಕು ಎಂದು ಶಿಫಾರಸು ಮಾಡಲಾಗಿದೆ.
- ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗಣಿಗಾರಿಕೆ, ಕಲ್ಲು ಗಣಿಗಾರಿಕೆ(ಕ್ವಾರಿ),ಮರಳು ಗಣಿಗಾರಿಕೆ ಸಂಪೂರ್ಣ ನಿಷೇಧಿಸಬೇಕು. ಚಾಲ್ತಿಯಲ್ಲಿರುವ ಗಣಿಗಾರಿಕೆಗಳನ್ನು 5 ವರ್ಷಗಳಲ್ಲಿ ನಿಲ್ಲಿಸಬೇಕು. ಅದಕ್ಕೂ ಮೊದಲು ಪರವಾನಗಿ ಮುಕ್ತಾಯವಾದರೆ, ಮತ್ತೆ ಅವಕಾಶ ನೀಡಬಾರದು.
- ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಉಷ್ಣ ವಿದ್ಯುತ್ ಸ್ಥಾವರಕ್ಕೆ ಅನುಮತಿ ನೀಡಬಾರದು. ಜಲವಿದ್ಯುತ್ ಯೋಜನೆಗಳಿಗೆ ಕೆಲವು ಷರತ್ತುಗಳನ್ನು ವಿಧಿಸಿ ಅನುಮತಿ ನೀಡಬಹುದು. ಪರಿಸರ ಪರಿಣಾಮಗಳನ್ನು ಅಧ್ಯಯನ ಮಾಡಿ ಗಾಳಿ ವಿದ್ಯುತ್ ಯೋಜನೆಗೆ ಅವಕಾಶ ನೀಡಬಹುದು.
- ಕೆಂಪು ವಲಯದ ವ್ಯಾಪ್ತಿಗೆ ಬರುವ ಕಾರ್ಖಾನೆಗಳನ್ನು ನಿಷೇಧಿಸುವುದು. ಆದರೆ, ನೇರಳೆ ವ್ಯಾಪ್ತಿಗೆ ಬರುವ ಕಾರ್ಖಾನೆಗಳು, ವಿಶೇಷವಾಗಿ ಆಹಾರ ಮತ್ತು ಹಣ್ಣುಗಳ ಸಂಸ್ಕರಣೆಯಂತಹ ಕಾರ್ಖಾನೆಗಳಿಗೆ ಸಂಪೂರ್ಣ ನಿಷೇಧವಿಲ್ಲ.
- 20 ಸಾವಿರ ಮೀಟರ್‌ಗಳಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಕಟ್ಟಡ ಅಥವಾ ನಿರ್ಮಾಣ ಯೋಜನೆಗಳಿಗೆ ಅವಕಾಶವಿಲ್ಲ. ಟೌನ್‌ಶಿಪ್ ಮತ್ತು ಪ್ರದೇಶಾಭಿವೃದ್ಧಿ ಯೋಜನೆಗಳನ್ನು ನಿರ್ಬಂಧಿಸಬೇಕು.
- ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಬರುವ ಗ್ರಾಮಗಳಲ್ಲಿ ಎಲ್ಲ ರೀತಿಯ ಯೋಜನೆಗಳಿಗೆ ಗ್ರಾಮದ ಗ್ರಾಮ ಸಭೆಯಿಂದ ಪೂರ್ವ ಮಾಹಿತಿಯುಕ್ತ ಒಪ್ಪಿಗೆ ಮತ್ತು ನಿರಾಕ್ಷೇಪಣೆ ಅತ್ಯಗತ್ಯ. ಅರಣ್ಯ ಹಕ್ಕುಗಳ ಕಾಯ್ದೆಯಡಿ ಪೂರ್ವ ಮಾಹಿತಿಯುಕ್ತ ಸಮ್ಮತಿ ಪಡೆಯುವುದನ್ನು ಕಡ್ಡಾಯವಾಗಿ ಜಾರಿಗೆ ತರಬೇಕು.
- ಪಶ್ಚಿಮಘಟ್ಟಗಳಲ್ಲಿನ ನೈಸರ್ಗಿಕ ಭೂಪ್ರದೇಶ ಎಂದು ಗುರುತಿಸಿರುವ ಪ್ರದೇಶಗಳಲ್ಲಿ ಜನವಸತಿ ಇರುವುದರಿಂದ, ಪಾರಿಸರಿಕವಾಗಿ ಹೆಚ್ಚಿನ ಬೆಳವಣಿಗೆಗೆ ಸಹಕಾರಿಯಾಗುವಂತೆ ನಿಯಮಗಳನ್ನು ರೂಪಿಸಬೇಕು.

ಅನರ್ಹರಿಗೂ ಜಾಗ ಮಂಜೂರಾತಿ

● ಬಿ.ಜೆ. ಧನ್ಯಪ್ರಸಾದ್

ಚಿಕ್ಕಮಗಳೂರು: ನಮೂನೆ '50' ಮತ್ತು '53'ರ ಅಡಿ ಕೆಲವೆಡೆ ಅರ್ಹರಲ್ಲದವರಿಗೂ ಜಾಗ ಮಂಜೂರಾಗಿದೆ. ಇದಕ್ಕೆ ಬಗರ್‌ಹುಕುಂ ಸಮಿತಿಯ ನಿಗಾ ಕೊರತೆಯು ಪ್ರಮುಖ ಕಾರಣವಾಗಿದೆ.

ಬಗರ್‌ಹುಕುಂ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಪಟ್ಟಿ ಸಿದ್ಧಪಡಿಸುತ್ತದೆ. ಒಂದೇ ಕುಟುಂಬದ ಹಲವರು, ಉಳ್ಳವರಿಗೂ ಮಂಜೂರಾತಿ ನೀಡಲಾಗಿದೆ. ಸಮಿತಿಯು ಅರ್ಜಿ ತಿರಸ್ಕರಿದವರಿಗೂ ಜಾಗ ಮಂಜೂರು ಮಾಡಿರುವ, ಅರ್ಹರಿಗೆ ವಂಚಿಸಿರುವ ಉದಾಹರಣೆಗಳು ಸಾಕಷ್ಟಿವೆ.


'ಸಮಿತಿಯವರ ಒತ್ತಡದಿಂದಾಗಿ ಕೆಲವು ಅನರ್ಹರಿಗೂ ಮಂಜೂರಾತಿ ಸಿಕ್ಕುತ್ತದೆ. ಪ್ರಭಾವಿಗಳ ಕೈವಾಡ ಇರುತ್ತದೆ. ನಿಬಂಧನೆಗಳನ್ನು ಗಾಳಿಗೆ ತೂರುವಂತೆ ಅಧಿಕಾರಿಗಳಿಗೆ ಒತ್ತಡ ಹೇರುತ್ತಾರೆ. ಸ್ವಜನ ಪಕ್ಷಪಾತ, ದುಡ್ಡು, ಓಟಿಗಾಗಿ ಇಂಥ ಕೆಲಸ ಮಾಡಿಸುತ್ತಾರೆ' ಎಂದು ಹೆಸರು ಹೇಳಲು ಬಯಸದ ತಹಶೀಲ್ದಾರ್ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಕಚೇರಿಯಲ್ಲಿದ್ದ ನಮೂನೆ '50', '53'ಗೆ ಸಂಬಂಧಿಸಿದ 300ಕ್ಕೂ ಹೆಚ್ಚು ಕಡತಗಳು ನಾಪತ್ತೆಯಾಗಿವೆ. ಶೃಂಗೇರಿ ತಾಲ್ಲೂಕಿನಲ್ಲಿ 94 'ಸಿ', 94 'ಸಿಸಿ' ಹಕ್ಕುಪತ್ರ ಅಕ್ರಮವಾಗಿ ವಿತರಿಸಲಾಗಿದೆ ಎಂದು ದೂರು ದಾಖಲಾಗಿದೆ. 670ಕ್ಕೂ ಹೆಚ್ಚು ಮಂದಿಗೆ ಶೃಂಗೇರಿ ಭಾಗದಲ್ಲಿ ಹಕ್ಕುಪತ್ರ ವಿತರಿಸಲಾಗಿದೆ.

'ಸೊಪ್ಪಿನ ಬೆಟ್ಟ, ಅರಣ್ಯ ಪ್ರದೇಶ, ಕುಮ್ಕಿ, ಪಟ್ಟಣ ಜಾಗ ಮಂಜೂರು ಮಾಡಿರುವುದು, ಹಕ್ಕುಪತ್ರ ಅಕ್ರಮವಾಗಿ ನೀಡಿರುವುದು ಈ ಎರಡೂ ಪ್ರಕರಣಗಳಲ್ಲಿ ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಕ್ರಮಗಳಲ್ಲಿ ತಾಲ್ಲೂಕು ಕಚೇರಿಯ ಕೆಲವು ಅಧಿಕಾರಿಗಳು, ನೌಕರರ ಕೈಚಳಕದ ಪಾಲು ಇರುವುದು, ಸಮಿತಿಯ ಕೆಲವರು, ನೌಕರರ ನೆರವಿನಲ್ಲಿ ದಲ್ಲಾಳಿಗಳು ಪಾತ್ರ ವಹಿಸಿರುವುದು ಪತ್ತೆಯಾಗಿದೆ. ಶೃಂಗೇರಿ ತಾಲ್ಲೂಕಿನಲ್ಲಿ ವಿತರಿಸಿರುವ ಹಕ್ಕುಪತ್ರ, ದಾಖಲೆಗಳ ಅಸಲಿಯತ್ತು ಪರಿಶೀಲನೆ ಶುರುವಾಗಿದೆ. ಕಚೇರಿಯಿಂದ ಹೊರಗೆ ಅಂಗಡಿಯೊಂದರಲ್ಲಿ ನಕಲಿ ದಾಖಲೆಗಳನ್ನು ತಯಾರಿಸಿ ಹಕ್ಕುಪತ್ರ, ಸಾಗುವಳಿ ಚೀಟಿ ನೀಡಿರುವುದು ವಿಚಾರಣೆಯಲ್ಲಿ ಗೊತ್ತಾಗಿದೆ.

'ಸಮಿತಿ ಹೊಣೆ ಎನ್ನಲಾಗದು'



ಎಂ.ಕೆ.ಪ್ರಾಣೇಶ್

'ನಮೂನೆ '50','53' ರಲ್ಲಿ ಲೋಪಗಳಾಗಿವೆ ಎಂಬ ದೂರುಗಳು ಇವೆ. ಅದಕ್ಕೆ ಸಮಿತಿ ಹೊಣೆ ಎಂದು ಹೇಳಲಾಗದು' ಎಂದು ಶೃಂಗೇರಿ ತಾಲ್ಲೂಕಿನ ನಾಲ್ಕು ಹೋಬಳಿ ಬಗರ್ ಹುಕುಂ ಸಮಿತಿ ಅಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ಪ್ರಾಣೇಶ್ ಹೇಳಿದರು.

'ಬಗರ್‌ಹುಕುಂ ಜಾಗ ಎಂದು ನಿರ್ಧರಿಸಿದಾಗ ಅರಣ್ಯ ಇಲಾಖೆಯ ಅಭಿಪ್ರಾಯಕ್ಕೆ ಕಳಿಸಲಾಗುತ್ತದೆ. ಅರಣ್ಯ ಇಲಾಖೆಯವರು ಅದನ್ನು ಒಪ್ಪಲ್ಲ. ಕಂದಾಯ ಮತ್ತು ಅರಣ್ಯ ಇಲಾಖೆಯವರು ಜಂಟಿ ಮೋಜಣಿ ನಡೆಸಿ ಕಂದಾಯ ಮತ್ತು ಅರಣ್ಯ ಜಾಗ ಗುರುತು ಮಾಡಲು ಕ್ರಮ ವಹಿಸಬೇಕು. ಜಂಟಿ ಮೋಜಣಿ ಮಾಡಿಸಿದರೆ ನಿರ್ಧಾರ ಕೈಗೊಳ್ಳಲು ಸಮಿತಿಗೂ ಅನುಕೂಲವಾಗುತ್ತದೆ' ಎಂದು ತಿಳಿಸಿದರು.

'ಕಂದಾಯ, ಅರಣ್ಯ ಸಚಿವರು, ಇಲಾಖೆ ಅಧಿಕಾರಿಗಳ ಸಭೆ ಏರ್ಪಡಿಸಿ ಅರಣ್ಯ ಮತ್ತು ಗೋಮಾಳ ಜಾಗ ಇತ್ಯರ್ಥಕ್ಕೆ ಕ್ರಮ ವಹಿಸುವಂತೆ ಕೋರಲು ನಿರ್ಧರಿಸಲಾಗಿದೆ. ಅದು ಇತ್ಯರ್ಥವಾದರೆ ಸಮಸ್ಯೆ ಪರಿಹಾರವಾಗುತ್ತದೆ' ಎಂದರು.

'ಸಮಿತಿಯ ತಪ್ಪುಗಳೂ ಇವೆ'



ಅನರ್ಹರಿಗೆ ಜಾಗ ಮಂಜೂರಾತಿಯಲ್ಲಿ ಬಗರ್‌ಹುಕುಂ ಸಮಿತಿಯ ತಪ್ಪುಗಳೂ ಇವೆ. ರಾಜಕಾರಣಿಗಳು, ಅಧಿಕಾರಿಗಳು ತಮಗೆ ಬೇಕಾದವರಿಗೆ ಮಂಜೂರಾತಿ ನೀಡಿದ್ದಾರೆ. 2014ರಲ್ಲಿ ಶೃಂಗೇರಿಯ ತಹಶೀಲ್ದಾರ್ ಅವರು ಮಂಜೂರಾತಿಯೇ ಆಗದವರಿಗೆ ಖಾತೆ ಮಾಡಿಕೊಟ್ಟಿರುವ ದೂರುಗಳು ಇವೆ. ಶೃಂಗೇರಿಯಲ್ಲಿ ಪತಿ ಎರಡು, ಪತ್ನಿ ಒಂದು ಸಾಗುವಳಿ ಚೀಟಿ ಪಡೆದಿರುವುದು, 50 ಎಕರೆ ಜಮೀನು ಇರುವವ ಅಪ್ಪನ ಹೆಸರಿನಲ್ಲಿ ಜಾಗ ಮಂಜೂರಾತಿ ಮಾಡಿಸಿಕೊಂಡಿರುವುದೂ ಇದೆ. ಅಕ್ರಮಗಳಿಗೆ ರಾಜಕಾರಣಿಗಳ ಕೃಪಾಕಟಾಕ್ಷವೂ ಉಂಟು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷದವರು ಇಂಥವರಲ್ಲಿ ಇದ್ದಾರೆ.

ಕಲ್ಕುಳಿ ವಿಠಲ ಹೆಗ್ಡೆ, ಹೋರಾಟಗಾರ, ಶೃಂಗೇರಿ

ಸಿಇಸಿ ಮೈಲಿಗಲ್ಲು

● ಕೆ.ಎನ್.ಫಣೀಂದ್ರ



ಈ ದೇಶದಲ್ಲಿ ಅರಣ್ಯ ಸಂಪತ್ತು ಇವತ್ತೇನಾದರೂ ಕನಿಷ್ಠ ಈ ಪ್ರಮಾಣದಲ್ಲಾದರೂ ಉಳಿದಿದೆ ಎಂದರೆ ಅದಕ್ಕೆ ಕಾರಣ ಸುಪ್ರೀಂ ಕೋರ್ಟ್. 1996ರಲ್ಲಿ ಟಿ.ಎನ್. ಗೋದಾವರ್ಮನ್ ತಿರುಮಲಪಾಡ v/s ಕೇಂದ್ರ ಸರ್ಕಾರದ ನಡುವಿನ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಸುಪ್ರೀಂ ಕೋರ್ಟ್ ರಚಿಸಿದ, ಕೇಂದ್ರ ಉನ್ನತಾಧಿಕಾರ ಸಮಿತಿಯು (ಸಿಇಸಿ) ಅರಣ್ಯ ಸಂರಕ್ಷಣೆಯ ನಿಟ್ಟಿನಲ್ಲಿ ಅದ್ಭುತ ಮೈಲಿಗಲ್ಲು ಎಂದೇ ಹೇಳಬಹುದು. ಈ ಸಮಿತಿಯ ಶಿಫಾರಸಿಗೆ ಅನುಗುಣವಾಗಿ ಸುಪ್ರೀಂ ಕೋರ್ಟ್ ಕಾಲಕ್ಕೆ ತಕ್ಕುದಾದ ನಿರ್ದೇಶನ ಹಾಗೂ ಆದೇಶಗಳನ್ನು ನಿರಂತರವಾಗಿ ನೀಡುತ್ತಾ ಬಂದಿದೆ.

ಅರಣ್ಯ ಸಂರಕ್ಷಣೆ ವಿಷಯದಲ್ಲಿ ಆಡಳಿತಾರೂಢ ಸರ್ಕಾರಗಳು ಮತ್ತು ಕಾರ್ಯಾಂಗಗಳ ಕಾಳಜಿ ಅಷ್ಟಕ್ಕಷ್ಟೆ. ಇಂತಹ ನಿರ್ಲಕ್ಷ್ಯಕ್ಕೆ ಸುಪ್ರೀಂ ಕೋರ್ಟ್ ಅನೇಕ ಬಾರಿ ಸರ್ಕಾರಗಳನ್ನು ತಿವಿದು ಜಾಗೃತಗೊಳಿಸಿರುವುದುಂಟು. ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹತ್ತಾರು ಯೋಜನೆಗಳನ್ನು ರೂಪಿಸುವ ನೆಪದಲ್ಲಿ ಅರಣ್ಯಪ್ರದೇಶದ ಬಳಕೆಗೆ ಅನುಮತಿ ನೀಡಲಾಗಿದೆ. ಪ್ರಮಾಣಪತ್ರ ವಿತರಿಸಿ ಅವುಗಳನ್ನು ಕಾನೂನುಬದ್ಧಗೊಳಿಸಲಾಗಿದೆ.80-100 ವರ್ಷಗಳ ಕಾಲ ಅರಣ್ಯ ಭೂಮಿಯಾಗಿ ಸಂರಕ್ಷಿಸಿ ಇಡಬೇಕಾಗಿದ್ದ ಕಾಡುಮೇಡುಗಳು ಇವತ್ತು ಲೂಟಿಕೋರರ ಪಾಲಾಗಿ ಒತ್ತುವರಿಯಾಗುತ್ತಿದೆ. ತಗಾದೆ-ತಕರಾರು ತೆಗೆದು ಇವುಗಳನ್ನೆಲ್ಲಾ ಕಂದಾಯ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ.

ಬುಡಕಟ್ಟು ಜನರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ-2006 ಅನ್ನು ಜಾರಿಗೆ ತರಲಾಯಿತು. ಆದರೆ, ಬಗರ್‌ಹುಕುಂ ಸಾಗುವಳಿದಾರರಿಗೆ ಅನ್ವಯಿಸುವ ಷರತ್ತುಗಳು ಅರಣ್ಯ ಹಕ್ಕು ಕಾಯ್ದೆಯಡಿ ಬರುವ ಪ್ರಕರಣಗಳಿಗೆ ಇದು ಅನ್ವಯಿಸುವುದಿಲ್ಲ. ಅರಣ್ಯದೊಳಗೆ ವಾಸ ಮಾಡುತ್ತಿರುವವರು ಮತ್ತು ಸದಾ ಅರಣ್ಯದ ಉತ್ಪನ್ನಗಳನ್ನೇ ತಮ್ಮ ಜೀವನಾಧಾರವನ್ನಾಗಿ ಮಾಡಿಕೊಂಡವರು ಈ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ.

ದುರದೃಷ್ಟವಶಾತ್ ಈ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗಿಲ್ಲ ಎಂದೇ ಹೇಳಬೇಕಾಗುತ್ತದೆ. ಒಂದು ವೇಳೆ ಈ ಕಾಯ್ದೆ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಬಂದಲ್ಲಿ ಅರಣ್ಯ ಭೂಮಿಯನ್ನು ವಿಚಾರಹೀನವಾಗಿ ಅತಿಕ್ರಮಿಸುವ, ಅತಾರ್ಕಿಕವಾಗಿ ವಿತರಿಸುವ, ಬೇಸಾಯದ ಹೆಸರಿನಲ್ಲಿ ಸಾಗುವಳಿಗೆ ಅವಕಾಶ ನೀಡುವ ಮತ್ತು ಅರಣ್ಯ ವ್ಯಾಪ್ತಿಯೊಳಗೆ ಕಾನೂನುಬಾಹಿರ ಚಟುವಟಿಕೆಗಳಿಗೆ ಎಗ್ಗಿಲ್ಲದೆ ಅನುಮತಿ ಪತ್ರ ನೀಡುವ ಸರ್ಕಾರಗಳ ಧೋರಣೆಗೆ ಕಡಿವಾಣ ಹಾಕಬಹುದು.

ಲೇಖಕರು ಹಿರಿಯ ವಕೀಲರು, ಕರ್ನಾಟಕ ಹೈಕೋರ್ಟ್

ನಿರೂಪಣೆ ಬಿ.ಎಸ್.ಷಣ್ಮುಖಪ್ಪ

ಅರಣ್ಯದ 'ಅರಣ್ಯರೋದನ'

ಒಂದನೇ ಪುಟದಿಂದ

ಅವಧಿಯನ್ನು ಮತ್ತೆ ಮತ್ತೆ ವಿಸ್ತರಿಸಲಾಗಿದೆ. ಇದುವರೆಗೂ 8,57,640 ಅರ್ಜಿಗಳು ಸಲ್ಲಿಕೆಯಾಗಿವೆ. ಅರ್ಜಿ ಸಲ್ಲಿಕೆಯ ಅವಧಿಯನ್ನು ನಾಲ್ಕು ವರ್ಷಗಳಷ್ಟು ದೀರ್ಘಕಾಲ ವಿಸ್ತರಿಸಿದ್ದು, ಅಕ್ರಮ ಸಾಗುವಳಿದಾರರಿಗೆ ಉತ್ತೇಜನ ನೀಡಿದಂತಾಗಿದೆ.

ಸರ್ಕಾರದ ನೀಡಿರುವ ಹೇಳಿಕೆಯಂತೆ 14.27 ಲಕ್ಷ ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಬಗರ್‌ಹುಕುಂ ಅಡಿ ಸಲ್ಲಿಕೆಯಾದ ಎಲ್ಲ ಅರ್ಜಿಗಳನ್ನು ಇತ್ಯರ್ಥಗೊಳಿಸಿದರೆ ಸರ್ಕಾರಿ ಭೂಮಿ ಸಂಪೂರ್ಣ ಖಾಲಿಯಾಗಲಿದೆ. ಬಹುಶಃ ಸರ್ಕಾರಿ ಯೋಜನೆಗಳಿಗೂ ಭೂಮಿ ದೊರಕದಂತಾಗಲಿದೆ.

ಪಟ್ಟಭದ್ರರ ಪಾಲಾದ ಅರಣ್ಯ ಹಕ್ಕು ಕಾಯ್ದೆ: ವನವಾಸಿಗಳು, ಪಾರಂಪರಿಕ ಅರಣ್ಯವಾಸಿಗಳಾದ ಗೌಳಿ, ಕುಣಬಿ, ಗೊಂಡ, ಹಾಲಕ್ಕಿಯಂಥ ಸಮುದಾಯದವರು ಶತಮಾನಗಳಿಂದ ಕಾಡಿನಲ್ಲಿ ಜೀವನ ಸಾಗಿಸುತ್ತಿದ್ದಾರೆ. ಸೂಕ್ತ ದಾಖಲೆಗಳಿಲ್ಲದೇ ಅರಣ್ಯ ಭೂಮಿಯ ಹಕ್ಕು ದೊರಕದ ಇಂತಹ ಕುಟುಂಬಗಳಿಗೆ ಅವಕಾಶ ಕಲ್ಪಿಸಲು 2006ರಲ್ಲಿ ಅರಣ್ಯಹಕ್ಕು ಕಾಯ್ದೆ ಜಾರಿಗೆ ತರಲಾಯಿತು.

ಈ ಕಾಯ್ದೆ ಅಡಿ 2,95,018 ಅರ್ಜಿಗಳು ಸಲ್ಲಿಕೆಯಾಗಿದ್ದವು. ಶೇಕಡ 62.49ರಷ್ಟು ಅರ್ಜಿಗಳು ತಿರಸ್ಕೃತಗೊಂಡಿವೆ. ಬುಡಕಟ್ಟು ಜನಾಂಗಕ್ಕೆ 12,481 ಎಕರೆ, ಪಾರಂಪರಿಕ ಅರಣ್ಯ ವಾಸಿಗಳಿಗೆ 1,976 ಎಕರೆ ಭೂಮಿಯನ್ನು ನೀಡಲಾಗಿದೆ. ಕಾಯ್ದೆಯನ್ನು ದುರುಪಯೋಗಪಡಿಸಿಕೊಂಡ ಮಲೆನಾಡಿನ ಶ್ರೀಮಂತ ರೈತರು ನೂರಾರು ಎಕರೆ ಪ್ರದೇಶದ ಕಾಡು ಕಡಿದುಹಾಕಿ ಅಡಿಕೆ, ಶುಂಠಿ ಬೆಳೆಯುತ್ತಿದ್ದಾರೆ. ಕೇರಳದಿಂದ ಬಂದ ಕುಟುಂಬಗಳು ಅರಣ್ಯದಲ್ಲೇ ನೆಲೆ ನಿಂತು ದೊಡ್ಡಪ್ರಮಾಣದ ಕಾಡು ನಾಶ ಮಾಡುತ್ತಿದ್ದಾರೆ. ಸ್ಥಳೀಯರ ಮಾಹಿತಿ ಪ್ರಕಾರ ಅರ್ಜಿ ಸಲ್ಲಿಕೆಯ ನಾಲ್ಕುಪಟ್ಟು ಭೂಮಿ ಅನಧಿಕೃತ ಸಾಗುವಳಿಯಾಗಿದೆ. ಶಿವಮೊಗ್ಗ ಜಿಲ್ಲೆಯೊಂದರಲ್ಲೇ ಸುಮಾರು ಒಂದು ಲಕ್ಷ ಅಧಿಕೃತ ಅಡಿಕೆ ತೋಟಗಳಿದ್ದರೆ, ಅನಧಿಕೃತವಾಗಿ ಅದರ ಎರಡರಷ್ಟಿದೆ. ಇಂತಹ ಪಟ್ಟಭದ್ರರು ಅಕ್ರಮ ಸಕ್ರಮ, ಅರಣ್ಯ ಹಕ್ಕು ಕಾಯ್ದೆ ಅಡಿ ಎರಡೂ ಕಡೆ ಬೇರೆಬೇರೆ ಹೆಸರುಗಳಲ್ಲಿ ಅರ್ಜಿ ಸಲ್ಲಿಸಿ, ಭೂಮಿ ಮಂಜೂರಾಗದಿದ್ದರೂ, ಅರ್ಜಿ ಇತ್ಯರ್ಥವಾಗದಂತೆ ರಾಜಕೀಯ ಪ್ರಭಾವ ಬೀರುತ್ತಾರೆ. ಅಲ್ಲಿಯವರೆಗೂ ಫಸಲಿನ ಲಾಭ ಪಡೆಯುತ್ತಲೇ ಹೋಗುತ್ತಾರೆ.

ಇಂತಹ ವಿದ್ಯಮಾನವನ್ನು ಉಪಗ್ರಹ ಚಿತ್ರಗಳು ದೃಢೀಕರಿಸಿವೆ. ಕೊಡಗು, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಕಾಡು ಬರಿದಾಗುತ್ತಿರುವ ವೇಗಕ್ಕೆ ಕೇಂದ್ರ ಅರಣ್ಯ ಸಚಿವಾಲಯದ 'ಭಾರತ ಅರಣ್ಯ ಪರಿಸ್ಥಿತಿ ವರದಿ'ಯಲ್ಲೂ ಕಳವಳ ವ್ಯಕ್ತವಾಗಿದೆ.

ಅಂಕಿ ಅಂಶ

2,95,018
ಅರಣ್ಯ ಹಕ್ಕು ಕಾಯ್ದೆ ಅಡಿ ಸಲ್ಲಿಕೆಯಾದ ಅರ್ಜಿಗಳು

62.49%
ತಿರಸ್ಕೃತಗೊಂಡ ಅರ್ಜಿಗಳು



ಗೋಮಾಳಕ್ಕೂ ಸರ್ಕಾರಿ ಸಂಚಕಾರ!

ಗ್ರಾಮೀಣ ಪ್ರದೇಶದ ಕೃಷಿ, ಜಾನುವಾರುಗಳ ಜೀವನಾಡಿಯಾದ ಗೋಮಾಳ, ಹುಲ್ಲುಬನಿ, ಗಾಯರಾಣ, ಸೊಪ್ಪಿನಬೆಟ್ಟ, ಮುಪ್ಫತ್ತು, ಜಾಡಿ, ಕುಮ್ಕಿ ಸೇರಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಖಾಸಗಿ ಸಂಘ–ಸಂಸ್ಥೆಗಳಿಗೆ ವಹಿಸಲು, ಮಂಜೂರು ಮಾಡುವ ಕುರಿತು (ಫೆ.9, 2022ರ ತಿದ್ದುಪಡಿ ಆದೇಶ) ನೀತಿಯೊಂದನ್ನು ರೂಪಿಸಲು ಸರ್ಕಾರ ಮುಂದಾಗಿದೆ.

ಕಂದಾಯ ಸಚಿವ ಆರ್. ಅಶೋಕ್ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳು ಸಚಿವ ಸಂಪುಟ ಉಪ ಸಮಿತಿ ರಚನೆಯಾಗಿದೆ. ಕಾನೂನು ಸಚಿವ ಜೆ.ಸಿ.ಮಾದುಸ್ವಾಮಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ, ಕೃಷಿ ಸಚಿವ ಬಿ.ಸಿ. ಪಾಟೀಲ ಮತ್ತು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಸಮಿತಿಯಲ್ಲಿದ್ದಾರೆ.


ಹಳ್ಳಿಗರಿಗೆಲ್ಲ ಸಮಾನ ಹಕ್ಕಿರುವ ಇಂತಹ ಸಮುದಾಯ ಭೂಮಿಯಲ್ಲೇ ಕೆರೆ-ಹಳ್ಳಗಳಂಥ ಜಲಮೂಲಗಳು, ಗೋಮಾಳ, ಕುರುಚಲು ಕಾಡು ಎಲ್ಲವೂ ವ್ಯಾಪಿಸಿದೆ. ಮೇವಿನ ಹುಲ್ಲು, ಬೇಸಾಯಕ್ಕಾಗಿ ಸೊಪ್ಪು-ತರಗೆಲೆ, ಉರುವಲು, ಜೇನು, ಹಣ್ಣು-ಹಂಪಲುಗಳೆಲ್ಲ ದೊರಕುವುದೂ ಇಲ್ಲಿಯೇ. ಕಾಡಿನ ಮೇಲಿನ ಹಳ್ಳಿಗರ ಒತ್ತಡವನ್ನು ಕಡಿಮೆ ಮಾಡುವ ಹಾಗೂ ಕಾಡುಪ್ರಾಣಿಗಳು ಊರಿಗೆ ಬರದಂತೆ ನಿಯಂತ್ರಿಸುವ ಹಸಿರು ಬೇಲಿ ಇದು. ನೆರೆ-ಬರಗಳು ಬಂದಾಗ ಆಗುವ ಆಘಾತದ ತೀವ್ರತೆ ತಗ್ಗಿಸಬಲ್ಲ ರಕ್ಷಣಾಪೊರೆಯೂ ಹೌದು. ಇದೊಂದು ಅಮೂಲ್ಯವಾದ ಸಮುದಾಯ ಸಂಪತ್ತು ಎಂದು ಪರಿಸರ-ಅರ್ಥಶಾಸ್ತ್ರಜ್ಞರು ಗುರುತಿಸಿದ್ದಾರೆ.

ದಾಖಲೆಗಳ ಪ್ರಕಾರ ರಾಜ್ಯದಲ್ಲಿ 19.39 ಲಕ್ಷ ಎಕರೆ ಗೋಮಾಳ ಜಮೀನು ಲಭ್ಯವಿದೆ. ಇಂತಹ ಅಮೂಲ್ಯ ಭೂಮಿಯನ್ನು ಸಂಘ–ಸಂಸ್ಥೆಗಳಿಗೆ ಇದೇ ಜಾಗಗಳನ್ನು ಮಂಜೂರು ಮಾಡಲು ಹೊಸ ನೀತಿ ರೂಪಿಸಲು ಹೊರಟಿರುವುದಕ್ಕೆ ಎಲ್ಲೆಡೆ ಆಕ್ಷೇಪ ವ್ಯಕ್ತವಾಗಿದೆ.

ಸಮುದಾಯಕ್ಕೆ ಮೀಸಲಾಗಿದ್ದ ಇಂತಹ 22,500 ಹೆಕ್ಟೇರ್ ಭೂಮಿಯನ್ನು ಹಿಂದೆ ಭದ್ರಾವತಿಯ ಎಂಪಿಎಂ ಕಾರ್ಖಾನೆಗೆ ನೀಡಿದ್ದು , ಅಲ್ಲಿ ಬೆಳೆಸಿದ ನೆಡುತೋಪುಗಳಿಂದ ಪ್ರಾಣಿ, ಪಕ್ಷಿ ಸಂಕುಲ ಜೀವ ವೈವಿಧ್ಯ ಹೇಗೆ ನಾಶವಾಯಿತು, ಈಗ ಆ ಭೂಮಿಯೂ ಹೇಗೆ ಒತ್ತುವರಿಯಾಗಿಗುತ್ತಿದೆ ಎಂಬ ಉದಾಹರಣೆ ಕಣ್ಣ ಮುಂದೆಯೇ ಇದೆ.

ಈಗಾಗಲೇ ಬಹುತೇಕ ಸಾಮೂಹಿಕ ಭೂಮಿ ಕೃಷಿ ಭೂಮಿಯಾಗಿ ಪರಿವರ್ತನೆಯಾಗಿವೆ. 25 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಸಾಗುವಳಿ ಮಾಡುತ್ತಿವೆ. ಮನೆ ಮತ್ತು ಗುಡಿಸಲು ನಿರ್ಮಿಸಿರುವವರು ನಮೂನೆ 94 ಸಿ(ಗ್ರಾಮೀಣ) ಮತ್ತು 94 ಸಿಸಿ (ನಗರ) ಅಡಿಯಲ್ಲಿ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಒಂದೆಡೆ 'ಅರಣ್ಯ ಹಕ್ಕು ಕಾಯ್ದೆ' ಅಡಿ ಅರಣ್ಯಭೂಮಿಯಲ್ಲಿ ಭೂಹಕ್ಕು ಪಡೆಯಲು ಅರ್ಜಿ ಹಾಕಿದವರೇ, ಹಲವೆಡೆ ಇತ್ತ, ಕಂದಾಯ ಭೂಮಿ ಪಡೆಯಲು 'ಅಕ್ರಮ-ಸಕ್ರಮ'ದಲ್ಲೂ ಅರ್ಜಿ ಸಲ್ಲಿಸಿದ್ದಾರೆ. ಅರಣ್ಯ ಹಕ್ಕು ಸಮಿತಿ ನಿರ್ಧಾರ ಪರಿಗಣಿಸಿಯೇ ಮುಂದಿನ ನಿರ್ಧಾರ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಬಗರ್-ಹುಕುಂ ಸಮಿತಿಗಳನ್ನು ಬಳಸಿಕೊಂಡು, ಚುನಾವಣಾ ಲಾಭಕ್ಕಾಗಿ ಸರ್ಕಾರವು ಭೂಮಿ ಹಂಚಲು ಹೊರಟಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 20, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 08ನೇ ದಿನ
ತಿಥಿ: (ಮಾಘ-ಕೃಷ್ಣ) ಚತುರ್ಥಿ ಗಂ. 21-06 ನಕ್ಷತ್ರ: ಹಸ್ತ ಗಂ. 16-42 ಯೋಗ: ಶೂಲ ಗಂ. 15-07, ಕರಣ: ಬವ ಗಂ. 09-34. ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ: 06-55 ಸೂರ್ಯಾಸ್ತ: 06-34
ಮುಸ್ಲಿಂ ದಿನಾಂಕ: 18 ರಜಬ್
ದಿನ ವಿಶೇಷ: ಸಂಕಷ್ಟಹರ ಚತುರ್ಥಿ (ಚಂದ್ರೋದಯ 09-52), ಅಮೃತಸಿದ್ಧಿಯೋಗ
ಅದೃಷ್ಟ ಸಂಖ್ಯೆ: 5, 12

ಮೇಷ: ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪುವಂತಹ ಘಟನೆ ನಡೆದ ಕಾರಣದಿಂದಾಗಿ ಮನಸ್ಸಿಗೆ ಸಮಾಧಾನವಾಗುವುದು. ವಿದೇಶಿ ಸಂಸ್ಥೆಯೊಂದಿಗೆ ವ್ಯಾವಹಾರಿಕ ಒಪ್ಪಂದ ಮಾಡಿಕೊಳ್ಳಲು ಈ ದಿನ ಸೂಕ್ತವಾಗಿರುವುದು.

ವೃಷಭ: ಮನೆಗೆ ನೂತನ ಸಾಕುಪ್ರಾಣಿಯ ಆಗಮನ ಮಕ್ಕಳಲ್ಲಿ ಸಂತೋಷ ಮೂಡಿಸಲಿದೆ. ಯೋಗಾಸನ ಶಿಕ್ಷಕರಿಗೆ ಬೇಡಿಕೆ ಹೆಚ್ಚಲಿದೆ. ಹುಟ್ಟೂರಿನಲ್ಲಿ ಕೃಷಿ ಮಾಡುವ ಅಥವಾ ಕೃಷಿ ಭೂಮಿ ಖರೀದಿಸುವ ಆಲೋಚನೆ ನೆರವೇರುವುದು.

ಮಿಥುನ: ಸಂಶೋಧನಾಕಾರರಿಗೆ ಹಾಗೂ ನ್ಯಾಯಾಂಗ ಇಲಾಖೆಯವರಿಗೆ ಒಳ್ಳೆಯ ದಿನಗಳು. ನೀವು ಇಂದು ಕೈಗೊಳ್ಳುವ ನಿರ್ಧಾರಗಳು ಕುಟುಂಬದ ಸದಸ್ಯರ ಮನಸ್ಸಿಗೆ ನೆಮ್ಮದಿ ತರಲಿದೆ. ಕೊಡು–ಕೊಳ್ಳುವಿಕೆ ವ್ಯವಹಾರ ಹೆಚ್ಚಲಿದೆ.

ಕರ್ಕಾಟಕ: ಭೂಮಿಗೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಗೊಳ್ಳುವ ಹಂತಕ್ಕೆ ಬರಲಿದೆ. ಸಮಾಜದಲ್ಲಿ ನಿಮ್ಮ ವ್ಯಕ್ತಿತ್ವಕ್ಕೆ ಸೂಕ್ತ ಗೌರವಾದರಗಳು ದೊರೆಯಲಿದೆ. ಹಿಡಿದ ಕೆಲಸಗಳನ್ನು ಮುಗಿಸುವ ಪ್ರಯತ್ನವಿರಲಿ.

ಸಿಂಹ: ಮಕ್ಕಳ ವಿದ್ಯಾಭ್ಯಾಸವು ಅಭಿವೃದ್ಧಿದಾಯಕವಾಗಿ ಮುಂದುವರಿಯಲಿದೆ. ದೇಹಾರೋಗ್ಯದ ಬಗ್ಗೆ ಅದರಲ್ಲೂ ಉದರ ವ್ಯಾಧಿಯ ಬಗ್ಗೆ ಕಾಳಜಿ ವಹಿಸಬೇಕು.

ಕನ್ಯಾ: ವ್ಯಾಪಾರ ವ್ಯವಹಾರದಲ್ಲಿ ವಂಚಕರ ಕೈವಾಡ ಬೆಳಕಿಗೆ ಬರುತ್ತದೆ. ನಿವೇಶನಗಳ ಖರೀದಿಯ ವ್ಯವಹಾರದಲ್ಲಿ ಮತ್ತೊಮ್ಮೆ ಭೂಮಿಯ ದಾಖಲೆಗಳ ಪರೀಕ್ಷೆ ಅನಿವಾರ್ಯ ಎನಿಸಲಿದೆ. ಹೂವಿನ ವ್ಯಾಪಾರಿಗಳಿಗೆ ಯಶಸ್ಸು.

ತುಲಾ: ಆಹಾರ ಪದ್ಧತಿಯಲ್ಲಿ ನಿಯಮ ಮಾಡಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಬಾಳಸಂಗಾತಿಯ ಮಾತುಗಳಿಗೆ ನಿಮ್ಮ ಸಹಮತವಿರಲಿ. ಸುಖ, ನೆಮ್ಮದಿಯುಕ್ತ ಕುಟುಂಬವು ನಿಮ್ಮದಾಗುವುದು.

ವೃಶ್ಚಿಕ: ಈ ದಿನ ವಿವಿಧ ರೀತಿಯಲ್ಲಿ ಧನಾಗಮನ ಉತ್ತಮವಾಗಿರಲಿದೆ. ನಿಮ್ಮ ಬಾಲ್ಯದ ಕನಸು ಈಡೇರುವ ಕಾಲ ಈ ದಿನವಾಗಿದೆ. ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿಯೂ ನಿಮ್ಮ ಕಾರ್ಯವೈಖರಿಯಿಂದ ಅನುಭವಕ್ಕೆ ಬರುತ್ತದೆ.

ಧನು: ಅಧಿಕಾರದ ಜಂಜಾಟದಿಂದ ಪಾರಾಗುವ ಸಾಧ್ಯತೆ ಇದೆ. ಧನಾಗಮನ ಹೆಚ್ಚಿದ್ದರೂ ಸಂಪಾದನೆಯ ಬಹುಪಾಲು ವೆಚ್ಚವಾಗಲಿದೆ. ಸಕಾಲದಲ್ಲಿ ಮಿತ್ರರ ನೆರವು ಸಿಗುವುದು. ಹೈನು ಉತ್ಪಾದಕರಿಗೆ ಬೇಡಿಕೆ ಹೆಚ್ಚಲಿದೆ.

ಮಕರ: ಕೃಷಿಗೆ ಸಂಬಂಧಿಸಿದ ಯಂತ್ರಗಳು ಅಥವಾ ವಾಹನ ಕೊಳ್ಳುವ ಯೋಗವಿದೆ. ಆರಕ್ಷಕ ವರ್ಗದವರು ಜಾಗರೂಕತೆಯಿಂದ ವರ್ತಿಸಿ, ಸ್ವತಃ ನೀವೇ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದಂತಹ ಸನ್ನಿವೇಶ ಎದುರಾಗಬಹುದು.

ಕುಂಭ: ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಬಹುಭಾಷಾ ಕಲಿಕೆಯಂತಹ ಅನೇಕ ಅವಕಾಶ ಒದಗಿ ಬರುವುದು. ಬೃಹತ್ ಯೋಜನೆಗಾಗಿ ಸಾಲ ಮಾಡುವ ಪರಿಸ್ಥಿತಿ ಬರಬಹುದು. ಧಾರ್ಮಿಕ ಕ್ಷೇತ್ರಗಳ ಭೇಟಿ.


ಮೀನ: ಸಾಂಸಾರಿಕ ಜೀವನ ಉತ್ತಮವಾಗಿದ್ದರೂ ಅನವಶ್ಯಕವಾದ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿಬಂದು ಕಲಹ ಸಾಧ್ಯತೆ. ಕೆಲಸದ ವಿಚಾರದಲ್ಲಿ ಹಿರಿಯರ ಮಾತಿನಂತೆ ನಡೆದುಕೊಳ್ಳುವುದು ಉತ್ತಮ.

ಪದಬಂಧ 4875

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ಪ್ರೀತಿ ಅಥವಾ ಅನುರಾಗ (2)
5. ಹಿಂದಿನಿಂದ ಉಳಿದು ಬಂದ ಪ್ರಾಣಿ,ಪಕ್ಷಿ,ಸಸ್ಯಗಳ ಅವಶೇಷ (5)
6. ಗಂಡು ಕೋತಿಯಿದು (3)
7. ಇದು ಮಣ್ಣಿಗೆ ಸಂಬಂಧಿಸಿದುದು (3)
8. ಸಮಾಜದ ಎಲ್ಲರಿಗೂ ಸಂಬಂಧಿಸಿದ್ದು (5)
9. ನಿಧಾನವಾಗಿ ನಡೆದ ರಾಜಿ (3)
10. ಅತ್ಯಂತ ಶಾಂತವಾದುದು (3)
13. ಕೆಲಸ ಮಾಡಲು ಬೇಕಾದ ಉಪಕರಣ (5)
14. ಜನನಿ ನುಡಿದ ಸತ್ಯ (2)

ಮೇಲಿಂದ ಕೆಳಕ್ಕೆ
1.ಮನಸ್ಸಿಗೆ ಸಂಬಂಧಿಸಿದ ಕಾಯಿಲೆ (4)
2.ಪರಮಾತ್ಮನಲ್ಲಿ ಐಕ್ಯವನ್ನು ಹೊಂದುವುದು (3)
4.ದೊಡ್ಡ ಉತ್ಸವ (4)
5.ಅಂತ್ಯ ಅಥವಾ ಕೊನೆ (5)
7.ಈತ ಅಡುಗೆಯಲ್ಲಿ ನುರಿತವ (5)
9.ಸತ್ತವರನ್ನು ಬದುಕಿಸುವ ಮೂಲಿಕೆ (4)
11.ವಿವರಗಳಿಂದ ಕೂಡಿದ ಹೇಳಿಕೆ (4)
12.ಕರದಲ್ಲಿ ಕೊನೆಗೊಂಡಿರುವ ಮಿಶ್ರಣ (3)



4874ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1ಅಡವಿ 3.ಅನುರಾಗ
5.ಬರ 6.ಹತ್ಯಾಕಾಂಡ
7.ವರಮಾನ ತೆರಿಗೆ
10.ಅವಧಾನಿ 11.ಸತಿ
13.ಗರ್ಭವತಿ 14.ಕುತಂತ್ರ

ಮೇಲಿಂದ ಕೆಳಕ್ಕೆ:
1.ಅಣ್ಣ 2.ವಿಧುರ 4.ಗರುಡ
5.ಬಡವ 6.ಹಣತೆ 8.ಮಾನಿನಿ
9.ಗೆಳತಿ 10.ಅಣುಗ
11. ಸರಕು 12.ಪಾತ್ರ

ಸುಡೊಕು 5261

			4		3		6	
	9				2			5
			5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5260 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಐದೂವರೆ ದಶಕಗಳ ದಣಿವರಿಯದ ಸಿನಿ ಪಯಣ • ಕನ್ನಡ ಚಿತ್ರರಂಗದ ಸಜ್ಜನ ನಟ ರಾಜೇಶ್

ರಾಜ್ ಪರಂಪರೆಯ 'ಕಲಾತಪಸ್ವಿ' ತೆರೆಮರೆಗೆ

• ಶರತ್ ಹೆಗ್ಡೆ



ನಟ ರಾಜೇಶ್ ಹಾಗೂ ಡಾ. ರಾಜ್‌ಕುಮಾರ್ ಅವರ ಅಪರೂಪದ ಚಿತ್ರ



ಶನಿವಾರ ನಿಧನರಾದ ನಟ ರಾಜೇಶ್ ಅವರ ಅಂತಿಮ ವಿಧಿವಿಧಾನದಲ್ಲಿ ನಟ ಅರ್ಜುನ್ ಸರ್ಜಾ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ರವಿವರ್ಮನ ಕುಂಚದ ಕಲೆ ಬಲೆ ಸಾಕಾರವೋ...' – ಸೊಸೆ ತಂದ ಸೌಭಾಗ್ಯ ಚಿತ್ರದಲ್ಲಿ ಪಿ.ಬಿ.ಶ್ರೀನಿವಾಸ್ ಗಾಯನಕ್ಕೆ ರಾಜೇಶ್ ಅವರು ನಟಿ ವಿಜಯಲಲಿತಾ ಅವರೊಂದಿಗೆ ಹೆಜ್ಜೆ ಹಾಕಿದ ನೆನಪು ಸಿನಿಪ್ರಿಯರಿಗೆ ಇನ್ನೂ ಹಸಿರಾಗಿದೆ. ಅದು ರಾಜೇಶ್ ಕಲಾ ಬದುಕಿನ ಪರ್ವಕಾಲ. ಹಾಗೆ ಸಜ್ಜನಿಕೆಯ ಪಾತ್ರಗಳಲ್ಲಿ, ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡು ಮನೆಮಾತಾಗಿದ್ದ ರಾಜೇಶ್ ಅವರು ಕೊನೆಯ ಬಾರಿಗೆ ಕಾಣಿಸಿಕೊಂಡಿದ್ದು ಇನ್ನಷ್ಟೇ ಬಿಡುಗಡೆಯಾಗಬೇಕಿರುವ ಶ್ರೀನಿ ಅಭಿನಯದ 'ಓಲ್ಡ್‌ಮಾಂಕ್' ಚಿತ್ರ.

ಅಭಿನಯದ ಉತ್ಸಾಹ ಬತ್ತಿರಲಿಲ್ಲ. ಆದರೆ ಆರೋಗ್ಯ ಕೇಳುತ್ತಿರಲಿಲ್ಲ. ಹಾಗಾಗಿ ಸುಮಾರು ಎರಡು ವರ್ಷಗಳಿಂದ ಅವರು ಕ್ಯಾಮೆರಾ ಕಣ್ಣಿನಿಂದ ಸ್ವಲ್ಪ ದೂರವಿದ್ದರು.

ಮುನಿಚೌಡಪ್ಪ ರಾಜೇಶ್ ಆದದ್ದು: ರಾಜೇಶ್ ಜನಿಸಿದ್ದು ಬೆಂಗಳೂರಿನಲ್ಲಿ. ಅವರ ಮೂಲ ಹೆಸರು ಮುನಿಚೌಡಪ್ಪ. ರಂಗಭೂಮಿ ನಟನೆಯ ವೇಳೆ ಅವರು ವಿದ್ಯಾಸಾಗರ್ ಎಂಬ ಹೆಸರಿನಿಂದ ಗುರುತಿಸಿಕೊಂಡಿದ್ದರು. ತಮ್ಮದೇ ಆದ 'ಶಕ್ತಿ ನಾಟಕ ಮಂಡಳಿ'ಯನ್ನು ಕಟ್ಟಿದ್ದರು. 'ನಿರುದ್ಯೋಗಿ ಬಾಳು', 'ಬಡವನ ಬಾಳು', 'ವಿಷಸರ್ಪ', 'ನಂದಾ ದೀಪ', 'ಚಂದ್ರೋದಯ', 'ಕಿತ್ತೂರು ರಾಣಿ ಚೆನ್ನಮ್ಮ' ಅವರು ಅಭಿನಯಿಸಿದ ಪ್ರಮುಖ ನಾಟಕಗಳು. ಈ ನಡುವೆ ಕೆಲಕಾಲ ಅವರು ಲೋಕೋಪಯೋಗಿ ಇಲಾಖೆಯಲ್ಲಿ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರಾಗಿ ಕೆಲಸ ಮಾಡಿದ್ದರು.

1960ರ ದಶಕದಲ್ಲಿ ಅವರು 'ವೀರ ಸಂಕಲ್ಪ' ಚಿತ್ರದ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟರು. 1968ರಲ್ಲಿ ತೆರೆಕಂಡ 'ನಮ್ಮ ಊರು' (ಸಿ.ವಿ. ಶಿವಶಂಕರ್ ನಿರ್ದೇಶನ) ಚಿತ್ರದ ಬಳಿಕ ಅವರು ತಮ್ಮ ಹೆಸರನ್ನು ರಾಜೇಶ್ ಎಂದು ಬದಲಾಯಿಸಿಕೊಂಡರು. ಈ ಚಿತ್ರಕ್ಕೆ ಅವರು ಹಿನ್ನೆಲೆ ಗಾಯಕರೂ ಆಗಿದ್ದರು.

'ಕಪ್ಪು ಬಿಳುಪು', 'ಎರಡು ಮುಖ', 'ಪುಣ್ಯ ಪುರುಷ', 'ಕಾಣಿಕೆ', 'ಬೃಂದಾವನ', 'ಸುಖ ಸಂಸಾರ', 'ದೇವರ ಮಕ್ಕಳು', 'ಪೂರ್ಣಿಮಾ', 'ನಮ್ಮ ಬದುಕು', 'ಭಲೇ ಅದೃಷ್ಟವೋ ಅದೃಷ್ಟ', 'ಭಲೇ ಭಾಸ್ಕರ', 'ವಿಷಕನ್ಯೆ', 'ಕ್ರಾಂತಿವೀರ', 'ಬಿಡುಗಡೆ', 'ಊರ್ವಶಿ', 'ದೇವರ ಗುಡಿ', 'ಕಾವೇರಿ', 'ಬದುಕು ಬಂಗಾರವಾಯಿತು', 'ದೇವರ ದುಡ್ಡು', 'ಸೊಸೆ ತಂದ ಸೌಭಾಗ್ಯ', 'ಚದುರಿದ ಚಿತ್ರಗಳು', 'ವಸಂತ ನಿಲಯ', 'ಕಲಿಯುಗ', 'ತವರು ಮನೆ', 'ತವರು ಮನೆ ಉಡುಗೊರೆ' ಸೇರಿದಂತೆ 150ಕ್ಕೂ ಅಧಿಕ ಸಿನಿಮಾಗಳಲ್ಲಿ ರಾಜೇಶ್ ನಟಿಸಿದ್ದಾರೆ.

'ಕಲಾತಪಸ್ವಿ' ರಾಜೇಶ್ ಅವರ ಆತ್ಮಚರಿತ್ರೆಯ ಶೀರ್ಷಿಕೆ. ವೃತ್ತಿಬದುಕಿನ ಪರ್ವದ ದಿನಗಳಲ್ಲಿ ಅಂದು ಶ್ರೀಮಂತವಾದ ತಮಿಳು ಚಿತ್ರರಂಗದಿಂದ ಅವಕಾಶಗಳು ಕೂಡಿಬಂದರೂ ಕನ್ನಡದ ನೆಲದಲ್ಲೇ ಏನನ್ನಾದರೂ ಸಾಧಿಸುವ ಇಚ್ಛೆಯಿಂದ ಅಲ್ಲಿನ ಅವಕಾಶಗಳನ್ನು ವಿನಯದಿಂದಲೇ ನಿರಾಕರಿಸಿದ್ದರು.

ರಾಜ್‌ಕುಮಾರ್, ಉದಯ ಕುಮಾರ್, ಕಲ್ಯಾಣ್ ಕುಮಾರ್‌ರಂತಹ ದಿಗ್ಗಜರೊಂದಿಗೆ ಅಭಿನಯಿಸಿದ ಅಗ್ಗಳಿಕೆ ರಾಜೇಶ್ ಅವರದ್ದು. ಈ ಮೂವರನ್ನೂ ರಾಜೇಶ್ ತುಂಬು ಅಭಿಮಾನದಿಂದ ಕಂಡಿದ್ದರು. ರಾಜ್‌ಕುಮಾರ್ ಅವರ ತೂಕದ ವ್ಯಕ್ತಿತ್ವ, ಉದಯ ಕುಮಾರ್, ಕಲ್ಯಾಣ್ ಕುಮಾರ್ ಅವರ ಸಜ್ಜನಿಕೆ ಬಗ್ಗೆ ಮುಕ್ತಕಂಠದಿಂದ ಶ್ಲಾಘಿಸಿದ್ದರು.

ಕನ್ನಡ ಚಿತ್ರರಂಗಕ್ಕೆ ರಾಜೇಶ್ ಅವರ ಕೊಡುಗೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ 2012 ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು.

ಉಳಿಸಿಕೊಳ್ಳಲು ಆಗಲಿಲ್ಲ: 'ಮಾವನನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬ ಬೇಸರವಿದೆ. ಡಾ.ರಾಜ್‌ಕುಮಾರ್ ಅವರ ಪಂಕ್ತಿಯಲ್ಲಿದ್ದ ನಟ. ಸುಮಾರು 55 ವರ್ಷಗಳಿಂದ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರಿಲ್ಲ ಎನ್ನುವುದು ದುಃಖ ತಂದಿದೆ' ಎಂದು ನಟ ಹಾಗೂ ರಾಜೇಶ್ ಅವರ ಅಳಿಯ ಅರ್ಜುನ್ ಸರ್ಜಾ ವ್ಯಥೆಪಟ್ಟರು.

'ಸಮರ್ಥ, ಅದ್ಭುತ ಕಲಾವಿದರ ಪಟ್ಟಿಯಲ್ಲಿ ಇದ್ದ ಕಲಾವಿದ ರಾಜೇಶ್. ಅವರ ಜೊತೆ ಸುಮಾರು 15 ಚಿತ್ರಗಳಲ್ಲಿ ನಟಿಸುವ ಯೋಗ ನನ್ನದಾಗಿತ್ತು. ಆರೋಗ್ಯವನ್ನು ತುಂಬಾ ಚೆನ್ನಾಗಿ ಕಾಪಾಡಿಟ್ಟುಕೊಂಡ ಅತ್ಯಂತ ಶಿಸ್ತಿನ ಮನುಷ್ಯ. ಅವರ ಜತೆ ಪಾತ್ರ ಮಾಡಿದ್ದು, ಜತೆಗಿದ್ದದ್ದು ಜನ್ಮಾಂತರದ ಪುಣ್ಯ' ಎಂದು ನಟ ದೊಡ್ಡಣ್ಣ ಹೇಳಿದರು.

'ರಾಜೇಶ್ ಅವರು ಯಾವುದೇ ಪಾತ್ರದ ಅಭಿನಯದಲ್ಲಿ ನವರಸ ತುಂಬುವ ವ್ಯಕ್ತಿ. ಅವರ ಜೊತೆ ಪಾತ್ರ ಮಾಡುವುದು ಬಹಳ ಕಷ್ಟ. ಒಳ್ಳೆಯ ಅಭಿನಯದ ಜೊತೆಗೆ ಪಕ್ಕದವರೂ ಅಷ್ಟೇ ಚೆನ್ನಾಗಿ ಅಭಿನಯ ಮಾಡಬೇಕು ಎನ್ನುವ ಶಿಸ್ತು ಅವರಲ್ಲಿತ್ತು. ಅವರು ತುಂಬು ಜೀವನ ಮಾಡಿದ್ದಾರೆ' ಎಂದು ನಟ 'ಮುಖ್ಯಮಂತ್ರಿ' ಚಂದ್ರು ನೆನಪಿಸಿಕೊಂಡರು.

'108' ಮೇಲ್ದರ್ಜೆಗೇರಿಸಲು ಸಚಿವ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಆರೋಗ್ಯ ಕವಚ-108 ಆಂಬುಲೆನ್ಸ್ ಸೇವೆಯನ್ನು ಮೇಲ್ದರ್ಜೆಗೇರಿಸುವ ₹1,260 ಕೋಟಿ ವೆಚ್ಚದ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

'ಆರೋಗ್ಯ ಇಲಾಖೆ ನೇಮಿಸಿದ್ದ ತಜ್ಞರ ಸಲಹಾ ಸಮಿತಿಯ ಶಿಫಾರಸಿನಂತೆ ಆಂಬುಲೆನ್ಸ್ ಸೇವೆಯನ್ನು ಮೇಲ್ದರ್ಜೆಗೇರಿಸುವ ಯೋಜನೆ ರೂಪಿಸಲಾಗಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ಮಾರ್ಗಸೂಚಿಗಳ ಅನುಸಾರ ಆಂಬುಲೆನ್ಸ್ ಸೇವೆಯಲ್ಲಿ ಸುಧಾರಣೆ ತರಲಾಗುವುದು' ಎಂದು ಹೇಳಿಕೆಯಲ್ಲಿ ವಿವರಿಸಿದ್ದಾರೆ.

'ಸದ್ಯ ಆರೋಗ್ಯ ಕವಚದಲ್ಲಿ 710 ಆಂಬುಲೆನ್ಸ್‌ಗಳಿವೆ. ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾನದಂಡಗಳ ಪ್ರಕಾರ, ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಒಂದು 'ಬೇಸಿಕ್ ಲೈಫ್ ಸಪೋರ್ಟ್' (ಬಿಎಲ್‌ಎಸ್) ಆಂಬುಲೆನ್ಸ್ ಮತ್ತು ಪ್ರತಿ ಐದು ಲಕ್ಷ ಜನಸಂಖ್ಯೆಗೆ ಒಂದು 'ಅಡ್ವಾನ್ಸ್ಡ್ ಲೈಫ್ ಸಪೋರ್ಟ್' (ಎಎಲ್‌ಎಸ್) ಆಂಬುಲೆನ್ಸ್ ಬೇಕಿದೆ. ಈ ಪ್ರಕಾರ, ಒಟ್ಟು ಆಂಬುಲೆನ್ಸ್‌ಗಳ ಸಂಖ್ಯೆಯನ್ನು 750ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಈಗ ಬಳಕೆಯಲ್ಲಿರುವ ಆಂಬುಲೆನ್ಸ್‌ಗಳಲ್ಲಿ 340 ದುಃಸ್ಥಿತಿಯಲ್ಲಿವೆ. ಅವುಗಳನ್ನು ಬದಲಿಸಲಾಗುವುದು. ಒಟ್ಟು 350 ಹೊಸ ಆಂಬುಲೆನ್ಸ್‌ಗಳನ್ನು ಖರೀದಿಸಲಾಗುವುದು. 24 ಗಂಟೆಗಳ ಅವಧಿಯಲ್ಲಿ ಒಂದು ಆಂಬುಲೆನ್ಸ್ ಐದಕ್ಕಿಂತ ಹೆಚ್ಚು ಪ್ರಕರಣಗಳನ್ನು ನಿರ್ವಹಿಸಿದರೆ ಅಥವಾ 120 ಕಿ.ಮೀ. ಸಂಚರಿಸಿದರೆ ಅಂಥ ಕಡೆ ಮತ್ತೊಂದು ಆಂಬುಲೆನ್ಸ್ ಒದಗಿಸಲಾಗವುದು' ಎಂದು ಹೇಳಿದ್ದಾರೆ.

'ಹೊಸ ಯೋಜನೆಯ ಅಡಿಯಲ್ಲಿ ಶೇ 40ರಷ್ಟು ಎಎಲ್‌ಎಸ್ ಮತ್ತು ಶೇ 60ರಷ್ಟು ಬಿಎಲ್‌ಎಸ್ ಆಂಬುಲೆನ್ಸ್‌ಗಳನ್ನು ಒದಗಿಸಲಾಗುವುದು. ಎಲ್ಲ ವಾಹನಗಳಿಗೂ ಜಿಪಿಎಸ್ ಅಳವಡಿಸಲಾಗುವುದು. ಆಂಬುಲೆನ್ಸ್ ಸಿಬ್ಬಂದಿಗೆ ಆಧಾರ್ ಜೋಡಣೆಯೊಂದಿಗೆ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಕಲ್ಪಿಸಲಾಗುವುದು. ಸ್ವಯಂಚಾಲಿತ ಕರೆ ಸ್ವೀಕಾರ ಮತ್ತು ಕರೆ ಮಾಡಿದವರು ಇರುವ ಸ್ಥಳದ ಮಾಹಿತಿ ಒದಗಿಸುವ ವ್ಯವಸ್ಥೆಯನ್ನೂ ಅಳವಡಿಸಲಾಗುವುದು' ಎಂದು ಸಚಿವರು ತಿಳಿಸಿದ್ದಾರೆ.

ಕರೆ ಕೇಂದ್ರ ಉನ್ನತೀಕರಣ: 'ಆರೋಗ್ಯ ಕವಚ ಕರೆ ಕೇಂದ್ರದ ಸಿಬ್ಬಂದಿ ಆಸನಗಳ ಸಂಖ್ಯೆಯನ್ನು 54ರಿಂದ 75ಕ್ಕೆ ಹೆಚ್ಚಿಸಲಾಗುವುದು' ಎಂದು ವಿವರಿಸಿದ್ದಾರೆ.

'ಆರೋಗ್ಯ ಕವಚ ಯೋಜನೆಯ ಗುತ್ತಿಗೆಗೆ ಕೇವಲ ದರದ ಆಧಾರದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸುವ ಪದ್ಧತಿ ಇತ್ತು. ಅದನ್ನು ಬದಲಿಸಿ, ದರ ಮತ್ತು ಸೇವೆಯ ಗುಣಮಟ್ಟವನ್ನೂ ಮಾನದಂಡವಾಗಿ ನಿಗದಿಪಡಿಸಲಾಗಿದೆ' ಎಂದೂ ಅವರು ಹೇಳಿದ್ದಾರೆ.

'ಅಮಾನತು ಮಾಡಿಲ್ಲ, ಹೆದರಿಸಿದ್ದು ಅಷ್ಟೆ'

ಪ್ರಜಾವಾಣಿ ವಾರ್ತೆ

ಶಿರಾಳಕೊಪ್ಪ: ಹಿಜಾಬ್ ಧರಿಸಿದ್ದ ಕಾರಣಕ್ಕೆ 58 ವಿದ್ಯಾರ್ಥಿಯರನ್ನು ಅಮಾನತು ಪಡಿಸಿಲ್ಲ. ಕೇವಲ ಹೆದರಿಸಿದ್ದೆವು ಅಷ್ಟೇ' ಎಂದು ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಂಶುಪಾಲರು ಹೇಳಿದ್ದಾರೆ.

ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರನ್ನು ಅಮಾನತು ಮಾಡಲಾಗಿದೆ ಎಂಬ ಸುದ್ದಿ ಇದೀಗ ವಿವಾದಕ್ಕೆ ಎಡೆಯಾದ ಹಿಂದೆಯೇ ಈ ಸ್ಪಷ್ಟನೆ ನೀಡಿದ್ದಾರೆ. ಶುಕ್ರವಾರ ಮಾತನಾಡಿದ್ದ ಪ್ರಾಂಶುಪಾಲರು, 'ನಿಮ್ಮನ್ನು ಅಮಾನತು ಮಾಡಲಾಗಿದೆ. ನೀವು ಶನಿವಾರ ಕಾಲೇಜಿಗೆ ಬರುವ ಅವಶ್ಯಕತೆ ಇಲ್ಲ. ಬಂದರೆ, ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದ ವಿಡಿಯೊ ಹರಿದಾಡಿತ್ತು. ಇದಕ್ಕೆ ವಿದ್ಯಾರ್ಥಿಗಳು, ಪೋಷಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಈ ಮಧ್ಯೆ ಶನಿವಾರವೂ ವಿದ್ಯಾರ್ಥಿನಿಯರು ಪ್ರತಿಭಟನೆ ಮುಂದುವರಿಸಿದರು.

'ಈ ಕುರಿತು ಪರಿಶೀಲನೆ ನಡೆಸಿದ್ದೇನೆ. ಅಮಾನತು ಮಾಡಲು ಹಲವು ಕ್ರಮಗಳಿವೆ. ಯಾವುದೇ ವಿದ್ಯಾರ್ಥಿನಿಯರನ್ನೂ ಅಮಾನತು ಮಾಡಿಲ್ಲ' ಎಂದು ಡಿಡಿಪಿಯು ನಾಗರಾಜ್ ಕಾಲಗರ್ ಸ್ಪಷ್ಟಪಡಿಸಿದರು.

ಅನಿರ್ದಿಷ್ಟ ಅವಧಿಯವರೆಗೆ ರಜೆ ಘೋಷಿಸಿದ ಬೆಳಗಾವಿಯ ವಿಜಯಾ ಅರೆ ವೈದ್ಯಕೀಯ ಸಂಸ್ಥೆ

ಹಿಜಾಬ್‌ಗೆ ಪಟ್ಟು, ಬಗೆಹರಿಯದ ಬಿಕ್ಕಟ್ಟು

ಪ್ರಜಾವಾಣಿ ವಾರ್ತೆ



ಬೆಳಗಾವಿ ವಿಜಯಾ ಅರೆವೈದ್ಯಕೀಯ ಸಂಸ್ಥೆಯ ಕಾಲೇಜಿನ ವಿದ್ಯಾರ್ಥಿನಿಯರು ಶನಿವಾರ ಧರಣಿ ನಡೆಸಿದರು

ಬೆಂಗಳೂರು: ಹಿಜಾಬ್ ಧರಿಸಿ ತರಗತಿಗೆ ಬರಲು ಅವಕಾಶ ಕೋರಿ ವಿದ್ಯಾರ್ಥಿನಿಯರು ಶನಿವಾರವೂ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟಿಸಿದ್ದಾರೆ. ಶಿಕ್ಷಕರು, ಆಡಳಿತ ಮಂಡಳಿ ಸದಸ್ಯರ ಜೊತೆ ವಾಗ್ವಾದ ನಡೆಸಿದ್ದು, ಅನಿಶ್ಚಿತತೆ ಮುಂದುವರಿದಿದೆ. ಕೆಲವೆಡೆ ಹಿಜಾಬ್ ಪರ ಮತ್ತು ಅಲ್ಲಾ ಹು ಅಕ್ಬರ್ ಘೋಷಣೆ ಕೂಗಲಾಗಿದೆ. ಹಿಜಾಬ್‌ಗೆ ಅವಕಾಶ ನೀಡದ್ದನ್ನು ಪ್ರತಿಭಟಿಸಿ ಮನೆಗೆ ವಾಪಸಾಗಿದ್ದಾರೆ.

ಪ್ರತಿಭಟನೆ ಹಿನ್ನೆಲೆಯಲ್ಲಿ ಬೆಳಗಾವಿಯ ವಿಜಯಾ ಅರೆವೈದ್ಯಕೀಯ ಸಂಸ್ಥೆಯ ಕಾಲೇಜಿಗೆ ಅನಿರ್ದಿಷ್ಟ ಅವಧಿಯವರೆಗೆ ರಜೆ ನೀಡಲಾಗಿದೆ. ಹಾಸನ ಜಿಲ್ಲೆಯ ಅರಸೀಕೆರೆ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ, 'ಹಿಜಾಬ್‌ಗೆ ಅವಕಾಶ ನೀಡಿ, ಇಲ್ಲ ಟಿ.ಸಿ ಕೊಡಿ' ಎಂದು ವಿದ್ಯಾರ್ಥಿನಿಯರು ಪಟ್ಟುಹಿಡಿದಿದ್ದಾರೆ.

ಬೆಳಗಾವಿ ವರದಿ: ಸಮವಸ್ತ್ರದೊಂದಿಗೆ ಹಿಜಾಬ್ ಧರಿಸಿ ತರಗತಿಗೆ ಹಾಜರಾಗುತ್ತೇವೆ ಎಂದು ವಿದ್ಯಾರ್ಥಿನಿಯರು ಶನಿವಾರವೂ ಪಟ್ಟು ಹಿಡಿದ ಕಾರಣ ಇಲ್ಲಿನ ವಿಜಯಾ ಅರೆವೈದ್ಯಕೀಯ ಸಂಸ್ಥೆಯ ಕಾಲೇಜಿಗೆ ಅನಿರ್ದಿಷ್ಟ ಅವಧಿಯವರೆಗೆ ರಜೆ ಘೋಷಿಸಲಾಗಿದೆ.

ಪ್ರಾಚಾರ್ಯ ಡಾ.ಪ್ರಕಾಶ ಪಾಟೀಲ ಅವರು, 'ಮನವೊಲಿಸಿದರೂ ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ಬರಲು ಒಪ್ಪುತ್ತಿಲ್ಲ. ಉಳಿದ ವಿದ್ಯಾರ್ಥಿಗಳಿಗೂ ತೊಂದರೆ ಆಗಬಾರದು ಎಂದು ರಜೆ ಘೋಷಿಸಿದ್ದೇವೆ. ಜಿಲ್ಲಾಧಿಕಾರಿ ಜೊತೆಗೂ ಚರ್ಚಿಸುತ್ತೇವೆ. ಮುಂದಿನ ಆದೇಶದವರೆಗೆ ಕಾಲೇಜಿಗೆ ರಜೆ ಇರಲಿದೆ. ಬಳಿಕ ಹೆಚ್ಚುವರಿ ತರಗತಿ ನಡೆಸಿ ವಿದ್ಯಾರ್ಥಿಗೆ ತೊಂದರೆಯಾಗದಂತೆ ಕ್ರಮಕೈಗೊಳ್ಳುತ್ತೇವೆ' ಎಂದು ತಿಳಿಸಿದರು.

'ಹಿಜಾಬ್ ಧರಿಸಲು ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿ ಶನಿವಾರವೂ ಧರಣಿ ನಡೆಸಿದ ವಿದ್ಯಾರ್ಥಿಗಳು 'ನಾವು ಬುರ್ಖಾ, ನಕಾಬ್ ತೆಗೆದು ತರಗತಿಗೆ ಹಾಜರಾಗುತ್ತೇವೆ. ಆದರೆ, ಹಿಜಾಬ್ ತೆಗೆಯುವ ಮಾತೇ ಇಲ್ಲ' ಎಂದು ಪಟ್ಟು ಹಿಡಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಕಾಲೇಜು ಆಡಳಿತ ಮಂಡಳಿ ರಜೆ ಘೋಷಿಸಿತು.

ಮಂಗಳೂರು ವರದಿ: ಮಂಗಳೂರಿನಲ್ಲಿ ಪ್ರತಿಭಟನೆ ಮುಂದುವರಿದಿದ್ದು, ನಾಲ್ಕು ದಿನಗಳಿಂದ ನಾವು ಕಾಲೇಜು ಹೊರಗಿದ್ದೇವೆ. ಶನಿವಾರ ಸಹಪಾಠಿ ವಿದ್ಯಾರ್ಥಿನಿ ತಲೆತಿರುಗಿ ಬಿದ್ದಳು. ಶಿಕ್ಷಕರ ಗಮನಕ್ಕೆ ತಂದರೂ ಸ್ಪಂದಿಸಿಲ್ಲ. ಖಾಸಗಿ ವಾಹನದಲ್ಲಿ ಆಸ್ಪತ್ರೆಗೆ ದಾಖಲಿಸಿದ್ದೇವೆ' ಎಂದು ಮಂಗಳೂರಿನ ಕಾವೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಆರೋಪಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 19 ಹಾಗೂ ಸರ್ಕಾರಿ ಪ್ರೌಢಶಾಲೆಯಲ್ಲಿ 25 ವಿದ್ಯಾರ್ಥಿನಿಯರು ಗೈರುಹಾಜರಾದರು. ಎರಡೂ ಕಡೆ ಮೂವರು ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ಹಾಜರಾದರು. ಗದಗ ಜಿಲ್ಲೆಯ ಲಕ್ಷ್ಮೇಶ್ವರದ ಪಿಯು ಕಾಲೇಜು ಸೇರಿದಂತೆ ವಿವಿಧೆಡೆ ಪ್ರತಿಭಟನೆ ನಡೆಯಿತು.

ರಾಮನಗರ ವರದಿ: ಮಾಗಡಿ ತಾಲ್ಲೂಕಿನ ಕುದೂರಿನ ಕರ್ನಾಟಕ ಪಬ್ಲಿಕ್ ಶಾಲೆ ಪಿಯು ವಿದ್ಯಾರ್ಥಿನಿಯರು ಶನಿವಾರವೂ ಪ್ರತಿಭಟಿಸಿದರು.

ಪ್ರವೇಶ ದ್ವಾರದ ಬಳಿ ನಿಂತ ವಿದ್ಯಾರ್ಥಿನಿಯರು, ಹಿಜಾಬ್‌ಗೆ ಅನುಮತಿ ಕೊಟ್ಟರಷ್ಟೇ ಶಾಲೆಯ ಒಳಗೆ ಬರುತ್ತೇವೆ ಇಲ್ಲವಾದರೆ ಹೊರಗಡೆಯೇ ಪಾಠ ಮಾಡಿ ಎಂದು ಒತ್ತಾಯಿಸಿದರು. ತಹಶೀಲ್ದಾರ್ ಹಾಗೂ ಡಿವೈಎಸ್ಪಿ ಅವರ ಮನವೊಲಿಸುವ ಯತ್ನ ಫಲ ನೀಡಲಿಲ್ಲ.

ಬುರ್ಕಾ ಧರಿಸಿಯೇ ಪರೀಕ್ಷೆ ಬರೆದರು

ಯಾದಗಿರಿ (ಸುರಪುರ): ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿನಿಯರು ಶನಿವಾರ ಹಿಜಾಬ್, ಬುರ್ಕಾ ಧರಿಸಿ ಶಾಲೆಗೆ ಬಂದರು. ಡಾ.ಅಂಬೇಡ್ಕರ್ ಕಾಲೇಜಿನಲ್ಲಿಯೂ ಹಿಜಾಬ್ ಧರಿಸಿ ಪಿಯು ಪ್ರಾಯೋಗಿಕ ಪರೀಕ್ಷೆ ಬರೆದರು.

ಹಿಜಾಬ್ ವಿವಾದದಿಂದಾಗಿ ಗುರುವಾರ, ಶುಕ್ರವಾರ ತರಗತಿಗೆ ಹಾಜರಾಗಿರಲಿಲ್ಲ. ಸಮವಸ್ತ್ರ ನಿಗದಿ ಮಾಡದ ನಗರದ ಬಹುತೇಕ ಕಾಲೇಜುಗಳಲ್ಲಿ ಹಿಜಾಬ್‌ಗೆ ಶನಿವಾರ ಅವಕಾಶ ನೀಡಲಾಗಿತ್ತು.

'ಸಮವಸ್ತ್ರ ನಿಗದಿ ಮಾಡದಿರುವುದರಿಂದ ಹಿಜಾಬ್‌ಗೆ ಅವಕಾಶ ನೀಡಲು ಉಪನಿರ್ದೇಶಕ ಚಂದ್ರಕಾಂತ ಹಿಳ್ಳಿ ತಿಳಿಸಿದ್ದರು. ಹೀಗಾಗಿ ಅವಕಾಶ ನೀಡಿದ್ದೇನೆ' ಎಂದು ಪ್ರಾಚಾರ್ಯ ಬಸವರಾಜ ಕೊಡೇಕಲ್ ತಿಳಿಸಿದರು.

ಕಾಂಗ್ರೆಸ್‌ಗೆ ಹಿಜಾಬ್ ಭೂತ ಕಾಡುತ್ತಿದೆ. ವಿವಾದ ಸೃಷ್ಟಿಸಿ ಮಕ್ಕಳ ಮನಸ್ಸಿನಲ್ಲಿ ಬೆಂಕಿ ಹಚ್ಚುವ ಕೆಲಸವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಅವರ ಮನಸ್ಸು ಒಡೆಯುತ್ತಿದ್ದಾರೆ

ಬಿ.ಸಿ.ಪಾಟೀಲ, ಕೃಷಿ ಸಚಿವ

'ಹಿಜಾಬ್ ವಿವಾದ ಸೌಹಾರ್ದವಾಗಿ ಪರಿಹಾರ ಆಗಬೇಕು. ರಾಜ್ಯದ ಎಲ್ಲ ಧಾರ್ಮಿಕ ಮುಖಂಡರನ್ನು ಭೇಟಿ ಮಾಡಿ, ಚರ್ಚಿಸುತ್ತಿದ್ದೇನೆ. ಕಿಡಿಗೇಡಿಗಳ ಸಂಚು ವಿಫಲಗೊಳಿಸಲು ಎಲ್ಲ ಒಟ್ಟಾಗಬೇಕು

ಮುಹಮ್ಮದ್ ಶಾಫಿ ಸಅದಿ
ವಕ್ಫ್ ಮಂಡಳಿ ಅಧ್ಯಕ್ಷ

'ಅವಕಾಶ ನೀಡಿ, ಇಲ್ಲ ಟಿ.ಸಿ. ಕೊಡಿ'

ಮೈಸೂರು: ಹಿಜಾಬ್ ಕುರಿತು ಮೈಸೂರು ಭಾಗದಲ್ಲಿ ಶನಿವಾರವೂ ಪ್ರತಿಭಟನೆ ಮುಂದುವರಿದಿದೆ. 'ಹಿಜಾಬ್‌ಗೆ ಅವಕಾಶ ಕೊಡಿ, ಇಲ್ಲ ಟಿ.ಸಿ ಕೊಡಿ' ಎಂದು ಹಾಸನ ಜಿಲ್ಲೆಯ ಅರಸೀಕೆರೆ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ, ವಿದ್ಯಾರ್ಥಿನಿಯರು ಪಟ್ಟು ಹಿಡಿದಿದ್ದರು.

ಈ ಮಧ್ಯೆ, 'ವಿದ್ಯಾರ್ಥಿನಿಯರ ವಿರುದ್ಧ ದೂರು ನೀಡು ತ್ತೇನೆ, ಬಂಧಿಸಿ' ಎಂದು ಶುಕ್ರ ವಾರ ಪೊಲೀಸರಿಗೆ ಹೇಳಿದ್ದ ಮಡಿಕೇರಿಯ ಜೂನಿಯರ್ ಕಾಲೇಜಿನ ಪ್ರಾಂಶುಪಾಲ ವಿಜಯ್ ಅವರಿಗೆ ಕೊಲೆ ಬೆದರಿಕೆ ಒಡ್ಡಲಾಗಿದೆ.

'ಶುಕ್ರವಾರ ವಿದ್ಯಾರ್ಥಿನಿಯರೊಂದಿಗೆ ನಡೆಸಿದ ವಾಗ್ವಾದದ ವಿಡಿಯೋಗೆ ಪ್ರತಿಕ್ರಿಯಿಸಿರುವ ಮಹಮ್ಮದ್ ತೌಸಿಫ್ ಎಂಬಾತ 'ನೀನು ಹೆಚ್ಚು ದಿನ ಬದು ಕುವುದಿಲ್ಲ' ಎಂದು ಬರೆದು ಅವಾಚ್ಯ ಶಬ್ದಗಳಿಂದ ಬೆದರಿಕೆ ಒಡ್ಡಿದ್ದಾನೆ' ಎಂದು ಅವರು ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.


'ಹೈಕೋರ್ಟ್ ಆದೇಶವನ್ನು ಪಾಲಿಸಿದ್ದಕ್ಕೆ ಕೊಲೆ ಬೆದರಿಕೆ ಯೊಡ್ಡುತ್ತಾರೆ ಎಂದರೆ ಏನರ್ಥ? ವಿದ್ಯಾರ್ಥಿಗಳೊಂದಿಗೆ ಶಿಕ್ಷಕರ ಹಿತಾಸಕ್ತಿಯನ್ನೂ ಕಾಪಾಡಬೇಕಾಗಿದೆ. ಬೆದರಿಕೆಗಳಿಗೆ ಕಿವಿಗೊಡುವುದಿಲ್ಲ' ಎಂದು ವಿಜಯ್ ತಿಳಿಸಿದ್ದಾರೆ.

'ಸಮವಸ್ತ್ರ ಧರಿಸದಿದ್ದಲ್ಲಿ ₹ 200 ದಂಡ ಶುಲ್ಕ ವಿಧಿಸಲಾ ಗುವುದು' ಎಂದು ಹಾಸನದ ಮಹಿಳಾ ಸರ್ಕಾರಿ ಪ್ರಥಮದರ್ಜೆ ಕಾಲೇಜು ವಿದ್ಯಾರ್ಥಿನಿಯರಿಗೆ ಸೂಚಿಸಲಾಗಿದೆ. ಆಡಳಿತ ಮಂಡಳಿ ಸಮವಸ್ತ್ರ ಕಡ್ಡಾಯಗೊಳಿಸಿದೆ' ಎಂದು ಪ್ರಾಂಶುಪಾಲ ಕೆ.ಟಿ. ಕೃಷ್ಣೇಗೌಡ ತಿಳಿಸಿದರು.

ಸರ್ಕಾರಿ ವಿಜ್ಞಾನ (ಸ್ವಾಯತ್ತ) ಕಾಲೇಜಿನ ಘಟಿಕೋತ್ಸವದಲ್ಲಿ ಕೆಲವರು ಹಿಜಾಬ್ ಧರಿಸಿಯೇ ಪದವಿ–ಪದಕ ಸ್ವೀಕರಿಸಿದರು. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯ ಗೌತಮ್ ಪ್ರೌಢ ಶಾಲೆಯಲ್ಲಿ ತರಗತಿ ಮುಗಿಯು ವವರೆಗೂ ಇಬ್ಬರು ವಿದ್ಯಾರ್ಥಿನಿಯರು ಹೊರಗೇ ಕುಳಿತಿದ್ದರು. ಹುಣಸೂರಿನ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರತ್ಯೇಕ ಕೊಠಡಿಯಲ್ಲಿ ಕುಳ್ಳಿರಿಸಲಾಗಿತ್ತು.

ಹೊರಗಿನವರಿಂದ ಎಲ್ಲ ಸಮಸ್ಯೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಹಿಜಾಬ್–ಕೇಸರಿ ಶಾಲು ವಿವಾದಕ್ಕೆ ಸಂಬಂಧಿಸಿದಂತೆ ಹೊರಗಿನವರಿಂದ ಎಲ್ಲ ಸಮಸ್ಯೆಗಳು ಉಂಟಾಗುತ್ತಿವೆ. ಹೊರಗಿನವರ ಅನಗತ್ಯ ಪ್ರವೇಶದಿಂದಾಗಿ ಎಲ್ಲ ಗೊಂದಲಗಳು ಸೃಷ್ಟಿಯಾಗುತ್ತಿವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, 'ಹೈಕೋರ್ಟ್ ಮಧ್ಯಂತರ ಆದೇಶದ ಪರಿಪಾಲನೆ ಎಲ್ಲರ ಕರ್ತವ್ಯ. ಶಾಲಾ ಕಾಲೇಜಿನ ಪ್ರಾಂಶುಪಾಲರು, ಶಿಕ್ಷಕರು, ಪಾಲಕರು ಹಾಗೂ ವಿದ್ಯಾರ್ಥಿಗಳೇ ಈ ವಿಷಯ ಬಗೆಹರಿಸಿಕೊಳ್ಳುತ್ತಾರೆ. ಶಾಲಾ ಕಾಲೇಜುಗಳಲ್ಲಿ ವಾತಾವರಣ ತಿಳಿ ಆಗಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಎಲ್ಲ ಮಾಹಿತಿ ಪಡೆಯುತ್ತಿದ್ದೇನೆ' ಎಂದರು.

'ಹಿಜಾಬ್ ಗಲಾಟೆ ಹಿಂದಿವೆ ಮತಾಂಧ ಶಕ್ತಿಗಳು'

ಕಲಬುರಗಿ: 'ರಾಜ್ಯದ ಕೆಲವೆಡೆ ಹಿಜಾಬ್‌ನ ಗಲಾಟೆ ಮುಂದುವರೆದಿರುವುದರ ಹಿಂದೆ ಮತಾಂಧ ಶಕ್ತಿಗಳು ಸೇರಿಕೊಂಡಿವೆ. ಇಂತಹ ಶಕ್ತಿಗಳನ್ನು ಮಟ್ಟಹಾಕಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮಕ್ಕಳ ಮನಸ್ಸಿನಲ್ಲಿ ಮತೀಯ ಬೀಜ ಬಿತ್ತುವವರನ್ನು ಸುಮ್ಮನೆ ಬಿಡುವುದಿಲ್ಲ. ಶಾಂತಿ ಭಂಗ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಸದ್ಯದ ಸ್ಥಿತಿಯಿಂದ ಮಕ್ಕಳನ್ನು ಹೊರತರಬೇಕಿದೆ. ಶಾಲೆ ಸಂಸ್ಕಾರದ ಕೇಂದ್ರ. ಅಲ್ಲಿ ಧರ್ಮ, ಜಾತಿ ತೋರಿಸುವುದು ಸರಿಯಲ್ಲ. ಎಸ್‌ಡಿಪಿಐ, ಪಿಎಫ್‌ಐನಂಥ ಸಂಘಟನೆಗಳು ಮರುಜೀವ ಪಡೆಯುತ್ತಿದ್ದರೆ ಅವುಗಳನ್ನು ನಿರ್ಜೀವ ಮಾಡುತ್ತೇವೆ' ಎಂದೂ ಹೇಳಿದರು.

'ಉಗ್ರರ ಕೈವಾಡ ಶಂಕೆ'

ಉಡುಪಿ: 'ಉಡುಪಿಯಲ್ಲಿ ಶುರುವಾದ ಹಿಜಾಬ್‌ನ ಸಣ್ಣ ಕಿಡಿ ಪ್ರಪಂಚದಾದ್ಯಂತ ಹಬ್ಬಿರುವುದರ ಹಿಂದೆ ಭಯೋತ್ಪಾದನಾ ಸಂಘಟನೆಗಳ ಹಾಗೂ ವಿದೇಶಿ ದುಷ್ಟಶಕ್ತಿಗಳ ಕೈವಾಡವಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಕೊಕ್ಕರ್ಣೆಯಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, 'ಪಾಕಿಸ್ತಾನ, ಇರಾನ್, ಇರಾಕ್, ಅಫ್ಗಾನಿಸ್ತಾನ ದೇಶಗಳು ಹಿಜಾಬ್ ಪರ ಹೇಳಿಕೆ ಗಮನಿಸಿದರೆ ವಿವಾದದ ಹಿಂದೆ ಉಗ್ರಗಾಮಿಗಳ ಕೈವಾಡವಿರುವುದು ಕಾಣುತ್ತದೆ' ಎಂದರು.

ಠಾಣೆ ಮೆಟ್ಟಿಲೇರಿದ ವಿದ್ಯಾರ್ಥಿನಿಯರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹಿಜಾಬ್ ಧರಿಸಿ ತರಗತಿಗೆ ಪ್ರವೇಶಿಸಲು ನಿರಾಕರಿಸಿದ ಕಾರಣಕ್ಕೆ ಪ್ರಾಂಶುಪಾಲರ ವಿರುದ್ಧವೇ ನಗರದ ಎಸ್‌ಜೆಎಂ ಮಹಿಳಾ ಪದವಿ ಕಾಲೇಜು ವಿದ್ಯಾರ್ಥಿನಿಯರು ಠಾಣೆ ಮೆಟ್ಟಿಲೇರಿದ್ದರು.

ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿಯರ ಮನವೊಲಿಕೆಗೆ ಆಡಳಿತ ಮಂಡಳಿ ಯತ್ನಿಸಿತು. ಬೇಸತ್ತ ಹತ್ತಕ್ಕೂ ಹೆಚ್ಚು ವಿದ್ಯಾರ್ಥಿನಿಯರು ನಗರ ಠಾಣೆಗೆ ಹೋಗಿ ಪ್ರಾಂಶುಪಾಲರು, ಸಿಬ್ಬಂದಿ ವಿರುದ್ಧ ದೂರು ನೀಡಲು ಮುಂದಾದರು.

ಡಿವೈಎಸ್ಪಿ ಪಾಂಡುರಂಗ, ಸಿಪಿಐ ನಯೀಮ್, 'ನ್ಯಾಯಾಲಯದ ಮಧ್ಯಂತರ ಆದೇಶ ಪಾಲಿಸಿ ಕಾಲೇಜಿಗೆ ತೆರಳಿ, ಇಲ್ಲವಾದಲ್ಲಿ ಮನೆಗೆ ಹೋಗಿ' ಎಂದು ವಿದ್ಯಾರ್ಥಿನಿಯರನ್ನು ಕಳುಹಿಸಿದರು.

ಹಿಂದೂ-ಮುಸ್ಲಿಂ ಧಾರ್ಮಿಕ ಸಭೆಯಲ್ಲಿ ಸಾಮರಸ್ಯದ ಸಂದೇಶ

ಧಾರ್ಮಿಕ ಸಾಮರಸ್ಯ: ಧರ್ಮಗುರುಗಳ ಮನವಿ

ಪ್ರಜಾವಾಣಿ ವಾರ್ತೆ



ಸಭೆಯಲ್ಲಿ (ಎಡದಿಂದ) ಮೌಲಾನ ಶಬ್ಬೀರ್ ಹಾಶ್ಮಿಪೀರ್, ಮೌಲಾನ ಮಕ್ಸೂದ್ ಇಮ್ರಾನ್ ಸಾಹೇಬ್, ಶಿವಮೂರ್ತಿ ಮುರುಘಾ ಶರಣರು ಹಾಗೂ ಬಿಷಪ್ ಫಾ.ವೇನ್ ಮೊರಾಸ್ ಅವರು ಪರಸ್ಪರ ಕೈಹಿಡಿದುಕೊಳ್ಳುವ ಮೂಲಕ ಸಾಮರಸ್ಯದ ಸಂದೇಶ ಸಾರಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಹಿಜಾಬ್ ವಿಚಾರವಾಗಿ ರಾಜ್ಯದಲ್ಲಿ ಧಾರ್ಮಿಕ ಸಾಮರಸ್ಯ ಕದಡಿದೆ. ರಾಜ್ಯದಲ್ಲಿ ನಾವೆಲ್ಲರೂ ಪ್ರೀತಿ, ಸಾಮರಸ್ಯದಿಂದ ಬದುಕುತ್ತಿದ್ದೆವು. ಮತ್ತೆ ಮೊದಲಿನಂತೆ ಸಾಮರಸ್ಯ ವಾತಾವರಣ ನಿರ್ಮಾಣವಾಗಬೇಕು. ಎಲ್ಲರೂ ಶಾಂತಿ ಕಾಪಾಡಬೇಕು...'

ಹಿಜಾಬ್ ವಿಚಾರವಾಗಿ ರಾಜ್ಯದಲ್ಲಿ ಭುಗಿಲೆದ್ದಿರುವ ಧಾರ್ಮಿಕ ಸಂಘರ್ಷ ತಡೆಯುವ ಸಂಬಂಧ ಪ್ರೆಸ್‌ಕ್ಲಬ್‌ನಲ್ಲಿ ಶನಿವಾರ ಏರ್ಪಡಿಸಿದ್ದ 'ಹಿಂದೂ–ಮುಸ್ಲಿಂ ಧಾರ್ಮಿಕ ಸಭೆ'ಯಲ್ಲಿ ವಿವಿಧ ಧರ್ಮಗಳ ಗುರುಗಳು ರಾಜ್ಯದ ಜನರಲ್ಲಿ ಮಾಡಿದ ಮನವಿಯಿದು.

'ಹಿಜಾಬ್ ಸಂಘರ್ಷ ಮಾನವ ನಿರ್ಮಿತ ಬಿಕ್ಕಟ್ಟು. ವಸ್ತ್ರ ಸಂಹಿತೆ ವಿಚಾರದಲ್ಲಿ ಕ್ಷೋಭೆ ಸೃಷ್ಟಿಸಲಾಗಿದ್ದು, ಸಮಾಜದ ಸಾಮರಸ್ಯ ಕದಡಲಾಗಿದೆ. ತಿಳಿವಳಿಕೆ ಉಳ್ಳವರು ಇದಕ್ಕೆ ಪರಿಹಾರ ಸೂತ್ರ ಕಂಡುಕೊಂಡು ಪರಿಸ್ಥಿತಿ ತಿಳಿಗೊಳಿಸಬೇಕು. ನಾವೆಲ್ಲರೂ ಶಾಂತಿ, ಸಾಮರಸ್ಯದ ಪರವಾಗಿದ್ದೇವೆ' ಎಂದು ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

'ವಿದ್ಯೆ ಕೆಟ್ಟರೆ ಇಡೀ ಜೀವನ ನಾಶವಾಗುತ್ತದೆ. ವಸ್ತ್ರಸಂಹಿತೆಯಲ್ಲಿ ಸಂಘರ್ಷ ನಡೆದಿದೆ. ಅದರ ತೀವ್ರತೆ ತಗ್ಗಿಸಲು ಸಭೆ ಅನಿವಾರ್ಯ. ಹೈಕೋರ್ಟ್‌ನಲ್ಲೂ ಈ ವಿವಾದದ ಬಗ್ಗೆ ವಿಚಾರಣೆ ನಡೆಯುತ್ತಿದೆ. ಹೈಕೋರ್ಟ್ ಆದೇಶವನ್ನು ನಾವೆಲ್ಲ ಒಪ್ಪಬೇಕು' ಎಂದು ಹೇಳಿದರು.

ಮಾದಾರ ಚನ್ನಯ್ಯ ಗುರುಪೀಠದ ಪೀಠಾಧ್ಯಕ್ಷ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ,'ವಿದ್ಯಾರ್ಥಿಗಳ ನಡುವೆ ಉತ್ತಮ ವಾತಾವರಣವಿತ್ತು. ಈಗ ಪರಸ್ಪರ ಮುಖ ನೋಡದ ಸ್ಥಿತಿ ಇದೆ' ಎಂದು ಅಭಿಪ್ರಾಯಪಟ್ಟರು.

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರು,, 'ಭಾರತ ಹಲವು ಧರ್ಮಗಳ ತೋಟ. ನಮ್ಮ ಧರ್ಮದ ಜೊತೆ ಬೇರೆ ಧರ್ಮಕ್ಕೂ ಮಾನ್ಯತೆ ಕೊಡುತ್ತೇವೆ. ನಮಗೆ ಸಂವಿಧಾನ ಎನ್ನುವ ಧರ್ಮವಿದೆ. ಅದರಡಿ ಎಲ್ಲ ಧರ್ಮಗಳಿಗೆ ಸ್ವಾತಂತ್ರ್ಯವಿದೆ' ಎಂದರು.

ಸುನ್ನಿ ಜಮಾಯಾತ್ ಕರ್ನಾಟಕದ ಅಧ್ಯಕ್ಷ ಮೌಲಾನ ಶಬ್ಬೀರ್ ಹಾಶ್ಮಿಪೀರ್, 'ಹಿಜಾಬ್ ಅನ್ನು ಇತ್ತೀಚೆಗೆ ಧರಿಸುತ್ತಿಲ್ಲ ಎಂಬುದನ್ನು ಎಲ್ಲರೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಧರ್ಮದ ಹೆಸರಿನಲ್ಲಿ ಶಿಕ್ಷಣ ಹಾಳು ಮಾಡುವುದು ಸರಿಯಲ್ಲ' ಎಂದು ಹೇಳಿದರು.

ನಾಸ್ ಫೌಂಡೇಷನ್ ಅಧ್ಯಕ್ಷ ಮೌಲಾನ ಶಬ್ಬೀರ್ ನಖ್ವಿ, ಮಾತನಾಡಿ, 'ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ಅನಗತ್ಯವಾಗಿ ವಿವಾದ ಸೃಷ್ಟಿ ಮಾಡಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಇಸ್ಲಾಂನಲ್ಲಿ ಯಾವುದಕ್ಕೂ ಬಲವಂತ ಇಲ್ಲ. ಮಕ್ಕಳ ಇಷ್ಟಕ್ಕೂ ನಾವು ಅವಕಾಶ ನೀಡುತ್ತೇವೆ. ಇಷ್ಟು ದಿನ ಇಲ್ಲದ ವಿವಾದ ಈಗ ಸೃಷ್ಟಿಯಾಗಿದೆ

ಮೌಲಾನ ಮಕ್ಸೂದ್ ಇಮ್ರಾನ್ ಸಾಹೇಬ್
ಜಾಮಿಯ ಮಸೀದಿ, ಬೆಂಗಳೂರು ಸಿಟಿ ಮಾರ್ಕೆಟ್

'ಪಿಎಫ್‌ಐ, ಎಸ್‌ಡಿಪಿಐ ಸಂಘಟನೆ ನಿಷೇಧಿಸಿ'

ಬಾಗಲಕೋಟೆ: 'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮತ್ತು ಎಸ್‌ಡಿಪಿಐ ಸಂಘಟನೆಗಳು ದೇಶದ್ರೋಹಿ ಚಟುವಟಿಕೆಗಳನ್ನು ನಡೆಸುತ್ತಿದ್ದು ಕೂಡಲೇ ಈ ಸಂಘಟನೆಗಳನ್ನು ನಿಷೇಧಿಸಬೇಕು' ಎಂದು ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಶಾಸಕರೇ ದೇಶದ್ರೋಹಿ ಸಂಘಟನೆಗಳನ್ನು ನಿಷೇಧಿಸಲು ಆಗ್ರಹಪಡಿಸುತ್ತಿದ್ದಾರೆ. ರಾಜ್ಯದಲ್ಲಿ ನಡೆದ ಹಲವು ದೊಂಬಿ, ಕೊಲೆ ಪ್ರಕರಣಗಳ ಜೊತೆ ಪಿಎಫ್‌ಐ ನಂಟಿದೆ. ಇವುಗಳನ್ನು ನಿಷೇಧಿಸಲು ಸರ್ಕಾರ ಮೀನಮೇಷ ಎಣಿಸುತ್ತಿರುವುದು ಏಕೆ ? ಎಂದು ಪ್ರಶ್ನಿಸಿದರು.

ನಾಲಿಗೆ ಸೀಳ್ತೀವಿ: 'ಕೆಲವರು ಕುಂಕುಮ, ಭಸ್ಮ, ವಿಭೂತಿ, ಬಳೆಗಳ ಬಗ್ಗೆ ನಿರ್ಲಜ್ಯವಾಗಿ ಮಾತನಾಡುತ್ತಿದ್ದಾರೆ. ಕುಂಕುಮ, ವಿಭೂತಿ, ಭಸ್ಮ ಹಚ್ಚಿಕೊಳ್ಳುವುದರ ಹಿಂದೆ ವೈಜ್ಞಾನಿಕ ಕಾರಣಗಳಿವೆ. ಇದು ಫ್ಯಾಶನ್ ಶೋ ಅಲ್ಲ. ವೈಜ್ಞಾನಿಕ ಆಚರಣೆಯಿದು. ಇದು ಈ ದೇಶದ ಸಂಸ್ಕೃತಿ, ಸಂಪ್ರದಾಯ. ಬಳೆ ಕುಂಕುಮ, ಮಠ ಮಂದಿರ ಬಗ್ಗೆ ಮಾತನಾಡಿದರೆ ನಾಲಿಗೆ ಸೀಳ್ತೀವಿ. ಹುಷಾರ್ ಆಗಿರಿ' ಎಂದು ಎಚ್ಚರಿಕೆ ನೀಡಿದರು.



ಮುಧೋಳದ ರನ್ನ ಕ್ರೀಡಾಂಗಣದಲ್ಲಿ ಬೇಡ ಜಂಗಮ ಸಮಾಜದ ತಾಲ್ಲೂಕು ಘಟಕದ ವತಿಯಿಂದ ಶನಿವಾರ ಹಮ್ಮಿಕೊಂಡ ಬೇಡಜಂಗಮ ಬೃಹತ್ ಸಮಾವೇಶದಲ್ಲಿ ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು

ಮುಧೋಳ: ಬೇಡಜಂಗಮ ಸಮಾಜದ ಸಮಾವೇಶ

ಎಸ್‌.ಸಿ ಪ್ರಮಾಣಪತ್ರ ನೀಡದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ:ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಮುಧೋಳ (ಬಾಗಲಕೋಟೆ): 'ಬೇಡ ಜಂಗಮ ಸಮುದಾಯದವರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡಬೇಕು. ಇಲ್ಲದಿದ್ದರೆ, ತಿಂಗಳೊಳಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಬಿ.ಡಿ. ಹಿರೇಮಠ ಎಚ್ಚರಿಕೆ ನೀಡಿದರು.

ಇಲ್ಲಿನ ರನ್ನ ಕ್ರೀಡಾಂಗಣದಲ್ಲಿ ಬೇಡ ಜಂಗಮ ಸಮಾಜದ ತಾಲ್ಲೂಕು ಘಟಕದ ವತಿಯಿಂದ ಶನಿವಾರ ಹಮ್ಮಿಕೊಂಡ ಬೇಡಜಂಗಮ ಸಮಾವೇಶದಲ್ಲಿ ಅವರು ಮಾತನಾಡಿದರು.

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ಕಾಲಕಾಲಕ್ಕೆ ಹೊರಡಿಸಿರುವ ತೀರ್ಪುಗಳ ಆಧಾರದಲ್ಲಿ ಬೇಡ ಜಂಗಮ ಸಮುದಾಯಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವ, ಪರಿಶೀಲಿಸುವ ಮತ್ತು ಅನುಮೋದಿಸುವ ಬಗ್ಗೆ ಸರ್ಕಾರದಿಂದ ಮಾರ್ಗಸೂಚಿ ಪ್ರಕಟಿಸಬೇಕು. ಈ ಕುರಿತು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ನಾಡಿನ ವಿವಿಧ ಭಾಗಗಳ ಸ್ವಾಮೀಜಿಗಳು ಭಾಗವಹಿಸಿದ್ದರು.

ಸಚಿವ ಈಶ್ವರಪ್ಪ ವಜಾಕ್ಕೆ ಕಾಂಗ್ರೆಸ್ ಪಟ್ಟು • ತಾಲ್ಲೂಕು ಮಟ್ಟದಲ್ಲಿ ಪ್ರತಿಭಟನೆ ನಾಳೆ

ಮುಂದುವರಿದ 'ಕೈ' ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ವಿಧಾನಮಂಡಲದ ಉಭಯ ಸದನಗಳಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿರುವ ಕಾಂಗ್ರೆಸ್, ಪಟ್ಟು ಸಡಿಲಿಸದಿರಲು ನಿರ್ಧರಿಸಿದೆ. ಅಲ್ಲದೆ, ತಾಲ್ಲೂಕು ಕೇಂದ್ರಗಳಲ್ಲಿ ಸೋಮವಾರ (ಫೆ. 21) ಪ್ರತಿಭಟನೆ ನಡೆಸುವಂತೆ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದೆ.

ಕಾಂಗ್ರೆಸ್ ಹಟ ಹಿಡಿದಿರುವುದರಿಂದ ಸೋಮವಾರವು ವಿಧಾನ ಮಂಡಲದ ಉಭಯ ಸದನಗಳಲ್ಲಿ ಗದ್ದಲ ಮುಂದುವರಿಯುವ ಸಾಧ್ಯತೆ ಇದೆ. ಈ ಮಧ್ಯೆಯೇ ಮಸೂದೆಗಳಿಗೆ ಅಂಗೀಕಾರ ಪಡೆದು ಸೋಮವಾರವೇ ಅಧಿವೇಶನ ಮುಕ್ತಾಯಗೊಳಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ.

ಧರಣಿ ನಿರತ ಕಾಂಗ್ರೆಸ್ ಶಾಸಕರು, ಶನಿವಾರವು ಸಚಿವ ಈಶ್ವರಪ್ಪ ಮತ್ತು ರಾಜ್ಯ ಸರ್ಕಾರ ವಿರುದ್ಧ ವಾಗ್ದಾಳಿ ನಡೆಸಿದರು. 'ಈಶ್ವರಪ್ಪ ಅವರನ್ನು ವಜಾಗೊಳಿಸುವರೆಗೆ ಯಾವುದೇ ಕಾರಣಕ್ಕೂ ಕಲಾಪ ನಡೆಯಲು ಅವಕಾಶ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ರಾಷ್ಟ್ರಧ್ವಜ ವಿಷಯ ದೇಶದ 130 ಕೋಟಿ ಜನರ ಭಾವನೆ ಮತ್ತು ಸ್ವಾಭಿಮಾನದ ವಿಚಾರ. ಸಂವಿಧಾನಕ್ಕೆ ಗೌರವ ಕೊಡದೆಯೇ ಈಶ್ವರಪ್ಪನವರು ಮಂತ್ರಿಯಾಗಿ ಹೇಗೆ ಇರುತ್ತಾರೆ' ಎಂದು ಪ್ರಶ್ನಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಇದು ಆರೆಸ್ಸೆಸ್‌ನವರ ಕುತಂತ್ರ. ಆರೆಸ್ಸೆಸ್‌ನವರಿಗೆ ತ್ರಿವರ್ಣ ಧ್ವಜದ ಮೇಲೆ ಗೌರವವಿಲ್ಲ. ಈಶ್ವರಪ್ಪ ಪೆದ್ದ, ಹೇಳಿ ನೀಡಿ ಬಿಟ್ಟಿದ್ದಾನೆ' ಎಂದರು.



ಅಹೋರಾತ್ರಿ ಧರಣಿ ನಡೆಸುತ್ತಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಶಾಸಕರ ಜತೆ ಶನಿವಾರ ಬೆಳಿಗ್ಗೆ ವಿಧಾನಸೌಧದ ಆವರಣದಲ್ಲಿ ವಾಯುವಿಹಾರ ನಡೆಸಿದರು. ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಎಸ್ ರವಿ ಇದ್ದರು —ಪ್ರಜಾವಾಣಿ ಚಿತ್ರ



ಕಾಂಗ್ರೆಸ್ ಪಕ್ಷದವರು ಆಡಳಿತ ಪಕ್ಷವಾಗಿಯಂತೂ ಅಲ್ಲ, ವಿರೋಧ ಪಕ್ಷವಾಗಿರಲು ಕೂಡಾ ನೈತಿಕತೆ ಕಳೆದುಕೊಂಡಿದೆ

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ



ಅಧಿವೇಶನ ನಡೆಯುವವರೆಗೂ ಧರಣಿ ಮುಂದುವರಿಸುತ್ತೇವೆ, ಅನಿರ್ದಿಷ್ಟಾವಧಿಗೆ ಮುಂದೂಡಿದರೆ ನಾವು ಜನರ ಬಳಿ ಹೋಗುತ್ತೇವೆ

ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

'ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ಸೋಮವಾರ (ಫೆ. 21) ರಾಜ್ಯದಾದ್ಯಂತ ಎಲ್ಲ ತಾಲ್ಲೂಕುಗಳಲ್ಲಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಲಿದ್ದಾರೆ. ಬಳಿಕ ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಿದ್ದಾರೆ. ಬಳಿಕ ಹಳ್ಳಿ ಹಳ್ಳಿಗಳಲ್ಲೂ ಹೋರಾಟ ಹಮ್ಮಿಕೊಳ್ಳುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ರಾಷ್ಟ್ರಧ್ವಜದ ಕುರಿತು ಈಶ್ವರಪ್ಪ ನೀಡಿದ್ದ ಹೇಳಿಕೆಯನ್ನು ಜನತಾ ನ್ಯಾಯಾಲಯದ ಮುಂದೆ ತೆಗೆದುಕೊಂಡು ಹೋಗುತ್ತೇವೆ. ಈಶ್ವರಪ್ಪ ನಮ್ಮ ಮೇಲೆ ಮೊಕದ್ದಮೆ ದಾಖಲಿಸಲಿ' ಎಂದೂ ಸವಾಲು ಹಾಕಿದರು.

ಬಿಜೆಪಿಯವರಷ್ಟು ಲುಚ್ಚಾಗಳು ಯಾರೂ ಇಲ್ಲ: 'ಬಿಜೆಪಿಯವರಷ್ಟು ಲುಚ್ಚಾಗಳು ಯಾರೂ ಇಲ್ಲ. ಸಂವಿಧಾನ ಬುಡಮೇಲು ಮಾಡುವುದು, ರಾಷ್ಟ್ರಧ್ವಜ ಬದಲಿಸುವುದು ಅವರ ಗುಪ್ತಸೂಚಿ' ಎಂದು ಮೇಲ್ಮನೆ ವಿರೋಧಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ವಾಗ್ದಾಳಿ ನಡೆಸಿದರು.

'ಈಶ್ವರಪ್ಪ ಹರಕುಬಾಯಿ ದಾಸ. ಇಂಥವರಿಗೆಲ್ಲ ಇಡೀ ದೇಶದಲ್ಲಿ ಹರಕುಬಾಯಿ ದಾಸರೇ ಇದ್ದಾರೆ. ಹಾವಿನಪುರದವರು (ನಾಗಪುರ) ಸಾಕಿರುವುದೆಲ್ಲ ಇಂಥ ಹರಕುಬಾಯಿಯವರನ್ನು. ಅದು ಬಚ್ಚಲು ಬಾಯಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನನ್ನ ಬಗ್ಗೆ ಏಕವಚನದಲ್ಲಿ ಮಾತನಾಡಿದ್ದಾರೆ. ಇದೆಲ್ಲ ಆರೆಸ್ಸೆಸ್ ಸಂಸ್ಕೃತಿ. ಹೀನವಾದ, ಹೇಯವಾದ ಸಂಸ್ಕೃತಿ. ಈಶ್ವರಪ್ಪ ಅವರ ಬೆನ್ನಿಗೆ ಮುಖ್ಯಮಂತ್ರಿ ನಿಂತಿರುವುದು ದುರಂತ' ಎಂದೂ ಹೇಳಿದರು.

'ರಾಷ್ಟ್ರಧ್ವಜದ ಮೇಲೆ ಪ್ರೀತಿ ಇದ್ದರೆ ವಜಾ ಮಾಡಲಿ'




ಪ್ರಿಯಾಂಕ್ ಖರ್ಗೆ

'ಬಿಜೆಪಿಯವರಿಗೆ ರಾಷ್ಟ್ರಧ್ವಜದ ಮೇಲೆ ಪ್ರೀತಿ, ಗೌರವ ಇದ್ದರೆ ಮೊದಲು ಸಚಿವ ಈಶ್ವರಪ್ಪ ಅವರನ್ನು ವಜಾ ಮಾಡಬೇಕು. ಈಶ್ವರಪ್ಪನವರ ರಾಜೀನಾಮೆ ತೆಗೆದುಕೊಳ್ಳಲು ಯಾಕೆ ಆಗುತ್ತಿಲ್ಲ? ಮುಖ್ಯಮಂತ್ರಿ ಯಾಕೆ ಅಸಹಾಯಕರಾಗಿದ್ದಾರೊ ಗೊತ್ತಿಲ್ಲ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

ಪಕ್ಷದ ಶಾಸಕರಾದ ಶರತ್ ಬಚ್ಚೇಗೌಡ ಮತ್ತು ಅನಿಲ್ ಚಿಕ್ಕಮಾದು ಜೊತೆ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಬಿಜೆಪಿಯವರದ್ದು ಬೋಗಸ್ ದೇಶಭಕ್ತಿ' ಎಂದರು.

'ರಾಷ್ಟ್ರ ಧ್ವಜ ಬದಲಾಗಲಿದೆ ಎಂದು ಹೇಳುವುದು ಸಂವಿಧಾನ ವಿರೋಧಿ ಅಲ್ಲವೇ? ಆರೆಸ್ಸೆಸ್‌ನವರು ರಾಷ್ಟ್ರೀಯ ಹಿತಾಸಕ್ತಿ ವಿರುದ್ಧ ಕೆಲಸ ಮಾಡುತ್ತಿದ್ದಾರೆ' ಎಂದರು.

ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲಿ– ಖರ್ಗೆ



ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: 'ತ್ರಿವರ್ಣ ಧ್ವಜವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅಂಥ ಧ್ವಜಕ್ಕೆ ಅವಮಾನ ಮಾಡುವ ರೀತಿಯಲ್ಲಿ ಈಶ್ವರಪ್ಪ ಮಾತನಾಡಿದ್ದಾರೆ. ರಾಷ್ಟ್ರಧ್ವಜದ ಬಗ್ಗೆ ಒಬ್ಬ ಮಂತ್ರಿ ಈ ರೀತಿ ಮಾತನಾಡಿರುವುದು ಸರಿಯಲ್ಲ. ಈ ರೀತಿಯ ಹೇಳಿಕೆ ಕೊಡುವಂತೆ ಆರೆಸ್ಸೆಸ್‌ನವರು ಮಾಡಿರಬಹುದು' ಎಂದು ರಾಜ್ಯಸಭೆ ಕಾಂಗ್ರೆಸ್ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಧರಣಿ ನಿರತ ಪಕ್ಷದ ಶಾಸಕರನ್ನು ವಿಧಾನಸಭೆಯ ಮೊಗಸಾಲೆಯಲ್ಲಿ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನೈತಿಕ ಹೊಣೆ ಹೊತ್ತು ಈಶ್ವರಪ್ಪ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

'ಬಾಯಿ, ನಾಲಗೆ ಇದೆ ಎಂದು ಯುವಕರಲ್ಲಿ ವಿಷಬೀಜ ಬಿತ್ತುವ ಕೆಲಸವನ್ನು ಯಾರೂ ಮಾಡಬಾರದು' ಎಂದರು.

ಸುದ್ದಿ 2 ನಿಮಿಷ


'ಅಧಿಕಾರದ ಆಸೆಗೆ ಮತ್ತೆ ಕಾಂಗ್ರೆಸ್ ಪಾದಯಾತ್ರೆ'

ರಾಮನಗರ: ಕಾಂಗ್ರೆಸ್‌ನವರು ಕೇವಲ ಅಧಿಕಾರ ಹಿಡಿಯುವ ಆಸೆಯಿಂದ ಮತ್ತೆ ಮೇಕೆದಾಟು ಪಾದಯಾತ್ರೆ ಆರಂಭಿಸುತ್ತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಶನಿವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚನ್ನಪಟ್ಟಣದ ತಗಚಗೆರೆಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಇನ್ನೂ ಹತ್ತು ಪಾದಯಾತ್ರೆ ಮಾಡಲಿ. ಜನರಿಗೆ ಅನುಕೂಲ ಆಗುವುದಾದರೆ ನಾನು ಬರುತ್ತೇನೆ. ಆದರೆ ಪಾದಯಾತ್ರೆಯಿಂದ ಅಣೆಕಟ್ಟೆ ನಿರ್ಮಾಣ ಅಸಾಧ್ಯ. ಕಾನೂನು ಹೋರಾಟ ಮಾಡಬೇಕು' ಎಂದರು.

ದೇಶಕ್ಕಾಗಿ ಹೋರಾಟ ಮಾಡಿದ ಕಾಂಗ್ರೆಸ್ ಎಂದೋ ಸತ್ತುಹೋಗಿದೆ. ಈಗ ಇರುವ ಕಾಂಗ್ರೆಸ್ ಬೇರೆ. ಕಾಂಗ್ರೆಸ್ ಅನ್ನು ಮುಚ್ಚಬೇಕು, ಮತ್ತೆ ಬಳಕೆ ಮಾಡಬಾರದು ಎಂದು ಮಹಾತ್ಮ ಗಾಂಧಿ ಅವರೇ ಹಿಂದೆ ಹೇಳಿದ್ದರು ಎಂದು ಹೇಳಿದರು.

ಹಗುರವಾಗಿ ಮಾತನಾಡಿಲ್ಲ: 'ಮಂಡ್ಯದಲ್ಲಿ ಮಾತನಾಡುವಾಗ ಹಿಜಾಬ್–ಗಿಜಾಬ್ ಗೊತ್ತಿಲ್ಲ. ಅದಕ್ಕಿಂತ ಮಕ್ಕಳ ಭವಿಷ್ಯ ಮುಖ್ಯ ಎಂದಿದ್ದೆ. ನಾನು ಮಾತಿನ ಭರದಲ್ಲಿ ಹೀಗೆ ಹೇಳಿದ್ದೇನೆ ಹೊರತು ಯಾವುದೇ ಸಮಾಜಕ್ಕೆ, ಧರ್ಮಕ್ಕೆ ಅಪಚಾರ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.



ಬಿಜೆಪಿ ಸೇರುವ ನಿರ್ಧಾರ ಮಾಡಿಲ್ಲ: ಸಭಾಪತಿ ಬಸವರಾಜ ಹೊರಟ್ಟಿ

ಹುಬ್ಬಳ್ಳಿ: 'ಬಿಜೆಪಿ ಸೇರುವ ಕುರಿತು ಈವರೆಗೂ ನಿರ್ಧಾರ ಮಾಡಿಲ್ಲ. ಮೇ ತಿಂಗಳವರೆಗೂ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶನಿವಾರ ಹೇಳಿದರು.

'ವಿಧಾನಪರಿಷತ್ ಚುನಾವಣೆಗೆ ಬಸವರಾಜ ಹೊರಟ್ಟಿ ಬಿಜೆಪಿ ಅಭ್ಯರ್ಥಿ ಆದರೂ ಆಗಬಹುದು' ಎನ್ನುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆಗೆ ಶನಿವಾರ ಮಾಧ್ಯಮಗಳಿಗೆ ಅವರು ಪ್ರತಿಕ್ರಿಯಿಸಿದರು.

'ಜೋಶಿ ಅವರಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ನನ್ನ ಮೇಲೆ ಅವರಿಗೆ ಪ್ರೀತಿ ಜಾಸ್ತಿ, ಅದಕ್ಕೆ ಅಷ್ಟು ಕಾಳಜಿ ಮಾಡುತ್ತಾರೆ' ಎಂದು ಅವರು ಪ್ರತಿಕ್ರಿಯಿಸಿದರು.

'ಡಿಕೆಶಿ– ಸಿದ್ದರಾಮಯ್ಯ ತಿಕ್ಕಾಟದಿಂದ ಧರಣಿ'

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನಸಭೆಯಲ್ಲಿ ಜನರ ಸಮಸ್ಯೆ ಬಗ್ಗೆ ಚರ್ಚಿಸುವ ಬದಲು ಧರಣಿ ನಡೆಸುತ್ತಿದ್ದಾರೆ. ಡಿಕೆಶಿ ಹಿಜಾಬ್ ಪರ ಇಲ್ಲ. ಸಿದ್ದರಾಮಯ್ಯ ಕೇಸರಿ ಪರ ಇಲ್ಲ. ಅವರಿಬ್ಬರ ತಿಕ್ಕಾಟದಲ್ಲಿ ಧರಣಿ ನಡೆಯುತ್ತಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಶನಿವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪ ಹೇಳಿಕೆ ಅವರಿಗೆ ಕೇವಲ ನೆಪ. ಕಾಂಗ್ರೆಸ್‌ಗೆ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇಲ್ಲ. ಹಿಜಾಬ್ ವಿರುದ್ಧ ಮಾತನಾಡಿದರೆ ವೋಟ್ ಹೋಗುತ್ತದೆ ಎನ್ನುವ ಭಯ. ಅಧಿವೇಶನಕ್ಕೆ ಕೋಟ್ಯಂತರ ರೂಪಾಯಿ ಖರ್ಚಿದೆ. ಅದು ಜನತೆಯ ತೆರಿಗೆ ಹಣ. ಕಾಂಗ್ರೆಸ್‌ನವರು ಇಲ್ಲಿ ನಿದ್ದೆ ಮಾಡುವ ಮೂಲಕ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದರು.

'ಕಾಂಗ್ರೆಸ್‌ನವರಿಗೆ ಬುದ್ಧಿ, ಮಾನ ಮರ್ಯಾದೆ ಇದ್ದರೆ ಜನರ ವಿಷಯವಾಗಿ ಧ್ವನಿ ಎತ್ತಲಿ. ಅದನ್ನು ಬಿಟ್ಟು ಡಿ.ಕೆ. ಶಿವಕುಮಾರ್ ಅವರು ಈಶ್ವರಪ್ಪ ಮೇಲೆ ತೋಳು ಏರಿಸೋದು. ಹೊಡೆದಾಡೋದು, ಇದಕ್ಕೆ ವಿಧಾನಸಭೆಗೆ ಬರುವುದೇ? ಕೆಂಗಲ್ ಹನುಮಂತಯ್ಯ ಬಡವರಿಗಾಗಿ ವಿಧಾನಸೌಧ ಕಟ್ಟಿರುವುದು, ಕುಸ್ತಿ ಆಡೋಕೆ ಅಲ್ಲ ಎಂದರು.

ಡಿಕೆಶಿ ಗೂಂಡಾ, ಸಿದ್ದರಾಮಯ್ಯ ಜಾತಿವಾದಿ: ಈಶ್ವರಪ್ಪ

ಶಿವಮೊಗ್ಗ: 'ಪಕ್ಷದ ಕಾರ್ಯಕರ್ತರು ಸರಿಯಾಗಿ ಕೆಲಸ ಮಾಡಿದರೆ ಗೂಂಡಾ ಡಿ.ಕೆ.ಶಿವಕುಮಾರ್, ಜಾತಿವಾದಿ ಸಿದ್ದರಾಮಯ್ಯ ಬಂದರೂ ಬಿಜೆಪಿ ಸೋಲಿಸಲು ಸಾಧ್ಯವಿಲ್ಲ' ಎಂದು ಸಚಿವ ಕೆ.ಎಸ್. ಈಶ್ವರಪ್ಪ ವಾಗ್ದಾಳಿ ನಡೆಸಿದರು.

ಶನಿವಾರ ಭದ್ರಾವತಿ ಕ್ಷೇತ್ರದ ಜೆಡಿಎಸ್ ಮುಖಂಡರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು, 'ಜಾತಿ ಕುಲದ ಲೆಕ್ಕಾಚಾರ ಬದಿಗಿಟ್ಟು ಕೆಲಸ ಮಾಡಬೇಕು. ಎಲ್ಲರೂ ಹಿಂದೂಗಳು, ಹಿಂದುತ್ವ ಗೆಲ್ಲಿಸುತ್ತೇವೆ ಎನ್ನಬೇಕು. ಆಗ ಜನರೇ ಗೂಂಡಾ, ಜಾತಿವಾದಿಗಳನ್ನು ಪಕ್ಕಕ್ಕೆ ಸರಿಸುತ್ತಾರೆ' ಎಂದು ಕರೆ ನೀಡಿದರು.

'ಜನರಿಗೆ ಅನ್ಯಾಯ ಮಾಡುತ್ತಿದ್ದೇವೆ'

ಹುಬ್ಬಳ್ಳಿ: 'ಸಚಿವ ಈಶ್ವರಪ್ಪ ರಾಜೀನಾಮೆ ನೀಡಲ್ಲ ಅಂತಾರೆ, ಕಾಂಗ್ರೆಸ್ ರಾಜೀನಾಮೆ ಪಡೆಯದೇ ಬಿಡಲ್ಲ ಅನ್ನುತ್ತಿದೆ. ಸದನದಲ್ಲಿ ನಡೆಯುತ್ತಿರುವ ಬಿಜೆಪಿ– ಕಾಂಗ್ರೆಸ್ ಗದ್ದಲದಿಂದಾಗಿ ಸದನ ಕಲಾಪಗಳು ನಡೆಯುತ್ತಿಲ್ಲ. ನಾವು ಜನರಿಗೆ ಅನ್ಯಾಯ ಮಾಡುತ್ತಿದ್ದೇವೆ. ನಾನು ಸಭಾಪತಿಯಾಗಿ ಅಲ್ಲ, ಸಾಮಾನ್ಯ ಪ್ರಜೆಯಾಗಿ ಮಾತನಾಡುತ್ತಿದ್ದೇನೆ. ನಾವು ಜನರಿಗೆ ಮೋಸ, ಅವಮಾನ, ಕೆಟ್ಟದ್ದು ಮಾಡುತ್ತಿದ್ದೇವೆ' ಎಂದು ಹೇಳಿದರು.

'ನಾನೂ ಸಹ ವಿರೋಧ ಪಕ್ಷದವರ ಮನವೊಲಿಸಲು ಸಾಕಷ್ಟು ಯತ್ನಿಸಿದ್ದೇನೆ. ಇವರ ಗದ್ದಲದಿಂದ ಬಹಳಷ್ಟು ನೋವಾಗಿದೆ. ಸದನದಲ್ಲಿ ಹೀಗೆ ಮಾಡುತ್ತಿರುವುದರಿಂದ ಸಾರ್ವಜನಿಕರ ಕೋಟ್ಯಂತರ ರೂಪಾಯಿ ಹಾಳಾಗುತ್ತಿದೆ' ಎಂದರು.

ಪ್ರತಿಭಟನೆಗಳು ಸಹಜ; ಅದೇ ಪರಿಹಾರವಲ್ಲ –ವಿಶ್ವನಾಥ್

ಮೈಸೂರು: 'ರಾಷ್ಟ್ರಧ್ವಜ ಕುರಿತಂತೆ ಸಚಿವ ಕೆ.ಎಸ್.ಈಶ್ವರಪ್ಪ ನಿಜಕ್ಕೂ ಏನು ಮಾತನಾಡಿದ್ದಾರೆ, ಯಾವ ವಿಚಾರವನ್ನು ಉಲ್ಲೇಖಿಸಿ ಹೇಳಿದ್ದಾರೆ ಎಂಬುದನ್ನು ಮಾಧ್ಯಮಗಳು ಸ್ಪಷ್ಟವಾಗಿ ತಿಳಿಸಬೇಕು' ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರತಿಪಾದಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪ ಏನು ಮಾತನಾಡಿದ್ದಾರೆ ಎಂದು ಜನರಿಗೆ ಗೊತ್ತಿಲ್ಲ. ಆ ರೀತಿ ಹೇಳಿದ್ದರೆ ಅದು ತಪ್ಪು. ಆದರೆ ಚುನಾವಣೆ ಗಮನದಲ್ಲಿರಿಸಿಕೊಂಡು, ಕಾಂಗ್ರೆಸ್ ಅದೇ ವಿಚಾರದ ಅಹೋರಾತ್ರಿ ಧರಣಿ ನಡೆಸುವುದು ಸರಿಯಲ್ಲ' ಎಂದರು.

'ಜನಪ್ರತಿನಿಧಿಗಳು ಜವಾಬ್ದಾರಿಯಿಂದ ವರ್ತಿಸಬೇಕು. ಇಂತಹ ಹಲವು ಘಟನೆಗಳು ಸದನದಲ್ಲಿ ನಡೆದುಹೋಗಿವೆ. ಜನತಂತ್ರ ವ್ಯವಸ್ಥೆಯಲ್ಲಿ ಪ್ರತಿಭಟನೆಗಳು ಸಹಜ. ಆದರೆ ಅದೇ ಉದ್ಯೋಗವೂ ಅಲ್ಲ, ಪರಿಹಾರವೂ ಅಲ್ಲ' ಎಂದು ಅಭಿಪ್ರಾಯಪಟ್ಟರು.

'ಅಹೋರಾತ್ರಿ ಧರಣಿ ಯಾವ ಸಂಸ್ಕೃತಿ' (ದಾವಣಗೆರೆ ವರದಿ): 'ವಿಧಾನಸಭೆಗೆ ಹೋಗುವುದು ಗಲಾಟೆ ಮಾಡಲು ಅಲ್ಲ; ಅಭಿವೃದ್ಧಿ ಚರ್ಚಿಸಲು. ಅದನ್ನು ಬಿಟ್ಟು ಕಲಾಪಕ್ಕೆ ಅಡಚಣೆ ಮಾಡುವುದು, ಅಹೋರಾತ್ರಿ ಧರಣಿ ಕೂರುವುದು ಯಾವ ಸಂಸ್ಕೃತಿ' ಎಂದು ಸಚಿವ ಬಿ.ಸಿ.ಪಾಟೀಲ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಷ್ಟ್ರಧ್ವಜ ತೆಗೆದು ಕೇಸರಿ ಧ್ವಜ ಹಾರಿಸುವುದಾಗಿ ಕೆ.ಎಸ್.ಈಶ್ವರಪ್ಪ ಅವರು ಹೇಳಿಯೇ ಇಲ್ಲ. ಅದನ್ನು ಅವರೇ ಸ್ಪಷ್ಟಪಡಿಸಿದ್ದಾರೆ' ಎಂದು ಪ್ರತಿಪಾದಿಸಿದರು.

ಮರಾಠಾ ಅಭಿವೃದ್ಧಿ ನಿಗಮ: ಮುಳೆ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಸವಕಲ್ಯಾಣ ಕ್ಷೇತ್ರದ ಮಾಜಿ ಶಾಸಕ ಮಾರುತಿರಾವ್ ಗೋವಿಂದರಾವ್ ಮುಳೆ (ಎಂ.ಜಿ. ಎಂ. ಜಿ. ಮುಳೆ ಮುಳೆ) ಅವರನ್ನು ಮರಾಠಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಛತ್ರಪತಿ ಶಿವಾಜಿ ಮಹರಾಜ್ ಜಯಂತ್ಯುತ್ಸವದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಕ್ಷತ್ರಿಯ ಮರಾಠಾ ಪರಿಷತ್ ಅಧ್ಯಕ್ಷರಾಗಿರುವ ಎಂ.ಜಿ. ಮುಳೆ ಅವರನ್ನು ಮರಾಠಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಿಸಿರುವುದಾಗಿ ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ): ಜನ್ಮದಿನಕ್ಕೆ ಹೊಸ ಬಟ್ಟೆ ಕೊಡಿಸಲಿಲ್ಲ ಎಂದು ಮುನಿಸಿಕೊಂಡು ಮನೆ ಬಿಟ್ಟು ಬಂದಿದ್ದ 14 ವರ್ಷದ ಬಾಲಕಿಯನ್ನು ನಾಲ್ವರು ಯುವಕರ ಗುಂಪೊಂದು ಶುಕ್ರವಾರ ರಾತ್ರಿ ಗಡಿ ಭಾಗ ತನಿಮೊಡಗು ಗ್ರಾಮದ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದೆ.

ಬಾಲಕಿ ಜೋರಾಗಿ ಕಿರುಚಿಕೊಂಡ ಸದ್ದು ಕೇಳಿದ ಸ್ಥಳೀಯರು ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಪೊಲೀಸರು ಬಾಲಕಿಯನ್ನು ರಕ್ಷಿಸಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬಾಲಕಿ ಪಟ್ಟಣದ ಶಾಲೆಯೊಂದರ ವಿದ್ಯಾರ್ಥಿನಿಯಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾಳೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ತಿಳಿಸಿದ್ದಾರೆ.

'ಜನ್ಮದಿನಕ್ಕೆ ಹೊಸ ಬಟ್ಟೆ ಕೊಡಿಸಲಿಲ್ಲ ಎಂದು ಮುನಿಸಿಕೊಂಡ ಬಾಲಕಿ ಶುಕ್ರವಾರ ಬೆಳಿಗ್ಗೆ ಮನೆಬಿಟ್ಟು ಬಂದಿದ್ದಳು. ಒಬ್ಬಂಟಿಯಾಗಿ ಬಸ್ ನಿಲ್ದಾಣದಲ್ಲಿ ಕೂತಿದ್ದ ಆಕೆಯೊಡನೆ ಆರೋಪಿಗಳು ಸ್ನೇಹ ಬೆಳೆಸಿದ್ದಾರೆ. ಯಾವುದಾದರೂ ಕೆಲಸ ಕೊಡಿಸುವಂತೆ ಬೇಡಿಕೊಂಡ ಬಾಲಕಿಯನ್ನು ಆರೋಪಿಗಳು ಪುಸಲಾಯಿಸಿ ಸಮೀಪದ ಉದ್ಯಾನವೊಂದಕ್ಕೆ ಕರೆದೊಯ್ದಿದ್ದಾರೆ. ಸಂಜೆವರೆಗೆ ಉದ್ಯಾನದಲ್ಲಿ ಕಾಲ ಕಳೆದು ಸಂಜೆ ಬಸ್‌ನಲ್ಲಿ ಆಕೆಯನ್ನು ತನಿಮೊಡಗು ಗ್ರಾಮಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ನಾಲ್ವರ ಬಂಧನ

ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ನಾಲ್ವರು ಯುವಕರನ್ನು ಕಾಮಸಮುದ್ರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಗಾರಪೇಟೆ ತಾಲ್ಲೂಕಿನ ಹೊಸಕೋಟೆ ಗ್ರಾಮದ ಆನಂದ ಕುಮಾರ್, ಬೇತಮಂಗಲ ಸಮೀಪದ ತಿಮ್ಮಾಪುರ ಗ್ರಾಮದ ಕಾಂತರಾಜು, ಬೆಂಗನೂರು ಗ್ರಾಮದ ವೇಣು ಮತ್ತು ಪ್ರವೀಣ್ ಬಂಧಿತ ಆರೋಪಿಗಳು. ಆರೋಪಿಗಳ ಪೈಕಿ ಪ್ರವೀಣ್ ಖಾಸಗಿ ಬಸ್ ಚಾಲಕನಾಗಿದ್ದು, ಉಳಿದ ಮೂವರು ಗಾರೆ ಕೆಲಸ ಮಾಡುತ್ತಾರೆ.



ಕಾಂತರಾಜು



ಪ್ರವೀಣ



ಆನಂದ್



ವೇಣು

'ಕ್ರಿಮಿನಲ್ ಪ್ರಕರಣಗಳ ವಿಚಾರಣೆ ರದ್ದು ಅಧಿಕಾರ ಅಪರೂಪಕ್ಕೆ ಬಳಸಬೇಕು'

ನವದೆಹಲಿ (ಪಿಟಿಐ): ಕ್ರಿಮಿನಲ್ ಪ್ರಕರಣಗಳ ವಿಚಾರಣೆಯನ್ನು ರದ್ದುಪಡಿಸಲು ದತ್ತವಾಗಿರುವ ಅಧಿಕಾರವನ್ನು ಅಪರೂಪಕ್ಕೆ ಬಳಸಬೇಕು. ಅದು ಕೂಡಾ ಅಪರೂಪದಲ್ಲಿ ಅಪರೂಪ ಎಂಬ ಪ್ರಕರಣಗಳಿಗಷ್ಟೇ ಅನ್ವಯಿಸಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಆಸ್ತಿ ವಿವಾದಕ್ಕೆ ಸಂಬಂಧಿಸಿ ಮೂವರ ವಿರುದ್ಧ ದಾಖಲಿಸಿದ್ದ ವಂಚನೆ, ನಕಲಿ ದಾಖಲೆ ಸೃಷ್ಟಿ ಕುರಿತ ಪ್ರಕರಣವನ್ನು ವಜಾಗೊಳಿಸಿದ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಎಸ್.ರವೀಂದ್ರ ಭಟ್ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಮೇಲ್ನೋಟದ ಸಾಕ್ಷ್ಯವನ್ನಷ್ಟೇ ಆಧರಿಸಿ ಕ್ರಿಮಿನಲ್ ಮೊಕದ್ದಮೆ ದಾಖಲು ಮತ್ತು ಖಾಸಗಿ ಅಥವಾ ವೈಯಕ್ತಿಕ ವೈಮನಸ್ಯದಿಂದಾಗಿ ಆರೋಪಿಗಳ ವಿರುದ್ಧದ ದ್ವೇಷಸಾಧನೆಗಾಗಿ ಪ್ರಕರಣ ದಾಖಲಿಸಿರುವ ಸಂದರ್ಭಗಳಲ್ಲಿ ಈ ಅಧಿಕಾರವನ್ನು ಬಳಸಬಹುದು ಎಂದು ಪೀಠ ಹೇಳಿತು.

ಈ ಪ್ರಕರಣದಲ್ಲಿ ಆರೋಪಿಗಳಿಗೆ ಕಿರುಕುಳ ನೀಡುವ ಉದ್ದೇಶದಿಂದಲೇ ಮೊಕದ್ದಮೆ ದಾಖಲಿಸಲಾಗಿದೆ ಎಂದು ಪೀಠ ಹೇಳಿತು.

ಸಿಆರ್‌ಪಿಸಿ ಕಾಯ್ದೆ 1973ರ ಸೆಕ್ಷನ್ 156 (3)ರಡಿ ದತ್ತವಾಗಿರುವ ಅಧಿಕಾರದಡಿ ಮ್ಯಾಜಿಸ್ಟ್ರೇಟ್ ಅವರು, ಅಪರಾಧ ಗೋಚರವಾಗುವ ಸಂದರ್ಭದಲ್ಲಿ ಮಾತ್ರವೇ ತನಿಖೆ ನಡೆಸುವಂತೆ ಪೊಲೀಸರಿಗೆ ಅಧಿಕಾರ ನೀಡಬಹುದಾಗಿದೆ ಎಂದು ಸ್ಪಷ್ಟಪಡಿಸಿತು.

ಉ.ಕ. ಜನರಿಗಾಗಿ ಬೆಂಗಳೂರಿನಲ್ಲಿ 3 ಎಕರೆ ಜಮೀನು: ಮುಖ್ಯಮಂತ್ರಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನೆಲೆಸಿರುವ ಉತ್ತರ ಕರ್ನಾಟಕ ಭಾಗದ ಜನರ ಅನುಕೂಲಕ್ಕಾಗಿ ಮೂರು ಎಕರೆ ಜಮೀನು ಮಂಜೂರು ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆಯ ಅಧ್ಯಕ್ಷ ಶಿವಕುಮಾರ ಮೇಟಿ ನೇತೃತ್ವದ ನಿಯೋಗ ಮುಖ್ಯಮಂತ್ರಿ ಅವರನ್ನು ಶನಿವಾರ ಭೇಟಿ ಮಾಡಿ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಿತು.

ಆಗ ಪ್ರತಿಕ್ರಿಯಿಸಿದ ಬೊಮ್ಮಾಯಿ, ಉತ್ತರ ಕರ್ನಾಟಕದ ಜನರ ಅನುಕೂಲಕ್ಕಾಗಿ ಬೆಂಗಳೂರಿನಲ್ಲಿ ಮೂರು ಎಕರೆ ಜಮೀನು ಒದಗಿಸುವುದಾಗಿ ತಿಳಿಸಿದರು.

ಉತ್ತರ ಕರ್ನಾಟಕ ಭಾಗದಿಂದ ಬರುವ ಜನರ ಅನುಕೂಲಕ್ಕಾಗಿ ಕಟ್ಟಡ ನಿರ್ಮಾಣ, ಆ ಭಾಗದ ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಜನರ ಬಳಕೆಗಾಗಿ ವಸತಿ ನಿಲಯ ನಿರ್ಮಾಣ ಮಾಡಲು ಜಮೀನು ಮಂಜೂರು ಮಾಡಲಾಗುವುದು. ಶೀಘ್ರವೇ ಈ ಸಂಬಂಧ ಆದೇಶ ಹೊರಡಿಸಲಾಗುವುದು ಎಂದರು.

ಈ ಬಾರಿಯ ಬಜೆಟ್‌ನಲ್ಲಿ ಉತ್ತರ ಕರ್ನಾಟಕದ ಪ್ರಮುಖ ಯೋಜನೆಗಳಿಗೆ ಆದ್ಯತೆ ನೀಡುವಂತೆ ನಿಯೋಗ ಮನವಿ ಮಾಡಿತು. ಪರಿಶೀಲಿಸಿ, ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳುವುದಾಗಿ ಬೊಮ್ಮಾಯಿ ಭರವಸೆ ನೀಡಿದರು.

25 ವರ್ಷಗಳ ಹಿಂದೆ

ಗುರುವಾರ, 20-2-1997

● **ಬಸ್ ಪ್ರಯಾಣ ದರ: ಶೇ 35ರಷ್ಟು ಏರಿಕೆಗೆ ನಿರ್ಧಾರ**

ಬೆಂಗಳೂರು, ಫೆ. 19– ದರ ಸಲಹಾ ಸಮಿತಿಯ ಶಿಫಾರಸ್ಸಿನಂತೆ ರಾಜ್ಯದಲ್ಲಿ ಬಸ್ ದರವನ್ನು ಗ್ರಾಮಾಂತರ ಪ್ರದೇಶದಲ್ಲಿ ಶೇ 35ರಷ್ಟು ಹಾಗೂ ನಗರ ಪ್ರದೇಶದಲ್ಲಿ ಶೇ 40ರಷ್ಟು ಏರಿಸಲು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಸಾರಿಗೆ ಸಚಿವ ಪಿ.ಜಿ.ಆರ್. ಸಿಂಧ್ಯ ಅವರು ಇಂದು ವಿಧಾನಪರಿಷತ್ತಿನಲ್ಲಿ ಹೇಳಿದರು.

ಕಾಂಗ್ರೆಸ್‌ನ ಕೆಂಪಮ್ಮ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ರಸ್ತೆ ಸಾರಿಗೆ ಸಂಸ್ಥೆಯು ಅತ್ಯಂತ ದುರಾವಸ್ಥೆಯಲ್ಲಿದ್ದು, 166 ಕೋಟಿ ರೂಪಾಯಿ ಬಾಕಿ ನೀಡಬೇಕಿರುವುದರಿಂದ ಬಿಡಿಭಾಗಗಳನ್ನು ಕೊಳ್ಳುವ ಸ್ಥಿತಿಯಲ್ಲಿ ಸಹ ಇಲ್ಲ' ಎಂದು ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 20-2-1972

● **ರಾಜ್ಯದಲ್ಲಿ ಜಮೀನು ಪರಭಾರೆ ಮಾಡುವವರಿಗೆ ಇಂದಿರಾ ಎಚ್ಚರಿಕೆ**

ಬೆಂಗಳೂರು, ಫೆ. 19– ಭೂಸುಧಾರಣೆ ಕ್ರಮಗಳನ್ನು ಜಾರಿಗೊಳಿಸುವಲ್ಲಿ ಆಗುತ್ತಿರುವ ವಿಳಂಬವನ್ನು ದುರುಪಯೋಗ ಮಾಡಿಕೊಂಡು ಮೈಸೂರು ರಾಜ್ಯದಲ್ಲಿ ಜಮೀನನ್ನು ಪರಭಾರೆ ಮಾಡುತ್ತಿರುವುದರ ವಿರುದ್ಧ ಪ್ರಧಾನಿ ಇಂದಿರಾ ಗಾಂಧಿ ಇಲ್ಲಿ ಎಚ್ಚರಿಕೆ ನೀಡಿದರು.

ಪರೇಡ್ ಮೈದಾನದಲ್ಲಿ ಭಾರಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ರಾಜ್ಯದಲ್ಲಿ ಅನೇಕರು ಈ ಅವಕಾಶ ಬಳಸಿ ಜಮೀನನ್ನು ಪರಭಾರೆ ಮಾಡುತ್ತಿರುವವರೆಂದೂ, ಅವನ್ನು ವಿಮರ್ಶಿಸಿ ಸೂಕ್ತಕ್ರಮ ಕೈಗೊಳ್ಳಲಾಗುವುದೆಂದೂ ಎಚ್ಚರಿಕೆ ನೀಡಿದರು.

ಸಂವಿಧಾನ ಶಿಲ್ಪಿ ಅಂಬೇಡ್ಕರ್‌ಗೆ ಅವಮಾನ: ವಿಧಾನಸೌಧ– ಹೈಕೋರ್ಟ್ ಚಲೊ

ನ್ಯಾಯಾಧೀಶರ ವಜಾಕ್ಕೆ ಒತ್ತಾಯ: ಪ್ರತಿಭಟನಾ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣರಾಜ್ಯೋತ್ಸವ ದಿನದಂದು ರಾಯಚೂರಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ ಮಾಡಿರುವ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ಸೇವೆಯಿಂದ ವಜಾ ಮಾಡಬೇಕು' ಎಂದು ಒತ್ತಾಯಿಸಿ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಶನಿವಾರ ನಡೆಯಿತು.

ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ (ರಾಜ್ಯ ಸಂಘಟನೆಗಳ ಮತ್ತು ಒಕ್ಕೂಟಗಳ ಮಹಾ ಒಕ್ಕೂಟ) ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

'ವಿಧಾನಸೌಧ– ಹೈಕೋರ್ಟ್ ಚಲೊ' ಹೆಸರಿನಲ್ಲಿ ಪ್ರತಿಭಟನೆ ಆರಂಭಿಸಿದ್ದ ವಿವಿಧ ಜಿಲ್ಲೆಗಳ ಪರಿಶಿಷ್ಟ ಸಮುದಾಯದ ನೂರಾರು ಜನರು ನಗರಕ್ಕೆ ಶನಿವಾರ ಬೆಳಿಗ್ಗೆ ಬಂದಿದ್ದರು. ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಸೇರಿದ್ದ ಪ್ರತಿಭಟನಕಾರರು, ಅಲ್ಲಿಂದ ಮೆರವಣಿಗೆ ಆರಂಭಿಸಿದರು.

ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ ಮೂಲಕ ವಿಧಾನಸೌಧ ಹಾಗೂ ಹೈಕೋರ್ಟ್‌ನತ್ತ ಮೆರವಣಿಗೆ ಹೊರಟಿತು. ನಗಾರಿ ಸದ್ದು ಜೋರಾಗಿತ್ತು. ನೀಲಿ ಬಾವುಟಗಳು ಹಾರಾಡಿದವು. ನೀಲಿ ಬಣ್ಣದ ಶಾಲು ತೊಟ್ಟು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ ಪ್ರತಿಭಟನಕಾರರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

ಸ್ವಾತಂತ್ರ್ಯ ಉದ್ಯಾನ ಬಳಿಯೇ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಪರಸ್ಪರ ತಳ್ಳಾಟವೂ ನಡೆಯಿತು. ನಂತರ, ಉದ್ಯಾನದಲ್ಲೇ ಪ್ರತಿಭಟನೆ ಮುಂದುವರಿಯಿತು. ಬಹಿರಂಗ ಸಭೆಯೂ ನಡೆಯಿತು.

'ದೇಶದ ಪ್ರತಿಯೊಬ್ಬ ಪ್ರಜೆಯನ್ನು ಒಗ್ಗೂಡಿಸಿ, ಏಕತೆ ಸಾಧಿಸಿ ಭಾರತೀಯರೆಂಬ ಅಸ್ಮಿತೆ ಸೃಷ್ಟಿಸಿರುವುದು ನಮ್ಮ ಸಂವಿಧಾನ. ಇಂಥ ಸಂವಿಧಾನ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ನಾವೆಲ್ಲರೂ ಗೌರವಿಸಬೇಕು. ಆದರೆ, ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರು ಅಂಬೇಡ್ಕರ್ ಅವರಿಗೆ ಅವಮಾನ ಮಾಡಿ ಸಂವಿಧಾನ ವಿರೋಧಿ ನಡೆ ಅನುಸರಿಸಿದ್ದಾರೆ. ಇವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

'ಎಲ್ಲ ಹಂತದ ನ್ಯಾಯಾಲಯಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸಬೇಕು. ನ್ಯಾಯಾಲಯಗಳಲ್ಲಿ ಮೀಸಲಾತಿಗೆ ಪ್ರಾತಿನಿಧ್ಯ ನೀಡಬೇಕು. ಸಂವಿಧಾನ ವಿರೋಧಿಯಾಗಿ ನಡೆದುಕೊಳ್ಳುತ್ತಿರುವ ಹುಮನಾಬಾದ್ ತಹಶೀಲ್ದಾರ್ ಅವರನ್ನು ಕೂಡಲೇ ಬಂಧಿಸಬೇಕು' ಎಂದೂ ಆಗ್ರಹಿಸಿದರು.

ಪ್ರಜಾ ಪರಿವರ್ತನಾ ವೇದಿಕೆ, ಭಾರತೀಯ ರಿಪಬ್ಲಿಕ್ ಪಾರ್ಟಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ಸಮತಾ ಸೈನಿಕ ದಳ, ಕರ್ನಾಟಕ ರಿಪಬ್ಲಿಕ್ ಸೇನೆ, ಬಹುಜನ ದಲಿತ ಸಂಘರ್ಷ ಸಮಿತಿ, ದಲಿತ ವಿದ್ಯಾರ್ಥಿ ಪರಿಷತ್, ರಾಜ್ಯ ಎಸ್.ಸಿ, ಎಸ್.ಟಿ ಗುತ್ತಿಗೆದಾರರ ಸಂಘ, ಭೀಮ್ ಆರ್ಮಿ ಸೇರಿದಂತೆ ಹಲವು ಸಂಘಟನೆಗಳ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಶನಿವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಭೇಟಿ

ಪ್ರತಿಭಟನಾ ಸ್ಥಳಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಕಾರರ ಅಹವಾಲು ಆಲಿಸಿದರು.

'ಪ್ರತಿಭಟನೆಯ ವಿಚಾರವನ್ನು ಮುಖಂಡರು ತಿಳಿಸಿದ್ದಾರೆ. ಇದೊಂದು ದುರದೃಷ್ಟಕರ ವಿಚಾರ. ಅವಮಾನ ಆಗುವ ರೀತಿಯಲ್ಲಿ ಯಾರೂ ನಡೆದುಕೊಳ್ಳಬಾರದು. ನಿಮ್ಮೆಲ್ಲರ (ಪ್ರತಿಭಟನಕಾರರ) ಭಾವನೆಗಳನ್ನು ಯಾರಿಗೆ ತಲುಪಿಸಬೇಕೂ ಅವರಿಗೆ ತಲುಪಿಸುತ್ತೇನೆ' ಎಂದು ಬೊಮ್ಮಾಯಿ ಭರವಸೆ ನೀಡಿದರು.

'ಅಂಬೇಡ್ಕರ್ ಅವರ ಘನತೆ ಹಾಗೂ ಗೌರವವನ್ನು ಎತ್ತಿ ಹಿಡಿಯುವಲ್ಲಿ ನಾವೆಲ್ಲರೂ ಮುಂದಿದ್ದೇವೆ. ಅಂಬೇಡ್ಕರ್ ರೀತಿಯಲ್ಲಿ ನಿಮಗೆ ನ್ಯಾಯ ಕೊಡಿಸುವ ಕೆಲಸವನ್ನು ನಾನು ಮಾಡುತ್ತೇನೆ. ಅಲ್ಲಿಯವರೆಗೂ ಶಾಂತಿ ಹಾಗೂ ಸಮಾಧಾನದಿಂದ ಇರಬೇಕು' ಎಂದೂ ತಿಳಿಸಿದರು.

ಉಕ್ರೇನ್ ರಕ್ಷಣೆಗೆ ಮಿತ್ರ ರಾಷ್ಟ್ರಗಳು ಸನ್ನದ್ಧ: ಅಮೆರಿಕ

ರಷ್ಯಾಗೆ ಬೈಡನ್ ಎಚ್ಚರಿಕೆ

ವಾಷಿಂಗ್ಟನ್, ಮ್ಯುನಿಚ್ (ಪಿಟಿಐ/ ರಾಯಿಟರ್ಸ್/ ಎಎಫ್‌ಪಿ): ಮುಂಬರುವ ವಾರದಲ್ಲಿ ರಷ್ಯಾದ ಪಡೆಗಳು ರಾಜಧಾನಿ ಕೀವ್ ಸೇರಿದಂತೆ ಉಕ್ರೇನ್ ಮೇಲೆ ದಾಳಿ ನಡೆಸಲಿವೆ ಎನ್ನುವುದು ತನಗೆ ಮನದಟ್ಟಾಗಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಪುನರುಚ್ಚರಿಸಿದ್ದಾರೆ.

ಇದನ್ನು ನಂಬಲು ಬಲವಾದ ಕಾರಣವೂ ಇದೆ. ಅನಾವಶ್ಯಕವಾಗಿ ಯುದ್ಧ ಮಾಡಿದರೆ ಮುಂದೆ ಘಟಿಸಲಿರುವ 'ವಿಪತ್ತು ಮತ್ತು ದುರಂತಕ್ಕೆ ರಷ್ಯಾವೇ ಹೊಣೆ' ಎಂದು ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್‌ಗೆ ಎಚ್ಚರಿಕೆ ನೀಡಿದ್ದಾರೆ.

ಶ್ವೇತಭವನದ ರೂಸ್‌ವೆಲ್ಟ್ ಕೊಠಡಿಯಲ್ಲಿ ಶುಕ್ರವಾರ ಸುದ್ದಿಗಾರರಿಗೆ ಸದ್ಯದ ಬೆಳವಣಿಗೆಯ ಬಗ್ಗೆ ಮಾಹಿತಿ ನೀಡಿದ ಅವರು, ಉಕ್ರೇನ್ ಆಕ್ರಮಣ ಸಮರ್ಥಿಸಿಕೊಳ್ಳಲು ರಷ್ಯಾ ನೀಡುವ ಯಾವುದೇ ಸಮರ್ಥನೆಯನ್ನು ಒಪ್ಪುವುದಿಲ್ಲ. ಉಕ್ರೇನ್‌ನತ್ತ ರಷ್ಯಾ ಪಡೆಗಳು ನುಗ್ಗದಂತೆ ತಡೆಯಲು ಅಮೆರಿಕ ತನ್ನ ಶಕ್ತಿಯನ್ನು ಎಲ್ಲ ರೀತಿಯಲ್ಲೂ ಬಳಸುತ್ತಿದೆ ಎಂದರು.

'ನ್ಯಾಟೊ ಪ್ರದೇಶದ ಪ್ರತಿ ಇಂಚನ್ನೂ ರಕ್ಷಿಸಲು, ಸಾಮೂಹಿಕ ಭದ್ರತೆಗೆ ಎದುರಾಗುವ ಯಾವುದೇ ಬೆದರಿಕೆ ತಡೆಯಲು ಅಮೆರಿಕ ಮತ್ತು ಮಿತ್ರರಾಷ್ಟ್ರಗಳು ಸಿದ್ಧವಾಗಿವೆ. ಯಾವುದೇ ತಪ್ಪು ಮಾಡಬೇಡಿ' ಎಂದು ಎಚ್ಚರಿಸಿದರು.

ಬೈಡನ್ ಹೇಳಿಕೆಯನ್ನು ಪದೇ ಪದೇ ನಿರಾಕರಿಸುತ್ತಿರುವ ರಷ್ಯಾ, ಉಕ್ರೇನ್ ಮೇಲೆ ದಾಳಿ ನಡೆಸುವ ಯಾವುದೇ ಯೋಜನೆ ಇಲ್ಲ ಎಂದಿದೆ.

ಹ್ಯಾರಿಸ್ ಎಚ್ಚರಿಕೆ: ಉಕ್ರೇನ್ ಮೇಲೆ ದಾಳಿ ನಡೆಸಿದರೆ ಅನಿರೀಕ್ಷಿತವಾದ ಕಠಿಣ ಆರ್ಥಿಕ ನಿರ್ಬಂಧಗಳನ್ನು ರಷ್ಯಾ ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಶನಿವಾರ ಮ್ಯುನಿಚ್ ಭದ್ರತಾ ಸಮಾವೇಶದಲ್ಲಿ ಎಚ್ಚರಿಕೆ ನೀಡಿದರು.

ಪ್ರತ್ಯೇಕವಾದಿಗಳಿಂದ ಉಕ್ರೇನ್ ಸೈನಿಕನ ಹತ್ಯೆ (ಕೀವ್ ವರದಿ): ಉಕ್ರೇನ್‌ನ ಪೂರ್ವದಲ್ಲಿ ರಷ್ಯಾ ಬೆಂಬಲಿತ ಬಂಡುಕೋರರು ನಡೆಸಿದ ಶೆಲ್ ದಾಳಿಯಲ್ಲಿ ಉಕ್ರೇನ್ ಸೇನೆಯ ಒಬ್ಬ ಯೋಧ ಕೊಲ್ಲಲ್ಪಟ್ಟಿದ್ದಾರೆ ಎಂದು ಪೂರ್ವ ಉಕ್ರೇನ್‌ನ ಜಂಟಿ ಮಿಲಿಟರಿ ಕಮಾಂಡ್ ವರದಿ ಮಾಡಿದೆ.



ರಷ್ಯಾ ಶನಿವಾರ ಸಮರಾಭ್ಯಾಸದ ವೇಳೆ 'ಇಸ್ಕಾಂಡರ್–ಕೆ' ಕ್ಷಿಪಣಿ ಉಡಾಯಿಸಿತು —ಎಪಿ ಚಿತ್ರ

ರಷ್ಯಾ: ಅಣ್ವಸ್ತ್ರ ಸಜ್ಜಿತ ಶಕ್ತಿ ಪ್ರದರ್ಶನ

ಮಾಸ್ಕೊ (ಎಎಫ್‌ಪಿ): ಉಕ್ರೇನ್ ಮೇಲೆ ಆಕ್ರಮಣ ನಡೆಸದಂತೆ ಅಮೆರಿಕ ರಷ್ಯಾಕ್ಕೆ ಎಚ್ಚರಿಕೆ ನೀಡಿದ ಕೆಲವೇ ಗಂಟೆಗಳಲ್ಲಿ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೇತೃತ್ವದಲ್ಲಿ ರಷ್ಯಾ ಅಣ್ವಸ್ತ್ರ ಸಾಮರ್ಥ್ಯದ ಖಂಡಾಂತರ ಕ್ಷಿಪಣಿಗಳನ್ನು ಒಳಗೊಂಡ ಮತ್ತೊಂದು ಮಿಲಿಟರಿ ಶಕ್ತಿ ಪ್ರದರ್ಶನವನ್ನು ಶನಿವಾರ ನಡೆಸಿದೆ.

ಉಕ್ರೇನ್ ಪೂರ್ವದಲ್ಲಿ ಘರ್ಷಣೆಗಳು ಗಮನಾರ್ಹ ಸಂಖ್ಯೆಯಲ್ಲಿ ಹೆಚ್ಚುತ್ತಿದ್ದು, ತಮ್ಮ ಸೈನಿಕನೊಬ್ಬ ಕೊಲ್ಲಲ್ಪಟ್ಟ ಬೆನ್ನಲ್ಲೇ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಿತ್ರರಾಷ್ಟ್ರಗಳಿಂದ ಬೆಂಬಲ ಹೆಚ್ಚಿಸಿಕೊಳ್ಳಲು ಜರ್ಮನಿಗೆ ತೆರಳಿದ್ದಾರೆ

ನ್ಯಾಟೊಗೆ ಉಕ್ರೇನ್ ಸೇರಿಸಿಕೊಳ್ಳಲಾಗುವುದೇ ಅಥವಾ ಇಲ್ಲವೇ ಎನ್ನುವುದನ್ನು ಪ್ರಾಮಾಣಿಕವಾಗಿ ಖಾತ್ರಿಪಡಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಉಕ್ರೇನ್‌ನಿಂದ ಶೆಲ್ ದಾಳಿ: ರಷ್ಯಾ ದೂರು

ಮಾಸ್ಕೋ (ರಾಯಿಟರ್ಸ್): ಉಕ್ರೇನ್ ಕಡೆಯಿಂದ ಶನಿವಾರ ಶೆಲ್ ದಾಳಿ ನಡೆದಿದ್ದು, ಉಕ್ರೇನ್ ಗಡಿಯ ಸಮೀಪವಿರುವ ಹಳ್ಳಿಯ ಮನೆಯೊಂದಕ್ಕೆ ಶೆಲ್ ಬಡಿದಿದೆ. ಮನೆಯ ಛಾವಣಿಗೆ ಹಾನಿಯಾಗಿದೆ. ಆದರೆ ಯಾರೂ ಗಾಯಗೊಂಡಿಲ್ಲ ಎಂದು ನೈರುತ್ಯ ರಷ್ಯಾದ ಸ್ಥಳೀಯ ಅಧಿಕಾರಿಗಳು ತಿಳಿಸಿರುವುದಾಗಿ ಸರ್ಕಾರಿ ಸ್ವಾಮ್ಯದ ಟಾಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಗಡಿಯ ಸಮೀಪ ರಷ್ಯಾದ ಭೂಪ್ರದೇಶದ ಮೇಲೆ ಶೆಲ್‌ಗಳು ಬಿದ್ದಿರುವ ವರದಿಗಳನ್ನು ಸುಳ್ಳು ಎಂದು ಉಕ್ರೇನ್ ಹೇಳಿದೆ. ಉಕ್ರೇನ್ ಸೇನಾಪಡೆಗಳು ಗುಂಡು ಹಾರಿಸಿಲ್ಲ. ಈಗಾಗಲೇ ಹೆಚ್ಚಿರುವ ಉದ್ವಿಗ್ನ ಪರಿಸ್ಥಿತಿಯನ್ನು ಮತ್ತಷ್ಟು ಹೆಚ್ಚಿಸುವ ಆಸಕ್ತಿ ಇಲ್ಲ ಎಂದು ಹೇಳಿದೆ.

ಸೇನೆ ಸನ್ನದ್ಧ: ಉಕ್ರೇನ್ ಆದೇಶ

ಕೀವ್ (ಎಪಿ): ರಷ್ಯಾದ ಸಂಭವನೀಯ ಆಕ್ರಮಣ ನೆಪವಾಗಿಸಿಕೊಂಡು ತಮ್ಮ ಪ್ರದೇಶದಲ್ಲಿ ಅಂತಃಕಲಹ ಹುಟ್ಟು ಹಾಕಬಹುದೆಂಬ ಆತಂಕದಿಂದ ಪೂರ್ವ ಉಕ್ರೇನ್‌ನಲ್ಲಿನ ಪ್ರತ್ಯೇಕತಾವಾದಿ ನಾಯಕರು ಮಿಲಿಟರಿಯನ್ನು ಸಂಪೂರ್ಣ ಸಜ್ಜಾಗಿಡುವಂತೆ ಶನಿವಾರ ಆದೇಶಿಸಿದ್ದಾರೆ.

ಉಕ್ರೇನ್‌ನ ಡೊನೆಟ್ಸ್ಕ್ ಪ್ರದೇಶದಲ್ಲಿ ರಷ್ಯಾ ಪರ ಪ್ರತ್ಯೇಕತಾವಾದಿ ಸರ್ಕಾರದ ಮುಖ್ಯಸ್ಥ ಡೆನಿಸ್ ಪುಶಿಲಿನ್ ಅವರು, ಸನ್ನದ್ಧ ಸ್ಥಿತಿಯಲ್ಲಿರುವಂತೆ ಸೇನಾ ಪಡೆಗೆ ಸೂಚಿಸಿದ್ದಾರೆ.

ಲುಹಾನ್ಸ್ಕ್ ಪ್ರದೇಶದ ಪ್ರತ್ಯೇಕತಾವಾದಿ ನಾಯಕ ಲಿಯೊನಿಡ್ ಪಸೆಚ್ನಿಕ್ ಅವರೂ ಸಹ ಇದೇ ರೀತಿಯ ಸೂಚನೆ ನೀಡಿದ್ದಾರೆ.

ಉಕ್ರೇನ್‌ನಿಂದ ವಾಪಸ್ ಬನ್ನಿ: ಜರ್ಮನಿ ಮನವಿ

ಬರ್ಲಿನ್ (ರಾಯಿಟರ್ಸ್): ರಷ್ಯಾ ಮತ್ತು ಉಕ್ರೇನ್ ನಡುವಿನ ಉದ್ವಿಗ್ನತೆ ಮತ್ತಷ್ಟು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಕ್ಷಣ ಉಕ್ರೇನ್ ತೊರೆಯುವಂತೆ ತನ್ನ ದೇಶದ ಪ್ರಜೆಗಳಿಗೆ ಜರ್ಮನಿಯ ವಿದೇಶಾಂಗ ಸಚಿವಾಲಯ ಶನಿವಾರ ಕರೆ ನೀಡಿದೆ.

ಉಕ್ರೇನ್‌ನಲ್ಲಿ ಯಾವುದೇ ಕ್ಷಣದಲ್ಲಿ ಮಿಲಿಟರಿ ಸಂಘರ್ಷ ಉದ್ಭವಿಸುವ ಸಂಭವವಿದೆ. ಅಮೆರಿಕ, ಬ್ರಿಟನ್ ಸೇರಿದಂತೆ ಹಲವು ದೇಶಗಳು ತಮ್ಮ ದೇಶದ ನಾಗರಿಕರಿಗೆ ತಕ್ಷಣ ಉಕ್ರೇನ್ ತೊರೆಯಲು ಸೂಚಿಸಿವೆ.

ಭಯೋತ್ಪಾದನೆಗೆ ಸಂಚು ಪ್ರಕರಣ: ಎನ್‌ಐಎ ಶೋಧ

ಶ್ರೀನಗರ: ದೇಶದ ರಾಜಧಾನಿ ಹಾಗೂ ಇತರೆ ಪ್ರಮುಖ ನಗರಗಳಲ್ಲಿ ಉಗ್ರ ಸಂಘಟನೆಗಳು ಭಯೋತ್ಪಾದನೆಗೆ ಸಂಚು ರೂಪಿಸಿದ ಪ್ರಕರಣ ಸಂಬಂಧ ರಾಷ್ಟ್ರೀಯ ತನಿಖಾ ದಳವು ಶನಿವಾರ ಕಾಶ್ಮೀರ ಹಾಗೂ ರಾಜಸ್ಥಾನದ ಎಂಟು ಕಡೆ ಶೋಧ ಕಾರ್ಯಾಚರಣೆ ನಡೆಸಿದೆ.

'ಸಿಆರ್‌ಪಿಎಫ್ ಹಾಗೂ ಸ್ಥಳೀಯ ಪೊಲೀಸರ ಬಿಗಿ ಭದ್ರತೆಯೊಂದಿಗೆ ಕಾಶ್ಮೀರದ ಸೋಪೋರ್, ಕುಪ್ವಾರ, ಶೋಪಿಯಾನ್, ಬುಡ್ಗಾಂ ಹಾಗೂ ಗಂದರ್‌ಬಲ್ ಹಾಗೂ ರಾಜಸ್ಥಾನದ ಜೋಧಪುರ ಜಿಲ್ಲೆಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಯಿತು. ಶೋಧದ ವೇಳೆ ಹಲವು ಡಿಜಿಟಲ್ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ' ಎಂದು ಎನ್‌ಐಎ ವಕ್ತಾರರು ತಿಳಿಸಿದರು.

ಗೋವು ಕಳ್ಳಸಾಗಣೆ: ಪ್ರಮುಖ ಆರೋಪಿ ಬಂಧಿಸಿದ ಇ.ಡಿ

ನವದೆಹಲಿ (ಪಿಟಿಐ): ಗಡಿಯಾಚೆಗೆ ನಡೆಯುತ್ತಿದ್ದ ಗೋವು ಕಳ್ಳಸಾಗಣೆಯ ಬಹುಕೋಟಿ ದಂಧೆಯ ಪ್ರಮುಖ ರೂವಾರಿ ಮಹಮದ್ ಇನಾಮುಲ್ ಹಕ್ ಎಂಬಾತನನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ.

ಪಶ್ಚಿಮ ಬಂಗಾಳದ ಭಾರತ-ಬಾಂಗ್ಲಾ ಗಡಿಯಲ್ಲಿ ನಡೆಯುವ ಅಕ್ರಮ ವ್ಯಾಪಾರದ ಹಣ ವರ್ಗಾವಣೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಹಕ್‌ನನ್ನು ಇ.ಡಿ ಬಂಧಿಸಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಹಕ್‌ನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.



ಆರೋಪಿಯನ್ನು ಇಲ್ಲಿನ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ತನಿಖೆಗೆ ವಶಕ್ಕೆ ನೀಡುವಂತೆ ಕೋರಲಾಗುವುದು ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ಪ್ರಕರಣದ ಸ್ವತಂತ್ರ ತನಿಖೆಯ ಭಾಗವಾಗಿ ಸಿಬಿಐ 2020ರ ನವೆಂಬರ್‌ನಲ್ಲಿ ಹಕ್‌ನನ್ನು ಬಂಧಿಸಿತ್ತು. ಕಳೆದ ತಿಂಗಳು ಸುಪ್ರೀಂ ಕೋರ್ಟ್ ಆತನಿಗೆ ಜಾಮೀನು ನೀಡಿತ್ತು.

ಮುರ್ಷಿದಾಬಾದ್ ಮತ್ತು ಮಾಲ್ಡಾ ಪ್ರದೇಶಗಳಿಗೆ ನಿಯೋಜಿಸಿದ್ದ ಬಿಎಸ್‌ಎಫ್ ಕಮಾಂಡೆಂಟ್ ಸತೀಶ್ ಕುಮಾರ್ ಅವರೊಂದಿಗೆ ಶಾಮೀಲಾಗಿ ತೃಣಮೂಲ ಕಾಂಗ್ರೆಸ್ ಯುವ ನಾಯಕ ವಿನಯ್ ಮಿಶ್ರಾ ಮತ್ತು ಅವರ ಸಹೋದರ ವಿಕಾಸ್ ಮಿಶ್ರಾ, ಆರೋಪಿಗೆ ಸಹಾಯ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಇವರನ್ನು ಸಹ ಬಂಧಿಸಲಾಗಿದೆ.

ಕಿಸಾನ್ ಡ್ರೋನ್‌ಗೆ ಚಾಲನೆ

ನವದೆಹಲಿ (ಪಿಟಿಐ): ಕೃಷಿ ಚಟುವಟಿಕೆಯಲ್ಲಿ ಫಸಲಿಗೆ ಕೀಟನಾಶಕ ಸಿಂಪಡಣೆಗೆ ಬಳಸಲು ದೇಶದ ವಿವಿಧೆಡೆ ಏಕಕಾಲದಲ್ಲಿ 100 'ಕಿಸಾನ್ ಡ್ರೋನ್'ಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಚಾಲನೆ ನೀಡಿದರು.

'ಡ್ರೋನ್ ಕ್ಷೇತ್ರದಲ್ಲಿ ಭಾರತದ ಸಾಮರ್ಥ್ಯ ಬಲಗೊಳ್ಳುತ್ತಿದೆ. ಇದು,ವಿಶ್ವದಲ್ಲಿಯೇ ದೇಶಕ್ಕೆ ಹೊಸ ನಾಯಕತ್ವ ಒದಗಿಸಲಿದೆ' ಎಂದು ಆಶಯ ವ್ಯಕ್ತಪಡಿಸಿದರು. ಕೀಟನಾಶಕ ಸಿಂಪಡಿಸಲು ಡ್ರೋನ್ ಬಳಕೆಯನ್ನು ನೂತನ ಪರಿಕ್ರಮ ಎಂದು ಅಧಿಕಾರಿಗಳು ಬಣ್ಣಿಸಿದ್ದಾರೆ.

'ಇಷ್ಟು ವರ್ಷಗಳವರೆಗೂ ಡ್ರೋನ್ ಕೇವಲ ರಕ್ಷಣಾ ಕ್ಷೇತ್ರದಲ್ಲಿ ಮಾತ್ರವೇ ಬಳಕೆಯಾಗುತ್ತಿತ್ತು. ನೀತಿಗಳು ಪೂರಕವಾಗಿದ್ದರೆ ದೇಶವು ಹೇಗೆ ಗರಿಗೆದರಬಹುದು ಎಂಬುದಕ್ಕೆ ಇದೊಂದು ನಿದರ್ಶನ' ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದ ಬಳಿಕ ಪ್ರಧಾನಿ ಹೇಳಿದರು.

'ಡ್ರೋನ್ ಸ್ಟಾರ್ಟ್‌ಅಪ್‌ನ ಹೊಸ ಸಂಸ್ಕೃತಿಯು ಭಾರತದಲ್ಲಿ ಆರಂಭವಾಗಿದೆ. ಸದ್ಯ, 200ರಷ್ಟಿರುವ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಶೀಘ್ರದಲ್ಲಿಯೇ ಒಂದು ಸಾವಿರಕ್ಕೆ ತಲುಪಲಿದೆ. ಈ ಕ್ಷೇತ್ರದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ' ಎಂದು ಪ್ರತಿಪಾದಿಸಿದರು.

ಡ್ರೋನ್ ಕ್ಷೇತ್ರವನ್ನು ಮುಕ್ತವಾಗಿಸುವಲ್ಲಿ ಆತಂಕ ಇದ್ದರೂ ನಮ್ಮ ಸರ್ಕಾರ ಈ ಬಗ್ಗೆ ಚಿಂತಿಸುತ್ತ ಕಾಲಹರಣ ಮಾಡಲಿಲ್ಲ. ಬದಲಿಗೆ ದೇಶದ ಯುವ ಪ್ರತಿಭೆಗಳ ಮೇಲೆ ವಿಶ್ವಾಸ ಹೊಂದಿತ್ತು. ಸರ್ಕಾರವು ತಂತ್ರಜ್ಞಾನ ಮತ್ತು ಹೊಸ ಅನ್ವೇಷಣೆಗಳಿಗೆ ಹೆಚ್ಚಿನ ಆದ್ಯತೆ ನೀಡಿದೆ ಎಂದರು.

ಕಿಸಾನ್ ಡ್ರೋನ್: ಇದು, ಕೃಷಿ ಕ್ಷೇತ್ರದಲ್ಲಿನ ಹೊಸ ಕ್ರಾಂತಿಯಾಗಿದೆ. ಕೃಷಿಕರು ಅತ್ಯಧಿಕ ಸಾಮರ್ಥ್ಯದ ಡ್ರೋನ್ ಬಳಸಿ ಬರುವ ದಿನಗಳಲ್ಲಿ ಹಣ್ಣು, ತರಕಾರಿ, ಹೂವುಗಳನ್ನು ಕನಿಷ್ಠ ಅವಧಿಯಲ್ಲಿ ಮಾರುಕಟ್ಟೆಗೂ ತಲುಪಿಸಬಹುದು. ಇದರಿಂದ ಆದಾಯವೂ ವೃದ್ಧಿಯಾಗಲಿದೆ ಎಂದರು.

21ನೇ ಶತಮಾನದ ಕೃಷಿ ಸೌಲಭ್ಯಗಳನ್ನು ಒದಗಿಸುವಲ್ಲಿ ಇದು ಹೊಸ ಅಧ್ಯಾಯ. ಇದು ಹೊಸ ಸಾಧ್ಯತೆಗಳನ್ನು ತೆರೆಯಲಿದೆ ಎಂದು ಹೇಳಿದರು.



ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ 'ಕಿಸಾನ್ ಡ್ರೋನ್'ಗಳ ಬಳಕೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು.

ಶ್ರೀನಗರ: ಇಬ್ಬರು ಯೋಧರು ಹುತಾತ್ಮ

ಶ್ರೀನಗರ: ದಕ್ಷಿಣ ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಝೈನ್‌ಪೋರಾದ ಚೆರ್‌ಮಾರ್ಗ ಗ್ರಾಮದಲ್ಲಿ ಶನಿವಾರ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಲಷ್ಕರ್–ಎ–ತೈಬಾ (ಎಲ್‌ಇಟಿ) ಉಗ್ರನೊಬ್ಬ ಹತ್ಯೆಯಾಗಿದ್ದು, ಯೋಧರಿಬ್ಬರು ಹುತಾತ್ಮರಾಗಿದ್ದಾರೆ.

ಸಂತೋಷ್ ಯಾದವ್, ರೋಮಿತ್ ಚೌಹಾಣ್ ತಾನಾಜಿ ಹುತಾತ್ಮರಾದ ಯೋಧರು. ಹತ್ಯೆಯಾದ ಉಗ್ರನನ್ನು ಅಬ್ದುಲ್ ಕಯೂಮ್ ದಾರ್ ಎಂದು ಗುರುತಿಸಲಾಗಿದೆ.

'ಚೆರ್‌ಮಾರ್ಗ್ ಗ್ರಾಮದಲ್ಲಿ ಉಗ್ರರು ಅಡಗಿರುವ ಖಚಿತ ಮಾಹಿತಿ ಮೇರೆಗೆ ಶನಿವಾರ ಮುಂಜಾನೆ ರಾಷ್ಟ್ರೀಯ ರೈಫಲ್ಸ್–1, ಜಮ್ಮು ಮತ್ತು ಕಾಶ್ಮೀರ ಪೊಲೀಸರು ಆರಂಭಿಸಿದ್ದ ಜಂಟಿ ಶೋಧ ಕಾರ್ಯಾಚರಣೆ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಎಲ್‌ಇಟಿ ಉಗ್ರ ಹತ್ಯೆಯಾಗಿದ್ದು, ಯೋಧರಿಬ್ಬರು ಹುತಾತ್ಮರಾದರು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಉತ್ತರ ಪ್ರದೇಶದಲ್ಲಿ ಬೆಳೆದ ಫಸಲು ನಾಶ ಮಾಡುತ್ತಿರುವ ದನಗಳು: ರೈತರ ಆಕ್ರೋಶ

ಬೀಡಾಡಿ ಜಾನುವಾರು ಬಿಜೆಪಿಯ ದುಃಸ್ವಪ್ನ?

• ಸಂಜಯ ಪಾಂಡೆ

ಸೀತಾಪುರ (ಉತ್ತರ ಪ್ರದೇಶ): ಬೀಡಾಡಿ ಜಾನುವಾರು ಸಮಸ್ಯೆ ಬಗ್ಗೆ ಕೇಳಿದ ಕೂಡಲೇ 40 ವರ್ಷದ ರಜಪತಿ ದೇವಿ ಆಕ್ರೋಶದಿಂದ ಕೂಗಾಡಿದರು. ಸೀತಾಪುರ ಜಿಲ್ಲೆಯ ರಾಯಪುರ ಗ್ರಾಮದ ಅವರು ತಮ್ಮ ಆಕ್ರೋಶವನ್ನು ಹೊರ ಹಾಕಲು ಕಾಯುತ್ತಿದ್ದಂತೆ ಇತ್ತು.

ರಜಪತಿ ಅವರಿಗೆ ಸಣ್ಣ ಜಮೀನು ಇದೆ. 'ಬೀಡಾಡಿ ಜಾನುವಾರುಗಳು ಬೆಳೆದು ನಿಂತ ಬೆಳೆಯನ್ನು ತಿಂದು ಬಿಡುತ್ತವೆ... ಹೊಲದಲ್ಲಿ ಇರುವ ಬೆಳೆಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದೇ ಗೊತ್ತಾಗುತ್ತಿಲ್ಲ... ಮಕ್ಕಳು ಹಗಲಲ್ಲಿ ಹೊಲವನ್ನು ಕಾಯುತ್ತಾರೆ. ಶಾಲೆಗೂ ಹೋಗುತ್ತಿಲ್ಲ. ರಾತ್ರಿಯಲ್ಲಿ ದೊಡ್ಡವರು ಹೊಲ ಕಾಯುತ್ತಾರೆ' ಎಂದು ರಜಪತಿ ಹೇಳುತ್ತಾರೆ.

ರಜಪತಿ ಅವರ ಭಾವನೆ ರಾಜ್ಯದ ಬಹುತೇಕ ಎಲ್ಲ ಭಾಗಗಳ ಜನರ ಭಾವನೆಯೂ ಹೌದು. ಬೀಡಾಡಿ ಜಾನುವಾರುಗಳಿಂದ ಬೆಳೆಗಳನ್ನು ರಕ್ಷಿಸಲು ರಾಜ್ಯದ ಎಲ್ಲ ಭಾಗಗಳ ರೈತರು ಹರಸಾಹಸ ಪಡುತ್ತಿದ್ದಾರೆ.

ಬಿದಿರುಬೊಂಬೆ, ಬಿದಿರಿನ ಅಟ್ಟಣೆ (ಜನರು ಕುಳಿತುಕೊಂಡು ಅಥವಾ ಮಲಗಿ ಹೊಲದ ಕಡೆಗೆ ಗಮನ ಇರಿಸಲು ಸಾಧ್ಯವಾಗುವಂತಹ ರಚನೆ), ಮುಳ್ಳು ಬೇಲಿ ಎಲ್ಲ ಹೊಲಗಳಲ್ಲಿಯೂ ಕಾಣಿಸುವ ಸಾಮಾನ್ಯ ಚಿತ್ರಣ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ಪ್ರದೇಶದ ಉಂಚಹಾರ್‌ನಲ್ಲಿ ಶನಿವಾರ ಚುನಾವಣಾ ಪ್ರಚಾರ ನಡೆಸಿದರು –ಪಿಟಿಐ ಚಿತ್ರ

ಪ್ರತಿ ಬಾರಿಯೂ ನಾಲ್ಕರಿಂದ ಐದು ಕ್ವಿಂಟಲ್ ಗೋಧಿ ಸಿಗುತ್ತಿತ್ತು. ಆದರೆ, ಈ ಬಾರಿ ಎರಡು ಸಿಕ್ಕರೆ ಅದೇ ಹೆಚ್ಚು. ಅರ್ಧದಷ್ಟು ಬೆಳೆಯನ್ನು ಬೀಡಾಡಿ ಜಾನುವಾರುಗಳು ತಿಂದು ಹಾಕಿವೆ ಎಂದು ರಜಪತಿ ಹೇಳುತ್ತಾರೆ. ಇತರ ಹಲವು ಗ್ರಾಮಗಳ ರೈತರ ಪರಿಸ್ಥಿತಿಯೂ ಇದೇ ಆಗಿದೆ.

ರಜಪತಿ ಅವರು ನೆಲೆಸಿರುವ ರಾಯಪುರದಿಂದ ಸ್ವಲ್ಪ ದೂರಕ್ಕೆ ಸಾಗಿದರೆ, ಮರದ್ದೊಂದರ ನೆರಳಲ್ಲಿ ಮಲಗಿರುವ ಜಾನುವಾರುಗಳ ಮಂದೆಯೇ ಕಾಣಿಸಿತು. 'ಇವು ಹಗಲಿನಲ್ಲಿ ಹೀಗೆ ಸುಮ್ಮನೆ ಇರುತ್ತವೆ. ರಾತ್ರಿಯಾದ ಕೂಡಲೇ ಹೊಲಗಳಿಗೆ ನುಗ್ಗುತ್ತವೆ. ಈ ಜಾನುವಾರುಗಳನ್ನು ಓಡಿಸುವುದಕ್ಕಾಗಿ ಗ್ರಾಮದ ಜನರು ಕೂಗು ಹಾಕುವುದನ್ನು ರಾತ್ರಿಯಿಡೀ ಕೇಳಿಸಿಕೊಳ್ಳಬಹುದು' ಎನ್ನುತ್ತಾರೆ ಇಲ್ಲಿನ ನಿವಾಸಿ ರಾಜು ಕುಮಾರ್ ಸಿಂಗ್.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬೀಡಾಡಿ ದನಗಳ ಸಮಸ್ಯೆಯೂ ಪ್ರಮುಖ ವಿಷಯವಾಗಿದೆ. ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳ ನಾಯಕರು ಪ್ರಚಾರ ಸಭೆಗಳಲ್ಲಿ ಈ ವಿಚಾರ ಎತ್ತಿದ್ದಾರೆ. ತಮ್ಮ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಾಗಿಯೂ ಅವರು ಭರವಸೆ ಕೊಟ್ಟಿದ್ದಾರೆ.

ರಾಜ್ಯದಲ್ಲಿ ಬೀಡಾಡಿ ದನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ ಎಂಬುದನ್ನು ಬಿಜೆಪಿ ಮುಖಂಡರು ಒಪ್ಪುವುದಿಲ್ಲ. 2019ರಲ್ಲಿ ಸರ್ಕಾರ ಸಿದ್ಧಪಡಿಸಿದ ವರದಿಯ ಪ್ರಕಾರ, ರಾಜ್ಯದಲ್ಲಿರುವ ಬೀಡಾಡಿ ಜಾನುವಾರುಗಳ ಸಂಖ್ಯೆ 11.8 ಲಕ್ಷ. 2012ರಿಂದ 2019ರ ಅವಧಿಯಲ್ಲಿ ದೇಶದಲ್ಲಿ ಬೀಡಾಡಿ ಜಾನುವಾರುಗಳ ಏರಿಕೆ ಪ್ರಮಾಣವು ಶೇ 3.2ರಷ್ಟು. ಆದರೆ, ಉತ್ತರ ಪ್ರದೇಶದಲ್ಲಿ ಈ ಪ್ರಮಾಣ ಶೇ 17ರಷ್ಟು ಎಂದು ವರದಿಯಲ್ಲಿ ಹೇಳಲಾಗಿದೆ.

'ಬೀಡಾಡಿ ಜಾನುವಾರು ಸಮಸ್ಯೆಯು ಖಂಡಿತವಾಗಿಯೂ ಚುನಾವಣಾ ವಿಷಯವಾಗಿದೆ. ಬೆಳೆ ನಾಶದ ನಷ್ಟ ಅನುಭವಿಸಿದ ರೈತರು ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಉತ್ತರ ನೀಡಲಿದ್ದಾರೆ. ಕೃಷಿಯಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬರೂ ಇಂತಹ ಜಾನುವಾರುಗಳಿಂದ ನಷ್ಟ ಅನುಭವಿಸಿದ್ದಾರೆ' ಎಂದು ಲಖಿಂಪುರ ಖೇರಿ ಜಿಲ್ಲೆಯ ರೈತ ಮುನ್ನಾಲಾಲ್ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ಕೆಲವೇ ತಿಂಗಳ ಹಿಂದೆ ಅಧಿಕಾರ ವಹಿಸಿಕೊಂಡ ಹೊಸ ಮುಖ್ಯ ಕಾರ್ಯದರ್ಶಿಯವರಿಗೆ ಈ ಸಮಸ್ಯೆಯ ತೀವ್ರತೆಯ ಅರಿವು ಇದೆ. ಹಾಗಾಗಿಯೇ, ಅವರು ಅಧಿಕಾರ ವಹಿಸಿಕೊಂಡ ತಕ್ಷಣವೇ ಬೀಡಾಡಿ ದನಗಳನ್ನು ಹಿಡಿಯುವ ವಿಶೇಷ ಅಭಿಯಾನ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದರು.

ಆದಿತ್ಯನಾಥ ಮನೆಗೆ ಜಾನುವಾರು ಒಯ್ದಿದ್ದ ರೈತರು!

ಹತಾಶೆಗೊಂಡ ರೈತರು ತಮ್ಮ ತಮ್ಮ ಗ್ರಾಮಗಳಲ್ಲಿ ಇದ್ದ ಬೀಡಾಡಿ ಜಾನುವಾರುಗಳನ್ನು ಹಿಡಿದು ಲಖನೌಗೆ ತಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಮನೆಯ ಮುಂದೆ ಕಟ್ಟಿ ಹಾಕುವ ನಿರ್ಧಾರಕ್ಕೂ ಬಂದಿದ್ದರು. ಈ ಪ್ರಯತ್ನವನ್ನೂ ಅವರು ಮಾಡಿದ್ದರು. ಆದರೆ, ಅಧಿಕಾರಿಗಳು ಇದಕ್ಕೆ ಅವಕಾಶ ಕೊಡಲಿಲ್ಲ. ಕೆಲವು ಸ್ಥಳಗಳಲ್ಲಿ ರೈತರು ಜಾನುವಾರುಗಳನ್ನು ಶಾಲೆಗಳ ಆವರಣದಲ್ಲಿ ಸೇರಿಸಿ, ಆವರಣದ ಗೇಟುಗಳಿಗೆ ಹೊರಗಿನಿಂದ ಬೀಗ ಜಡಿದಿದ್ದರು.

ಬೀಡಾಡಿ ಜಾನುವಾರುಗಳಿಗಾಗಿ ಗೋಶಾಲೆಗಳನ್ನು ತೆರೆಯಲು ಗ್ರಾಮ ಪಂಚಾಯಿತಿಗಳಿಗೆ ನಿಧಿ ಒದಗಿಸುವುದಾಗಿ ಸರ್ಕಾರವು ಹೇಳುತ್ತಿದೆ. ಆದರೆ, ಸೀತಾಪುರ, ಲಖಿಂಪುರ ಖೇರಿ, ಹರ್ದೋಯಿ ಮತ್ತು ಉನ್ನಾವೊ ಜಿಲ್ಲೆಗಳ ಗ್ರಾಮಗಳಲ್ಲಿ ಗೋಶಾಲೆಗಳು ಈ ವರದಿಗಾರನ ಕಣ್ಣಿಗೆ ಬಿದ್ದಿಲ್ಲ. ಗೋಶಾಲೆ ಇದ್ದಲ್ಲಿಯೂ ಅವು ತುಂಬಿವೆ. ಹೊಸ ಜಾನುವಾರುಗಳಿಗೆ ಅಲ್ಲಿ ಸ್ಥಳವೇ ಇಲ್ಲ.

ಬೀಡಾಡಿ ಜಾನುವಾರು ಸಮಸ್ಯೆಯೇ ಅಲ್ಲ ಎಂಬುದು ಬಿಜೆಪಿ ನಾಯಕರ ಪ್ರತಿಪಾದನೆ. ಆದರೆ, ರೈತರು ಅದನ್ನು ಒಪ್ಪುತ್ತಿಲ್ಲ. 'ರೈತರಲ್ಲಿ ಭಾರಿ ಅಸಮಾಧಾನ ಇದೆ. ಅದು ಬಿಜೆಪಿಯ ಗೆಲುವಿನ ಸಾಧ್ಯತೆಯನ್ನು ಕಮರಿಸಲಿದೆಯೇ ಎಂಬುದನ್ನು ಇನ್ನಷ್ಟೇ ನೋಡಬೇಕಿದೆ' ಎಂದು ಜಮ್ನಾನ್ನ ಗ್ರಾಮದ ಜಸ್ವಂತ್ ದ್ವಿವೇದಿ ಹೇಳುತ್ತಾರೆ.

ಪಂಜಾಬ್: ಹಿಜಾಬ್ ಪ್ರತಿಧ್ವನಿ

ಸಂಗ್ರೂರ್: ಕರ್ನಾಟಕದಲ್ಲಿ ಶುರುವಾದ ಹಿಜಾಬ್ ವಿವಾದವು ಚುನಾವಣೆ ನಡೆಯಲಿರುವ ಪಂಜಾಬ್‌ನಲ್ಲೂ ಪ್ರತಿಧ್ವನಿಸಿದೆ.

ಮಲೇರ್‌ಕೋಟ್ಲಾದ ಅಮರ್‌ಗಢ ಕ್ಷೇತ್ರದಿಂದ ಸ್ಪರ್ಧಿಸಿರುವ ಮಾಜಿ ಐಪಿಎಸ್ ಅಧಿಕಾರಿ ಸಿಮ್ರನ್‌ಜಿತ್ ಸಿಂಗ್ ಮಾನ್ ಅವರು ಹಿಜಾಬ್ ಧರಿಸಿರುವ ಬಾಲಕಿಯ ಜೊತೆ ತೆಗೆಸಿಕೊಂಡಿರುವ ಚಿತ್ರ ಗಮನ ಸೆಳೆದಿದೆ. ಮಾನ್ ಅವರನ್ನು ಹೊರತುಪಡಿಸಿ, ಬೇರಾವ ಪಕ್ಷಗಳ ನಾಯಕರೂ ಚುನಾವಣಾ ಪ್ರಚಾರದಲ್ಲಿ ಹಿಜಾಬ್ ಪ್ರಕರಣವನ್ನು ಪ್ರಸ್ತಾಪಿಸಿಲ್ಲ.

ಮಾನ್ ಅವರು ಕರ್ನಾಟಕದ ಮುಸ್ಲಿಮರನ್ನು ಪಂಜಾಬ್‌ಗೆ ಆಹ್ವಾನಿಸಿದ್ದಾರೆ. ಸಂವಿಧಾನದಡಿ ಧಾರ್ಮಿಕ ಸ್ವಾತಂತ್ರ್ಯ ಅನುಭವಿಸಲು ಪಂಜಾಬ್‌ಗೆ ಬನ್ನಿ ಎಂದು ಅವರು ಕರೆ ನೀಡಿದ್ದಾರೆ.

ತೀವ್ರಗಾಮಿ ಸಿದ್ಧಾಂತದ ನಂಟು ಇರಿಸಿಕೊಂಡಿರುವ ಮಾನ್ ಅವರ ಪಕ್ಷ ಎಸ್‌ಎಡಿ (ಅಮೃತಸರ), ಪ್ರತ್ಯೇಕ ಖಲಿಸ್ತಾನಕ್ಕಾಗಿ ಬೇಡಿಕೆಯಿಟ್ಟು ಚುನಾವಣೆಗೆ ಸ್ಪರ್ಧಿಸಿರುವ ಏಕೈಕ ಪಕ್ಷವಾಗಿದೆ. ಮುಖ್ಯವಾಹಿನಿಯ ಪಕ್ಷಗಳೊಂದಿಗೆ ಮಾನ್ ಅವರ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಕರ್ನಾಟಕದ ಹಿಜಾಬ್ ಗದ್ದಲದ ಕುರಿತು ಅವರು ತೆರೆದುಕೊಂಡ ನಿಲುವು ಪ್ರಾಬಲ್ಯದ ಮಲೇರ್‌ಕೋಟ್ಲದಲ್ಲಿ ಮಹತ್ವ ಪಡೆದುಕೊಂಡಿದೆ.

ಮಾನ್ ಅವರು ಸ್ಪರ್ಧಿಸಿರುವ ಅಮರ್‌ಗಢವು ಕೆಲವು ಕಾರಣಗಳಿಂದ ಚುನಾವಣೆಯಲ್ಲಿ ಮಹತ್ವ ಪಡೆದಿದೆ. ಖಲಿಸ್ತಾನ್ ಕುರಿತ ವಿಚಾರಗಳು ಈಗಲೂ ಪ್ರಚಲಿತದಲ್ಲಿರುವ ಪಂಜಾಬ್‌ನ ಕೆಲವು ಪ್ರದೇಶಗಳಲ್ಲಿ ಅಮರ್‌ಗಢ ಮುಖ್ಯವಾದುದು. ಇತ್ತೀಚೆಗೆ ಅಪಘಾತದಲ್ಲಿ ಮೃತಪಟ್ಟ ದೀಪ್ ಸಿಧು ಅವರು ಮಾನ್ ಪರವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು.

ನಿತೀಶ್ –ಪ್ರಶಾಂತ್ ಭೇಟಿ

ಪಟ್ನಾ: ರಾಜಕೀಯ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ದೆಹಲಿಯಲ್ಲಿ ಇತ್ತೀಚೆಗೆ ಭೇಟಿ ಮಾಡಿ ಮಾತುಕತೆ ನಡೆಸಿದರು ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

2020ರಲ್ಲಿ ಜೆಡಿಯುನಿಂದ ಪ್ರಶಾಂತ್ ಕಿಶೋರ್ ಅವರನ್ನು ಉಚ್ಚಾಟನೆ ಮಾಡಲಾಗಿತ್ತು. ಇದಾದ ಬಳಿಕ ಇದೇ ಮೊದಲ ಬಾರಿಗೆ ನಿತೀಶ್ ಜೊತೆ ಪ್ರಶಾಂತ್ ಕಿಶೋರ್ ಮಾತುಕತೆ ನಡೆಸಿದ್ದಾರೆ. ದೆಹಲಿಯಲ್ಲಿರುವ ಬಿಹಾರ ಮುಖ್ಯಮಂತ್ರಿಯವರ ಅಧಿಕೃತ ನಿವಾಸದಲ್ಲಿ ರಾತ್ರಿ ಊಟ ಮಾಡಿದ ಇಬ್ಬರೂ, ಎರಡು ತಾಸು ಚರ್ಚೆ ನಡೆಸಿರುವುದು ಕುತೂಹಲಕ್ಕೆ ಎಡೆಮಾಡಿದೆ. ಪ್ರಶಾಂತ್ ಭೇಟಿಯನ್ನು ನಿತೀಶ್ ಖಚಿತಪಡಿಸಿದ್ದರೂ, ಸಭೆಯ ಬಗ್ಗೆ ಹೆಚ್ಚಿನ ಮಾಹಿತಿ ನೀಡಿಲ್ಲ. 'ಇದೊಂದು ಸೌಜನ್ಯದ ಭೇಟಿ' ಎಂದು ಪ್ರಶಾಂತ್ ಸ್ಪಷ್ಟಪಡಿಸಿದ್ದಾರೆ.

ಬಹುಕೋನ ಹಣಾಹಣಿಗೆ ಪಂಜಾಬ್ ಸಜ್ಜು

ಪ್ರಜಾವಾಣಿ ವಾರ್ತೆ

ಚಂಡೀಗಡ: ಸಿಖ್ ಧರ್ಮೀಯರ ನಾಡು ಪಂಜಾಬ್ ಬಹು ಆಯಾಮದ ಚುನಾವಣಾ ಕದನಕ್ಕೆ ಸಜ್ಜಾಗಿದೆ. ವಿಧಾನಸಭೆಗೆ ಭಾನುವಾರ ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, ಇದೇ ಮೊದಲ ಬಾರಿಗೆ ಐದು ರಾಜಕೀಯ ಪಕ್ಷಗಳ ನಡುವೆ ಪ್ರಬಲ ಸ್ಪರ್ಧೆ ಏರ್ಪಟ್ಟಿದೆ. ಇದು ಮತಗಳ ವಿಭಜನೆಗೆ ಕಾರಣವಾಗಲಿದ್ದು, ಅತಂತ್ರ ವಿಧಾನಸಭೆ ಏರ್ಪಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಕಾಂಗ್ರೆಸ್, ಎಎಪಿ, ಎಸ್‌ಎಡಿ–ಬಿಎಸ್‌ಪಿ ಮೈತ್ರಿಕೂಟ, ಬಿಜೆಪಿ–ಪಿಎಲ್‌ಸಿ–ಎಸ್‌ಎಡಿ (ಸಂಯುಕ್ತ) ಮೈತ್ರಿಕೂಟದ ಜೊತೆಗೆ ರೈತ ಸಂಘಟನೆಗಳ ವೇದಿಕೆಯಾದ ಸಂಯುಕ್ತ ಸಮಾಜ ಮೋರ್ಚಾ ಈ ಬಾರಿಯ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿವೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಗದ್ದುಗೆ ಉಳಿಸಿಕೊಳ್ಳಲು ಯತ್ನಿಸುತ್ತಿದೆ. ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವಧಿಯಲ್ಲಿ ಪೆಟ್ರೋಲ್ ಹಾಗೂ ವಿದ್ಯುತ್ ದರಗಳನ್ನು ಕಡಿಮೆ ಮಾಡಲಾಗಿದೆ ಎಂದು ಕಾಂಗ್ರೆಸ್ ಪ್ರತಿಪಾದಿಸಿದೆ.

ಪ್ರಬಲ ಎದುರಾಳಿ ಎಂದು ಪರಿಗಣಿತವಾಗಿರುವ ಆಮ್ ಆದ್ಮಿ ಪಕ್ಷವು ದೆಹಲಿ ಮಾದರಿ ಆಡಳಿತವನ್ನು ಮುಂದಿಟ್ಟುಕೊಂಡು ಪಂಜಾಬ್ ಗದ್ದುಗೆ ಏರಲು ಹವಣಿಸುತ್ತಿದೆ. ಕಳೆದ ಚುನಾವಣೆಯಲ್ಲಿ 20 ಕ್ಷೇತ್ರಗಳಲ್ಲಿ ಗೆದ್ದಿದ್ದ ಎಎಪಿ, ಇತ್ತೀಚೆಗೆ ನಡೆದ ಚಂಡೀಗಡ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡಿತ್ತು.

ಕೃಷಿ ಕಾಯ್ದೆ ವಿಚಾರವಾಗಿ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದ ಜೊತೆಗಿನ ಸಂಬಂಧ ಕಡಿದುಕೊಂಡಿದ್ದ ಶಿರೋಮಣಿ ಅಕಾಲಿದಳವು ಬಿಎಸ್‌ಪಿ ಜೊತೆ ಕಣಕ್ಕಿಳಿದಿದೆ. ಸುಖ್‌ಬೀರ್ ಸಿಂಗ್ ಬಾದಲ್ ನೇತೃತ್ವದಲ್ಲಿ ಚುನಾವಣೆಗೆ ಸಜ್ಜಾಗಿರುವ ಪಕ್ಷವು ತನ್ನನ್ನು 'ಪಂಜಾಬ್‌ನ ಸ್ವಂತ ಪಕ್ಷ' ಎಂದು ಬಿಂಬಿಸಿಕೊಂಡಿದೆ.



ಕಲಾವಿದರೊಬ್ಬರು ಚುನಾವಣಾ ಜಾಗೃತಿ ಮೂಡಿಸುವ ಫಲಕವನ್ನು ಅಮೃತಸರದಲ್ಲಿ ಶನಿವಾರ ಪ್ರದರ್ಶಿಸಿದರು–ಪಿಟಿಐ ಚಿತ್ರ

ಈ ಮೊದಲಿನ ಚುನಾವಣೆಗಳಲ್ಲಿ ಮೈತ್ರಿಕೂಟದ ಸಣ್ಣಪಕ್ಷವಾಗಿದ್ದ ಬಿಜೆಪಿ, ಈ ಬಾರಿ ಪ್ರಮುಖ ಪಕ್ಷವಾಗಿ ಚುನಾವಣೆಗೆ ಧುಮುಕಿದೆ. ಅಮರಿಂದರ್ ಸಿಂಗ್ ಅವರ ಪಂಜಾಬ್ ಲೋಕ ಕಾಂಗ್ರೆಸ್ (ಪಿಎಲ್‌ಸಿ) ಹಾಗೂ ಸುಖದೇವ್ ಸಿಂಗ್ ಧಿಂಡ್ಸಾ ಅವರ ಎಸ್‌ಎಡಿ (ಸಂಯುಕ್ತ) ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿದೆ. ಹೊಸ ಪಂಜಾಬ್ ನಿರ್ಮಾಣದಲ್ಲಿ ಡಬಲ್ ಎಂಜಿನ್ ಸರ್ಕಾರವನ್ನು ಆಯ್ಕೆ ಮಾಡುವಂತೆ ಬಿಜೆಪಿಯು ಮತದಾರರನ್ನು ಕೋರಿದೆ.

ರೈತ ಮುಖಂಡ ಗುರ್ನಾಮ್ ಸಿಂಗ್ ಚದೂನಿ ನೇತೃತ್ವದ ಸಂಯುಕ್ತ ಸಂಘರ್ಷ ಪಾರ್ಟಿ ಜೊತೆ ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಸಮಾಜ ಮೋರ್ಚಾ ಮೈತ್ರಿ ಮಾಡಿಕೊಂಡು ಚುನಾವಣೆಗೆ ಸ್ಪರ್ಧಿಸಿದೆ.

ಮುಖ್ಯಮಂತ್ರಿ ಚನ್ನಿ, ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು, ಎಎಪಿ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್, ಮಾಜಿ ಮುಖ್ಯಮಂತ್ರಿಗಳಾದ ಅಮರಿಂದರ್ ಸಿಂಗ್ ಮತ್ತು ಪ್ರಕಾಶ್‌ಸಿಂಗ್ ಬಾದಲ್, ಮಾಜಿ ಮುಖ್ಯಮಂತ್ರಿ ರಾಜಿಂದರ್ ಕೌರ್ ಭಟ್ಟಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಶ್ವಿನ್ ಶರ್ಮಾ, ಮಾಜಿ ಕೇಂದ್ರ ಸಚಿವ ವಿಜಯ್ ಸಂಪ್ಲಾ ಮತ್ತು ಎಸ್‌ಎಡಿ ಮುಖ್ಯಸ್ಥ ಸುಖಬೀರ್ ಸಿಂಗ್ ಬಾದಲ್ ಮೊದಲಾದವರು ಕಣದಲ್ಲಿರುವ ಪ್ರಮುಖರಾಗಿದ್ದಾರೆ. ಬಹುತೇಕ ಪಕ್ಷಗಳು ಮತದಾರರಿಗೆ ಉಚಿತ ಕೊಡುಗೆಗಳನ್ನು ಘೋಷಿಸಿವೆ. 2017ರಲ್ಲಿ ಶಿರೋಮಣಿ ಅಕಾಲಿದಳ–ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ಕಾಂಗ್ರೆಸ್ ಸೋಲಿಸಿತ್ತು. 2017ಕ್ಕೂ ಹಿಂದೆ 10 ವರ್ಷ ಶಿರೋಮಣಿ ಅಕಾಲಿದಳ–ಬಿಜೆಪಿ ಮೈತ್ರಿಕೂಟ ಅಧಿಕಾರದಲ್ಲಿತ್ತು.

ಪಂಜಾಬ್ ಚುನಾವಣೆ

117 ಪಂಜಾಬ್ ವಿಧಾನಸಭೆ ಸದಸ್ಯಬಲ

1,304 ಕಣದಲ್ಲಿರುವ ಅಭ್ಯರ್ಥಿಗಳು

2.14 ಕೋಟಿ ಮತದಾರರು

ಉತ್ತರ ಪ್ರದೇಶ: 3ನೇ ಹಂತದ ಮತದಾನ ಇಂದು

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಮೂರನೇ ಹಂತದ ಮತದಾನ ಭಾನುವಾರ ನಡೆಯಲಿದೆ. 16 ಜಿಲ್ಲೆಗಳಿಗೆ ಒಳಪಡುವ 59 ಕ್ಷೇತ್ರಗಳಲ್ಲಿ 627 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

2017ರ ಚುನಾವಣೆಯಲ್ಲಿ 59 ಕ್ಷೇತ್ರಗಳ ಪೈಕಿ ಬಿಜೆಪಿ 49ರಲ್ಲಿ, ಎಸ್‌ಪಿ 9 ಕ್ಷೇತ್ರಗಳಲ್ಲಿ ಗೆದ್ದಿದ್ದವು.

ಹಾಥರಸ್, ಫಿರೋಜಾಬಾದ್, ಇಟಾ, ಕಾಸ್‌ಗಂಜ್, ಮೈನ್‌ಪುರಿ, ಫರೂಕಾಬಾದ್, ಕನೌಜ್, ಇಟಾವಾ, ಔರಿಯಾ, ಕಾನ್ಪುರ ದೇಹತ್, ಕಾನ್ಪುರ ನಗರ, ಜಲೌನ್, ಝಾನ್ಸಿ, ಲಲಿತ್‌ಪುರ, ಹಮೀರ್‌ಪುರ, ಮಹೋಬಾ ಜಿಲ್ಲೆಗಳ 2.15 ಕೋಟಿ ಜನರು ಮತ ಚಲಾಯಿಸಲಿದ್ದಾರೆ.

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಸ್ಪರ್ಧಿಸಿರುವ ಕರ್ಹಾಲ್ ಕ್ಷೇತ್ರದ ಮತದಾನವೂ ಭಾನುವಾರ ನಡೆಯಲಿದೆ. ಈ ಕ್ಷೇತ್ರದಿಂದ ಕೇಂದ್ರ ಸಚಿವ ಎಸ್.ಪಿ. ಸಿಂಗ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಎಸ್‌ಪಿ ಸ್ಥಾಪಕ ಮುಲಾಯಂ ಸಿಂಗ್ ಅವರು ಮಗನ ಪರವಾಗಿ ಮತಯಾಚಿಸಿದ್ದರು. ಅಖಿಲೇಶ್ ಚಿಕ್ಕಪ್ಪ ಶಿವಪಾಲ್ ಯಾದವ್ ಅವರ ಭವಿಷ್ಯವೂ ನಿರ್ಧಾರವಾಗಲಿದೆ. ಈ ಕ್ಷೇತ್ರದಲ್ಲಿ ಅರೆಸೇನಾಪಡೆಗಳನ್ನು ಭದ್ರತೆಗೆ ನಿಯೋಜಿಸುವಂತೆ ಬಿಜೆಪಿ ಮನವಿ ಮಾಡಿತ್ತು.

ಹಿರಿಯ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಅವರ ಪತ್ನಿ ಲೂಸಿ ಖುರ್ಷಿದ್, ಮಾಜಿ ಐಪಿಎಸ್ ಅಧಿಕಾರಿ ಅಸೀಮ್ ಅರುಣ್, ಬಿಜೆಪಿಯ ಸತೀಶ್ ಮಹಾನ ಅವರು ಕಣದಲ್ಲಿರುವ ಇತರೆ ಪ್ರಮುಖರು.

ಸಿ.ಎಂ ಚನ್ನಿ ವಿರುದ್ಧ ಎಫ್‌ಐಆರ್

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಲ್ಲಿ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಸಿಧು ಮೂಸೆವಾಲಾ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಬಹಿರಂಗ ಪ್ರಚಾರವು ಶುಕ್ರವಾರ ಸಂಜೆ 6ಕ್ಕೆ ಅಂತ್ಯಗೊಂಡಿತ್ತು. ಅದರ ನಂತರವೂ ಇವರು ಚುನಾವಣಾ ಪ್ರಚಾರ ನಡೆಸಿದ್ದರು ಎಂದು ಆರೋಪಿಸಲಾಗಿದೆ. ಮನ್ಸಾ ಕ್ಷೇತ್ರದ ಎಎಪಿ ಅಭ್ಯರ್ಥಿ ವಿಜಯ್ ಸಿಂಗ್ಲಾ ಅವರು ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿದೆ.

ಅಭ್ಯರ್ಥಿಗಳಿಗೆ ಬಿಜೆಪಿಯಿಂದ ಆಮಿಷ: ಕಾಂಗ್ರೆಸ್ ಆರೋಪ

ಗೋವಾ: ಫಲಿತಾಂಶಕ್ಕೆ ಮುನ್ನವೇ ಪಕ್ಷಾಂತರದ ಮಾತುಕತೆ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್‌ನ ಯಾವುದೇ ಶಾಸಕ ಬಿಜೆಪಿ ಅಧಿಕಾರಕ್ಕೆ ಮರಳಲು ನೆರವಾದರೆ ಆ ಶಾಸಕನಿಗೆ ಏನಾಗಲಿದೆ ಎಂದು ಹೇಳಲಾಗದು. ಅಂಥವರನ್ನು ರಕ್ಷಿಸಲು ಯಾರಿಗೂ ಸಾಧ್ಯವಾಗದು

ಗಿರೀಶ್ ಚೋಡಣ್‌ಕರ್, ಗೋವಾ ಕಾಂಗ್ರೆಸ್ ಘಟಕದ ಅಧ್ಯಕ್ಷ

ವಿವಿಧ ಪಕ್ಷಗಳು ಮತ್ತು ಪಕ್ಷೇತರ ಅಭ್ಯರ್ಥಿಗಳ ಜತೆಗೆ ಸಂಪರ್ಕದಲ್ಲಿದ್ದೇವೆ. ಶಾಸಕರ ಸಂಖ್ಯೆ ಕಡಿಮೆಯಾದರೆ ಅದನ್ನು ಭರ್ತಿ ಮಾಡಿಕೊಳ್ಳುವುದು ಕಾನೂನುಬದ್ಧ ಪ್ರಯತ್ನವೇ ಆಗಿದೆ

ಗೋವಾ ಬಿಜೆಪಿಯ ಮುಖಂಡ

ಪಣಜಿ: ಗೋವಾ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗುವುದಕ್ಕೆ ಮೊದಲೇ ಪಕ್ಷಾಂತರದ ಮಾತುಗಳು ಅಲ್ಲಿನ ರಾಜಕೀಯ ವಲಯದಲ್ಲಿ ಕೇಳಿ ಬರತೊಡಗಿವೆ. ಫಲಿತಾಂಶದ ಬಳಿಕ ಪಕ್ಷ ಬದಲಿಸಿದರೆ ಲಾಭದಾಯಕ ಹುದ್ದೆಗಳನ್ನು ಒದಗಿಸಲಾಗುವುದು ಎಂಬ ಆಮಿಷವನ್ನು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಿಜೆಪಿಯ ಹಿರಿಯ ಮುಖಂಡರು ಒಡ್ಡುತ್ತಿದ್ದಾರೆ ಎಂದು ಕಾಂಗ್ರೆಸ್ ಗೋವಾ ಘಟಕದ ಅಧ್ಯಕ್ಷ ಗಿರೀಶ್ ಚೋಡಣ್‌ಕರ್ ಶನಿವಾರ ಆರೋಪಿಸಿದ್ದಾರೆ. ಗೋವಾ ವಿಧಾನಸಭಾ ಚುನಾವಣೆಯ ಮತ ಎಣಿಕೆ ಮಾರ್ಚ್ 10ರಂದು ನಡೆಯಲಿದೆ.

'ವಿಶ್ವಜಿತ್ ರಾಣೆ (ಆರೋಗ್ಯ ಸಚಿವ), ಮೌವಿನ್ ಗೊಡೊನ್ಹೊ (ಸಾರಿಗೆ ಸಚಿವ), ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಅವರ ದಲ್ಲಾಳಿಗಳು ನಮ್ಮ ಅಭ್ಯರ್ಥಿಗಳನ್ನು ಖರೀದಿಸಲು ಈಗಲೇ ಪ್ರಯತ್ನಿಸುತ್ತಿದ್ದಾರೆ. ಉತ್ತಮ ಕೊಡುಗೆಗಳ ಭರವಸೆ ಕೊಡುತ್ತಿದ್ದಾರೆ. ನಾವು ಬಹಿರಂಗವಾಗಿಯೇ ಎಚ್ಚರಿಕೆ ನೀಡುತ್ತಿದ್ದೇವೆ. ಈಗಿನದ್ದು ಹೊಸ ಕಾಂಗ್ರೆಸ್. ಶಾಸಕರನ್ನು ಸೆಳೆಯುವ ಪ್ರಯತ್ನ ನಡೆದರೆ ಕಾಂಗ್ರೆಸ್‌ನ ಒಬ್ಬ ಕಾರ್ಯಕರ್ತನೂ ಸುಮ್ಮನೆ ಇರುವುದಿಲ್ಲ' ಎಂದು ಗಿರೀಶ್ ಎಚ್ಚರಿಕೆ ಕೊಟ್ಟಿದ್ದಾರೆ.

2017ರ ಚುನಾವಣೆಯಲ್ಲಿ ಕಾಂಗ್ರೆಸ್‌ನ 17 ಶಾಸಕರು ಗೆದ್ದಿದ್ದರು. ಆದರೆ, ಅವರಲ್ಲಿ 15 ಮಂದಿ ಬಳಿಕ ಪಕ್ಷಾಂತರ ಮಾಡಿದ್ದರು. ಇದುವೇ ಕಾಂಗ್ರೆಸ್ ಪಕ್ಷದ ಈಗಿನ ಆತಂಕಕ್ಕೆ ಕಾರಣ.

ವ್ಯಾಪಕವಾಗಿ ನಡೆದ ಪಕ್ಷಾಂತರವು ಕೂಡ ಈ ಬಾರಿಯ ಚುನಾವಣೆಯ ವಿಷಯವಾಗಿತ್ತು. ಪಕ್ಷಾಂತರಿಗಳ ವಿರುದ್ಧ ಜನರು ಆಕ್ರೋಶಗೊಂಡಿದ್ದರು ಎಂದು ಗಿರೀಶ್ ಹೇಳಿದ್ದಾರೆ. ಪಕ್ಷದ ಅಭ್ಯರ್ಥಿಗಳು ಗೆಲುವಿನ ಬಳಿಕ ಪಕ್ಷಾಂತರಕ್ಕೆ ಯತ್ನಿಸಬಾರದು ಎಂಬ ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ.

ಹಲವು ಅಭ್ಯರ್ಥಿಗಳ ಜತೆಗೆ ಸಂಪರ್ಕದಲ್ಲಿರುವುದು ನಿಜ ಎಂಬುದನ್ನು ಬಿಜೆಪಿಯ ಹಿರಿಯ ಮುಖಂಡರೊಬ್ಬರು ಒಪ್ಪಿಕೊಂಡಿದ್ದಾರೆ. ಫಲಿತಾಂಶದ ಬಳಿಕ ಸರ್ಕಾರ ರಚನೆಗೆ ಶಾಸಕರ ಕೊರತೆಯಾದರೆ, ಪಕ್ಷೇತರ ಶಾಸಕರ ಮೂಲಕ ಅದನ್ನು ತುಂಬಲು ಯತ್ನಿಸಲಾಗುವುದು ಎಂದಿದ್ದಾರೆ.

ಅಭ್ಯರ್ಥಿಗಳನ್ನು ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಧಾರ್ಮಿಕ ಕೇಂದ್ರಗಳಿಗೆ ಕರೆದೊಯ್ದು ಪಕ್ಷ ಬಿಡುವುದಿಲ್ಲ ಎಂದು ಮತದಾನಕ್ಕೆ ಮೊದಲೇ ಕಾಂಗ್ರೆಸ್ ಪಕ್ಷವು ಪ್ರಮಾಣ ಮಾಡಿಸಿತ್ತು.

ತಮಿಳುನಾಡಿನಲ್ಲೂ 'ಹಿಜಾಬ್'

ಚೆನ್ನೈ: ತಮಿಳುನಾಡಿನ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಹಿಜಾಬ್ ವಿವಾದ ಶನಿವಾರ ಪ್ರತಿಧ್ವನಿಸಿತು.

ಮಧುರೆ ಜಿಲ್ಲೆಯ ಮೇಲೂರು ಪುರಸಭೆಯ ಬೂತ್‌ನಲ್ಲಿ ಮಹಿಳೆಯರು ಹಿಜಾಬ್ ಧರಿಸಿಕೊಂಡು ಮತದಾನ ಮಾಡುವುದನ್ನು ಭಾರತೀಯ ಜನತಾ ಪಕ್ಷದ (ಬಿಜೆಪಿ) ಮತಗಟ್ಟೆ ಪ್ರತಿನಿಧಿ ವಿರೋಧಿಸಿದರು.

ಸರ್ಕಾರಿ ನೌಕರರ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಆರೋಪದ ಮೇರೆಗೆ ಬಿಜೆಪಿ ಪ್ರತಿನಿಧಿ ಗಿರಿರಾಜನ್ ಎಂಬುವವರನ್ನು ಪೊಲೀಸರು ಬಂಧಿಸಿದ್ದು, ಅವರ ವಿರುದ್ಧ ಭಾರತ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಿಜಾಬ್ ಧರಿಸಿದ್ದ ಮಹಿಳೆ ಮತಗಟ್ಟೆಯೊಳಗಿದ್ದಾಗ ಬಿಜೆಪಿಯ ಮತಗಟ್ಟೆ ಪ್ರತಿನಿಧಿ ಗಿರಿರಾಜನ್ ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದಾಗಿ 30 ನಿಮಿಷ ಕಾಲ ಮತದಾನಕ್ಕೆ ಅಡ್ಡಿ ಉಂಟಾಯಿತು. ಆಡಳಿತ ಪಕ್ಷ ಡಿಎಂಕೆ ಮತ್ತು ವಿರೋಧ ಪಕ್ಷ ಎಐಎಡಿಎಂಕೆ ಸೇರಿದಂತೆ ಎಲ್ಲ ಪಕ್ಷಗಳ ಪ್ರತಿನಿಧಿಗಳು ಮತ್ತು ಮತಗಟ್ಟೆ ಅಧಿಕಾರಿಗಳು ಗಿರಿರಾಜನ್ ಆಕ್ಷೇಪಿಸಿದ್ದನ್ನು ಒಪ್ಪಲಿಲ್ಲ. ತಕ್ಷಣವೇ ಮಧ್ಯಪ್ರವೇಶಿಸಿದ ಪೊಲೀಸರು ಗಿರಿರಾಜನ್ ಅವರನ್ನು ಮತಗಟ್ಟೆಯಿಂದ ಹೊರ ಕಳುಹಿಸಿದರು. ಬಿಜೆಪಿ ಗಿರಿರಾಜನ್ ಬದಲು ಮತ್ತೊಬ್ಬರನ್ನು ಪಕ್ಷದ ಮತಗಟ್ಟೆ ಪ್ರತಿನಿಧಿಯಾಗಿ ನಿಯೋಜಿಸಿತು.

ಈ ಘಟನೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಚುನಾವಣಾ ಆಯುಕ್ತ ವಿ. ಪಳನಿಕುಮಾರ್, 'ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ಅವರ ಇಷ್ಟಾನುಸಾರ ವಸ್ತ್ರ ಧರಿಸುವ ಹಕ್ಕು ಇದೆ'. ಘಟನೆಯ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದೂ ಹೇಳಿದ್ದಾರೆ.

ಡಿಎಂಕೆ ಸಂಸದೆ ಕನಿಮೋಳಿ ಮತ್ತು ಶಾಸಕ ಉದಯನಿಧಿ ಸ್ಟಾಲಿನ್, ಬಿಜೆಪಿ ಪ್ರತಿನಿಧಿಯ ಕ್ರಮವನ್ನು ತೀವ್ರವಾಗಿ ಖಂಡಿಸಿದ್ದು, ಇಂತಹವರಿಗೆ ರಾಜ್ಯದಲ್ಲಿ ಸ್ಥಾನ ಇಲ್ಲ ಎಂದಿದ್ದಾರೆ.

ಎನ್‌ಪಿಪಿ ಅಭ್ಯರ್ಥಿಯ ತಂದೆಗೆ ಗುಂಡೇಟು

ಗುವಾಹಟಿ: ಮಣಿಪುರದಲ್ಲಿ ಚುನಾವಣಾ ಪೂರ್ವ ಹಿಂಸಾಚಾರ ವರದಿಯಾಗಿದೆ. ಚುನಾವಣಾ ಪ್ರಚಾರಸಭೆ ನಡೆಯುತ್ತಿದ್ದ ಇಂಫಾಲ್ ಪೂರ್ವ ಜಿಲ್ಲೆಯ ಯೈರಿಪೋಕ್ ಯಾಂಬೆಂ ಲೈಕೈ ಪ್ರದೇಶದಲ್ಲಿ ಎನ್‌ಪಿಪಿ ಅಭ್ಯರ್ಥಿಯ ತಂದೆಯ ಮೇಲೆ ದುಷ್ಕರ್ಮಿಗಳು ಶುಕ್ರವಾರ ರಾತ್ರಿ ಗುಂಡು ಹಾರಿಸಿದ್ದಾರೆ.

ಆಂಡ್ರೋ ಕ್ಷೇತ್ರದ ಅಭ್ಯರ್ಥಿ ಎಲ್. ಸಂಜಯ್ ಸಿಂಗ್ ಅವರ ತಂದೆ ಶಾಮ್‌ಜೈ ಸಿಂಗ್ ಅವರ ಬಲಭುಜಕ್ಕೆ ಗುಂಡು ಹೊಕ್ಕಿದೆ. ರಾತ್ರಿ 9.30ರ ವೇಳೆ ಈ ಘಟನೆ ನಡೆದಿದೆ. ಮಣಿಪುರದಲ್ಲಿ 2017ರಿಂದ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದು, ಸಂಜಯ್ ಸಿಂಗ್ ಅವರು ಇದೇ ಜನವರಿಯಲ್ಲಿ ಬಿಜೆಪಿ ತೊರೆದು ಎನ್‌ಪಿಸಿ ಸೇರ್ಪಡೆಯಾಗಿದ್ದರು.

ಮೇಘಾಲಯ ಮುಖ್ಯಮಂತ್ರಿ ಹಾಗೂ ಎನ್‌ಪಿಪಿ ಮುಖ್ಯಸ್ಥ ಕಾನ್ರಾಡ್ ಕೆ. ಸಂಗ್ಮಾ ಅವರು ಗುಂಡಿನ ದಾಳಿಯನ್ನು ಖಂಡಿಸಿದ್ದಾರೆ.

'ನಾನು 2002ರಿಂದಲೂ ಮಣಿಪುರದಲ್ಲಿ ಪ್ರಚಾರ ನಡೆಸುತ್ತಿದ್ದೇನೆ. ಆದರೆ ಈ ಪ್ರಮಾಣದ ಹಿಂಸಾಚಾರಗಳನ್ನು ಹಿಂದೆ ನೋಡಿರಲಿಲ್ಲ. ಪ್ರಜಾಪ್ರಭುತ್ವದ ಮಾರ್ಗದಲ್ಲಿ ಚುನಾವಣೆಯನ್ನು ಗೆಲ್ಲಲಾಗದ ಕೆಲವು ಪಕ್ಷಗಳು ನಮ್ಮ ಅಭ್ಯರ್ಥಿಗಳು ಹಾಗೂ ಮತದಾರರನ್ನು ಬೆದರಿಸುತ್ತಿವೆ. ಆದರೆ, ಮಣಿಪುರದ ಜನರು ಇಂತಹ ಬೆದರಿಕೆಗಳಿಗೆ ಬಗ್ಗದೆ ಮತ ಚಲಾಯಿಸಲಿದ್ದಾರೆ' ಎಂದು ಸಂಗ್ಮಾ ಹೇಳಿದ್ದಾರೆ.

'ಕೆಲಸ ಕೊಡಿ': ರಾಜನಾಥ್ ಸಭೆಯಲ್ಲಿ ಯುವಕರ ಗಲಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶದ ಗೊಂಡಾದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಭಾಷಣದ ಮಧ್ಯೆ, ಉದ್ಯೋಗ ನೀಡುವಂತೆ ಯುವಕರು ದನಿ ಎತ್ತಿದ ಘಟನೆ ನಡೆದಿದೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

ಭಾರತೀಯ ಸೇನೆಯಲ್ಲಿ ಉದ್ಯೋಗ ಕಲ್ಪಿಸುವಂತೆ ಯುವಕರು ಘೋಷಣೆ ಕೂಗಿದರು. ಅವರನ್ನು ಸಮಾಧಾನಪಡಿಸಿದ ರಾಜನಾಥ್, ನೇಮಕಾತಿ ಪ್ರಕ್ರಿಯೆ ನಡೆಯಲಿದೆ ಎಂದು ಭರವಸೆ ನೀಡಿದರು.



ರಾಜನಾಥ್

'ಸೇನಾ ನೇಮಕಾತಿಯನ್ನು ಆರಂಭಿಸಿ', 'ನಮ್ಮ ಬೇಡಿಕೆಯನ್ನು ಈಡೇರಿಸಿ' ಎಂಬ ಘೋಷಣೆಗಳು ಸಭಿಕರ ಸಾಲಿನಿಂದ ಕೇಳಿ ಬಂದವು. 'ಚಿಂತಿಸಬೇಡಿ. ನೇಮಕಾತಿ ನಡೆಯುತ್ತದೆ. ಕೊರೊನಾ ಕಾರಣದಿಂದ ಕೆಲವು ಅಡ್ಡಿಗಳು ಎದುರಾಗಿದ್ದವು' ಎಂದು ರಾಜನಾಥ್ ವಿವರಿಸಿದರು. ಈ ಮಾತಿಗೆ ಸಮಾಧಾನಗೊಂಡ ಯುಕವರು, 'ಭಾರತ್ ಮಾತಾಕಿ ಜೈ' ಘೋಷಣೆ ಕೂಗಿ ತಮ್ಮ ಪ್ರತಿಭಟನೆಯನ್ನು ಅಂತ್ಯಗೊಳಿಸಿದರು.

'ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ, ಪ್ರತೀ ವರ್ಷದ ಹೋಳಿ ಹಾಗೂ ದೀಪಾವಳಿ ಹಬ್ಬಗಳಿಗೆ ಎರಡು ಉಚಿತ ಎಲ್‌ಪಿಜಿ ಸಿಲಿಂಡರ್ ನೀಡುತ್ತೇವೆ' ಎಂದು ರಾಜನಾಥ್ ಜನರಿಗೆ ಭರವಸೆ ನೀಡಿದರು.

ತಮ್ಮ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಸರ್ಕಾರಿ ಹಾಗೂ ಖಾಸಗಿ ರಂಗದಲ್ಲಿ ಕೋಟ್ಯಂತರ ಉದ್ಯೋಗ ಸೃಷ್ಟಿಯಾಗಿವೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಟ್ವೀಟ್ ಮಾಡಿದ್ದರು. ಅವರ ಈ ಮಾತು ತೀವ್ರ ಟೀಕೆಗೆ ಗುರಿಯಾಗಿದೆ.

ಪ್ರಣಾಳಿಕೆ ನಿಯಂತ್ರಣಕ್ಕೆ ಕ್ರಮ: 'ಸುಪ್ರೀಂ'ಗೆ ಅರ್ಜಿ

ನವದೆಹಲಿ (ಪಿಟಿಐ): ಚುನಾವಣಾ ಪ್ರಣಾಳಿಕೆಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು. ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳಿಗೆ ಪಕ್ಷಗಳನ್ನು ಉತ್ತರದಾಯಿ ಮಾಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಾಗಿದೆ. ರಾಜಕೀಯ ಪಕ್ಷಗಳ ಪ್ರಣಾಳಿಕೆ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗವು ಕ್ರಮ ಕೈಗೊಂಡಿಲ್ಲ. ಹಾಗಾಗಿ, ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಅರ್ಜಿ ಸಲ್ಲಿಸಿದ್ದಾರೆ. ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಪಕ್ಷವು ಈಡೇರಿಸದೇ ಇದ್ದರೆ ಪಕ್ಷದ ಚಿಹ್ನೆ ಮತ್ತು ನೋಂದಣಿ ರದ್ದು ಮಾಡಬೇಕು ಎಂದು ಅರ್ಜಿಯಲ್ಲಿ ವಿನಂತಿಸಲಾಗಿದೆ.

ಪ್ರಣಾಳಿಕೆ ಎಂದರೆ ಪಕ್ಷವು ಆಯ್ಕೆಯಾದರೆ ಏನು ಮಾಡಲಿದೆ ಎಂಬುದನ್ನು ವಿವರಿಸುವ ದಾಖಲೆ. ಪಕ್ಷದ ಉದ್ದೇಶ ಏನು ಎಂಬುದರ ಘೋಷಣೆ. ಯಾವುದೇ ಪಕ್ಷವು ಉತ್ಪ್ರೇಕ್ಷಿತ ಭರವಸೆಗಳನ್ನು ನೀಡಬಾರದು. ಇಂತಹ ಭರವಸೆಗಳು ಸರ್ಕಾರದ ಬೊಕ್ಕಸದ ಮೇಲೆ ಭಾರಿ ಒತ್ತಡ ಸೃಷ್ಟಿಸಬಹುದು. ಹಾಗಾಗಿ, ಪ್ರಣಾಳಿಕೆ ನಿಯಂತ್ರಣಕ್ಕೆ ಆಯೋಗಕ್ಕೆ ಮಾರ್ಗಸೂಚಿ ಸೃಷ್ಟಿಸಬೇಕು ಎಂದು ಅರ್ಜಿದಾರರು ವಾದಿಸಿದ್ದಾರೆ.

ಜನಲೋಕಪಾಲ ಮಸೂದೆ–ಸ್ವರಾಜ್ ಮಸೂದೆಯನ್ನು ಜಾರಿಗೆ ತರುವುದಾಗಿ ಎಎಪಿಯು 2013, 2015 ಮತ್ತು 2020ರ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು.

ಆದರೆ, ಈವರೆಗೆ ಈ ಭರವಸೆಯನ್ನು ಈಡೇರಿಸಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಏಕರೂಪ ನಾಗರಿಕ ಸಂಹಿತೆ ಜಾರಿಯ ಭರವಸೆಯನ್ನು ಬಿಜೆಪಿ ಯಾವಾಗಲೂ ನೀಡುತ್ತದೆ. ಅದು ಈವರೆಗೆ ಜಾರಿಗೆ ಬಂದಿಲ್ಲ ಎಂಬುದನ್ನೂ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಕೇಂದ್ರ ಸಚಿವ ರಾಣೆಗೆ ರಾವುತ್ ತಿರುಗೇಟು

ಮುಂಬೈ: ಮಹಾರಾಷ್ಟ್ರ ಸರ್ಕಾರ ಮತ್ತು ಠಾಕ್ರೆ ಕುಟುಂಬಕ್ಕೆ ಇ.ಡಿ ನೋಟಿಸ್ ಬೆದರಿಕೆ ಹಾಕಿರುವ ಬಿಜೆಪಿ ನಾಯಕ ಮತ್ತು ಕೇಂದ್ರ ಸಚಿವ ನಾರಾಯಣ ರಾಣೆ ಅವರಿಗೆ ಶಿವ ಸೇನಾ ಸಂಸದ ಸಂಜಯ್ ರಾವುತ್ ಶನಿವಾರ ತಿರುಗೇಟು ನೀಡಿದ್ದಾರೆ.



ರಾಣೆ

'ನೀವು ಕೇಂದ್ರದ ಸಚಿವ ಇರಬಹುದು. ಆದರೆ, ಇದು ಮಹಾರಾಷ್ಟ್ರ. ಇದನ್ನು ಮರೆಯಬೇಡಿ. ನಾವು ನಿಮ್ಮ ಬಾಪ್ (ಅಪ್ಪ), ಇದರ ಅರ್ಥವೇನೆಂದು ನಿಮಗೆ ಚೆನ್ನಾಗಿ ಗೊತ್ತಿರಬಹುದು' ಎಂದು ರಾವತ್ ಎಚ್ಚರಿಕೆ ನೀಡಿದ್ದಾರೆ.

ಕೇಂದ್ರ ಸಚಿವರು ಬೆದರಿಕೆ ಒಡ್ಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಮುಂಬೈನಲ್ಲಿನ 'ಸುಲಿಗೆ ವ್ಯವಸ್ಥೆ'ಯನ್ನು ಬಹಿರಂಗಪಡಿಸಬೇಕಾಗುತ್ತದೆ ಎಂದು ರಾವತ್, ರಾಣೆಗೆ ಸೂಕ್ಷ್ಮ ಎಚ್ಚರಿಕೆ ನೀಡಿದರು. 'ರಾಣೆ ನಮ್ಮ ಜಾತಕ ಅವರ ಬಳಿ ಇದೆ ಎಂದು ಬೆದರಿಕೆಯೊಡ್ಡುತ್ತಿರಬಹುದು. ನಮ್ಮ ಬಳಿಯೂ ಅವರ ಜಾತಕವಿದೆ' ಎಂದು ರಾವತ್ ತಿರುಗೇಟು ನೀಡಿದರು.

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಬಾಂದ್ರಾ ಉಪನಗರದಲ್ಲಿರುವ ಖಾಸಗಿ ನಿವಾಸ 'ಮಾತೋಶ್ರೀ'ಯಲ್ಲಿರುವ ನಾಲ್ವರಿಗೆ ಇ.ಡಿ ನೋಟಿಸ್ ಜಾರಿ ಮಾಡಲು ಸಿದ್ಧತೆ ಮಾಡಿಕೊಂಡಿರುವುದು ಗೊತ್ತಿದೆ ಎಂದು ರಾಣೆ ಹೇಳಿಕೆ ನೀಡಿದ್ದರು.

'ಯುನಿಸ್': 2 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ವಿದ್ಯುತ್ ಸ್ಥಗಿತ

ಲಂಡನ್ (ಎಎಫ್‌ಪಿ, ರಾಯಿಟರ್ಸ್): ಅಟ್ಲಾಂಟಿಕ್‌ನಲ್ಲಿ ಉದ್ಭವಿಸಿರುವ 'ಯುನಿಸ್' ಚಂಡಮಾರುತದ ಪ್ರಭಾವದಿಂದಾಗಿ ಬ್ರಿಟನ್‌ನಲ್ಲಿ ಶುಕ್ರವಾರ ವಿದ್ಯುತ್ ವ್ಯತ್ಯಯ ಉಂಟಾಗಿದ್ದರಿಂದ 2 ಲಕ್ಷಕ್ಕೂ ಹೆಚ್ಚು ಮನೆಗಳಲ್ಲಿ ವಿದ್ಯುತ್ ಸರಬರಾಜು ಕಡಿತವಾಗಿತ್ತು. ಬ್ರಿಟನ್, ಐರ್ಲೆಂಡ್, ಬೆಲ್ಜಿಯಂ, ಜರ್ಮನಿ, ನೆದರ್‌ಲ್ಯಾಂಡ್ ಮತ್ತು ಪೋಲೆಂಡ್‌ನಲ್ಲಿ ಚಂಡಮಾರುತದಿಂದಾಗಿ ಸಂಭವಿಸಿದ ವಿವಿಧ ಅವಘಡಗಳಲ್ಲಿ 14 ಮಂದಿ ಮೃತಪಟ್ಟಿದ್ದಾರೆ ಎಂದು ತುರ್ತು ಸೇವೆ ಇಲಾಖೆ ತಿಳಿಸಿವೆ.

'ತುರ್ತು ಸಿಬ್ಬಂದಿ ವಿದ್ಯುತ್ ಪುನರ್ ಸ್ಥಾಪನೆಗೆ ಹರಸಾಹಸ ಪಡುತ್ತಿದ್ದಾರೆ. ಚಂಡಮಾರುತ ಪ್ರತಿ ಗಂಟೆಗೆ 196 ಕಿ.ಮೀ ವೇಗದಲ್ಲಿ ಬೀಸುತ್ತಿದೆ. ಚಂಡಮಾರುತದಿಂದಾಗಿ ಬ್ರಿಟನ್‌ನಲ್ಲಿ ಈವರೆಗೆ ಮೂವರು ಮೃತಪಟ್ಟಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಟನ್‌ನಲ್ಲಿ ಶುಕ್ರವಾರ ಹಲವೆಡೆ ರೈಲು ಸಂಚಾರವೂ ಸ್ಥಗಿತಗೊಂಡಿತ್ತು. ಈ ಪರಿಸ್ಥಿತಿಯಲ್ಲಿ ರೈಲಿನಲ್ಲಿ ಪ್ರಯಾಣಿಸದಂತೆ ರೈಲ್ವೆ ಅಧಿಕಾರಿಗಳು ಜನರಲ್ಲಿ ಮನವಿ ಮಾಡಿದ್ದಾರೆ.

ಫ್ರಾನ್ಸ್ ಕೂಡ ಇದೇ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, 75,000 ಹೆಚ್ಚು ಮನೆಗಳಿಗೆ ವಿದ್ಯುತ್ ಪೂರೈಕೆ ಕಡಿತವಾಗಿದೆ. ಅಲ್ಲದೇ ರೈಲು ಸಂಚಾರದಲ್ಲೂ ಅಡಚಣೆ ಉಂಟಾಗಿದೆ. ನೆದರ್‌ಲ್ಯಾಂಡ್‌ನಲ್ಲೂ ವಿದ್ಯುತ್ ವ್ಯತ್ಯಯ ಉಂಟಾಗಿದ್ದು, ರೈಲು ಸಂಚಾರವೂ ಅಸ್ತವ್ಯಸ್ತವಾಗಿದೆ.



ನೆದರ್‌ಲ್ಯಾಂಡ್‌ನ ಆಮ್‌ಸ್ಟರ್‌ಡ್ಯಾಮ್‌ನಲ್ಲಿ 'ಯುನಿಸ್' ಚಂಡಮಾರುತದಿಂದಾಗಿ ಬೀಸಿದ ಭಾರಿ ಗಾಳಿ ಪರಿಣಾಮ ಕಾರಿನ ಮೇಲೆ ಉರುಳಿದ ಮರಗಳು – ಎಎಫ್‌ಪಿ ಚಿತ್ರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1380 (1365)
ಸೋಯಾ (ರಿಫೈನ್ಡ್)	₹1335 (1325)
ಸೂರ್ಯಕಾಂತಿ (ರಿಫೈನ್ಡ್)	₹1350 (1340)
ಪಾಮೋಲಿನ್	₹1300 (1287)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2500-3300
ಮಧ್ಯಮ	₹2000-2500
ಸಣ್ಣ	₹1500-2000

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ	₹16500
ಗರಿಷ್ಠ	₹17931
ಮಾದರಿ	₹17800
ಒಟ್ಟು ಆವಕ	2,156.88 (ಕ್ವಿಂಟಲ್)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

ಬೆಂಗಳೂರು ಚಿನ್ನ

ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ)	₹51,800
ಆಭರಣ ಚಿನ್ನ (1 ಗ್ರಾಂ)	₹4,830
ಬೆಳ್ಳಿ (ಕೆ.ಜಿಗೆ)	₹65,800

ಬಿಡ್ ಸಲ್ಲಿಸಲು ಮಾರ್ಚ್ 11ರ ಗಡುವು

ರಿಲಯನ್ಸ್ ಕ್ಯಾಪಿಟಲ್ ಮಾರಾಟ: ಬಿಡ್ ಆಹ್ವಾನ

ನವದೆಹಲಿ (ಪಿಟಿಐ): ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಕ್ಯಾಪಿಟಲ್ ಕಂಪನಿಯನ್ನು ಖರೀದಿಸುವ ಸಂಬಂಧ ಆಸಕ್ತಿಪತ್ರ ಸಲ್ಲಿಸುವಂತೆ ಹೂಡಿಕೆದಾರರಿಗೆ ಆಹ್ವಾನ ನೀಡಲಾಗಿದೆ.

ಸಾಲದ ಸುಳಿಗೆ ಸಿಲುಕಿರುವ ಕಂಪನಿಯನ್ನು ಖರೀದಿಸಲು ಆಸಕ್ತಿ ವ್ಯಕ್ತಪಡಿಸಿ ಅರ್ಜಿ ಸಲ್ಲಿಸಲು ಮಾರ್ಚ್ 11 ಅಂತಿಮ ದಿನವಾಗಿದೆ. ಆ ಬಳಿಕ ಕಂಪನಿಯ ಪುನಶ್ಚೇತನ ಯೋಜನೆ ಸಲ್ಲಿಕೆಗೆ ಏಪ್ರಿಲ್ 20ರ ಗಡುವು ನೀಡಲಾಗಿದೆ ಎಂದು ರಿಲಯನ್ಸ್ ಕ್ಯಾಪಿಟಲ್ ಷೇರುಪೇಟೆಗೆ ಮಾಹಿತಿ ನೀಡಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೇಮಿಸಿರುವ ಆಡಳಿತಾಧಿಕಾರಿ ಬ್ಯಾಂಕ್ ಆಫ್ ಮಹಾರಾಷ್ಟ್ರದ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ವೈ. ನಾಗೇಶ್ವರ ರಾವ್ ಅವರು ದಿವಾಳಿ ಪ್ರಕ್ರಿಯೆಯ ಭಾಗವಾಗಿ ಕಂಪನಿಯನ್ನು ಮಾರಾಟ ಮಾಡುವ ಸಂಬಂಧ ಈ ಆಹ್ವಾನ ನೀಡಿದ್ದಾರೆ.



ಕಂಪನಿಯ ಒಟ್ಟಾರೆ ಸಾಲದ ಮೊತ್ತವು ₹ 40 ಸಾವಿರ ಕೋಟಿಗಳಷ್ಟು ಇದೆ ಎಂದು 2021ರ ಸೆಪ್ಟೆಂಬರ್‌ನಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಕಂಪನಿಯು ಷೇರುದಾರರಿಗೆ ತಿಳಿಸಿತ್ತು.

ಸಾಲ ಮರುಪಾವತಿಸದೇ ಇರುವುದು ಹಾಗೂ ಆಡಳಿತಾತ್ಮಕ ವಿಷಯಗಳಲ್ಲಿನ ವೈಫಲ್ಯದ ಕಾರಣಗಳಿಗಾಗಿ ಕಂಪನಿಯ ಆಡಳಿತ ಮಂಡಳಿಯನ್ನು ಅಮಾನತು ಮಾಡಿ ಆರ್‌ಬಿಐ 2021ರ ನವೆಂಬರ್ 29ರಂದು ಆದೇಶ ಹೊರಡಿಸಿದೆ. ಆ ಬಳಿಕ ದಿವಾಳಿ ಪ್ರಕ್ರಿಯೆಗಾಗಿ ರಾಷ್ಟ್ರೀಯ ಕಂಪನಿ ಕಾಯ್ದೆ ನ್ಯಾಯ ಮಂಡಳಿಯ (ಎನ್‌ಸಿಎಲ್‌ಟಿ) ಮುಂಬೈ ಶಾಖೆಗೆ ಡಿಸೆಂಬರ್‌ನಲ್ಲಿ ಅರ್ಜಿಯನ್ನೂ ಸಲ್ಲಿಸಿದೆ.

ಆರ್‌ಬಿಐ ಈಚೆಗೆ ದಿವಾಳಿ ಪ್ರಕ್ರಿಯೆ ಆರಂಭಿಸಿದ ಮೂರನೇ ಅತಿ ದೊಡ್ಡ ಬ್ಯಾಂಕೇತರ ಹಣಕಾಸು ಕಂಪನಿ (ಎನ್‌ಬಿಎಫ್‌ಸಿ) ಇದಾಗಿದೆ. ಎಸ್‌ಆರ್‌ಇಐ ಸಮೂಹ ಮತ್ತು ದಿವಾನ್ ಹೌಸಿಂಗ್ ಫೈನಾನ್ಸ್ ಕಾರ್ಪೊರೇಷನ್ (ಡಿಎಚ್‌ಎಫ್‌ಎಲ್) ಇನ್ನುಳಿದ ಎರಡು ಎನ್‌ಬಿಎಫ್‌ಸಿಗಳಾಗಿವೆ.

ಮುಖ್ಯಾಂಶಗಳು

- ಸಾಲ ಮರುಪಾವತಿ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ವೈಫಲ್ಯ
- ಕಂಪನಿಯ ಒಟ್ಟಾರೆ ಸಾಲದ ಮೊತ್ತ ₹ 40 ಸಾವಿರ ಕೋಟಿ

ಸಂಪತ್ತು ಇಳಿಕೆ

ಬೆಂಗಳೂರು: ಮುಂಬೈ ಷೇರುಪೇಟೆಯ (ಬಿಎಸ್‌ಇ) ವಾರದ ವಹಿವಾಟು ನಕಾರಾತ್ಮಕ ಅಂತ್ಯಕಂಡಿದೆ. ಇದರಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 3.41 ಲಕ್ಷ ಕೋಟಿಗಳಷ್ಟು ಕರಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 260.48 ಲಕ್ಷ ಕೋಟಿಗಳಿಗೆ ಇಳಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

19-2-2022

ಜಾವಾ 70/80(ಹೊಸ)	10200-10250
ಜಾವಾ 80/90(ಹೊಸ)	9800-9850
ದಪ್ಪ ಮಧ್ಯಪ್ರದೇಶ(ಹೊಸ)	9200-9250
ದಪ್ಪ ಗುಜರಾತ್(ಹೊಸ)	8450-8500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1375)
ಒಂದು ವಾರದ ಡೆಲಿವರಿ	1385 (1370)
ಸೋಯಾ ಕಚ್ಚಾ	1315 (1310)
ಪಾಮ್ ವಾರದ ಡೆಲಿವರಿ	1398 (1285)
ಸೂರ್ಯಕಾಂತಿ ಎಣ್ಣೆ ಕಚ್ಚಾ	1295 (1287)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	49,950 (49,950)
ಬೆಳ್ಳಿ ಕೆ.ಜಿ	64,000 (63,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಯುಎಇಗೆ ಚಿನ್ನಾಭರಣ ರಫ್ತಿಗೆ ಸುಂಕ ಇಲ್ಲ’

ನವದೆಹಲಿ (ಪಿಟಿಐ): ಭಾರತ–ಯುಎಇ ಮಧ್ಯೆ ‘ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (ಸಿಇಪಿಎ) ನಡೆದಿದ್ದು, ಇದರಿಂದಾಗಿ ಭಾರತದಿಂದ ರಫ್ತಾಗುವ ಚಿನ್ನಾಭರಣಗಳಿಗೆ ಯುಎಇನಲ್ಲಿ ಸುಂಕ ಇರುವುದಿಲ್ಲ. ಇದು ಭಾರತದ ಹರಳು ಮತ್ತು ಚಿನ್ನಾಭರಣ ವಲಯಕ್ಕೆ ಹೆಚ್ಚಿನ ರಫ್ತು ಅವಕಾಶಗಳು ಕಲ್ಪಿಸಲಿದೆ ಎಂದು ವಾಣಿಜ್ಯ ಕಾರ್ಯದರ್ಶಿ ಬಿ.ವಿ.ಆರ್. ಸುಬ್ರಹ್ಮಣ್ಯಂ ಹೇಳಿದ್ದಾರೆ

ಈ ಒಪ್ಪಂದವು ಏಪ್ರಿಲ್ ಅಥವಾ ಮೇ ತಿಂಗಳಿನಿಂದ ಜಾರಿಗೆ ಬರುವ ನಿರೀಕ್ಷೆ ಇದೆ. ಭಾರತದಿಂದ ರಫ್ತಾಗುವ ಚಿನ್ನಾಭರಣಗಳಿಗೆ ಶೇ 5ರಷ್ಟು ಸುಂಕ ತೆರಬೇಕಾಗುತ್ತದೆ.

ಯುಎಇನಿಂದ ಭಾರತಕ್ಕೆ ವಿನಾಯಿತಿ ದರದಲ್ಲಿ ಒಂದು ವರ್ಷದಲ್ಲಿ 200 ಟನ್‌ಗಳವರೆಗೆ ಚಿನ್ನವನ್ನು ಆಮದು ಮಾಡಿಕೊಳ್ಳಲು ಒಪ್ಪಂದವು ಅವಕಾಶ ಕಲ್ಪಿಸಿದೆ. ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲು ಇರುವ ಶುಲ್ಕಕ್ಕಿಂತ ಶೇ 1ರಷ್ಟು ಕಡಿಮೆ ಪ್ರಮಾಣದಲ್ಲಿ ಯುಎಇ ಭಾರತಕ್ಕೆ ಆಮದು ಮಾಡಬಹುದಾಗಿದೆ. 2020–21ರಲ್ಲಿ ಭಾರತವು ಯುಎಇನಿಂದ 70 ಟನ್‌ಗಳಷ್ಟು ಚಿನ್ನವನ್ನು ಆಮದು ಮಾಡಿಕೊಂಡಿದೆ. ಭಾರತವು ಪ್ರತಿ ವರ್ಷವೂ 800 ಟನ್‌ಗಳಷ್ಟು ಚಿನ್ನವನ್ನು ಆಮದು ಮಾಡಿಕೊಳ್ಳುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.



‘ಈ ಒಪ್ಪಂದದಿಂದಾಗಿ ಐದು ವರ್ಷಗಳಲ್ಲಿ ಉಭಯ ದೇಶಗಳ ದ್ವಿಪಕ್ಷೀಯ ವ್ಯಾಪಾರವು ₹ 7.5 ಲಕ್ಷ ಕೋಟಿಗೆ ಹೆಚ್ಚಳವಾಗುವ ನಿರೀಕ್ಷೆ ಇದೆ. ಜವಳಿ, ಪ್ಲಾಸ್ಟಿಕ್, ಚರ್ಮ ಮತ್ತು ಔಷಧ ವಲಯಗಳಲ್ಲಿ 10 ಲಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀಕರ ರೆಡ್ಡಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ


ಒಂಭತ್ತು ನಗರಗಳಲ್ಲಿ ಇ.ವಿ. ಚಾರ್ಜಿಂಗ್ ಕೇಂದ್ರಗಳ ಸಂಖ್ಯೆ ಹೆಚ್ಚಳ

ನವದೆಹಲಿ (ಪಿಟಿಐ): ಬೆಂಗಳೂರು, ದೆಹಲಿ, ಮುಂಬೈ ಸೇರಿದಂತೆ ದೇಶದ ಪ್ರಮುಖ ಒಂಭತ್ತು ನಗರಗಳಲ್ಲಿ ನಾಲ್ಕು ತಿಂಗಳಿನಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ಚಾರ್ಜಿಂಗ್ ಕೇಂದ್ರಗಳ ಸಂಖ್ಯೆಯು ಎರಡೂವರೆ ಪಟ್ಟು ಹೆಚ್ಚಳ ಕಂಡಿದೆ ಎಂದು ಇಂಧನ ಸಚಿವಾಲಯ ಹೇಳಿದೆ.

2021ರ ಅಕ್ಟೋಬರ್‌ನಿಂದ 2022ರ ಜನವರಿ ಅವಧಿಯಲ್ಲಿ ಒಂಭತ್ತು ನಗರಗಳಲ್ಲಿ 678 ಚಾರ್ಜಿಂಗ್ ಕೇಂದ್ರಗಳನ್ನು ಅಳವಡಿಸಲಾಗಿದೆ. ದೇಶದಲ್ಲಿ ಇರುವ ಒಟ್ಟಾರೆ 1,640 ಚಾರ್ಜಿಂಗ್ ಕೇಂದ್ರಗಳಲ್ಲಿ 940 ಚಾರ್ಜಿಂಗ್ ಕೇಂದ್ರಗಳು ಈ ಒಂಭತ್ತು ನಗರಗಳಲ್ಲಿಯೇ ಇವೆ ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಮತ್ತು ಅಳವಡಿಕೆಗೆ ಹೆಚ್ಚಿಸಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಸಾರ್ವಜನಿಕ ಬಳಕೆಯ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಬಿಇಇ, ಇಇಎಸ್‌ಎಲ್, ಎನ್‌ಟಿಪಿಸಿ ಸೇರಿದಂತೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳನ್ನು ಸೇರಿಸಿಕೊಳ್ಳಲಾಗಿದೆ. ಗ್ರಾಹಕರ ವಿಶ್ವಾಸ ಗಳಿಸಲು ಹಲವು ಖಾಸಗಿ ಸಂಘ–ಸಂಸ್ಥೆಗಳು ಸಹ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಮುಂದೆಬಂದಿವೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಹೆದ್ದಾರಿಗಳ ಬಳಿ ಒಟ್ಟಾರೆ 22 ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಈಗಾಗಲೇ ತಿಳಿಸಿವೆ. ಇದರಲ್ಲಿ ಇಂಡಿಯನ್ ಆಯಿಲ್ 10 ಸಾವಿರ, ಭಾರತ್ ಪೆಟ್ರೋಲಿಯಂ 7 ಸಾವಿರ ಹಾಗೂ ಇನ್ನುಳಿದ 5 ಸಾವಿರ ಚಾರ್ಜಿಂಗ್ ಕೇಂದ್ರವನ್ನು ಹಿಂದುಸ್ತಾನ್ ಪೆಟ್ರೋಲಿಯಂ ಸ್ಥಾಪಿಸಲಿದೆ.



ಸೆಮಿಕಂಡಕ್ಟರ್: 5 ಕಂಪನಿಗಳಿಂದ ₹ 1.53 ಲಕ್ಷ ಕೋಟಿ ಹೂಡಿಕೆ ಪ್ರಸ್ತಾವ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಚಿಪ್ ಮತ್ತು ಡಿಸ್‌ಪ್ಲೇ ತಯಾರಿಕಾ ಘಟಕಗಳ ಸ್ಥಾಪನೆಗಾಗಿ ಐದು ಕಂಪನಿಗಳು ₹ 1.53 ಲಕ್ಷ ಕೋಟಿ ಮೊತ್ತದ ಹೂಡಿಕೆ ಮಾಡಲು ಮುಂದಾಗಿವೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

₹ 76 ಸಾವಿರ ಕೋಟಿ ಮೊತ್ತದ ಸೆಮಿಕಂಡಕ್ಟರ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ₹ 42 ಸಾವಿರ ಕೋಟಿ ನೆರವು ನೀಡುವಂತೆ ವೇದಾಂತ ಫಾಕ್ಸ್‌ಕಾನ್ ಜೆವಿ, ಐಜಿಜೆಸ್‌ಎಸ್ ವೆಂಚರ್ಸ್ ಮತ್ತು ಐಎಸ್‌ಎಂಸಿ ಕಂಪನಿಗಳು ಕೇಂದ್ರ ಸರ್ಕಾರಕ್ಕೆ ಕೇಳಿವೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಸಚಿವಾಲಯವು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	515
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-44500
ಹಳತು	46000-53000
ಚಿತ್ರದುರ್ಗ	
ಅಪಿ	45839-46269
ಬೆಟ್ಟೆ	36219-36659
ಕೆಂಪುಗೋಟು	31609-32010
ರಾಶಿ	45329-45779
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	24599-29599
ಚಾಲಿ	46599-46899
ಕೋಕ	16899-27789
ಹೊಸಚಾಲಿ	38299-41399
ಕೆಂಪುಗೋಟು	29469-29469
ರಾಶಿ	44599-45899
ತಟ್ಟಿಬೆಟ್ಟೆ	28399-37289
ಶಿರಸಿ	
ಬೆಟ್ಟೆ	37499-44809
ಬಿಳಿಗೋಟು	22899-34109
ಚಾಲಿ	27919-42488
ರಾಶಿ	42649-47108
ರಾಮನಗರ ರೇಷ್ಮೆ	
ಮಿಶ್ರತಳಿ	400-771
ದ್ವಿತಳಿ	550-972

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15900	16050	246.85 ಸೆಂಟ್ಸ್
ಎಸಿ	7810	7400	8000	
ಆರ್‌ಪಿ	8000	7800	8100	ಲಂಡನ್
ಆರ್‌ಸಿ	4075	3950	4050	2271 ಡಾಲರ್ಸ್

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ಅರಿಂದಮ್–ಸೈಫ್ 94 ರನ್ ಜೊತೆಯಾಟ

ಕರ್ನಾಟಕಕ್ಕೆ ಇನಿಂಗ್ಸ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ದಿಟ್ಟ ಹೋರಾಟದ ಪರಿಣಾಮ ರೈಲ್ವೇಸ್ ತಂಡ ಸಮಾಧಾನಕರ ಮೊತ್ತ ಕಲೆ ಹಾಕಿತು. ಆದರೆ ಮೊದಲ ಇನಿಂಗ್ಸ್ ಮುನ್ನಡೆಯ ಲಾಭ ಕರ್ನಾಟಕಕ್ಕೆ ಲಭಿಸಿತು.

ಇಲ್ಲಿನ ಗುರುನಾನಕ್ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ರಣಜಿ ಟೂರ್ನಿಯ ಎಲೀಟ್ 'ಸಿ' ಗುಂಪಿನ ಪಂದ್ಯದಲ್ಲಿ ಕರ್ನಾಟಕದ ಮೊದಲ ಇನಿಂಗ್ಸ್ ಮೊತ್ತವಾದ 481 ರನ್‌ಗಳಿಗೆ ಉತ್ತರಿಸಿದ ರೈಲ್ವೇಸ್ 426 ರನ್ ಗಳಿಸಿತು.

55 ರನ್‌ಗಳ ಮುನ್ನಡೆ ಗಳಿಸಿದ ಕರ್ನಾಟಕ ಮೂರನೇ ದಿನವಾದ ಶನಿವಾರದ ಅಂತ್ಯಕ್ಕೆ ಒಂದು ವಿಕೆಟ್ ಕಳೆದುಕೊಂಡು 63 ರನ್ ಕಲೆ ಹಾಕಿದೆ. ಈ ಮೂಲಕ ಒಟ್ಟಾರೆ 118 ರನ್‌ಗಳ ಮುನ್ನಡೆ ಗಳಿಸಿದೆ. ಪಂದ್ಯ ಡ್ರಾದಲ್ಲಿ ಕೊನೆಗೊಳ್ಳುವುದು ಬಹುತೇಕ ಖಚಿತವಾಗಿದೆ.

ಎರಡನೇ ದಿನದಾಟದ ಶುಕ್ರವಾರ 3 ವಿಕೆಟ್‌ಗಳಿಗೆ 213 ರನ್ ಗಳಿಸಿದ್ದ ರೈಲ್ವೇಸ್ ಇನಿಂಗ್ಸ್‌ಗೆ ಅರಿಂದಂ ಘೋಷ್ ಮತ್ತು ಮೊಹಮ್ಮದ್ ಸೈಫ್ ಶನಿವಾರ ಮತ್ತಷ್ಟು ಬಲ ತುಂಬಿದರು.

ಶುಕ್ರವಾರ 78 ರನ್ ಗಳಿಸಿದ್ದ ಅರಿಂದಂ ಮೋಹಕ ಬ್ಯಾಟಿಂಗ್ ಮುಂದುವರಿಸಿ ಶತಕ ಪೂರೈಸಿದರು. ಎಂಟು ರನ್‌ಗಳೊಂದಿಗೆ ಶುಕ್ರವಾರ ಕ್ರೀಸ್‌ನಲ್ಲಿದ್ದ ಸೈಫ್ 84 ರನ್‌ಗಳೊಂದಿಗೆ ಮಿಂಚಿದರು. ಇವರಿಬ್ಬರು 94 ರನ್‌ಗಳ ಜೊತೆಯಾಟದ ಮೂಲಕ ತಂಡವನ್ನು 300 ರನ್‌ಗಳ ಸನಿಹ ತಲುಪಿಸಿದರು.

ಅರಿಂದಂ ಅವರು ಶ್ರೇಯಸ್ ಗೋಪಾಲ್‌ಗೂ ಮೊಹಮ್ಮದ್ ಸೈಫ್ ಅವರು ಕೃಷ್ಣಪ್ಪ ಗೌತಮ್‌ಗೂ ವಿಕೆಟ್ ಒಪ್ಪಿಸಿದರು. ಉಪೇಂದ್ರ ಯಾದವ್ ಮತ್ತು ಕರಣ್ ಶರ್ಮಾ ಅವರ ವಿಕೆಟ್ ಕಬಳಿಸಿ ವಿದ್ಯಾಧರ ಪಾಟೀಲ ನಿರೀಕ್ಷೆ ಮೂಡಿಸಿದರು. ಆದರೆ ಮಧ್ಯಮ ವೇಗಿ ಯುವರಾಜ್ ಸಿಂಗ್ ಮತ್ತು ಎಡಗೈ ಸ್ಪಿನ್ನರ್ ಅವಿನಾಶ್ ಯಾದವ್ ಜೋಡಿ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದರು. ಇವರಿಬ್ಬರ ನಡುವಿನ 60 ರನ್‌ಗಳ ಜೊತೆಯಾಟವು ರೈಲ್ವೇಸ್ ಮೊತ್ತ 400 ರನ್‌ಗಳ ಗಡಿ ದಾಟಲು ನೆರವಾಯಿತು.


ರೋನಿತ್ ಮೋರೆ –ಪ್ರಜಾವಾಣಿ ಚಿತ್ರ

ದೇವದತ್ತ ಪಡಿಕ್ಕಲ್ ವೈಫಲ್ಯ

ಎರಡನೇ ಇನಿಂಗ್ಸ್‌ನಲ್ಲಿ ಕರ್ನಾಟಕ ಆರಂಭದಲ್ಲೇ ಆಘಾತ ಕಂಡಿತು. ಮೊದಲ ಇನಿಂಗ್ಸ್‌ನಲ್ಲಿ 21 ರನ್ ಗಳಿಸಿದ್ದ ದೇವದತ್ತ ಪಡಿಕ್ಕಲ್ ಮತ್ತೊಮ್ಮೆ ವೈಫಲ್ಯ ಕಂಡರು. ಐದನೇ ಓವರ್‌ನಲ್ಲಿ ಅನುಭವಿ ಲೆಗ್ ಸ್ಪಿನ್ನರ್ ಅಮಿತ್ ಮಿಶ್ರಾ ಅವರು ಪಡಿಕ್ಕಲ್ ವಿಕೆಟ್ ಉರುಳಿಸಿದರು. ಆದರೆ ಮಯಂಕ್ ಅಗರವಾಲ್ ಮತ್ತು ಆರ್.ಸಮರ್ಥ್ ಎಚ್ಚರಿಕೆಯ ಆಟವಾಡಿ ವಿಕೆಟ್ ಕಳೆದುಕೊಳ್ಳದಂತೆ ಇನಿಂಗ್ಸ್ ಮುನ್ನಡೆಸಿದರು. ಅರ್ಧಶತಕದ ಜೊತೆಯಾಟವಾಡಿದರು.


ಮಯಂಕ್ ಅಗರ್‌ವಾಲ್ –ಪ್ರಜಾವಾಣಿ ಚಿತ್ರ

ಸ್ಕೋರ್ ಕಾರ್ಡ್

ಕರ್ನಾಟಕ, ಮೊದಲ ಇನಿಂಗ್ಸ್ 481 (109.3 ಓವರ್)
ರೈಲ್ವೇಸ್, ಮೊದಲ ಇನಿಂಗ್ಸ್ 426 (128.3 ಓವರ್) (ಶುಕ್ರವಾರ 65 ಓವರ್‌ಗಳಲ್ಲಿ 3ಕ್ಕೆ 213)
ಅರಿಂದಂ ಎಲ್‌ಬಿಡಬ್ಲ್ಯು ಶ್ರೇಯಸ್ 105 (197 ಎ, 4x12, 6x3), ಸೈಫ್ ಸ್ಟಂಪ್ಡ್ ಶರತ್ ಬಿ ಗೌತಮ್ 84 (148 ಎ, 4x11, 6x1), ಉಪೇಂದ್ರ ಸಿ ಸಿದ್ಧಾರ್ಥ್ ಬಿ ವಿದ್ಯಾಧರ್ 12 (18 ಎ, 4x2), ಕರಣ್ ಶರ್ಮಾ ಸಿ ಶರತ್ ಬಿ ವಿದ್ಯಾಧರ್ 8 (11 ಎ, 4x1), ಯುವರಾಜ್ ಸಿಂಗ್ ಸಿ ಶರತ್ ಬಿ ರೋನಿತ್ 48 (68 ಎ, 4x7, 6x1), ಅವಿನಾಶ್ ಯಾದವ್ ಸಿ ದೇವದತ್ತ ಬಿ ರೋನಿತ್ 22 (47 ಎ, 4x4), ಅಮಿತ್ ಔಟಾಗದೆ 4 (14 ಎ), ಹಿಮಾಂಶು ಸಾಂಗ್ವಾನ್ ಸಿ ಶರತ್ ಬಿ ರೋನಿತ್ 2 (11 ಎ)
ಇತರೆ (ಬೈ 4, ಲೆಗ್‌ಬೈ 11, ನೋಬಾಲ್ 3, ವೈಡ್ 2) 20
ವಿಕೆಟ್ ಪತನ: 4-294 (ಅರಿಂದಂ ಘೋಷ್, 93.5), 5-323 (ಉಪೇಂದ್ರ ಯಾದವ್, 100.3), 6-329 (ಕರಣ್ ಶರ್ಮಾ, 102.2), 7-359 (ಮೊಹಮ್ಮದ್ ಸೈಫ್, 109.2), 8-419 (ಯುವರಾಜ್ ಸಿಂಗ್, 122.5), 9-420 (ಅವಿನಾಶ್ ಯಾದವ್, 124.6), 10-426 (ಹಿಮಾಂಶು ಸಾಂಗ್ವಾನ್, 128.3)
ಬೌಲಿಂಗ್: ವೈಶಾಖ್ ವಿಜಯಕುಮಾರ್ 22–4–72–0, ವಿದ್ಯಾಧರ್ ಪಾಟೀಲ್ 18–1–77–2, ಕೃಷ್ಣಪ್ಪ ಗೌತಮ್ 41–10–127–4, ರೋನಿತ್ ಮೋರೆ 27.3–9–67–3, ಶ್ರೇಯಸ್ ಗೋಪಾಲ್ 20–1–68–1
ಕರ್ನಾಟಕ ಎರಡನೇ ಇನಿಂಗ್ಸ್ 1ಕ್ಕೆ 63 (17 ಓವರ್)
ಮಯಂಕ್ ಬ್ಯಾಟಿಂಗ್ 39 (53 ಎ, 4x5, 6x1), ದೇವದತ್ತ ಬಿ ಅಮಿತ್ 4 (8 ಎ), ಸಮರ್ಥ್ ಬ್ಯಾಟಿಂಗ್ 20 (41 ಎ, 4x2)
ವಿಕೆಟ್ ಪತನ: 1-11 (ದೇವದತ್ತ ಪಡಿಕ್ಕಲ್, 4.3)
ಬೌಲಿಂಗ್: ಅಮಿತ್ ಮಿಶ್ರಾ 7–2–18–1, ಯುವರಾಜ್ ಸಿಂಗ್ 5–0–24–0, ಶಿವಂ ಚೌಧರಿ 3–0–19–0, ಅವಿನಾಶ್ ಯಾದವ್ 2–0–2–0

ಟೆಸ್ಟ್ ತಂಡಕ್ಕೂ ರೋಹಿತ್ ನಾಯಕ

ಶ್ರೀಲಂಕಾ ಎದುರಿನ ಟೆಸ್ಟ್ ಸರಣಿಗೆ ತಂಡ: ಪೂಜಾರ, ಅಜಿಂಕ್ಯ ರಹಾನೆಗೆ ಕೊಕ್

ನವದೆಹಲಿ (ಪಿಟಿಐ): ಸೀಮಿತ ಓವರ್‌ಗಳ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರೇ ಟೆಸ್ಟ್ ತಂಡವನ್ನೂ ಮುನ್ನಡೆಸಲಿದ್ದಾರೆ.

ಮಾರ್ಚ್ 4ರಿಂದ ಶ್ರೀಲಂಕಾ ಎದುರಿನ ಎರಡು ಟೆಸ್ಟ್‌ಗಳ ಸರಣಿಗೆ ಆತಿಥ್ಯ ವಹಿಸಲಿರುವ ಭಾರತ ತಂಡಕ್ಕೆ ರೋಹಿತ್ ಅವರನ್ನು ನಾಯಕರನ್ನಾಗಿ ರಾಷ್ಟ್ರೀಯ ಕ್ರಿಕೆಟ್ ಸಮಿತಿಯು ನೇಮಕ ಮಾಡಿದೆ.

ಈಚೆಗೆ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಟೆಸ್ಟ್ ಸರಣಿಯ ನಂತರ ವಿರಾಟ್ ಕೊಹ್ಲಿ ನಾಯಕತ್ವ ತೊರೆದಿದ್ದರು. ಅದರ ನಂತರ ರೋಹಿತ್ ಅವರನ್ನೇ ನಾಯಕರನ್ನಾಗಿ ಮಾಡುವ ಮಾತುಗಳು ಕೇಳಿಬಂದಿದ್ದವು.

ಮೊಹಾಲಿ ಮತ್ತು ಬೆಂಗಳೂರಿನಲ್ಲಿ ಈ ಸರಣಿಯ ಎರಡು ಪಂದ್ಯಗಳು ನಡೆಯಲಿವೆ. ಅನುಭವಿ ಬ್ಯಾಟರ್‌ಗಳಾದ ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ, ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಮತ್ತು ವೇಗಿ ಇಶಾಂತ್ ಶರ್ಮಾ ಅವರನ್ನು ಆಯ್ಕೆ ಮಾಡಿಲ್ಲ.


ರೋಹಿತ್ ಶರ್ಮಾ

ಉತ್ತರಪ್ರದೇಶ ತಂಡದ ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಅವರೊಬ್ಬರೇ 18 ಜನರ ತಂಡದಲ್ಲಿ ಸ್ಥಾನ ಪಡೆದಿರುವ ಹೊಸಮುಖ.


ಚೇತನ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿಯು ಟಿ20 ಮತ್ತು ಟೆಸ್ಟ್ ಸರಣಿಗಳಿಗೆ ತಂಡಗಳನ್ನು ಪ್ರಕಟಿಸಿತು. ವಿರಾಟ್ ಕೊಹ್ಲಿ ಮತ್ತು ರಿಷಭ್ ಪಂತ್ ಅವರಿಗೆ ಟಿ20 ಸರಣಿಯಿಂದ ವಿಶ್ರಾಂತಿ ನೀಡಲಾಗಿದೆ. ಗಾಯಗೊಂಡಿರುವ ಕೆ.ಎಲ್. ರಾಹುಲ್ ಮತ್ತು ವಾಷಿಂಗ್ಟನ್ ಸುಂದರ್ ಅವರನ್ನು ಸರಣಿಯಿಂದ ಕೈಬಿಡಲಾಗಿದೆ. ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ಸರಣಿಯ ವೇಳೆ ಫಿಟ್ ಆದರೆ ಮಾತ್ರ ತಂಡಕ್ಕೆ ಪ್ರವೇಶಿಸಲಿದ್ದಾರೆ.

'ರಹಾನೆ ಮತ್ತು ಪೂಜಾರ ಕುರಿತು ಚರ್ಚಿಸಲಾಯಿತು. ಶ್ರೀಲಂಕಾ ಸರಣಿಗೆ ಅವಕಾಶ ಸಿಗುವುದಿಲ್ಲವೆಂದು ಅವರಿಗೆ ಈಗಾಗಲೇ ತಿಳಿಸಲಾಗಿದೆ. ಆದರೆ ಅವರು ರಣಜಿ ಟ್ರೋಫಿ ಟೂರ್ನಿಯಲ್ಲಿ ಉತ್ತಮ ಆಡಿದರೆ ತಂಡದ ಬಾಗಿಲು ಅವರಿಗಾಗಿ ತೆರೆದಿರುತ್ತದೆ' ಎಂದು ಚೇತನ್ ಶರ್ಮಾ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ. ಇದೇ 24ರಿಂದ ಮೂರು ಟಿ20 ಪಂದ್ಯಗಳ ಸರಣಿ ಆರಂಭವಾಗುವುದು. ಮಾರ್ಚ್ 4ರಂದು ಮೊಹಾಲಿಯಲ್ಲಿ ಮೊದಲ ಟೆಸ್ಟ್ ಆರಂಭವಾಗಲಿದೆ. ಎರಡನೇ ಟೆಸ್ಟ್ ಮಾರ್ಚ್ 12ರಿಂದ 16ವರೆಗೆ ಬೆಂಗಳೂರಿನಲ್ಲಿ ನಡೆ ಯಲಿದೆ.

ತಂಡಗಳು: ಟೆಸ್ಟ್: ರೋಹಿತ್ ಶರ್ಮಾ (ನಾಯಕ), ಮಯಂಕ್ ಅಗರವಾಲ್, ಪ್ರಿಯಾಂಕ್ ಪಾಂಚಾಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಹನುಮವಿಹಾರಿ, ಶುಭಮನ್ ಗಿಲ್, ರಿಷಭ್ ಪಂತ್, ಕೆ.ಎಸ್. ಭರತ್, ಆರ್. ಅಶ್ವಿನ್, ರವಿ ಜಡೇಜ, ಜಯಂತ್ ಠಾಕೂರ್, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಸೌರಭ್ ಕುಮಾರ್; **ಟಿ20:** ರೋಹಿತ್ ಶರ್ಮಾ (ನಾಯಕ), ಋತುರಾಜ್ ಗಾಯಕವಾಡ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ವೆಂಕಟೇಶ್ ಅಯ್ಯರ್, ದೀಪಕ್ ಹೂಡಾ, ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ಸಂಜು ಸ್ಯಾಮ್ಸನ್, ಯಜುವೇಂದ್ರ ಚಾಹಲ್, ರವೀಂದ್ರ ಜಡೇಜ, ಕುಲದೀಪ್ ಯಾದವ್, ರವಿಬಿಷ್ಣೋಯಿ, ಆವೇಶ್ ಖಾನ್.

ಸರ್ಫರಾಜ್ ಖಾನ್ ದ್ವಿಶತಕದ ಆಟ

ಅಹಮದಾಬಾದ್: ಸರ್ಫರಾಜ್ ಖಾನ್ ಅವರ ದ್ವಿಶತಕದ ನೆರವಿನಿಂದ ಮುಂಬೈ ತಂಡ ಎಲೀಟ್ 'ಡಿ' ಗುಂಪಿನ ಪಂದ್ಯದಲ್ಲಿ ಬೃಹತ್ ಮೊತ್ತ ಪೇರಿಸಿತು.


ಸರ್ಫರಾಜ್ ಖಾನ್

ಹಾಲಿ ಚಾಂಪಿಯನ್ ಸೌರಾಷ್ಟ್ರ ಎದುರಿನ ಪಂದ್ಯದಲ್ಲಿ ಮುಂಬೈ 7ಕ್ಕೆ 544 ರನ್ ಕಲೆ ಹಾಕಿತು.

121 ರನ್‌ಗಳಿಂದ ಶನಿವಾರ ಆಟ ಮುಂದುವರಿಸಿದ ಸರ್ಫರಾಜ್ 401 ಎಸೆತಗಳಲ್ಲಿ 30 ಬೌಂಡರಿ ಮತ್ತು ಏಳು ಸಿಕ್ಸರ್ ಸಿಡಿಸಿ 275 ರನ್ ಗಳಿಸಿದರು. ಅಜಿಂಕ್ಯ ರಹಾನೆ 290 ಎಸೆತಗಳಲ್ಲಿ 129 ರನ್ ಗಳಿಸಿದರು. ಸರ್ಫರಾಜ್ ಮತ್ತು ರಹಾನೆ ನಾಲ್ಕನೇ ವಿಕೆಟ್‌ಗೆ 252 ರನ್‌ಗಳ ಜೊತೆಯಟವಾಡಿದರು. ಸೌರಾಷ್ಟ್ರದ ಚೇತೇಶ್ವರ ಪೂಜಾರ ಶೂನ್ಯಕ್ಕೆ ಔಟಾದರು. 220 ರನ್‌ಗಳಿಗೆ ಆಲೌಟಾದ ತಂಡ ಫಾಲೊ ಆನ್‌ಗೆ ಒಳಗಾಯಿತು.

ಸಮಾಧಾನಕರ ಜಯಕ್ಕೆ ಪೊಲಾರ್ಡ್ ಬಳಗದ ಯತ್ನ

ಯುವಪ್ರತಿಭೆಗಳಿಗೆ ಮಿನುಗಲು ಅವಕಾಶ

ಕೋಲ್ಕತ್ತ (ಪಿಟಿಐ): ವೆಸ್ಟ್ ಇಂಡೀಸ್ ಎದುರಿನ ಚುಟುಕು ಕ್ರಿಕೆಟ್ ಸರಣಿಯನ್ನು ಈಗಾಗಲೇ ಕೈವಶ ಮಾಡಿಕೊಂಡಿರುವ ಭಾರತ ತಂಡವು ಭಾನುವಾರ ನಡಯಲಿರುವ ಕೊನೆಯ ಪಂದ್ಯದಲ್ಲಿ ಯುವಪ್ರತಿಭೆಗಳಿಗೆ ಕಣಕ್ಕಿಳಿಸುವ ಯೋಚನೆಯಲ್ಲಿದೆ.

ಮೂರು ಪಂದ್ಯಗಳ ಸರಣಿಯಲ್ಲಿ ಈಗಾಗಲೇ ಎರಡು ಪಂದ್ಯಗಳನ್ನು ಆತಿಥೇಯ ತಂಡವು ಜಯಿಸಿದೆ. ಬಯೋ ಬಬಲ್ ಬಳಲಿಕೆಯನ್ನು ನೀಗಲು ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ವಿಕೆಟ್‌ಕೀಪರ್ ರಿಷಭ್ ಪಂತ್ ಅವರಿಗೆ 10 ದಿನಗಳ ವಿಶ್ರಾಂತಿ ನೀಡಲಾಗಿದೆ. ಆದ್ದರಿಂದ ಅವರಿಬ್ಬರೂ ಮುಂದಿನ ವಾರ ನಡೆಯಲಿರುವ ಶ್ರೀಲಂಕಾ ಎದುರಿನ ಟಿ20 ಸರಣಿಯಲ್ಲಿ ಆಡುವುದಿಲ್ಲ.

ವಿಂಡೀಸ್ ಎದುರಿನ ಕೊನೆ ಪಂದ್ಯದಲ್ಲಿಯೂ ಕಣಕ್ಕಿಳಿಯುವುದು ಅನುಮಾನ. ರಿಷಭ್ ಕೂಡ ಆಡದಿದ್ದರೆ ವಿಕೆಟ್‌ಕೀಪಿಂಗ್ ಹೊಣೆ ಇಶಾನ್ ಕಿಶನ್ ಅವರಿಗೆ ಬೀಳುವುದು ಖಚಿತ.

ಕಳೆದೆರಡು ಪಂದ್ಯಗಳಲ್ಲಿ ಅವರು ರೋಹಿತ್ ಶರ್ಮಾ ಅವರೊಂದಿಗೆ ಇಶಾನ್ ಇನಿಂಗ್ಸ್ ಆರಂಭಿಸಿದ್ದರು. ಆದರೆ ಯಶಸ್ವಿಯಾಗಿರಲಿಲ್ಲ.

ಐಪಿಎಲ್ ನಲ್ಲಿ ದುಬಾರಿ ಆಟಗಾರನಾಗಿ ಹೊರ ಹೊಮ್ಮಿದ್ದ ಇಶಾನ್, ವಿಂಡೀಸ್ ಎದುರಿನ ಮೊದಲ ಪಂದ್ಯದಲ್ಲಿ 42 ಎಸೆತಗಳಲ್ಲಿ 35 ರನ್ ಮತ್ತು ಎರಡನೇ ಪಂದ್ಯದಲ್ಲಿ 10 ಎಸೆತಗಳಲ್ಲಿ ಎರಡು ರನ್ ಗಳಿಸಿದ್ದರು. ಇದರಿಂದಾಗಿ ಋತುರಾಜ್ ಆರಂಭಿಕನಾಗಿ ಕಣಕ್ಕಿಳಿ ದರೂ ಅಚ್ಚರಿಯೇನಿಲ್ಲ. ಆಗ ಇಶಾನ್ ನಾಲ್ಕನೇ ಕ್ರಮಾಂಕದಲ್ಲಿ ಆಡಬಹುದು. ಕೊಹ್ಲಿ ಬದಲು ಶ್ರೇಯಸ್ ಅಯ್ಯರ್‌ಗೆ ಸ್ಥಾನ ಸಿಗುವ ನಿರೀಕ್ಷೆ ಇದೆ.


ವೆಂಕಟೇಶ್ ಅಯ್ಯರ್ –ಎಎಫ್‌ಪಿ ಚಿತ್ರ

ಎರಡನೇ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅವರಿಗೆ ಮತ್ತೊಂದು ಅವಕಾಶ ಲಭಿಸಲಿದೆ.

ಮಧ್ಯಮ ಕ್ರಮಾಂಕದಲ್ಲಿ ಸೂರ್ಯ ಕುಮಾರ್ ಯಾದವ್ ಜೊತೆಗೆ ಇನಿಂಗ್ಸ್‌ಗೆ ಬಲ ಒದಗಿಸಿದರೆ ಉತ್ತಮ ಮೊತ್ತ ಪೇರಿಸುವುದು ಸುಲಭವಾಗಲಿದೆ.

ಬೌಲಿಂಗ್ ವಿಭಾಗದಲ್ಲಿ ತಮ್ಮ ತೋಳ್ಬಲ ಮೆರೆಯಲು ದೀಪಕ್ ಹೂಡಾ, ಆವೇಶ್ ಖಾನ್ ಮತ್ತು ಮೊಹಮ್ಮದ್ ಸಿರಾಜ್ ಕಾತುರದಿಂದ ಕಾದುಕುಳಿತಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ ಅನುಪಸ್ಥಿತಿಯಲ್ಲಿ ಭುವನೇಶ್ವರ್ ಕುಮಾರ್ ಮತ್ತು ಹರ್ಷಲ್ ಪಟೇಲ್ ಅವರು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಈ ಬಾರಿಯ ಪ್ರವಾಸದಲ್ಲಿ ಸಾಲು ಸಾಲು ನಿರಾಶೆ ಅನುಭವಿಸಿರುವ ಕೀರನ್ ಪೊಲಾರ್ಡ್ ಪಡೆಗೆ ಭಾರತದ ನೆಲದಲ್ಲಿ ಸಮಾಧಾನದ ಗೆಲುವು ಸಾಧಿಸುವ ಕೊನೆಯ ಅವಕಾಶ ಇದಾಗಿದೆ. ಏಕದಿನದಲ್ಲಿ ಸಾರಾಸಗಟಾಗಿ ಸರಣಿ ಸೋತಿತ್ತು. ಚುಟುಕು ಸರಣಿಯ ಮೊದಲ ಪಂದ್ಯದಲ್ಲಿ ಕೀರನ್ ಬಳಗವು ವೈಫಲ್ಯ ಅನುಭವಿಸಿತ್ತು.

ಎರಡನೇ ಪಂದ್ಯದಲ್ಲಿ ರೋವ್ಮನ್ ಪೊವೆಲ್ ಮತ್ತು ನಿಕೊಲಸ್ ಪೂರನ್ ಅರ್ಧಶತಕ ಬಾರಿಸಿದ್ದರು. ಆಲ್‌ರೌಂಡರ್ ರಾಸ್ಟನ್ ಚೇಸ್ ಕೂಡ ಉತ್ತಮವಾಗಿ ಆಡಿದ್ದರು. ಇದರಿಂದಾಗಿ ಕೊನೆಯ ಪಂದ್ಯದಲ್ಲಿ ರೋಹಿತ್ ಬಳಗಕ್ಕೆ ದಿಟ್ಟ ಪೈಪೋಟಿಯೊಡ್ಡುವ ಸಾಧ್ಯತೆ ಹೆಚ್ಚಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ರಾಜ್‌ವರ್ಧನ್ ಸುಳ್ಳುದಾಖಲೆ: ಕ್ರಮಕ್ಕೆ ಶಿಫಾರಸು

ಮುಂಬೈ (ಪಿಟಿಐ) ವಯಸ್ಸಿಗೆ ಸಂಬಂಧಿಸಿ ಸುಳ್ಳು ದಾಖಲೆಗಳನ್ನು ನೀಡಿದ 19 ವರ್ಷದೊಳಗಿನವರ ಭಾರತ ಕ್ರಿಕೆಟ್ ತಂಡದ ಆಟಗಾರ ರಾಜ್‌ವರ್ಧನ್ ಹಂಗರಗೇಕರ್ ವಿರುದ್ಧ ಕ್ರಮಕ್ಕೆ ಮಹಾರಾಷ್ಟ್ರ ಕ್ರೀಡಾ ಆಯುಕ್ತ ಓಂಪ್ರಕಾಶ್ ಬಕೋರಿಯ ಶಿಫಾರಸು ಮಾಡಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಈ ಕುರಿತು ಪತ್ರ ಬರೆದಿರುವ ಓಂಪ್ರಕಾಶ್ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ.

ಈಚೆಗೆ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಭಾರತದ ತಂಡದಲ್ಲಿ ರಾಜ್‌ವರ್ಧನ್ ಆಡಿದ್ದರು. ಟೂರ್ನಿಗಾಗಿ ನೀಡಿದ ವಯಸ್ಸಿನ ಪ್ರಮಾಣಪತ್ರದಲ್ಲಿ 2001ರ ಜನವರಿ 10ರ ಬದಲು 2002ರ ನವೆಂಬರ್ 10ರಂದು ಜನಿಸಿದ್ದಾಗಿ ನಮೂದಾಗಿತ್ತು. ಈ ಮೂಲಕ ಒಂದು ವರ್ಷದ ಅವಧಿ ಕಡಿಮೆಯಾಗುಂತೆ ಮಾಡಿದ್ದರು.

'ರಾಜ್‌ವರ್ಧನ್ ಅವರಿಂದ ಕ್ರೀಡೆಯ ಸಮಗ್ರತೆಗೂ ದೇಶದ ಗೌರವಕ್ಕೂ ಧಕ್ಕೆಯಾಗಿದೆ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕಾದುದು ಅನಿವಾರ್ಯವಾಗಿದೆ' ಎಂದು ಓಂಪ್ರಕಾಶ್ ಹೇಳಿದ್ದಾರೆ.

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ –2 ಟೂರ್ನಿ

ಅರ್ಜುನ್–ಎರ್ಲರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಅರ್ಜುನ್ ಖಾಡೆ ಮತ್ತು ಆಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್ ಅವರು ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಎರಡನೇ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಂಗಣದಲ್ಲಿ ಶನಿವಾರ ನಡೆದ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಖಾಡೆ–ಎರ್ಲರ್ ಜೋಡಿ ಭಾರತರ ರಾಮ್‌ಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಜೋಡಿಯನ್ನು 6-3, 6-7 (4), 10-7ರಲ್ಲಿ ಮಣಿಸಿತು.

ವುಕಿಚ್ –ಕುಜ್ಮನೊವ್ ಫೈನಲ್: ಆಸ್ಟ್ರೇಲಿಯಾದ ಅಲೆಕ್ಸಾಂಡ್ ವುಕಿಚ್ ಮತ್ತು ಬಲ್ಗೇರಿಯಾದ ದಿಮಿತರ್ ಕುಜ್ಮನೊವ್ ಟೂರ್ನಿಯ ಪ್ರಶಸ್ತಿಗಾಗಿ ಭಾನುವಾರ ಸೆಣಸುವರು.

ಶನಿವಾರ ನಡೆದ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಅಲೆಕ್ಸಾಂಡರ್, ಮೊದಲ ಟೂರ್ನಿಯ ರನ್ನರ್ ಅಪ್ ಕ್ರೊವೇಷ್ಯಾದ ಬೋರ್ನ ಗೋಜೊ ಅವರನ್ನು 7-6 (5), 6-3ರಲ್ಲಿ ಸೋಲಿಸಿದರು. ದಿಮಿತರ್ 4-6, 7-5, 6-3ರಲ್ಲಿ ಫ್ರಾನ್ಸ್‌ನ ಎನ್ಜೊ ಕಾಕಾಡ್ ಎದುರು ಜಯ ಸಾಧಿಸಿದರು. ಮೊದಲ ಸೆಟ್‌ನ ಆರಂಭದಲ್ಲಿ ಎರಡು ಬಾರಿ ಎದುರಾಳಿಯ ಸರ್ವ್ ಮುರಿದು 3–0ಯಿಂದ ಎನ್ಜೊ ಮುನ್ನಡೆದರು. ಆದರೆ ನಂತರ ದಿಮಿತ್ ಆಧಿಪತ್ಯ ಸ್ಥಾಪಿಸಿದರು. ನಂತರ ತಿರುಗೇಟು ನೀಡಿದ ಎನ್ಜೊ ಸೆಟ್ ಗೆದ್ದು ಸಂಭ್ರಮಿಸಿದರು. ಎರಡನೇ ಸೆಟ್‌ನ ಆರಂಭದಲ್ಲಿ ಅಮೋಘ ಆಟವಾಡಿದ ಎನ್ಜೊ 5–3ರ ಮುನ್ನಡೆಯೊಂದಿಗೆ ಪಂದ್ಯ ಗೆಲ್ಲುವ ಭರವಸೆ ಮೂಡಿಸಿದ್ದರು. ನಂತರ ಅಬ್ಬರಿಸಿದ ದಿಮಿತರ್ ಟೆನಿಸ್ ಪ್ರಿಯರನ್ನು ರಂಜಿಸಿ ಸೆಟ್ ಗೆದ್ದುಕೊಂಡರು. ನಿರ್ಣಾಯಕ ಸೆಟ್‌ನಲ್ಲೂ ಪಾರಮ್ಯ ಮೆರೆದರು. ಅಗ್ರ ಶ್ರೇಯಾಂಕದ ವುಕಿಚ್ ಭರ್ಜರಿ ಏಸ್‌ಗಳನ್ನು ಸಿಡಿಸಿ ಎದುರಾಳಿಯನ್ನು ಮಣಿಸಿದರು.


ಪ್ರಶಸ್ತಿಯೊಂದಿಗೆ ಅರ್ಜುನ್ ಖಾಡೆ ಮತ್ತು ಅಲೆಕ್ಸಾಂಡರ್ ಎರ್ಲರ್ ಸಂಭ್ರಮ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ

ಮುಂದಿನ ವರ್ಷ ಐಒಸಿ ಸಭೆಗೆ ಭಾರತ ಆತಿಥ್ಯ

ಬೆಂಗಳೂರು: ಮುಂದಿನ ವರ್ಷ ಭಾರತವು ಅಂತರರಾಷ್ಟ್ರೀಯ ಒಲಿಂಪಿಕ್ ಕಮಿಟಿಯ ಸಭೆಗೆ ಆತಿಥ್ಯ ವಹಿಸಲಿದೆ.

ಶನಿವಾರ ಐಒಸಿಯು ಈ ವಿಷಯವನ್ನು ಖಚಿತಪಡಿಸಿತು. 1983ರ ನಂತರ ಇದೇ ಮೊದಲ ಬಾರಿಗೆ ಭಾರತದಲ್ಲಿ ಈ ಸಭೆ ನಡೆಯಲಿದೆ. ಮುಂಬೈನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಜಿಯೊ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಸಭೆಯನ್ನು ಆಯೋಜಿಸಲಾಗುತ್ತಿದೆ.

ಬೀಜಿಂಗ್‌ನಲ್ಲಿ ಈಚೆಗೆ ಸಭೆ ನಡೆದಿತ್ತು. 2023ರ ಸಮ್ಮೇಳನಕ್ಕಾಗಿ ವಿಶ್ವದ ವಿವಿಧ ನಗರಗಳು ಬಿಡ್ ಸಲ್ಲಿಸಿದ್ದವು. ಅದರಲ್ಲಿ ಮುಂಬೈಗೆ 76 ಮತಗಳ ಪೈಕಿ 75 ಲಭಿಸಿದವು.

ಐಒಸಿಯ ಸದಸ್ಯೆಯಾಗಿರುವ ಭಾರತದ ನೀತಾ ಅಂಬಾನಿ, ಭಾರತ ಒಲಿಂಪಿಕ್ ಸಮಿತಿ (ಐಒಸಿ) ಅಧ್ಯಕ್ಷ ಡಾ. ನರಿಂದರ್ ಬಾತ್ರಾ, ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಹಾಗೂ ಒಲಿಂಪಿಕ್ ಚಿನ್ನದ ಪದಕ ವಿಜೇತ ಶೂಟರ್ ಅಭಿನವ ಬಿಂದ್ರಾ ಅವರಿದ್ದ ನಿಯೋಗವು ಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಿತ್ತು.

'ಇದೊಂದು ಹೆಮ್ಮೆಯ ಕ್ಷಣ. ಒಲಿಂಪಿಕ್ ಕ್ರೀಡೆಗ ಳತ್ತ ಯುವಕರನ್ನು ಆಕರ್ಷಿಸಿ ಪ್ರೋತ್ಸಾಹ ನೀಡಲು ಇದರಿಂದ ಸಾಧ್ಯವಾಗಲಿದೆ. ಐಒಸಿಗೆ ಧನ್ಯವಾದಗಳು' ಎಂದು ನೀತಾ ಅಂಬಾನಿ ಸಂತಸ ವ್ಯಕ್ತಪಡಿಸಿದ್ದಾರೆ.

ಐಎಸ್‌ಎಲ್: ಅಗ್ರಸ್ಥಾನಕ್ಕೆ ಹೈದರಾಬಾದ್

ಬ್ಯಾಂಬೊಲಿಮ್ (ಪಿಟಿಐ): ಎಫ್‌ಸಿ ಗೋವಾ ಎದುರು 3–2ರ ಜಯ ಗಳಿಸಿದ ಹೈದರಾಬಾದ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಹೈದರಾಬಾದ್ ಪರ ಬಾರ್ತೊಲೊಮೆ ಒಗ್ಬೆಚೆ (25, 41ನೇ ನಿಮಿಷ) ಮತ್ತು ಜವೊ (70ನೇ ನಿ) ಗೋಲು ಗಳಿಸಿದರು. ಗೋವಾ ತಂಡಕ್ಕಾಗಿ ಒರ್ಟಿಜ್ (35ನೇ ನಿ) ಮತ್ತು ದೇವೇಂದ್ರ (73ನೇ ನಿ) ಗೋಲು ಗಳಿಸಿದರು.

ತಿಲಕ್ ಮೈದಾನದಲ್ಲಿ ಮತ್ತೊಂದು ಪಂದ್ಯದ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ತಂಡ ಕೇರಳ ಬ್ಲಾಸ್ಟರ್ಸ್ ಜೊತೆ 2–2ರ ಡ್ರಾ ಸಾಧಿಸಿತು. ಏಳನೇ ನಿಮಿಷದಲ್ಲಿ ಅಡ್ರಿಯನ್ ಲೂನಾ ಗಳಿಸಿದ ಗೋಲಿನ ಬಲದಿಂದ ಕೇರಳ ಬ್ಲಾಸ್ಟರ್ಸ್ ಮುನ್ನಡೆ ಸಾಧಿಸಿತು. ಮರುನಿಮಿಷದಲ್ಲಿ ಗೋಲು ಗಳಿಸಿದ ವಿಲಿಯಮ್ಸನ್ ಅವರು ಎಟಿಕೆಎಂಬಿಗೆ ಸಮಬಲ ತಂದುಕೊಟ್ಟರು. 64ನೇ ನಿಮಿಷದಲ್ಲಿ ಲೂನಾ ಮತ್ತೆ ಮಿಂಚಿ ತಂಡಕ್ಕೆ ಮುನ್ನಡೆ ಗಳಿಸಿಕೊಟ್ಟರು. ಆದರೆ 90ನೇ ನಿಮಿಷದಲ್ಲಿ ಜಾನಿ ಕೌಕೊ ಅವರ ಗೋಲಿನೊಂದಿಗೆ ಎಟಿಕೆಎಂಬಿ ಸಮಬಲ ಸಾಧಿಸಿತು.

ಸೆಮಿಫೈನಲ್ ಕನಸಿನಲ್ಲಿ ಜೆಎಫ್‌ಸಿ: ವಾಸ್ಕೊದಲ್ಲಿ ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಜೆಮ್ಶೆಡ್‌ಪುರ ಎಫ್‌ಸಿ ಮತ್ತು ಚೆನ್ನೈಯಿನ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ಜಯ ಗಳಿಸಿದರೆ ಜೆಮ್ಶೆಡ್‌ಪುರ ಎಫ್‌ಸಿ ತಂಡದ ಸೆಮಿಫೈನಲ್ ಕನಸಿಗೆ ಬಲ ತುಂಬಲಿದೆ.


ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದು ಅಂತಿಮ ಸ್ಪರ್ಶ ನೀಡಲಾಗುತ್ತಿದೆ –ಪ್ರಜಾವಾಣಿ ಚಿತ್ರ

ಕಬಡ್ಡಿ: ಪ್ಲೇ ಆಫ್‌ಗೆ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 30–27ರಲ್ಲಿ ಹರಿಯಾಣ ಸ್ಟೀಲರ್ಸ್ ಎದುರು ಜಯ ಗಳಿಸಿತು. ಇದರೊಂದಿಗೆ ಪ್ರೊ ಕಬಡ್ಡಿ ಲೀಗ್‌ನ ಪ್ಲೇ ಆಫ್ ಹಂತಕ್ಕೇರುವ ಬೆಂಗಳೂರು ಬುಲ್ಸ್ ತಂಡದ ಕನಸು ನನಸಾಯಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟನ್ ಹೋಟೆಲ್‌ನಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡಕ್ಕಾಗಿ ಸಚಿನ್, ಮೊಹಮ್ಮದ್‌ರೇಜಾ ಮತ್ತು ಗುಮಾಮ್ ಸಿಂಗ್ ಕ್ರಮವಾಗಿ ಎಂಟು, ಐದು ಮತ್ತು ನಾಲ್ಕು ಪಾಯಿಂಟ್ ಗಳಿಸಿದರು. ಹರಿಯಾಣ ಪರವಾಗಿ ಆಶಿಶ್ ಎಂಟು, ಜೈದೀಪ್ ಐದು ಮತ್ತು ವಿಕಾಸ್ ನಾಲ್ಕು ಪಾಯಿಂಟ್‌ಗಳನ್ನು ಗಳಿಸಿದರು.

ಗುಜರಾತ್‌ಗೆ ರೋಚಕ ಜಯ: ರಾಕೇಶ್ ಮತ್ತು ಮಹೇಂದ್ರ ರಜಪೂತ್ ಅವರ ಅಮೋಘ ದಾಳಿಯ ಬಲದಿಂದ ಗುಜರಾತ್ ಜೈಂಟ್ಸ್ ತಂಡವು 36–33ರಿಂದ ಯು ಮುಂಬಾ ವಿರುದ್ಧ ಜಯ ಸಾಧಿಸಿತು.

ರಾಕೇಶ್ 13 ಅಂಕ ಮತ್ತು ಮಹೇಂದ್ರ ಏಳು ಅಂಕ ಗಳಿಸಿದರು. ರಕ್ಷಣೆ ವಿಭಾಗದಲ್ಲಿ ಮಿಂಚಿದ ಗಿರೀಶ ಮಾರುತಿ ಐದು ಅಂಕ ಪಡೆದು ತಂಡಕ್ಕೆ ಆಸರೆಯಾದರು. ಮೊದಲಾರ್ಧದಲ್ಲಿ ಗುಜರಾತ್ ತಂಡವು 20–14ರಿಂದ ಮುನ್ನಡೆ ಸಾಧಿಸಿತ್ತು. ಈ ಹಂತದಲ್ಲಿ ಗುಜರಾತ್ ತಂಡಕ್ಕೆ ರೇಡಿಂಗ್‌ನಲ್ಲಿಯೇ 14 ಅಂಕಗಳು ಲಭಿಸಿದ್ದವು.

ವಿರಾಮದ ನಂತರದಲ್ಲಿ ಗುಜರಾತ್ 16 ಮತ್ತು ಮುಂಬಾ ತಂಡವು 19 ಅಂಕ ಗಳಿಸಿತು. ಇದರಿಂದಾಗಿ ಮುಂಬಾ ಜಯದ ಸನಿಹ ಸಾಗಿತ್ತು. ಆದರೆ, ಜೈಂಟ್ಸ್ ರಕ್ಷಣಾ ವಿಭಾಗದ ಚಾಕಚಕ್ಯತೆಯಿಂದಾಗಿ ಮುಂಬಾ ಕೇವಲ ಮೂರು ಅಂಕಗಳ ಅಂತರದಿಂದ ಸೋಲನುಭವಿಸಿತು.

ಮೊದಲ ಪಂದ್ಯದಲ್ಲಿ ಪುಣೇರಿ ಪಲ್ಟನ್ 37–30ರಿಂದ ಜೈಪುರ್ ಪಿಂಕ್ ಪ್ಯಾಂಥರ್ಸ್ ವಿರುದ್ಧ ಗೆದ್ದಿತು. ಮೋಹಿತ್ ಗೊಯತ್ (14), ಅಸ್ಲಂ ಇನಾಂದಾರ್ (11) ಮತ್ತು ವಿಶಾಲ್ ಭಾರದ್ವಾಜ್ (3) ಅವರ ಆಟದ ಬಲದಿಂದ ಪುಣೇರಿ ತಂಡವು ಜಯಿಸಿತು. ಜೈಪುರ್ ತಂಡದ ಅರ್ಜುನ್ ದೇಶ್ವಾಲ್ (18), ಬ್ರಿಜೇಂದ್ರ (3) ಮತ್ತು ನವೀನ್ (2) ಉತ್ತಮವಾಗಿ ಆಡಿದರು. ಆದರೆ, ತಂಡದ ಗೆಲುವಿನ ಕನಸು ನನಸಾಗಲಿಲ್ಲ. ಪುಣೇರಿ ತಂಡವು ಆರಂಭ ದಿಂದಲೇ ಮೇಲುಗೈ ಸಾಧಿಸಿತು. ಅರ್ಧವಿರಾಮದ ವೇಳೆಗೆ 18–11ರಿಂದ ಜೈಪುರ್ ಎದುರು ಮುಂದಿತ್ತು. ನಂತರದ ಆಟದಲ್ಲಿ ಉಭಯ ತಂಡಗಳ ಹೋರಾಟ ರೋಚಕವಾಗಿತ್ತು.


ಗುಜರಾತ್ ಜೈಂಟ್ಸ್ ತಂಡದ ರಾಕೇಶ್ ಪಾಯಿಂಟ್ ಗಳಿಸಲು ಯತ್ನಿಸಿದರು

ಇಂದು ವಿಶ್ರಾಂತಿ

ಸೋಮವಾರ ವಿಶ್ರಾಂತಿ ದಿನವಾಗಿದ್ದು 21ರಂದು ಪ್ಲೇ ಆಫ್ ಪಂದ್ಯಗಳು ನಡೆಯಲಿವೆ. 23ರಂದು ಸೆಮಿಫೈನಲ್ ಹಣಾಹಣಿ ನಡೆಯಲಿದ್ದು ಫೈನಲ್ ಪಂದ್ಯ 25ರಂದು ನಡೆಯಲಿದೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	22	16	5	1	86
ದಬಂಗ್ ಡೆಲ್ಲಿ	22	12	6	4	75
ಯು ಪಿ ಯೋಧಾ	22	10	9	3	68
ಗುಜರಾತ್ ಜೈಂಟ್ಸ್	22	10	8	4	67
ಬೆಂಗಳೂರು ಬುಲ್ಸ್	22	11	9	2	66
ಪುಣೇರಿ ಪಲ್ಟನ್	22	12	9	1	66
ಹರಿಯಾಣ ಸ್ಟೀಲರ್ಸ್	22	10	9	3	64
ಜೈಪುರ ಪಿಂಕ್ ಪ್ಯಾಂಥರ್ಸ್	22	10	10	2	63
ಬೆಂಗಾಲ್ ವಾರಿಯರ್ಸ್	22	9	10	3	57
ಯು ಮುಂಬಾ	22	7	10	5	55
ತಮಿಳ್ ತಲೈವಾಸ್	22	5	11	6	47
ತೆಲುಗು ಟೈಟನ್ಸ್	22	1	17	4	27

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)

ಚೀನಾದ ಜೋಡಿಗೆ ಚಿನ್ನ

ಬೀಜಿಂಗ್ (ಎಎಫ್‌ಪಿ): ಚೀನಾದ ಹ್ಯಾನ್ ಕಾಂಗ್ ಮತ್ತು ಸುಯಿ ವೆಂಜಿಂಗ್ ಅವರು ಚಳಿಗಾಲದ ಒಲಿಂಪಿಕ್ಸ್‌ನ ಫಿಗರ್ ಸ್ಕೇಟಿಂಗ್ ಪೇರ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡಿತು.


ಹ್ಯಾನ್ ಮತ್ತು ಸುಯಿ ಸಂಭ್ರಮ

ಒಟ್ಟಾರೆ 239.88 ಸ್ಕೋರು ಕಲೆ ಹಾಕಿದ ಅವರು ತವರಿನ ಪ್ರೇಕ್ಷಕರಿಗೆ ಮುದ ನೀಡಿ ವಿಶ್ವದಾಖಲೆಯನ್ನೂ ಬರೆದರು. ಚೀನಾ ಜೋಡಿಯೊಂದು ಫಿಗರ್ ಸ್ಕೇಟಿಂಗ್‌ನಲ್ಲಿ ದಾಖಲೆ ಬರೆಯುತ್ತಿರುವುದು ಇದು ಮೂರನೇ ಬಾರಿ.

ಮುಂಬೈ ರೇಸ್

ಕ್ಯಾಪ್ರಿಸ್ಕ ಗೆಲ್ಲುವ ನಿರೀಕ್ಷೆ

ಮದ್ರಾಸ್ ರೇಸ್ ಕ್ಲಬ್ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಕ್ಯಾಪ್ರಿಸ್ಕ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಪೆಟ್ರೋನಿಯಾ 1, ನಾರ್ದರನ್ ಲೈಟ್ಸ್ 4, ಪ್ರೈಡ್ಸ್ ಏಂಜೆಲ್ 3
2ನೇ ರೇಸ್: ಕ್ಯಾಪ್ರಿಸ್ಕ 1, ಟ್ರೂಲಿ ಎಪಿಕ್ 2
3ನೇ ರೇಸ್: ಇಂಪರ್ಮನೆನ್ಸ್ 1, ಟ್ರಿಂಕೆಟ್ 2, ಟೈಮ್‌ಲೆಸ್ ಡೀಡ್ಸ್ 5
4ನೇ ರೇಸ್: ಏಜ್‌ಆನ್ 1, ಬರ್ಕಿನ್ ಬ್ಲೋವರ್ 5, ರೆಡ್ ಮೆರ್ಲೋಟ್ 3
5ನೇ ರೇಸ್: ಸ್ಯಾನ್ ಸಾಲ್ವಟಾರ್ 2, ಕಿನ್ನರ 1, ಬ್ರಿಲಿಯಂಟ್ ಲೈಟ್ 8
6ನೇ ರೇಸ್: ಸೋ ಸೋ ಸ್ಪೆಷಲ್ 4, ಕ್ಯಾಪ್ರಿಫ್ಲಾ 7, ಸ್ಪೆಕ್ಟಾಕ್ಯುಲರ್ 5
7ನೇ ರೇಸ್: ಇರ್ರೆಪ್ರೆಸ್ಸಿಬಲ್ 7, ರಾಸ್ಪುಟಿನ್ 1, ಲಾಡಿಡ 4

ಉತ್ತಮ ಬೆಟ್: ಇಂಪರ್ಮನೆನ್ಸ್


ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಪ್ರಜಾವಾಣಿ
ಭಾನುವಾರದ
ಪುರವಣಿ



ರಾಗಗಳ ಹೊನಲಿನ ಹಾಡುವ ಗಡಿಯಾರ

14



12

ಭಾನುವಾರ, 20 ಫೆಬ್ರುವರಿ 2022

ದೇಶವನ್ನೂ ನೋಡು, ಕೋಶವನ್ನೂ ಓದು

ವಸುಧೇಂದ್ರ

'ದೇಶವನ್ನಾದರೂ ನೋಡು, ಕೋಶವನ್ನಾದರೂ ಓದು' ಎನ್ನುವುದು ಕನ್ನಡದ ಜನಪ್ರಿಯ ನಾಣ್ಣುಡಿ. ಇದು ಪುಸ್ತಕ ಓದುವ ಕಾರ್ಯಕ್ಕೆ ತಿರುಗಾಟವು ಪರ್ಯಾಯ ಎನ್ನುವ ಭಾವವನ್ನು ನಮ್ಮಲ್ಲಿ ಮೂಡಿಸಿದೆ. ಯಾವುದು ಮಾಡಿದರೂ ಆದೀತು, ಜ್ಞಾನಾರ್ಜನೆಯಾಗುತ್ತದೆ ಎಂಬ ಭಾವ ಹಲವರಿಗಿದೆ. ಆದರೆ ಸತ್ಯದ ಮಾತೆಂದರೆ ಎರಡರಿಂದಲೂ ದೊರಕುವ ಜ್ಞಾನಗಳು ಬೇರೆಯೇ ಆಗಿವೆ. ಒಂದಕ್ಕೊಂದು ಪೂರಕವಾದಾವೆಯೇ ಹೊರತು, ಪರ್ಯಾಯವಂತೂ ಆಗಲಾರವು. ಹಿಮಾಲಯದ ಕುರಿತು ಅದೆಷ್ಟೇ ಪುಸ್ತಕಗಳನ್ನು ನೀವು ಓದಿದರೂ ಹಿಮಾಲಯದಲ್ಲಿ ಅಡ್ಡಾಡಿದ ಅನುಭವವನ್ನು ನೀಡಲಾರವು.

ಕನ್ನಡದ ಹಿರಿಯ ಕವಯಿತ್ರಿ ಲಲಿತಾ ಸಿದ್ಧಬಸವಯ್ಯನವರ ಒಂದು ಸೂಕ್ಷ್ಮ ಪದ್ಯವಿದೆ. ಅದರಲ್ಲಿ ಕವಯಿತ್ರಿ ಕಚೇರಿ ಕೆಲಸ ಮುಗಿಸಿ ಮನೆಗೆ ಹೋಗುವಾಗ ಆಕಾಶದಲ್ಲಿ ಇದ್ದಕ್ಕಿದ್ದಂತೆಯೇ ಮೂಡಿದ ಕಾಮನಬಿಲ್ಲನ್ನು ಕಂಡು ಸಂಭ್ರಮಗೊಳ್ಳುತ್ತಾಳೆ. ಅವಳ ಬಾಲ್ಯವೇ ಕಣ್ಣಮುಂದೆ ಚೆಲ್ಲಿದಂತೆ ರೋಮಾಂಚನವಾಗುತ್ತದೆ. ಮನೆಗೆ ಬಂದ ತಕ್ಷಣ ತನ್ನ ಸಂತೋಷವನ್ನು ಹಂಚಿಕೊಳ್ಳುವ ಸಲುವಾಗಿ ಮಗಳಿಗೆ ತಾನು ಕಂಡ ಕಾಮನಬಿಲ್ಲಿನ ಕುರಿತು ಹೇಳುತ್ತಾಳೆ. ಅದಕ್ಕೆ ಒಂದಿಷ್ಟೂ ಉತ್ಸಾಹ ತೋರದ ಮಗಳು, ಕಂಪ್ಯೂಟರಿನಲ್ಲಿ ಗೂಗಲಿಸಿ ನೂರಾರು ಕಾಮನಬಿಲ್ಲುಗಳನ್ನು ಅಮ್ಮನಿಗೆ ತೋರಿಸಿ 'ಇದೇ ಅಲ್ವಾ!' ಎನ್ನುತ್ತಾಳೆ. ನಿರುತ್ಸಾಹಗೊಂಡ ಕವಯಿತ್ರಿ 'ಮಗಳೇ, ಒಂದು ದಿನ ನಿನಗೆ ಇವೆರಡೂ ಬೇರೆ ಎನ್ನುವ ಸತ್ಯ ಅರಿವಾಗುತ್ತದೆ' ಎಂದು ಹೇಳುತ್ತಾಳೆ. ಸಚಿತ್ರಪೂರ್ಣ ಪುಸ್ತಕ ಸಿಕ್ಕರೂ ಅದು ಜೀವಂತ ಅನುಭವವನ್ನು ನೀಡಲಾರದು.

ಜ್ಞಾನವನ್ನು ಹಲವು ದಾರಿಗಳ ಮೂಲಕ ಪಡೆಯಬಹುದು. ಬಹುತೇಕ ಜ್ಞಾನದ ಅಂತಿಮ ಗುರಿ ಒಂದೇ ಎಂದು ತತ್ವಜ್ಞಾನಿಗಳು ಹೇಳುತ್ತಾರೆ. ಆದರೆ ಅವು ಕ್ರಮಿಸುವ ಮಾರ್ಗಗಳು ನಿಸ್ಸಂದೇಹವಾಗಿ ಬೇರೆಯೇ ಆಗಿರುತ್ತವೆ. ಒಂದಕ್ಕೊಂದು ಅಲ್ಲೊಮ್ಮೆ ಇಲ್ಲೊಮ್ಮೆ ಎಡತಾಕಬಹುದೇನೋ - ಬೇರೆ ಬೇರೆ ವಿಮಾನ ದಲ್ಲಿ ನ್ಯೂಯಾರ್ಕಿಗೆ ಹೋಗುವ ಯಾರಾದರೂ ಯಾವುದೋ ಅಪರಿಚಿತ ವಿಮಾನ ನಿಲ್ದಾಣದಲ್ಲಿ ಎದುರಾದಂತೆ! ಆದರೆ ಪ್ರತಿಯೊಬ್ಬರ ಪಯಣದ ಅನುಭವವೂ ಬೇರೆ. ಆದ್ದರಿಂದಲೇ ಚೀನಾದ ನಾಣ್ಣುಡಿಯೊಂದು ಹೆಚ್ಚು ಸಮಂಜಸವೆನ್ನಿಸುತ್ತದೆ. ಅದು 'ಹತ್ತು ಸಾವಿರ ಪುಸ್ತಕಗಳನ್ನು ಓದುವೆಯಾದರೆ, ಕನಿಷ್ಠ ಹತ್ತು ಸಾವಿರ ಮೈಲಿಗಳಷ್ಟು ನಡೆ' ಎನ್ನುತ್ತದೆ. ಓದು ಮತ್ತು ನಡೆಗಳೆರಡನ್ನೂ ಮುಖ್ಯವಾಗಿಸುವ ಮನೋಭಾವ ಚೀನಾ ಜನರದ್ದು. ಆದರೆ ಅಂತಹ ನಾಣ್ಣುಡಿಯಿದ್ದೂ, ಚೀನೀಯರು ಗಡಿ ದಾಟದಂತೆ ತಡೆಯುವ ರಾಜಮನೆತನಗಳು ಮತ್ತು ಸರ್ಕಾರಗಳು ಅಲ್ಲಿ ನೂರಾರು ವರ್ಷ ಆಡಳಿತ ಮಾಡಿದ್ದು ನಿಜಕ್ಕೂ ಶೋಚನೀಯ ಸಂಗತಿ.

> 'ಹತ್ತು ಸಾವಿರ ಪುಸ್ತಕಗಳನ್ನು ಓದುವೆಯಾದರೆ, ಕನಿಷ್ಠ ಹತ್ತು ಸಾವಿರ ಮೈಲಿಗಳಷ್ಟು ನಡೆ' ಎನ್ನುತ್ತದೆ ಚೀನಿ ಗಾದೆ. ಲೋಕದರ್ಶನವಿಲ್ಲದ ಪಾಂಡಿತ್ಯವು ಶುಷ್ಕ ಎನ್ನುವುದು ನಮ್ಮ ಹಿಂದಿನವರು ತೋರಿದ ದರ್ಶನ. ಸತ್ಯದ ಮಾತೆಂದರೆ ದೇಶ ಸುತ್ತುವುದು ಮತ್ತು ಕೋಶ ಓದುವುದು – ಎರಡರಿಂದಲೂ ದೊರಕುವ ಜ್ಞಾನಗಳು ಬೇರೆ ಬೇರೆ...



ಕಲೆ: ರಾಮಕೃಷ್ಣ ಸಿದ್ರಪಾಲ

ಹನ್ನೊಂದನೇ ಶತಮಾನದಲ್ಲಿ ಭಾರತಕ್ಕೆ ಬಂದ ಅಲ್-ಬಿರುನಿ ಎಂಬ ಪ್ರವಾಸಿ ಬಹು ವಿಶಿಷ್ಟ ಸಂಗತಿಯೊಂದನ್ನು ಹೇಳುತ್ತಾನೆ. ಅವನಿಗೆ ಜಗತ್ತಿನಲ್ಲಿ ತುಲಾನಾತ್ಮಕ ಅಧ್ಯಯನದ ಪಿತಾಮಹ ಎಂದು ಕರೆಯುತ್ತಾರೆ. ಹಲವು ಜ್ಞಾನಶಾಖೆಗಳಲ್ಲಿ ವಿದ್ವಾಂಸನಾದ ಈ ಪಂಡಿತ ಮೂಲತಃ ಉಜ್ಬೆಕಿಸ್ತಾನ್‌ನವನಾದರೂ ಅನಂತರ ಅಲ್ಲಾವುದ್ದೀನ್ ಖಿಲ್ಜಿಗೆ ಸೆರೆ ಸಿಕ್ಕಿ ಭಾರತಕ್ಕೆ ಬರುತ್ತಾನೆ. ಉತ್ತರ ಮತ್ತು ಮಧ್ಯ ಭಾರತದಲ್ಲಿ ಸುಮಾರು 13 ವರ್ಷ ಅಡ್ಡಾಡುತ್ತಾನೆ. ಭಾಷೆ, ವಿಜ್ಞಾನ, ಖಗೋಳ ಶಾಸ್ತ್ರ, ಜ್ಯೋತಿಷ್ಯ, ಧರ್ಮ - ಹೀಗೆ ಹಲವು ಜ್ಞಾನ ಪ್ರಕಾರಗಳಲ್ಲಿ ಆಸಕ್ತಿಯುಳ್ಳ ಇವನು, ಈ ವಿಷಯಗಳಲ್ಲಿ ಭಾರತದ ಮನೋಭಾವವನ್ನು ಅರಿಯುವ ಸಲುವಾಗಿಯೇ ಸಂಸ್ಕೃತ ಭಾಷೆಯನ್ನು ಕರಗತ ಮಾಡಿಕೊಳ್ಳುತ್ತಾನೆ.

ಅನಂತರ ಆರ್ಯಭಟ, ವರಾಹಮಿಹೀರ - ಮುಂತಾದ ಎಲ್ಲಾ ಭಾರತದ ಆದಿಮ ವಿಜ್ಞಾನಿಗಳ ಗ್ರಂಥಗಳನ್ನು ಅಧ್ಯಯನ ಮಾಡುತ್ತಾನೆ. ಅನಂತರ ಅವುಗಳ ವಿಸ್ತೃತ ಚರ್ಚೆಯನ್ನು ಭಾರತದ ಪಂಡಿತರ ಜೊತೆಯಲ್ಲಿ ಅವರದೇ ಭಾಷೆಯಾದ ಸಂಸ್ಕೃತದಲ್ಲಿ ಮಾಡುತ್ತಾನೆ. ತನ್ನ ಅನುಭವಗಳನ್ನು 'ತಾರೀಖ್ ಅಲ್-ಹಿಂದ್' (ಹಿಂದೂಸ್ತಾನದ ಚರಿತ್ರೆ) ಪುಸ್ತಕದಲ್ಲಿ ಬರೆದಿದ್ದಾನೆ. ಅದರಲ್ಲಿ ಕೆಳಗಿನ ಅರ್ಥ ಬರುವಂತಹ ಮಾತುಗಳನ್ನು ಒಂದೆಡೆ ಹೇಳುತ್ತಾನೆ. 'ಇಲ್ಲಿಯ ಪಂಡಿತರು ಸಾಕಷ್ಟು ಜ್ಞಾನಿಗಳು ಅನ್ನುವುದು ಸತ್ಯ. ಆದರೆ ಸಮಸ್ಯೆಯೆಂದರೆ ಇವರು ಜಗತ್ತಿನೆಲ್ಲೆಡೆ ಪ್ರವಾಸವನ್ನು ಮಾಡುವುದಿಲ್ಲ. ತಾವಿದ್ದ ಸ್ಥಳದಲ್ಲಿಯೇ ಇರುತ್ತಾರೆ. ಆ ಕಾರಣದಿಂದಾಗಿ ಇವರಿಗೆ ಹೊಸತನ್ನು ಸ್ವೀಕರಿಸುವ ಮತ್ತು ಗೌರವಿಸುವ ವಿಶಾಲ ಮನೋಭಾವ ಇಲ್ಲ. ಹೊರಗಿನವರು ಕುಲೀನರು (ಮ್ಲೇಚ್ಛರು) ಎನ್ನುವ ಅಸಡ್ಡೆ ಅವರಲ್ಲಿದೆ. ಆ ಕಾರಣದಿಂದ ನಮ್ಮನ್ನು ಮುಟ್ಟಿಸಿಕೊಳ್ಳದೆ, ಕೀಳಾಗಿ ಕಾಣುತ್ತಾರೆ. ಇಲ್ಲಿ ಜ್ಞಾನಲೋಕ ಸ್ಥಗಿತಗೊಂಡಿದೆ.' ಲೋಕದರ್ಶನವಿಲ್ಲದ ಪಾಂಡಿತ್ಯವು ಶುಷ್ಕವಾಗುತ್ತದೆಂಬ ಕಳಕಳಿ ಅವನ ಮಾತಿನಲ್ಲಿ ಕಾಣುತ್ತದೆ.

ಸುಮಾರು ಹದಿನೆಂಟನೆಯ ಶತಮಾನದ ಮಧ್ಯಭಾಗದವರೆಗೂ ಭಾರತ ಮತ್ತು ಚೀನಾ ದೇಶಗಳಲ್ಲಿಯೇ ಪ್ರಪಂಚದ ಶೇಕಡಾ 80 ಭಾಗ ಸಂಪತ್ತು ಶೇಖರಣೆಗೊಂಡಿತ್ತು. ಪಶ್ಚಿಮ ದೇಶದ ಬಲಾಢ್ಯ ರಾಜರು ಕೊಳ್ಳೆ ಹೊಡೆಯಲು ಹುಡುಕಿಕೊಂಡು ಪೂರ್ವದೆಡೆಗೇ ಬರುತ್ತಿದ್ದರು. ಭಾರತದವರು ಹಾಗೆ ಪಶ್ಚಿಮದೆಡೆಗೆ ಹೋದ ನಿದರ್ಶನಗಳು ಇಲ್ಲವೇ ಇಲ್ಲ, ಅದರ ಅವಶ್ಯಕತೆಯೂ ಇವರಿಗೆ ಇರಲಿಲ್ಲ. ಆದರೆ ಅನಂತರದ ಶತಮಾನಗಳಲ್ಲಿ ಭಾರತ ಮತ್ತು ಚೀನಾ ಅವನತಿಯ ಕಡೆ ಮುಖ ಮಾಡಿದವು. ಈ ಪ್ರಕ್ರಿಯೆಗೆ ಹದಿನೈದು-ಹದಿನಾರನೆಯ ಶತಮಾನದಲ್ಲಿಯೇ ಪಶ್ಚಿಮದ ದೇಶಗಳು ಬುನಾದಿ ಹಾಕಿದವೆಂದು ಇತಿಹಾಸಜ್ಞರು ಅಭಿಪ್ರಾಯ ಪಡುತ್ತಾರೆ. ಈ ಕಾಲಘಟ್ಟದಲ್ಲಿ ಪಶ್ಚಿಮದ ಬಹುತೇಕ ದೇಶಗಳಲ್ಲಿ (ಮುಖ್ಯವಾಗಿ ಯೂರೋಪ್) ಸಾಹಸದ ಪ್ರವಾಸಗಳನ್ನು ಕೈಗೊಳ್ಳುವ ಮನೋಭಾವ ಬೆಳೆಯಿತು.

ಕೊಲಂಬಸ್ ಪಶ್ಚಿಮದ ಕಡೆಗೆ ಸಮುದ್ರಯಾನ ಮಾಡಿ, ಅಮೆರಿಕವನ್ನು ಕಂಡು ಹಿಡಿದು, ಅಲ್ಲಿಯ ಬೆಳ್ಳಿ ಮತ್ತು ಬಂಗಾರದ ಗಣಿಗಳನ್ನು ಕೊಳ್ಳೆ ಹೊಡೆಯಲು ಪ್ರಾರಂಭಿಸಿದ್ದೇ ಶ್ರೀಮಂತಿಕೆಯನ್ನು ಪಡೆಯುವ ಹೊಸದಾರಿಗಳು ಅವರಿಗೆ ತಿಳಿಯತೊಡಗಿದವು. ಸಾಮ್ರಾಜ್ಯದ ಸಂಪತ್ತನ್ನು ಹಿಗ್ಗಿಸಲು ಪಕ್ಕದ ರಾಜ್ಯದ ಮೇಲೆ ಯುದ್ಧಮಾಡಿ ಲೂಟಿ ಮಾಡುವುದೋ ಅಥವಾ ರೈತರ ಮೇಲಿನ ಸುಂಕಗಳನ್ನು ಮಿತಿಮೀರಿ ಹೆಚ್ಚಿಸುವುದೋ ಮಾತ್ರ ದಾರಿಯಲ್ಲ, ಅಪರಿಚಿತ ಭೂಭಾಗಗಳನ್ನು ಪತ್ತೆ ಹಚ್ಚಿ, ಅಲ್ಲಿಯ ಸಂಪತ್ತನ್ನು ತಂದರೂ ದೇಶದ ಪ್ರಗತಿ ಸಾಧ್ಯವಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಂಡರು. ಈ ಜ್ಞಾನೋದಯ ರಾಜ-ಮಹಾರಾಜರಿಗೆ ಮಾತ್ರವಲ್ಲ, ಸಾಮಾನ್ಯ ಪ್ರಜೆಗಳಿಗೂ ಅರ್ಥವಾಯ್ತು. ಆದ್ದರಿಂದಲೇ ಸಾಮಾನ್ಯರೂ ಸಮುದ್ರಯಾನದ ಸಾಹಸಗಳಿಗೆ ಹಣ ಹೂಡಲು ಮುಂದೆ ಬರಲು ಪ್ರಾರಂಭಿಸಿದರು. ರಾಜನ ಬಂಡವಾಳ ಹೂಡಿಕೆ ಇಲ್ಲದೆ ಎಷ್ಟೋ ಸಮುದ್ರಯಾನಗಳು ನಡೆದವು. ಅಂತಹ ಪ್ರವಾಸಗಳಿಂದ ಬರುವ ಲಾಭವನ್ನು ತಮ್ಮ ಹೂಡಿಕೆಗೆ ತಕ್ಕಂತೆ ಹಂಚಿಕೊಳ್ಳುವ ಕಾನೂನು ಕ್ರಮ ಅಲ್ಲಿ ಅಭಿವೃದ್ಧಿ ಹೊಂದಿತು. ಆ ಕಾರಣದಿಂದಲೇ ಪ್ರವಾಸ ಮಾಡಿ, ಸಂಪತ್ತು ಮತ್ತು ಜ್ಞಾನ ಬೆಳೆಸುವ ಮನೋವೃತ್ತಿ ಅಲ್ಲಿ ಬೆಳೆಯತೊಡಗಿತು.

ಸಂಪತ್ತಿನ ಜೊತೆಗೆ ಲೋಕಸಂಚಾರದಿಂದಾಗಿ ವಿಜ್ಞಾನವೂ ಬೆಳೆಯತೊಡಗಿತು. ಈ ಎಲ್ಲಾ ಕಾರಣಗಳಿಂದಲೇ ಇಡೀ ಪ್ರಪಂಚವೇ ಯೂರೋಪಿಯನ್ನರ ಕಪಿಮುಷ್ಟಿಗೆ ಸಿಕ್ಕಿ ಹೋಯಿತು ಎಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಯುರೋಪಿಯನ್ನರ ವಸಾಹತುಶಾಹಿ ಮನೋಭಾವವನ್ನು ನಾವು ಎಷ್ಟೇ ಕಟುವಾಗಿ ಟೀಕಿಸಿದರೂ ಅವರ ಅನ್ವೇಷಣೆಯ ಸಾಹಸಗಳನ್ನು ನಿರ್ಲಕ್ಷ್ಯ ಮಾಡುವುದು ಅಸಾಧ್ಯ. ಇಂತಹ ಅನ್ವೇಷಣೆಯ ಗುಂಪಿನೊಂದಿಗೆ ಸಮುದ್ರಯಾನ ಮಾಡಿದ್ದರಿಂದಲೇ ಡಾರ್ವಿನ್‌ನಂತಹ ಬಡವನೂ 'ವಿಕಾಸವಾದ'ವನ್ನು ಅರ್ಥ ಮಾಡಿಕೊಂಡು ಜಗತ್ತಿಗೆ ತಿಳಿಸಲು ಸಾಧ್ಯವಾಗಿದ್ದು.

ಮೆಕ್ಸಿಕೋದ ಮೂಲ ನಿವಾಸಿಗಳ ಅಜ್‌ಟೆಕ್ ಸಾಮ್ರಾಜ್ಯ ಕುಸಿದು ಹೋಗಿದ್ದಕ್ಕೆ ಲೋಕಜ್ಞಾನವಿಲ್ಲದ್ದೂ ಒಂದು ಮುಖ್ಯ ಕಾರಣವಾಗಿದೆ. ಕೊಲಂಬಸ್‌ನು ಅಮೆರಿಕ ಕಂಡು ಹಿಡಿದ ನಂತರ ಸ್ಪೇನ್‌ನವರು ಯಥೇಚ್ಛವಾಗಿ ಅಲ್ಲಿಗೆ ಹೋಗತೊಡಗಿದರು. ಅಲ್ಲಿ ಕಸದಂತೆ ಬಿದ್ದಿದ್ದ ಬಂಗಾರ ಮತ್ತು ಬೆಳ್ಳಿಯನ್ನು ಕೊಳ್ಳೆ ಹೊಡೆದು ತಮ್ಮ ದೇಶಕ್ಕೆ ತರತೊಡಗಿದರು. ಅಜ್‌ಟೆಕ್ ಜನಾಂಗ ಸಾಮಾಜಿಕವಾಗಿ ಸ್ಪೇನ್‌ನವರಿಗಿಂತಲೂ ಮುಂದುವರಿದಿದ್ದರೂ ಲೋಕದರ್ಶನವಿಲ್ಲದ ಇವರಿಗೆ ಈ ಸ್ಪೇನ್ ಜನರ ಹಳದಿ ಲೋಹದ ಮೋಹ ಯಾಕೆಂದು ತಿಳಿಯುವುದಿಲ್ಲ.

14ನೇ ಪುಟಕ್ಕೆ...

ಜಗತ್ತನ್ನೇ ಮರೆಸುವ ತರ್ಸರ್ ಮರ್ಸರ್!

ಎಸ್. ನಟರಾಜ ಬೂದಾಳು

ಕಾಶ್ಮೀರವೆಂದರೆ ಜನ್ನತ್ ಎಂದೋ ಸದಾ ಬಡಿದಾಡುವವರ ಜಾಗವೆಂದೋ ಟೆರರಿಸ್ಟರ ಕಾದಾಟದಲ್ಲಿ ಮುಳುಗೇಳುತ್ತಿರುವ ನೆಲವೆಂದೋ ಮಾಧ್ಯಮಗಳಲ್ಲಿ ಬಿಂಬಿಸುತ್ತಲೇ ಇರಲಾಗಿ ನಮಗೆ ಅಲ್ಲಿಯ ಅಸಲಿ ಬದುಕನ್ನು ಕಾಣುವ ಅವಕಾಶಗಳು ಬಹುಪಾಲು ಇಲ್ಲವಾಗಿವೆ. ಕಾಶ್ಮೀರದ ಹಿಮಾಲಯ ಚಾರಣ ಅಲ್ಲಿಯ ಒಳಬದುಕನ್ನು ಕಾಣ ಬಯಸುವವರಿಗೊಂದು ಅವಕಾಶ ಒದಗಿಸುತ್ತದೆ.

ಅಣ್ಣತಮ್ಮಂದಿರಿಬ್ಬರು ಮಾಡಿಕೊಂಡಿರುವ ಪಾಲುಗಳಂತೆ ಇರುವ ಲಡಾಖ್ ಮತ್ತು ಜಮ್ಮು ಕಾಶ್ಮೀರವೆಂಬ ಎರಡು ಭೂಭಾಗಗಳಲ್ಲಿ ಲಡಾಖ್ ಬೌದ್ಧ ಧರ್ಮೀಯರ ನೆಲ. ತಣ್ಣಗೆ ಮೌನವನ್ನೇ ಹೊದ್ದುಕೊಂಡಿದೆ. ಅದು ಬಹುಪಾಲು ಹಿಮಮರುಭೂಮಿ. ಅಲ್ಲಲ್ಲಿ ಕೃಷಿ ಮತ್ತು ಹಣ್ಣಿನ ತೋಟಗಳಿವೆ. ಕಾಶ್ಮೀರವಾದರೆ ಸಮೃದ್ಧ ಹಣ್ಣಿನ ತೋಟಗಳು, ಹುಲ್ಲುತುಂಬಿದ ಇಳಿಜಾರುಗಳು, ನದಿ ಹಳ್ಳ ಕೊಳ್ಳಗಳ ನಾಡು. ಕುರಿ, ಮೇಕೆ, ಕುದುರೆಗಳು ಗುಂಪು ಗುಂಪಾಗಿ ಮೇಯುವ ನೆಲ. ಲಡಾಖ್‌ನಲ್ಲಿ ಕೂಡ ಚಾರಣಕ್ಕೆ ಎರಡು ಮೂರು ಅವಕಾಶಗಳಿವೆ. ನಾವು ಹೋದ ಶ್ರೀನಗರದ ಕಡೆ ಎರಡು ತಾಣಗಳಿಗೆ ಮಾತ್ರ ಚಾರಣದ ಅವಕಾಶ ಇದೆ. ಒಂದು ಕಾಶ್ಮೀರದ ಮಹಾಸರೋವರಗಳ ಚಾರಣ. ಇನ್ನೊಂದು ತರ್ಸರ್ ಮತ್ತು ಮರ್ಸರ್ ಸರೋವರಗಳ ಚಾರಣ. ನಾವು ಆಯ್ಕೆ ಮಾಡಿಕೊಂಡದ್ದು ತರ್ಸರ್ ಮತ್ತು ಮರ್ಸರ್ ಸರೋವರಗಳ ಚಾರಣವನ್ನೇ.

ಶ್ರೀನಗರದಿಂದ 70 ಕಿ.ಮೀ ದೂರದಲ್ಲಿರುವ ಪಹಲ್‌ಗಾಮ್ ನಮ್ಮ ಚಾರಣದ ಬೇಸ್ ಕ್ಯಾಂಪ್. ಶ್ರೀನಗರದಿಂದ ಪಹಲ್‌ಗಾಮ್‌ಗೆ ಹೋಗುವ ರಸ್ತೆಯನ್ನು ಗ್ರೀನ್‌ರೂಟ್ ಎನ್ನುತ್ತಾರೆ. ಎರಡೂ ಕಡೆ ಸಮೃದ್ಧ ಸೇಬಿನ ತೋಟಗಳು. ಎಲ್ಲ ಮರಗಳಲ್ಲೂ ಸೇಬು ಹಣ್ಣುಗಳು ಜಗೆಬಿದ್ದಿದ್ದವು. ಅವುಗಳನ್ನು ನೋಡುವುದೇ ಹಬ್ಬ. ಮುಂದೆಹೋದಂತೆ ಅಕ್ರೂಟ್ ಮರಗಳ, ವಾಲ್‌ನಟ್ ಮರಗಳ ತೋಟಗಳು. ಈ ನೆಲದ ಸಮೃದ್ಧಿಯನ್ನು ಅವೆಲ್ಲ ಪ್ರತಿಫಲಿಸುತ್ತಿದ್ದವು.

ಪಹಲ್‌ಗಾಮ್ ತಲುಪುವ ಮುನ್ನ ಪಾಂಪೋರ್ ಎನ್ನುವ ಕಡೆ ಮತ್ತೊಮ್ಮೆ ನಮ್ಮ ವಾಹನ ನಿಂತಿತು. ಇದರ ವಿಶೇಷವೆಂದರೆ ಈ ಹಳ್ಳಿಯ ಸುತ್ತಮುತ್ತ ಮಾತ್ರ ಕೇಸರಿ ಬೆಳೆಯುತ್ತಾರೆ. ಹೊಲಗಳ ಮಧ್ಯೆ ಎತ್ತಿನ ಗಾಡಿಗಳ ಹಾಗೆ ಕಾರುಗಳು ನಿಂತಿದ್ದವು. ರಸ್ತೆಯ ಅಕ್ಕಪಕ್ಕದಲ್ಲಿ ಕೇಸರಿ ಮತ್ತು ಒಣಹಣ್ಣುಗಳನ್ನು ಮಾರುವ ಹತ್ತಾರು ಅಂಗಡಿಗಳಿದ್ದವು. 'ಮೊಘಲ್ ಟೀ ಕೊಡಿಸುವೆ' ಎಂದು ನಮ್ಮ ವಾಹನ ಚಾಲಕ ಸ್ಪೆಷಲ್ ಕಾಶ್ಮೀರಿ ಕೆಹವಾ ಎಂಬ ಬೋರ್ಡು ನೇತುಹಾಕಿದ್ದ ಟೀ ಅಂಗಡಿಯ ಮುಂದೆ ನಿಲ್ಲಿಸಿದ. ಅದರ ಮುಂದೆ ಸುಂದರವಾದ ದೊಡ್ಡ ಆಕಾರದ ಕೆಹವಾ ತುಂಬಿದ ಹೂಜಿ ಇಡಲಾಗಿತ್ತು. ಇದನ್ನು ಸಮೋವರ್ ಎನ್ನುತ್ತಾರೆ. ಈ ಹೂಜಿಯ ಅಡಿಯಿಂದ ಇದ್ದಲಿನ ಕೆಂಡದ ಶಾಖ ನಿರಂತರವಾಗಿ ಪೂರೈಕೆಯಾಗುತ್ತಿತ್ತು. ಕೇಸರಿ, ಬಾದಾಮಿ ಮತ್ತಿತರ 'ಸಾಹಿತ್ಯ'ದಿಂದ ತಯಾರಿಸಿದ ಈ ಟೀ ಒಂದು ಅದ್ಭುತ. ನಮಗೆ ಅಪರಿಚಿತವಾದ ಕೆಹವಾ ಕಾಶ್ಮೀರದ ಜನಪ್ರಿಯ ಪಾನೀಯ.

ಪಹಲ್‌ಗಾಮ್ ರಸ್ತೆಯ ಉದ್ದಕ್ಕೂ ಇರುವ ಹಳ್ಳಿಗಳ ಹೆಸರುಗಳು 'ಪುರ' ಎಂದು ಕೊನೆಯಾಗುತ್ತವೆ. ಗೌರಿಪುರ, ನೂರ್‌ಪುರ ಇತ್ಯಾದಿ. ಮತ್ತೊಂದು ವಿಶೇಷವೆಂದರೆ ಇಡೀ ದೇಶಕ್ಕಾಗುವಷ್ಟು ಕ್ರಿಕೆಟ್ ಬ್ಯಾಟುಗಳನ್ನು ಈ ರಸ್ತೆ ಪಕ್ಕದಲ್ಲಿರುವ ಗೃಹ ಕೈಗಾರಿಕೆಗಳು ಸಿದ್ಧಮಾಡಿ ಒದಗಿಸುತ್ತವೆ.

15ನೇ ಪುಟಕ್ಕೆ...

> ಸೃಷ್ಟಿ, ಸ್ಥಿತಿ, ಲಯ ಮೂರನ್ನೂ ಒಂದರ ಪಕ್ಕ ಒಂದನ್ನು ಜೋಡಿಸಿಟ್ಟ ಹಾಗೆ, ಹುಟ್ಟು ಮತ್ತು ಸಾವಿನ ಸಂಕೇತಗಳಾದ ಎರಡು ಸರೋವರಗಳು ಅಕ್ಕಪಕ್ಕದಲ್ಲಿ ಇವೆ; ನಡುವೆ ಜನ. ಒಂದು ಕಡೆ ಹುಟ್ಟು, ಇನ್ನೊಂದು ಕಡೆ ಸಾವು. ಈ ಸರೋವರಗಳ ಚಾರಣ ಅದೆಷ್ಟೊಂದು ರೋಚಕ!



ಆಹಾ, ಬಿಸಿ ಬಿಸಿ ಕೆಹವಾ...



ತರ್ಸರ್ ಸರೋವರದ ನಯನಮನೋಹರ ನೋಟ

ಕನ್ನಡಿಗನೊಬ್ಬನ ಹಾರ್ಲೆಮ್ ದಿನಗಳು



ಕಲೆ: ಗುರು ನಾವಳ್ಳಿ

ವಿಜಯಕುಮಾರ ಎಂ. ಬೋರಟ್ಟಿ

1970ರ ದಶಕದ ದಿನಗಳಲ್ಲಿ ದಲಿತ ಸಾಹಿತ್ಯ ಮತ್ತು ಆಫ್ರಿಕನ್ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡಿದ ಅನೇಕ ಪ್ರಯತ್ನಗಳನ್ನು ನೋಡಬಹುದು. ಮರಾಠಿ ಸಂದರ್ಭದಲ್ಲಿ ದಲಿತ ಪ್ಯಾಂಥರ್ ಪಾರ್ಟಿಯ ದಿನಗಳಿಂದ ಹಿಡಿದು, ಕನ್ನಡದ ದಲಿತ ಸಾಹಿತ್ಯ ಚಳವಳಿಯವರೆಗೂ ಈ ಅಧ್ಯಯನಗಳ ವ್ಯಾಪ್ತಿಯನ್ನು ನಾವು ನೋಡಬಹುದು. ಕಪ್ಪುವರ್ಣೀಯ ಜನಾಂಗದ ಆಫ್ರಿಕನ್ನರು ಮತ್ತು ಭಾರತೀಯ ಸಮಾಜದ ದಲಿತರು ಇತಿಹಾಸದಾದ್ಯಂತ ವರ್ಣ ಮತ್ತು ಜಾತಿಯಾಧಾರಿತ ಶೋಷಣೆಗೆ ಒಳಗಾದವರೆಂಬ, ಅವರ ನಡುವಿನ ಸಮಾಜೋ-ಐತಿಹಾಸಿಕ ಅಂಶಗಳು ಅನೇಕ ಸಾಮ್ಯತೆಗಳನ್ನು ಒಳಗೊಂಡಿವೆಯೆಂಬ ವಾದಗಳ ಕುರಿತು ಬಹುತೇಕರಿಗೆ ತಿಳಿದಿದೆ.

ರಾಜಕೀಯವಾಗಿ ಕಪ್ಪುವರ್ಣೀಯರು-ದಲಿತರ ಬೆಸುಗೆಯ ಬಗ್ಗೆ ಅನೇಕ ವಿಚಾರ-ಮಂಥನಗಳು ಸ್ಥಳೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ನಡೆದಿವೆ. 2001ರಲ್ಲಿ ದಕ್ಷಿಣ ಆಫ್ರಿಕಾದ ದರ್ಬಾನ್‌ನಲ್ಲಿ ವರ್ಣಭೇದವನ್ನು ವಿರೋಧಿಸಿ ನಡೆದ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಇದಕ್ಕೆ ಉದಾಹರಣೆ. ವರ್ಣ, ಜನಾಂಗ ಮತ್ತು ಜಾತಿಯಾಧಾರಿತ ಭೇದ-ಭಾವವು ಒಂದೇ ಮೂಲದಿಂದ ಹುಟ್ಟಿಕೊಂಡಿರುವ ಸಾಮಾಜಿಕ ಅನಿಷ್ಟ ಎಂದು ಅನೇಕರು ಈ ಸಂದರ್ಭದಲ್ಲಿ ತಮ್ಮ ವಾದವನ್ನು ಮಂಡಿಸಿದರು.

20ನೇ ಶತಮಾನದ ಎರಡನೇ ಅರ್ಧದಲ್ಲಿ ಮಾರ್ಟಿನ್ ಲೂಥರ್ ಜ್ಯೂನಿಯರ್ ನಾಯಕತ್ವದ ಚಳವಳಿ ಇರಬಹುದು ಅಥವಾ ಅದಕ್ಕೆ ಮೊದಲು ಅಮೆರಿಕದಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿದ ಹಾರ್ಲೆಮ್ ರಿನೈಸನ್ಸ್ ಇರಬಹುದು, ಭಾರತದ ದಲಿತ ಚಳವಳಿ ಈ ಹೋರಾಟಗಳಿಂದ ಸ್ಫೂರ್ತಿಗೊಂಡಿದ್ದು ಇತಿಹಾಸದಲ್ಲಿ ಆಗಿ ಹೋಗಿರುವ ಒಂದು ಘಟ್ಟ. ಇವೆರಡು ಹೋರಾಟಗಳಲ್ಲಿ ನಾವು ಅನೇಕ ಮಹನೀಯರನ್ನು ಹೆಸರಿಸಬಹುದು. ಆದರೆ, ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಎಲ್ಲಾ ಮಹನೀಯರ ಹೆಸರುಗಳನ್ನು ನಾವು ನೋಡುವುದಿಲ್ಲ. ಯಾಕೆಂದರೆ ಇತಿಹಾಸದ ಪುಟಗಳಲ್ಲಿ ದಾಖಲಾಗದೆ ಮರೆತುಹೋದ ಅನೇಕ ಚಾರಿತ್ರಿಕ ವ್ಯಕ್ತಿಗಳು ನಮಗೆ ಗೊತ್ತೇ ಇಲ್ಲ. ಹಾರ್ಲೆಮ್ ರಿನೈಸನ್ಸ್ (ಹಾರ್ಲೆಮ್ ಪುನರುಜ್ಜೀವನ) ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹುಬ್ಬಳ್ಳಿಯ ಎಚ್.ಜಿ. (ಹುಚ್ಚೇಶ್ವರ ಗುರುಸಿದ್ಧ) ಮುದ್ಗಲ್ ಅಂಥವರಲ್ಲಿ ಒಬ್ಬರು.

ಮೊದಲಿಗೆ ಹಾರ್ಲೆಮ್ ಚಳವಳಿ ಕುರಿತು ತಿಳಿಯೋಣ. 20ನೇ ಶತಮಾನದ ಮೊದಲೆರಡು ದಶಕಗಳಲ್ಲಿ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಮೂಲದ ಕಪ್ಪುವರ್ಣೀಯ ಜನರು ದಕ್ಷಿಣ ಭಾಗದ ಅಮೆರಿಕದಿಂದ ನ್ಯೂಯಾರ್ಕ್ ನಗರದ ನೆರೆಯ ಹಾರ್ಲೆಮ್ ಎಂಬ ಸ್ಥಳಕ್ಕೆ ಕೆಲಸ ಹುಡುಕಿಕೊಂಡು ವಲಸೆ ಹೋದರು. ಹೀಗೆ ಹೋದವರಲ್ಲಿ ಸಾವಿರಾರು ಕಪ್ಪುವರ್ಣೀಯರು ಹಾರ್ಲೆಮ್‌ನಲ್ಲಿ ಕ್ರಮೇಣ ಹೊಸ ಜಾಗೃತಿಯನ್ನುಂಟು ಮಾಡಿದರು.

13ನೇ ಪುಟಕ್ಕೆ...

...ಹಾರ್ಲೆಮ್ ದಿನಗಳು

12ನೇ ಪುಟದಿಂದ...

ಬಿಳಿಯರಿಂದ ತಮ್ಮ ಮೇಲೆ ಆಗುತ್ತಿದ್ದ ದಮನ, ಶೋಷಣೆ ಮತ್ತು ತಾರತಮ್ಯವನ್ನು ಒಕ್ಕೊರಲಿನಿಂದ ವಿರೋಧಿಸಿದರು. ಈ ವಿರೋಧ ಸಾಮಾಜಿಕ ಮತ್ತು ಜನಾಂಗೀಯ ಚಳವಳಿಯನ್ನೇ ಹುಟ್ಟು ಹಾಕಿತು. ಈ ಚಳವಳಿಯು ಕ್ರಮೇಣ ಮಹತ್ತರವಾದ ತಿರುವು ಪಡೆದುಕೊಂಡು ಕಪ್ಪುವರ್ಣೀಯರ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಎಡೆ ಮಾಡಿಕೊಟ್ಟಿತು. ಕಪ್ಪುವರ್ಣೀಯರು ತಮ್ಮ ಕಲೆ, ಸಾಹಿತ್ಯ, ಸಂಸ್ಕೃತಿ, ನಾಟ್ಯ, ಸಂಗೀತ, ತತ್ವ ಮತ್ತು ಪರಂಪರೆಗೆ ಹೊಸ ಮೆರಗನ್ನು ನೀಡಿ, ಅಮೆರಿಕದಲ್ಲಿ ತಮ್ಮ ಅನನ್ಯ ಗುರುತನ್ನು ಸ್ಥಾಪಿಸಲು ಪ್ರಯತ್ನಿಸಿದರು. ಈ ದೀರ್ಘ ಕಾಲದ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಳವಳಿಯಲ್ಲಿ ಡಬ್ಲ್ಯು.ಇ.ಬಿ. ದು ಬಾಯ್, ಮಾರ್ಕಸ್ ಗಾರ್ವೆ, ಲ್ಯಾಂಗಸ್ಟನ್ ಹ್ಯೂಜಸ್ ಪ್ರಮುಖವಾಗಿ ಕೇಳಿ ಬರುವ ಹೆಸರುಗಳು. ಭರದಿಂದ ಸಾಗುತ್ತಿದ್ದ ಈ ಚಳವಳಿಯಲ್ಲಿ ಹುಬ್ಬಳ್ಳಿ ಮೂಲದ 20 ವರ್ಷದ ಕನ್ನಡಿಗ ಮುದ್ಗಲ್ ಸಹ ಸುಮಾರು 1920ರಲ್ಲಿ ಸೇರಿಕೊಂಡಿದ್ದರು. ಕಪ್ಪುವರ್ಣೀಯರ ಚಳವಳಿಯನ್ನು ಬೆಂಬಲಿಸುತ್ತಾ ನ್ಯೂಯಾರ್ಕ್‌ನಲ್ಲಿ ಹದಿನೇಳು ವರ್ಷಗಳ ಕಾಲ ಚಿರಪರಿಚಿತ ವ್ಯಕ್ತಿಯಾಗಿ ಗುರ್ತಿಸಿಕೊಂಡರು.

ಮುದ್ಗಲ್ಲರ ಪೂರ್ವಾಪರದ ಬಗ್ಗೆ ಹೆಚ್ಚು ಮಾಹಿತಿಗಳು ಇನ್ನು ಲಭ್ಯವಿಲ್ಲ. ಅವರು ಯಾರ ಸಲಹೆ ಮೇರೆಗೆ ಅಮೆರಿಕಕ್ಕೆ ಹೋದರು ಎಂದು ಸ್ಪಷ್ಟವಾಗಿ ತಿಳಿದಿಲ್ಲ. ಆದರೆ, ಮೊದಲು ಅವರು ದಕ್ಷಿಣ ಆಫ್ರಿಕಾ ನಂತರ ವೆಸ್ಟ್ ಇಂಡೀಸ್‌ಗೆ ಹೋಗಿ ಅಲ್ಲಿಂದ ಕ್ಯೂಬಾ, ಸಂತ ಡಾಮಿಂಗೋಗೆ ಸೇರಿ ಕೊನೆಗೆ 1920ರ ಸುಮಾರಿಗೆ ನ್ಯೂಯಾರ್ಕ್‌ಗೆ ಹೋದರು. ನಂತರ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ತೌಲನಿಕ ರಾಜ್ಯಶಾಸ್ತ್ರದಲ್ಲಿ ಎಂ.ಎ. ಮತ್ತು ಪಿಎಚ್‌.ಡಿ ಪದವಿಯನ್ನು ಪಡೆದುಕೊಂಡರು. ತಮ್ಮ ಶಿಕ್ಷಣಕ್ಕೆ ತಕ್ಕನಾದ ಕೆಲಸ ಸಿಗದೆ ಇದ್ದಾಗ, ನ್ಯೂಯಾರ್ಕ್ ವಿಶ್ವವಿದ್ಯಾಲಯದ ಪ್ರೊಫೆಸರರೊಬ್ಬರ ಸಲಹೆಯ ಮೇರೆಗೆ ಅಂದು ಆಫ್ರಿಕನ್ ಜನಾಂಗದ ಮುಖವಾಣಿಯಾದ ನಿಗ್ರೊ ವರ್ಲ್ಡ್ ಪತ್ರಿಕೆಯಲ್ಲಿ ಸಹಾಯಕ ಸಂಪಾದಕನಾಗಿ ಸೇರಿಕೊಂಡರು. 1924ರಲ್ಲಿ ಅನಿತ ಎಂಬ ಮಹಿಳೆಯನ್ನು ಮದುವೆಯಾದರು. ಬಹುಭಾಷಿಯಾಗಿದ್ದ ಮುದ್ಗಲ್, ಇಂಗ್ಲಿಷ್, ಕನ್ನಡ ಮತ್ತು ಮರಾಠಿಯಲ್ಲಿ ಅನೇಕ ವಿಚಾರಗಳನ್ನು ಅಭಿವ್ಯಕ್ತಿಗೊಳಿಸಿದ್ದರು.

ನಿಗ್ರೊ ವರ್ಲ್ಡ್ ಪತ್ರಿಕೆಯ ಒಡೆತನವನ್ನು ಪ್ರಸಿದ್ಧ ಮಾರ್ಕಸ್ ಗಾರ್ವೆ ಹೊಂದಿದ್ದ. ಈ ಪತ್ರಿಕೆಗೆ ಸೇರಿದಾಗಿನಿಂದ ಮುದ್ಗಲ್, ಗಾರ್ವೆಯ ವಿಚಾರಗಳನ್ನು ಮತ್ತು ಕ್ರಾಂತಿಕಾರಕ ತತ್ವವನ್ನು ಈ ಪತ್ರಿಕೆಯ ಮೂಲಕ ಜನಪ್ರಿಯಗೊಳಿಸಿದರು. ಮುದ್ಗಲ್‌ರ ಬಗ್ಗೆ ನಮ್ಮ ಗಮನ ಸೆಳೆದಿರುವ ಮನನ್ ದೇಸಾಯಿ ಮತ್ತು ತಿಜರತ್ ಗಿಲ್ ಅವರು ಹೇಳುವ ಪ್ರಕಾರ, 1920ರಿಂದ 1937ರವರೆಗೆ ಕಪ್ಪುವರ್ಣೀಯರ ರಾಜಕೀಯ ವೇದಿಕೆಗಳಲ್ಲಿ ಮುದ್ಗಲ್ಲರ ಹೆಸರು ಸರ್ವೇಸಮಾನ್ಯವಾಗಿತ್ತು.

ಡಬ್ಲ್ಯು.ಇ.ಬಿ. ದು ಬಾಯ್ ಮತ್ತು ಮಾರ್ಕಸ್ ಗಾರ್ವೆಯರ ನಡುವೆ ಹಾರ್ಲೆಮ್ ಚಳವಳಿಯ ಬಗ್ಗೆ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದವು. ದು ಬಾಯ್ ಸಾಮರಸ್ಯದ ಧೋರಣೆಯನ್ನು ಹೊಂದಿದ್ದರೆ, ಗಾರ್ವೆ ಕಠಿಣ/ತೀವ್ರ ಪಂಥದ ಅನುಯಾಯಿ. ಕಪ್ಪುವರ್ಣೀಯರ ಆರ್ಥಿಕ ಸಬಲತೆಗೆ ಗಾರ್ವೆ ಹೆಚ್ಚು ಗಮನನೀಡಿದ. ಆರ್ಥಿಕವಾಗಿ ಸದೃಡತೆಯನ್ನು ಪಡೆದಾಗ ಮಾತ್ರ ಕಪ್ಪುವರ್ಣೀಯರು ಬಿಳಿಯರ ಸಮನಾಗಿ ನಿಲ್ಲಲು ಸಾಧ್ಯ ಎಂದು ಆತ ನಂಬಿದ್ದ.

ಕೆಲವೊಮ್ಮೆ ತೀವ್ರ ಪಂಥೀಯನಾಗಿದ್ದ ಗಾರ್ವೆ ಹಿಂಸೆಯ ದಾರಿಯನ್ನು ಅಲ್ಲಗೆಳೆಯಲಿಲ್ಲ. ಗಾರ್ವೆಯ ಹಿಂಬಾಲಕರಾಗಿ ಮುದ್ಗಲ್ಲರು ಗಾರ್ವೆಯ ತಾತ್ವಿಕ ಚಿಂತನೆಗಳನ್ನು ತಮ್ಮ ಭಾಷಣ, ಲೇಖನ ಮತ್ತು ವಿಚಾರಗಳ ಮೂಲಕ ಜನಪ್ರಿಯಗೊಳಿಸಿದರು. ಗಾರ್ವೆಯ ಹಾಗೆ ಮುದ್ಗಲ್ ಕೂಡ ಕಮ್ಯುನಿಸ್ಟರ ಅನೇಕ ವಿಚಾರಗಳನ್ನು ಟೀಕಿಸುತ್ತಿದ್ದರು. ಕಪ್ಪುವರ್ಣೀಯರ ಏಳಿಗೆ, ಪ್ರಗತಿಗೆ ಕಮ್ಯುನಿಸಂನಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯನ್ನು ಅವರು ಬಲವಾಗಿ ವಿರೋಧಿಸುತ್ತಿದ್ದರು. ಕಪ್ಪುವರ್ಣೀಯರು ತಮ್ಮ ಪ್ರಗತಿಯನ್ನು ತಾವೇ ಸಾಧಿಸಬೇಕು ಮತ್ತು ಇದಕ್ಕಾಗಿ ಅವರು ಆರ್ಥಿಕವಾಗಿ ಸದೃಢರಾಗಬೇಕೆಂದು ಪ್ರಚಾರ ಮಾಡುತ್ತಿದ್ದರು.

ಮುದ್ಗಲ್‌ರ ವಿಶೇಷವಿರುವುದು ಗಾರ್ವೆಯ ಮತ್ತು ಗಾಂಧೀಯ ವಿಚಾರಗಳೆರಡಕ್ಕೂ ಒತ್ತನ್ನು ನೀಡಿರುವುದರಲ್ಲಿ. ನಿಗ್ರೊ ವರ್ಲ್ಡ್‌ನ 1931ರ ಫೆಬ್ರುವರಿ 14ರ ಸಂಪಾದಕೀಯ ಪುಟದಲ್ಲಿ ಇವರಿಬ್ಬರ ವಿಚಾರಗಳನ್ನು ಚರ್ಚಿಸಲಾಗಿದೆ. ಐತಿಹಾಸಿಕವಾಗಿ ಮತ್ತು ರಾಜಕೀಯವಾಗಿ ಹಾರ್ಲೆಮ್ ಚಳವಳಿ ಮತ್ತು ಭಾರತೀಯ ರಾಷ್ಟ್ರೀಯ ಚಳವಳಿಗಳು ಅನೇಕ ಹೋಲಿಕೆಗಳನ್ನು ಹೊಂದಿವೆಯೆಂದು, ಅವೆರಡು ಸಾಮ್ರಾಜ್ಯಶಾಹಿ ಮತ್ತು ಶೋಷಣೆಯ ವಿರುದ್ಧ ಹೋರಾಡುತ್ತಿರುವುದನ್ನು ಶ್ಲಾಘಿಸಿ ಅನೇಕ ಲೇಖನಗಳನ್ನು ಮುದ್ಗಲ್ ಬರೆದಿದ್ದರು. ಇದೇ ದಿನದ ಪತ್ರಿಕೆಯಲ್ಲಿ ಗಾಂಧಿ ಮತ್ತು ಗಾರ್ವೆಯ ಅನೇಕ ವಿಚಾರಗಳನ್ನು ಹೋಲಿಸಿ ಅವರಲ್ಲಿರುವ ಸಮಾನ ಅಂಶಗಳ ಬಗ್ಗೆ ಪ್ರಶಂಸೆಯಿಂದ ಬರೆಯಲಾಗಿತ್ತು. ಇವರಿಬ್ಬರ ಚಳವಳಿಯ ಮಾರ್ಗಗಳು ಭಿನ್ನವಾಗಿದ್ದರೂ ಮುದ್ಗಲ್ ಇವರಿಬ್ಬರ ನಡುವೆ ಇರುವ ಸಮಾನ ಅಂಶಗಳನ್ನು ಹೆಕ್ಕಿ ಈ ಎರಡು ಚಳವಳಿಗಳು ಒಂದನ್ನೊಂದು ಪ್ರಭಾವಿಸಿ, ಸಹಕರಿಸಿ ಬೆಳೆಯಬೇಕು ಎಂದು ಪ್ರತಿಪಾದಿಸಿದ್ದರು. ಅಂದರೆ ಕಪ್ಪುವರ್ಣೀಯರ ಚಳವಳಿಗೂ ಮತ್ತು ಭಾರತೀಯ ಸ್ವಾತಂತ್ರ್ಯ ಚಳವಳಿಗೂ ಇರುವ ಅನೇಕ ಹೋಲಿಕೆಗಳನ್ನು ಚರ್ಚೆ ಮಾಡುತ್ತಾ, ಹೇಗೆ ಇವೆರಡು ಚಳವಳಿಗಳು ಒಂದಕ್ಕೊಂದು ಪೂರಕವಾಗಿರಬೇಕು ಎಂದು ಪ್ರತಿಪಾದಿಸಿದ್ದರು. ನಿಗ್ರೊ ವರ್ಲ್ಡ್‌ನಲ್ಲಿ ಇಂಗ್ಲಿಷ್ ಲೇಖನಗಳನ್ನು (ಏಪ್ರಿಲ್ 30, 1931) ಬರೆದಿರುವ ಮುದ್ಗಲ್, ಕಪ್ಪುವರ್ಣೀಯರು ತಮ್ಮ ಮೈಬಣ್ಣದ ಬಗ್ಗೆ ಕಿಳರಿಮೆಯನ್ನು ಹೊಂದದೆ, ಹೆಮ್ಮೆ ಪಡಬೇಕೆಂದು ಕರೆಕೊಟ್ಟಿದ್ದರು. ಕಪ್ಪುವರ್ಣೀಯರ ಮೇಲೆ ಅಮೆರಿಕದಲ್ಲಿ ಆಗುತ್ತಿದ್ದ ದಬ್ಬಾಳಿಕೆ, ಹತ್ಯೆಗಳು ಮತ್ತು ಹಿಂಸೆಯನ್ನು ವಿರೋಧಿಸಿ ಬರೆದ ಕವನಗಳನ್ನು ಸಂಗ್ರಹಿಸಿ, ಪ್ರಕಟಿಸುವ ಯೋಜನೆಯನ್ನು ಕೂಡ ಮುದ್ಗಲ್ ಹೊಂದಿದ್ದರು.

ಇಷ್ಟೆಲ್ಲ ದಮನಿತರ ಪರವಾಗಿದ್ದರೂ ಎಲ್ಲಿಯೂ ಅವರು ಭಾರತದಲ್ಲಿ ದಲಿತರ ಮೇಲೆ ಆಗುತ್ತಿದ್ದ ಶೋಷಣೆಯ ಬಗ್ಗೆ ಮಾತನಾಡಿರುವ ಉದಾಹರಣೆಗಳಿಲ್ಲ. ಅಥವಾ ದಲಿತ-ಕಪ್ಪುವರ್ಣೀಯರ ಶೋಷಣೆಯ ಹೋಲಿಕೆ/ಸಮಾನ ಅಂಶಗಳ ಬಗ್ಗೆ ಅವರು ಕಳಕಳಿಯನ್ನು ವ್ಯಕ್ತಪಡಿಸಿರುವುದು ಕಾಣುವುದಿಲ್ಲ. ಅಂಬೇಡ್ಕರರು ಅದಾಗಲೇ ಭಾರತದಲ್ಲಿ ದಲಿತರ ದನಿಯಾಗಿ ಹೊರಹೊಮ್ಮಿದ್ದರೂ ಅವರ ಬಗ್ಗೆ ಮುದ್ಗಲ್ ಉಲ್ಲೇಖಿಸಿರವುದು ಎಲ್ಲಿಯೂ ಕಾಣುವುದಿಲ್ಲ. ಬದಲಾಗಿ ಭಾರತೀಯರ ಆರ್ಯ ಮೂಲದ ಹಿನ್ನಲೆಯ ಬಗ್ಗೆ ಹೆಮ್ಮೆ ಪಟ್ಟುಕೊಂಡಿರುವ ಅಂಶಗಳು ಅವರ ಕನ್ನಡ ಲೇಖನಗಳಲ್ಲಿ (ಕಳೆದುಂಬಿದ ಕನ್ನಡಿಗರು ಎಂಬ ಕನ್ನಡ ಗದ್ಯ ನಾಟಕ) ಕಾಣುತ್ತವೆ.

ನ್ಯೂಯಾರ್ಕ್‌ನಲ್ಲಿ ಬಿಳಿಯರ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಂಡ ಮುದ್ಗಲ್ ಕನ್ನಡವನ್ನು ಮರೆಯಲಿಲ್ಲ. ಅಲ್ಲಿಂದಲೇ ತಮ್ಮ ಕನ್ನಡ ಮತ್ತು ಕನ್ನಡ ಸಂಸ್ಕೃತಿಯ ಬಗ್ಗೆ ಇರುವ ಪ್ರೇಮವನ್ನು ಅಭಿವ್ಯಕ್ತಿಗೊಳಿಸಿದ್ದರು. ಆಲೂರು ವೆಂಕಟರಾವ್ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ ಜಯ ಕರ್ನಾಟಕ ಪತ್ರಿಕೆಯಲ್ಲಿ ಮುದ್ಗಲ್ ತಮ್ಮ ಸೃಜನಶೀಲ ಲೇಖನಗಳನ್ನು ಪ್ರಕಟಿಸಿದ್ದರು. ಪ್ರಕಟಗೊಂಡ ಲೇಖನಗಳಲ್ಲಿ ಒಂದು ನಾಟಕ (ಕಳೆದುಂಬಿದ ಕನ್ನಡಿಗರು, 1922), ಲೇಖನ (ಕರ್ನಾಟಕವು ಹೇಗೆ ಮುಂದೆ ಬಂದೀತು, 1922) ಮತ್ತು ಒಂದು ಸಣ್ಣ ಕತೆ (ಮುದ್ದು, 1923), ಪ್ರಮುಖವಾಗಿರುವಂಥವು. ಕಳೆದುಂಬಿದ ಕನ್ನಡಿಗರು ನಾಟಕದಾದ್ಯಂತ ಕರ್ನಾಟಕವು ಪರಕೀಯರ ದಾಸ್ಯದಿಂದ (ಬ್ರಿಟಿಷ್ ಮತ್ತು ಮರಾಠಿಯರ ದಬ್ಬಾಳಿಕೆ) ಮುಕ್ತವಾಗಬೇಕೆಂಬ ಕಳಕಳಿ ಇದೆ. ಕರ್ನಾಟಕವು ಹೇಗೆ ಮುಂದೆ ಬಂದೀತು ಎಂಬ ಲೇಖನದಲ್ಲಿ ಕನ್ನಡಿಗರು ಹೇಗೆ ವಿದ್ಯೆಗೆ ಮಹತ್ವವನ್ನು ನೀಡಿ, ವಿದ್ಯಾವಂತರಾಗಿ ಮುಂದೆ ಬರಬೇಕು ಎಂದು ಆಗ್ರಹಿಸಿದ್ದಾರೆ. 'ಮುದ್ದು' ಎಂಬ ಮತ್ತೊಂದು ನಾಟಕದಲ್ಲಿ ನಿಸರ್ಗ ಮತ್ತು ಮನುಷ್ಯರ ನಡುವಿನ ಸಂಬಂಧವನ್ನು ಶೃಂಗಾರಮಯವಾಗಿ ವರ್ಣಿಸಿದ್ದಾರೆ. ನೀಲಲೋಚನ (ಅವರ ಮಗಳ ಹೆಸರು ಕೂಡ ಇದೇ ಆಗಿತ್ತು) ಎಂಬ ಪಾತ್ರವನ್ನು ಸೃಷ್ಟಿಮಾಡಿ ಆಕೆಯ ಮೂಲಕ ಪ್ರಕೃತಿಯ ಸೊಬಗು ಮತ್ತು ವಿಸ್ಮಯವನ್ನು ವರ್ಣಿಸಲಾಗಿದೆ.

1937ರಲ್ಲಿ ಭಾರತಕ್ಕೆ ಮರಳಿದ ಮುದ್ಗಲ್ ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರೋ ಇಲ್ಲವೋ ಎಂಬುದು ಹೆಚ್ಚಾಗಿ ತಿಳಿದಿಲ್ಲ. ಹಾರ್ಲೆಮ್ ಚಳವಳಿಯಲ್ಲಿ ಭಾಗವಹಿಸಿ, ಬಿಳಿಯರ ಶೋಷಣೆ ಮತ್ತು ಸಾಮ್ರಾಜ್ಯಶಾಹಿಯನ್ನು ವಿರೋಧಿಸಿದ ಮುದ್ಗಲ್ ಭಾರತದಲ್ಲಿ ವಿವಾದಕ್ಕೊಳಗಾಗುವ ಸನ್ನಿವೇಶಕ್ಕೆ ಸಿಲುಕಿದರು. 1950ರ ನೆಹರೂ ಸರ್ಕಾರದಲ್ಲಿ ಬಾಂಬೆಯನ್ನು ಪ್ರತಿನಿಧಿಸುವ ಪಾರ್ಲಿಮೆಂಟ್‌ನ ಸದಸ್ಯರಾಗಿದ್ದ ಅವರು ಭ್ರಷ್ಟಾಚಾರದ ಆರೋಪದ ಮೇಲೆ ಪಾರ್ಲಿಮೆಂಟ್‌ನ ಸದಸ್ಯತ್ವದಿಂದ ಉಚ್ಚಾಟನೆಗೆ ಒಳಗಾದರು. ಹೀಗೆ ಉಚ್ಚಾಸಿಲ್ಪಟ್ಟ ಪಾರ್ಲಿಮೆಂಟ್‌ನ ಪ್ರಥಮ ಸದಸ್ಯರು ಇವರೇ ಎಂಬ ದಾಖಲೆ ಕೂಡ ಇದೆ. ವಿಪರ್ಯಾಸ ಮತ್ತು ವೈರುಧ್ಯಗಳಿಂದ ಕೂಡಿದ ಮುದ್ಗಲ್‌ರಂತಹ ವ್ಯಕ್ತಿಗಳು ಇತಿಹಾಸದಲ್ಲಿ ಆರಿಹೋದ ನಕ್ಷತ್ರಗಳಂತೆ. ಅವರಂತಹ ವ್ಯಕ್ತಿಗಳ ಬಗ್ಗೆ ಮತ್ತಷ್ಟು ಬೆಳಕು ಚೆಲ್ಲುವ ಜವಾಬ್ದಾರಿ ಇತಿಹಾಸಕಾರರ ಹೆಗಲ ಮೇಲೆ ಇದೆ. ❖

ಮುನ್ನೋಟ

20-02-2022 ರಿಂದ 26-06-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಅಧಿಕಾರ ಅಥವಾ ಉದ್ಯೋಗದಲ್ಲಿ ತ್ವರಿತ ಬದಲಾವಣೆಯನ್ನು ನಿರೀಕ್ಷಿಸಬಹುದು. ವಿದೇಶದಲ್ಲಿ ಇರುವ ಬಂಧುಗಳು ನಿಮ್ಮ ಸಹಾಯಕ್ಕೆ ಬರುವ ಸಾಧ್ಯತೆಯಿದೆ. ತಾಮ್ರದ ಮೂರ್ತಿಗಳನ್ನು ಅಥವಾ ಪೂಜಾ ಪರಿಕರ ವಸ್ತುಗಳನ್ನು ತಯಾರು ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಅಗ್ನಿಯೊಡನೆ ದಿನವಿಡೀ ಕೆಲಸ ಮಾಡುವವರು ಸ್ವಲ್ಪ ಎಚ್ಚರ ವಹಿಸಿರಿ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ಅಧಿಕಾರಿಗಳ ಅವಕೃಪೆಗೆ ಒಳಗಾಗುವ ಸಂದರ್ಭವಿದೆ. ಕುಟುಂಬದ ಜಟಿಲ ಸಮಸ್ಯೆಗಳನ್ನು ಜಾಣ್ಮೆಯಿಂದ ಬಗೆಹರಿಸುವಿರಿ. ಬ್ಯಾಂಕಿಂಗ್ ಅಥವಾ ಹಣಕಾಸು ಸಂಸ್ಥೆಗಳಿಗೆ ಆದಾಯ ಹೆಚ್ಚುತ್ತದೆ. ಕೃಷಿಕರಿಗೆ ಹೆಚ್ಚಿನ ಧನಾದಾಯ ಇರುತ್ತದೆ. ವಾಹನ ಮಾರಾಟಗಾರರಿಗೆ ಉತ್ತಮ ವಹಿವಾಟು ನಡೆಯುತ್ತದೆ. ಒಡವೆ ಮಾರಾಟಗಾರರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಗುತ್ತಿಗೆ ವ್ಯವಹಾರ ಮಾಡುತ್ತಿರುವವರಿಗೆ ಅಭಿವೃದ್ಧಿ ಇದೆ. ಕೆಲವರಿಗೆ ಸರ್ಕಾರಿ ಗುತ್ತಿಗೆಗಳು ಸಹ ಸಿಗುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ಕೃಷಿ ಸಂಬಂಧಿತ ವ್ಯವಹಾರಗಳಲ್ಲಿ ಸಾಕಷ್ಟು ಏಳಿಗೆ ಇರುತ್ತದೆ. ಬರವಣಿಗೆಯಲ್ಲಿ ನಿರತರಾದವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಪೂರ್ವಿಕರ ಆಸ್ತಿಯಿಂದ ದವಸ ಧಾನ್ಯಗಳು ದೊರೆಯಬಹುದು.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಉದ್ಯಮವನ್ನು ವಿಸ್ತರಿಸುವ ಆಸೆಯು ಈಗ ಸಾಕಾರಗೊಳ್ಳಬಹುದು. ಅದಕ್ಕೆ ಬೇಕಾದ ಪೂರ್ವತಯಾರಿಯನ್ನು ಸರಿಯಾಗಿ ಮಾಡಿಕೊಳ್ಳಿ. ಆರ್ಥಿಕ ಆದಾಯ ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಇರಲಿ. ಮಹಿಳೆಯರು ತೊಡಗಿಸಿಕೊಳ್ಳುವ ಸಾಮಾಜಿಕ ಕ್ಷೇತ್ರದ ಕೆಲಸಗಳಲ್ಲಿ ಬಹಳ ಒಳ್ಳೆಯ ಹೆಸರನ್ನು ಗಳಿಸುವರು. ಕೃಷಿ ವಿಸ್ತರಣೆಗಾಗಿ ಹೆಚ್ಚಿನ ಹಣ ಕೊಡುವಿರಿ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಮಕ್ಕಳ ವಿಚಾರದಲ್ಲಿ ಶುಭ ವಾರ್ತೆಗಳನ್ನು ಕೇಳಬಹುದು. ಸರ್ಕಾರದಿಂದ ಬರಬೇಕಾಗಿದ್ದ ಬಾಕಿ ಹಣ ಅಥವಾ ಸಹಾಯಧನ ಬರುತ್ತದೆ. ನಿಮ್ಮ ನಡವಳಿಕೆಯಿಂದ ಮಕ್ಕಳ ಮೇಲೆ ಪ್ರಭಾವವನ್ನು ಹೆಚ್ಚಿಸಿಕೊಳ್ಳುವಿರಿ. ಚರ್ಮ ವ್ಯಾಧಿಗಳು ಸ್ವಲ್ಪ ನಿಮ್ಮನ್ನು ಬಾಧಿಸಬಹುದು. ಅವಿವಾಹಿತರಿಗೆ ಸಂಬಂಧ ಕೂಡಿಬರುವ ಸಾಧ್ಯತೆ ಇದೆ. ವಿದೇಶಿ ಕಂಪನಿಗಳಲ್ಲಿ ಉದ್ಯೋಗ ದೊರೆಯುವ ಸಾಧ್ಯತೆ ಇದೆ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಕೃಷಿಕರು ಬೆಳೆದ ಫಸಲಿಗೆ ಉತ್ತಮ ಬೆಲೆ ದೊರೆಯುತ್ತದೆ. ಹೀಗಾಗಿ ಕೃಷಿ ಕೆಲಸಗಳಲ್ಲಿ ಹೆಚ್ಚಿನ ಉತ್ಸಾಹ ಮೂಡುತ್ತದೆ. ಸಂತಾನ ಆಕಾಂಕ್ಷಿಗಳಿಗೆ ಶುಭಸಮಾಚಾರ ದೊರೆಯುವ ಸಾಧ್ಯತೆ ಇದೆ. ಹಮ್ಮಿನ ಮಾತಿನಿಂದ ಉದ್ಯೋಗ ಸ್ಥಳದಲ್ಲಿ ಕಿರಿಕಿರಿಯನ್ನು ಮಾಡಿಕೊಳ್ಳುವಿರಿ. ಆರ್ಥಿಕತೆಯಲ್ಲಿ ಚೇತರಿಕೆಯನ್ನು ಕಾಣಬಹುದು. ನಿಮ್ಮ ವೈಯಕ್ತಿಕ ಬದುಕಿನಲ್ಲಿ ಸಾಕಷ್ಟು ಹಿತಕರ ವಾತಾವರಣವನ್ನು ಕಾಣಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**

ಮನೆ ಅಥವಾ ನಿವೇಶನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ಪ್ರಭಾವಿ ವ್ಯಕ್ತಿಗಳ ಒಡನಾಟದಿಂದ ಮುಜುಗರ ಉಂಟಾಗಬಹುದು. ಅಪರೂಪದ ವಸ್ತುಗಳನ್ನು ಸಂಗ್ರಹ ಮಾಡುವ ಆಸಕ್ತಿ ಹೆಚ್ಚುತ್ತದೆ. ಕೋರ್ಟ್ ಕಚೇರಿ ಕೆಲಸಗಳಲ್ಲಿ ಮುನ್ನಡೆಯನ್ನು ಕಾಣಬಹುದು. ಜ್ಞಾನಾರ್ಜನೆಗಾಗಿ ದೂರದೂರಿಗೆ ಹೋಗಬೇಕಾದ ಸಂದರ್ಭ ಬರುತ್ತದೆ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**

ಜಾಹೀರಾತು ಸಂಸ್ಥೆಯನ್ನು ನಡೆಸುತ್ತಿರುವವರಿಗೆ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ವಿದೇಶಿ ಉತ್ಪನ್ನಗಳನ್ನು ತರಿಸಿ ಮಾರುವವರಿಗೆ ಉತ್ತಮ ಲಾಭವಿರುತ್ತದೆ. ಆರ್ಥಿಕ ಪ್ರಗತಿಯಿಂದ ಮನಸ್ಸಿಗೆ ಸಂತೋಷವಾಗುತ್ತದೆ. ಕಸೂತಿ ವಸ್ತ್ರಗಳನ್ನು ತಯಾರಿಸುವವರ ವ್ಯವಹಾರ ಹೆಚ್ಚು ವಿಸ್ತರಣೆಯಾಗುತ್ತವೆ. ಕುಟುಂಬ ಸಮೇತ ಭೋಜನಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ ಇದೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**

ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವವರಿಗೆ ಈಗ ಸ್ವಲ್ಪ ಕಾರ್ಯಕ್ರಮಗಳು ಒದಗಿಬರುತ್ತವೆ. ವಿದ್ಯಾರ್ಥಿಗಳಿಗೆ ಬೇಕಾದ ಒಳ್ಳೆಯ ಅನುಕೂಲತೆಗಳು ಸಿಗುತ್ತವೆ. ವ್ಯವಹಾರದಲ್ಲಿ ಪ್ರಗತಿಯನ್ನು ನಿರೀಕ್ಷಿಸಬಹುದು. ರಾಸಾಯನಿಕ ವಸ್ತುಗಳನ್ನು ವ್ಯಾಪಾರ ಮಾಡುವವರು ಹೆಚ್ಚಿನ ಲಾಭವನ್ನು ನಿರೀಕ್ಷೆ ಮಾಡಬಹುದು. ವಸ್ತ್ರ ವಿನ್ಯಾಸಕಾರರಿಗೆ ಬೇಡಿಕೆ ಹೆಚ್ಚುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಸಣ್ಣ ಕೈಗಾರಿಕೆಗಳ ಉದ್ಯಮಿಗಳಿಗೆ ಸರ್ಕಾರದಿಂದ ಬರಬೇಕಾಗಿದ್ದ ಸಹಾಯಧನ ಬರುತ್ತದೆ. ಉದ್ದಿಮೆಯ ಬಗ್ಗೆ ಸಾಕಷ್ಟು ಆಳವಾದ ಚಿಂತನೆ ನಡೆಸಿ ಮುಂದಡಿ ಇಡುವಿರಿ. ಹಣದ ಒಳಹರಿವು ನಿರೀಕ್ಷೆಯ ಮಟ್ಟಕ್ಕಿಂತ ಹೆಚ್ಚಿರುತ್ತದೆ. ಒಡ ಹುಟ್ಟಿದವರಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಎಲ್ಲರೂ ಒಟ್ಟುಗೂಡಿ ಆಸ್ತಿ ಒಂದನ್ನು ಖರೀದಿ ಮಾಡುವಿರಿ. ಕ್ರೀಡಾಪಟುಗಳಿಗೆ ಸಾಧನೆ ಮಾಡುವ ಅವಕಾಶ ಒದಗಿಬರುತ್ತದೆ.


ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಧನಾದಾಯ ಉತ್ತಮವಾಗಿರುತ್ತದೆ. ಸ್ವಯಂ ಉದ್ಯೋಗ ಮಾಡುವವರಿಗೆ ಸಂಪಾದನೆಹೆಚ್ಚುತ್ತದೆ.ಹೊಸನಿವೇಶನಅಥವಾಮನೆಕೊಳ್ಳುವಯೋಗವಿದೆ. ಹಿರಿಯರು ಸನ್ಮಾರ್ಗದಲ್ಲಿ ನಡೆಯುವುದರಿಂದ ಸಂಸಾರ ಮತ್ತು ಸಮಾಜದಲ್ಲಿ ಗೌರವವಿರುತ್ತದೆ. ಸ್ವಲ್ಪ ಮಟ್ಟಿನ ಆರ್ಥಿಕ ಸ್ಥಿರತೆಯನ್ನು ಈಗ ಕಾಣಬಹುದು. ಬಂಧುಗಳ ನಡುವಿನ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಮಧ್ಯಸ್ಥಿಕೆ ವಹಿಸಬೇಕಾದೀತು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಉದ್ಯೋಗದಲ್ಲಿರುವವರಿಗೆ ವರ್ಗಾವಣೆಯ ಸಾಧ್ಯತೆ ದಟ್ಟವಾಗಿದೆ. ಆರ್ಥಿಕ ಸಂಪನ್ಮೂಲ ಸಾಮಾನ್ಯವಾಗಿರುತ್ತದೆ. ಔದ್ಯೋಗಿಕ ವಿಷಯಗಳಲ್ಲಿ ಬೆಳವಣಿಗೆಯನ್ನು ಕಾಣಬಹುದು. ವೈದ್ಯಕೀಯ ವೃತ್ತಿಯಲ್ಲಿರುವವರು ಉತ್ತಮ ಧನ ಆದಾಯ ನಿರೀಕ್ಷಿಸಬಹುದು. ಔಷಧಿ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ಅನಿರೀಕ್ಷಿತವಾಗಿ ಪ್ರೀತಿ ಪ್ರೇಮದಲ್ಲಿ ಬೀಳುವ ಸಾಧ್ಯತೆ ಇದೆ.

ಪದಬಂಧ 2727



ಮೇಲಿನಿಂದ ಕೆಳಕ್ಕೆ

1. ಗಾಳಿ ಬೆಳಕಿನ ಕಿಂಡಿಯಲ್ಲಿ 'ಸ'ಕಾರ ಸೇರಿದ್ದರೆ ಕಾಮತಜ್ಞನಾಗುತ್ತಿದ್ದ 4
2. ವಿಚಾರ ವ್ಯಾಪ್ತಿಗೆ ಒಳಗಾಗದ ವಿಶೇಷ ವಿಷಯ 4
3. ದಾಸ್ತಾನು ಮಾಡುವ ಸಮಾನು 3
4. ಪ್ಯಾಂಟಿನ ಕನ್ನಡಾವಸ್ಥೆ 3
6. ದೇವಾಲಯದ ಮುಂದೆ ವಿಷ್ಣುವಾಹನ ಲಾಂಛನ ಸ್ತಂಭ 5
8. ಹಾರ ಕಟ್ಟಿಕೊಂಡು ಬರುವ ಸೇವಕ 4
10. ಏಳು ಎದ್ದೇಳು, ಎಚ್ಚರವಾಗು 3
12. ವ್ಯಭಿಚಾರಕ್ಕೊಂದು ಆಡುಮಾತು 3
13. ಪತಿಯ ಆರಾಧ್ಯ ಸತಿಯನ್ನು ಹೀಗೆನ್ನಬಹುದೆ? 4
14. ಹಾಸ್ಯದ ಅಲೆ ಎಬ್ಬಿಸುವ ರಂಗ ಪ್ರದರ್ಶನ 5
16. ಕುದುರೆಯನ್ನೇರಿ ಬರುವವ 3
18. ಶಿವನ ಮೊರೆ ಹೊಕ್ಕ ಭಕ್ತರು 4
19. ಚರಕ ತಿರುಗುವ ಸದ್ದು 4
20. ಕಣ್ಮರೆಯಾದ ವಿಶ್ವವಿನೂತನ ಕವಿ 3
21. ಹುಟ್ಟಿದ ಮಗುವಿಗೆ ಆಗಬಹುದಾದ ಉಡುಗೆ 3

ಎಡದಿಂದ ಬಲಕ್ಕೆ

1. ಗಾಳಿಯನ್ನುಂಡು ಬದುಕುವ ಪ್ರಾಣಿ 4
3. ಕೊನೆಯಲ್ಲಿ ಹೇಗಾದರೂ ಉಳಿಯುವ ಮಹಾಸರ್ಪ 3
5. ಕುಟುಂಬವೆಂಬ ಮಹಾ ಕಡಲು, ಇದನ್ನು ದಾಟುವುದೇ ನಮ್ಮ ಬದುಕು 6
7. ಫಂಡರಿ ವಿಠಲನ ಹೃದಯೇಶ್ವರಿ 4
9. ಹೊಸದಾಗಿ ಮೂಡಿದ ಕುಲವರ್ಗ 4
11. ನವಗ್ರಹಗಳ ದೃಷ್ಟಿಯಿಂದ ಸಿಗಬಹುದಾದ ದೊಡ್ಡ ಭಾಗ್ಯ ಶೂನ್ಯದಲ್ಲಿ ಕೊನೆಯಾಗಿದೆ 4
13. ಅವನತಿಯಿಂದ ಕುಸಿತ 3
15. ಕಾಯಕವೇ ಕೈಲಾಸ ಎಂದವ 3
17. ವಿಜಯದ ವಾಹನಕ್ಕೆ ಕೊಡಬಹುದಾದ ಹೆಸರು 4
18. ಅಂಬಿನ ಅತಿಯಾದ ಗತಿ 4
20. ಕಾವ್ಯ ಸೃಷ್ಟಿಸುವವರ ಯುಕ್ತ ಗುಂಪು 4
22. ವೆಂಕಟರಮಣ ಹೀಗೆ ದುಃಖ ನಿವಾರಕ 6
23. ವಿಷಯಾಸಕ್ತಿಯನ್ನು ತೊರೆದವ 3
24. ಚಿರವಾಗಿ ಉಳಿಯುವ ಸ್ವಾದ 4

ಪದಬಂಧ ಉತ್ತರ -2726

ಮೇಲಿಂದ ಕೆಳಕ್ಕೆ

1. ರಶೀದಿ 2.ತಪನ 3. ಅಶುಭ 4.ಸುವಾರ 7.ತರುಣಿ 9.ವಸಿಷ್ಟ 11.ಕಾವಿದೇ 12.ಕೆಸರು 13.ಇರಸು 14.ದೇಣಿಗೆ 17.ವನಿತಾ 19.ಲಿಖಿತ 20.ಮಿಥುನ 21.ನನಸು 22.ಜಾದವ 23.ಸಗರ

ಎಡದಿಂದ ಬಲಕ್ಕೆ

1. ರಸಗಣಿತ 3.ಅವತರಿಸು 5.ಪರಶು 6.ದಿನವೇತನ 8.ಭವಸಾಗರ 10.ತಪ್ಪುಕಾಣಿಕೆ 13.ಇಷ್ಟದೇವತೆ 15.ಸರ್ಕಾರ 16.ಕುಲದೇವರು 18.ಸುಲಿಗೆಗಾರ 20.ಮಿತಸಂತಾನ 22.ಜಾತವೇದಸ 24.ನಲಂದ 25.ನಗುವಕೂಸು 26.ವಜ್ರಾಲಂಕಾರ

ಕಥೆ

ವೈ.ಕೆ.ಸಂಧ್ಯಾ ಶರ್ಮ ಅವರ **ಮೋಕ್ಷದಾತ**

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.


https://www.prajavani.net/short-story

ಕವನ

ಶರೀಫ್ ಹಸಮಕಲ್ ಹಾಗೂ ನಿಂಗಪ್ಪ ಮುದೇನೂರು ಅವರ ಕವನಗಳು

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry



ರಾಗಗಳ ಹೊನಲಿನ ಹಾಡುವ ಗಡಿಯಾರ


ಪಂ.ಪ್ರವೀಣ್ ಗೋಡ್ಖಿಂಡಿ

ಎಂ.ಎನ್.ಯೋಗೇಶ್

ವಿಶ್ವವಿಖ್ಯಾತ ಬಾನ್ಸುರಿವಾದಕ ಪಂ.ಪ್ರವೀಣ್ ಗೋಡ್ಖಿಂಡಿ ಅವರು ಕೊಳಲ ಹಿಡಿದು ನಿಂತರೆ ಸ್ವರ, ರಾಗ, ಲಯ ತಾಳಗಳು ಬೆರಳ ತುದಿ–ತುಟಿಯಂಚಿನಲಿ ಮಿಡಿದು ಕೇಳುಗರ ಎದೆ ತಲುಪುತ್ತವೆ. ಗೋಡ್ಖಿಂಡಿ ಈಗ ಸ್ವರಗಳನ್ನಷ್ಟೇ ಅಲ್ಲ, ಕನ್ನಡದ ಅಕ್ಷರಗಳನ್ನೂ ಹಿಡಿಯಲೆತ್ನಿಸಿದ್ದಾರೆ. ಅವರು ‘ಪ್ರಹರ... ಹಾಡುವ ಗಡಿಯಾರ’ ಕಾದಂಬರಿ ಬರೆದಿದ್ದು ಸಾಹಿತ್ಯ ಲೋಕಕ್ಕೂ ಪದಾರ್ಪಣೆ ಮಾಡಿದ್ದಾರೆ.

‘ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಮಾಗಿ ನಿಂತ ಅಪ್ಪಟ ನಾದ ಸಂವೇದನೆಯ ಕಿಟಕಿಯೊಂದು ಬರವಣಿಗೆಯ ಲೋಕಕ್ಕೆ ತೆರೆದುಕೊಳ್ಳುತ್ತಿದೆ’ ಎಂದು ಕವಿ ಜಯಂತ ಕಾಯ್ಕಿಣಿ ‘ಪ್ರಹರ’ ಕುರಿತು ಬರೆದಿದ್ದಾರೆ. ನಾದಯೋಗ, ತಲೆಮಾರುಗಳ ಸಂಗೀತದಿಂದ ಮನತಣಿಸುತ್ತಿರುವ ಅವರು ಪ್ರಯೋಗಗಳಿಗೆ ಹೆಸರುವಾಸಿ. ಎಂಟಡಿ ಉದ್ದ, 22 ಕೆ.ಜಿ ತೂಕದ ‘ಗಾಡ್ಸ್ ಬನ್ಸಿ’ ಸೇರಿ ಹಲವು ಪ್ರಕಾರದ ಬಾನ್ಸುರಿಗಳಿಗೆ ರೂಪ ಕೊಟ್ಟ ಅವರೀಗ ಕಾದಂಬರಿಗೆ ಉಸಿರು ತುಂಬಿದ್ದಾರೆ.

ಚೊಚ್ಚಲ ಕಾದಂಬರಿ ಬಿಡುಗಡೆಯಾಗುವ ಹೊತ್ತಿನಲ್ಲಿ ಪ್ರವೀಣ್ ಗೋಡ್ಖಿಂಡಿ ಅವರು ‘ಪ್ರಜಾವಾಣಿ’ ಜೊತೆ ಮಾತನಾಡಿದ್ದಾರೆ.

• ನೀವು ವಿಶ್ವಪ್ರಸಿದ್ಧ ಪ್ರದರ್ಶನ ಕಲಾವಿದ, ಬರವಣಿಗೆಗೆ ಪ್ರೇರಣೆ ಏನು?

ನಮ್ಮ ಕುಟುಂಬದ ಹಿರಿಯರು ಸಾಹಿತ್ಯದ ಪರಿಚಾರಕರೇ ಆಗಿದ್ದರು. ನನ್ನ ತಾತ ‘ಪ್ರತಿಭಾಂಕುರ’ ಕಾವ್ಯನಾಮದಲ್ಲಿ ಬರೆಯುತ್ತಿದ್ದರು. ಸೋಬಾನೆಪದ, ಹಸೆ ಪದ, ಆರತಿ ಹಾಡುಗಳನ್ನು ರಚಿಸುತ್ತಿದ್ದರು. ಚಲನಚಿತ್ರಗೀತೆಗಳ ಟ್ಯೂನ್‌ಗೆ ಕನ್ನಡ ಸಾಹಿತ್ಯ ಮೂಡಿಸುತ್ತಿದ್ದರು. ಇಂತಹ ಮೂರು ಸಾವಿರಕ್ಕೂ ಹೆಚ್ಚು ಗೀತೆ ಬರೆದಿದ್ದಾರೆ. ಆಕಾಶವಾಣಿ ಜತೆಗಿದ್ದ ನನ್ನ ತಂದೆ ಪಂ.ವೆಂಕಟೇಶ ಗೋಡ್ಖಿಂಡಿ ಅವರು ಸಂಗೀತ, ನಾಟಕ ಬರೆದು ನಿರ್ದೇಶಿಸಿದ್ದಾರೆ. ಬರವಣಿಗೆಯ ಹಾದಿಗೆ ನನ್ನ ಕುಟುಂಬವೇ ಪ್ರೇರಣೆ. ಜೊತೆಗೆ ಸ್ವರಸಂಯೋಜನೆಯ ದಾರಿಯಲ್ಲಿ ನನಗೂ ಸಾಹಿತಿಗಳ ಒಡನಾಟವಿದೆ, ಅವರೆಲ್ಲರ ಪ್ರೀತಿ ಈ ಕಾದಂಬರಿಯ ಜೊತೆಗಿದೆ.

• ಸಂಗೀತಗಾರನಿಗೂ, ಗಡಿಯಾರಕ್ಕೂ ಏನು ಸಂಬಂಧ?

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ದಿನದ 24 ಗಂಟೆಗಳನ್ನು ತಲಾ ಮೂರು ತಾಸಿನ ಎಂಟು ಪ್ರಹರಗಳಾಗಿ ವಿಂಗಡಿಸಲಾಗಿದೆ. ಪ್ರತಿ ಪ್ರಹರ, ತಾಸಿಗೂ ವಿಶಿಷ್ಟ ರಾಗಗಳನ್ನು ನಿಗದಿಪಡಿಸಲಾಗಿದೆ. ಸಮಯಾಧಾರಿತ ಈ ರಾಗಚಕ್ರವನ್ನು ಅನುಸರಿಸಿದರೆ ಅದರಿಂದ ಉಂಟಾಗುವ ಪರಿಣಾಮ ದೊಡ್ಡದು. 40–50ರ ದಶಕದಲ್ಲೇ ಸಂಗೀತ ಸಾಧಕರು ಸೃಷ್ಟಿಸಿದ ಶಾಸ್ತ್ರವಿದು. ಈಗಿನ ಸಂಗೀತಗಾರರು ಬೇರೆಬೇರೆ ಒತ್ತಡಗಳಲ್ಲಿದ್ದು ಈ ಶಾಸ್ತ್ರದ ಪರಿಪಾಲನೆ ಕಷ್ಟ. ಸಂಗೀತ ಕಾರ್ಯಕ್ರಮಗಳು ಈಗ ಸಂಜೆಗಷ್ಟೇ ಸೀಮಿತವಾಗಿವೆ. ಈ ಶಾಸ್ತ್ರ ಕಳೆದುಹೋಗಬಾರದು ಎಂಬ ಉದ್ದೇಶದಿಂದ ಹಾಡುವ ಗಡಿಯಾರದ ಜೊತೆ ಭಾವನೆಗಳನ್ನು ಬೆಸೆದು ಕಾದಂಬರಿ ರೂಪ ನೀಡಿದ್ದೇನೆ.

• ಕಾದಂಬರಿಯಲ್ಲಿ ಬರುವ ಪಂಡಿತ್ ಬುವಾ ಯಾರು?

ಅವನೊಬ್ಬ ಸಂಗೀತ ಸಾಧಕ, ಜ್ಞಾನಿ, ಸಿದ್ಧಹಸ್ತ. ಪಂ.ಬುವಾ ಸೃಷ್ಟಿಸಿದ ಹಾಡುವ ಗಡಿಯಾರದ ಸುತ್ತಲೂ ಕತೆ ಹೆಣೆದಿರುವೆ. 80ರ ದಶಕದಲ್ಲಿ ಇಂಗ್ಲೆಂಡಿನ ವೈದ್ಯನೊಬ್ಬ ಹಾಡುವ ಗಡಿಯಾರ ಹುಡುಕಿಕೊಂಡು ಬರುತ್ತಾನೆ. ತನ್ನ ರೋಗಿಗೆ ‘ರಾಗ ಚಿಕಿತ್ಸೆ’ ನೀಡಲು ಹಾಡುವ ಗಡಿಯಾರ ಕೇಳುತ್ತಾನೆ. ತಾನಾಯ್ತು, ತನ್ನ ಗಡಿಯಾರವಾಯ್ತು ಎಂಬಂತಿದ್ದ ಬುವಾ ಅದನ್ನು ಕೊಡಲೊಪ್ಪುವುದಿಲ್ಲ. ಗಡಿಯಾರ ಸೃಷ್ಟಿಯಾಗಿದ್ದು 50–60ರ ದಶಕದಲ್ಲಿ, ಎಲ್‌ಪಿ ತಟ್ಟೆ, ಜ್ಯೂಕ್ ಬಾಕ್ಸ್ ಜೊತೆ ಸೃಷ್ಟಿಯಾಗಿದ್ದ ಪ್ರಯೋಗಾತ್ಮಕ ಗಡಿಯಾರವಿದು. ಅದರ ಸುತ್ತಲೂ ಪ್ರೀತಿ, ನೋವು, ಸೋಲು, ಗೆಲುವು, ಸಾವು ಸೇರಿ ಹಲವು ಭಾವನೆಗಳಿವೆ. ಈ ಕಾದಂಬರಿಯಲ್ಲಿ ಸಂಗೀತ ಥೆರಪಿ ಇದೆ. ಗಡಿಯಾರದ ಹಿಂದೆ ಜ್ಞಾನ, ವಿಜ್ಞಾನ, ತಂತ್ರಜ್ಞಾನವೂ ಇವೆ.

• ‘ಪ್ರಹರ’ದ ಮೂಲಕ ಸಮಾಜಕ್ಕೆ ನೀಡುವ ಸಂದೇಶವೇನು?

ನನ್ನ ಬಾನ್ಸುರಿ ನಿನಾದ, ಸಮಕಾಲೀನ ಸಂಗೀತ ಪ್ರಯೋಗ, ಸ್ವರ ಸಂಯೋಜನೆ, ವಾದ್ಯ ಸೃಷ್ಟಿಯ ಹಿಂದೆ ಭಾರತೀಯ ಸಂಗೀತ ಮನೆಮನೆಗೂ ತಲುಪಬೇಕು ಎಂಬ ಉದ್ದೇಶವಿದೆ. ಶಾಸ್ತ್ರೀಯ ಸಂಗೀತದತ್ತ ಒಲವು ಸೃಷ್ಟಿಸಬೇಕು ಎಂಬ ಕನಸಿದೆ. ಈ ಕಾದಂಬರಿ ಮೂಲಕವೂ ಅದೇ ಸಂದೇಶ ನೀಡಬಯಸಿದ್ದೇನೆ.

• ಪೆನ್ನು ಹಿಡಿದಾಗ ಸ್ವರಗಳಷ್ಟೇ ಸುಲಲಿತವಾಗಿ ಅಕ್ಷರಗಳೂ ಮೂಡಿ ಬಂದವಾ?


ಖಂಡಿತಾ ಬರಲಿಲ್ಲ, ಬಹಳ ಕಷ್ಟವಾಯಿತು. ಮೊದಲು ಇಂಗ್ಲಿಷ್‌ನಲ್ಲಿ ಕಾದಂಬರಿ ಬರೆದಿದ್ದೆ. ಬೇರೆಯವರ ಕಡೆಯಿಂದ ಭಾಷಾಂತರ ಮಾಡಿಸಲು ಯತ್ನಿಸಿದ್ದೆ. ಆದರೆ ಕವಿ ಜಯಂತ ಕಾಯ್ಕಿಣಿ ಅವರು ‘ನಿಮ್ಮ ಭಾವನೆಗಳನ್ನು ನೀವೇ ಅಭಿವ್ಯಕ್ತಿ ಮಾಡಿದರೆ ಚೆನ್ನ’ ಎಂದರು. ಆರಂಭದಲ್ಲಿ ಬಹಳ ಕಷ್ಟವಾಯಿತು, ಬರವಣಿಗೆ ಸಾಗಲಿಲ್ಲ, ಸಮಾಧಾನವಾಗಲಿಲ್ಲ. ಏಕೆಂದರೆ ನಾನು ಗೋವಾ, ಹೈದರಾಬಾದ್, ದೆಹಲಿಯಲ್ಲಿ ನನ್ನ ಬಾಲ್ಯ ಕಳೆದೆ. ಹೀಗಾಗಿ ಕನ್ನಡ ದೂರವೇ ಆಗಿತ್ತು. ಕಳೆದ 25 ವರ್ಷಗಳಿಂದೀಚೆಗೆ ನಾನು ಕನ್ನಡದ ಭಾಗವಾಗಿದ್ದೇನೆ. ಯತ್ನ, ಪ್ರಯತ್ನಗಳ ನಂತರ ಕನ್ನಡ ಕೈಗೂಡಿತು, ನಾನು ಮಾತನಾಡುವ ಧಾರವಾಡ ಕನ್ನಡದಲ್ಲೇ ಬರೆದಿದ್ದೇನೆ. ಸಾಹಿತಿಯೊಬ್ಬ ಬರೆದ ಕಾದಂಬರಿ ಎಂದುಕೊಳ್ಳುವುದಕ್ಕಿಂತ ಸಂಗೀತಗಾರನೊಬ್ಬ ಬರೆದ ಕಾದಂಬರಿ ಎಂದುಕೊಳ್ಳಬೇಕು ಎಂಬುದು ಓದುಗರಲ್ಲಿ ನನ್ನ ಅರಿಕೆ.

(ಸಪ್ನ ಬುಕ್‌ಹೌಸ್ ಪ್ರಕಟಿಸಿರುವ ‘ಪ್ರಹರ’ ಕಾದಂಬರಿ ಫೆ.25ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ಸಿ.ಅಶ್ವತ್ಥ್ ಕಲಾಭವನದಲ್ಲಿ ಬಿಡುಗಡೆಯಾಗಲಿದೆ)

ಧಾರವಾಡ ಕನ್ನಡದ ಸೋಗು ತೊಟ್ಟ ಸಂಗೀತದ ಹೊತ್ತಿಗೆ

ಲೀಲಾಜಾಲವಾಗಿ ಕೊಳಲು ನುಡಿಸುವ ಕೈ ಲೇಖನಿ ಹಿಡಿದಾಗ ಹೊಮ್ಮಿದ ಕೃತಿ ‘ಪ್ರಹರ–ಹಾಡುವ ಗಡಿಯಾರ’.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಮನೆಯೊಳಗೆ ಬಂಧಿಯಾಗಿದ್ದ ಹಲವರು ಹೊಸ ಹೊಸ ಹವ್ಯಾಸಕ್ಕೆ ತೆರೆದುಕೊಂಡರು. ಇದೇ ಲಾಕ್‌ಡೌನ್ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರನ್ನು ಸಾಹಿತಿಯನ್ನಾಗಿಸಿದೆ. ಸಪ್ತ ಸ್ವರ ನುಡಿಸಿದ ಕೈ ಇದೀಗ ಕಾದಂಬರಿಯೊಂದಕ್ಕೆ ಜನ್ಮವಿತ್ತಿದೆ. ಪ್ರಸಕ್ತ ಕಾಲದ ಮನರಂಜನಾ ವೇದಿಕೆ ‘ಓವರ್ ದಿ ಟಾಪ್’ಗಾಗಿ (ಒಟಿಟಿ) ಶಾಸ್ತ್ರೀಯ ಸಂಗೀತ ಆಧಾರಿತ ಕಥೆಯೊಂದನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದ ಪ್ರವೀಣ್ ಅವರು, ಆಪ್ತರಾದ ಜಯಂತ ಕಾಯ್ಕಿಣಿ ಅವರ ಸಲಹೆಯಂತೆ ಅದನ್ನು ಕನ್ನಡದಲ್ಲೇ ಇದೀಗ ಬರೆದು ಪ್ರಕಟಿಸಿದ್ದಾರೆ.



ಪು: 156
₹100

ಪ್ರಹರ– ಹಾಡುವ ಗಡಿಯಾರ
ಲೇ: ಪಂಡಿತ್ ಪ್ರವೀಣ್ ಗೋಡ್ಖಿಂಡಿ
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಸಂ: 080 40114455

ಶಾಸ್ತ್ರೀಯ ಸಂಗೀತವನ್ನು ಆಧರಿಸಿ ಬರೆದಿರುವ ಈ ಕಾಲ್ಪನಿಕ ಕಥೆಯನ್ನು ಹಾಡುವ ಗಡಿಯಾರದ ಸುತ್ತಮುತ್ತ ಹೆಣೆಯಲಾಗಿದೆ. ಇದು ಅಕ್ಷರ ಮತ್ತು ಸಂಗೀತದ ಮಿಶ್ರಣ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪರಿಪಾಟದಂತೆ ಸಮಯಾನುಸಾರ ರಾಗಗಳನ್ನು ಹಾಡುವ ಅಪರೂಪದ ಗಡಿಯಾರ ಇಲ್ಲಿನ ಆಕರ್ಷಣೆ. ಇದು ಕೃತಿಯಲ್ಲಿ ರೂಪಕವಾಗಿ ಆವರಿಸುತ್ತಾ ಹೋಗುತ್ತದೆ. ಇಲ್ಲಿ ಸಂಗೀತವನ್ನು ಬಳಸಿಕೊಂಡು ನೀಡುವ ಚಿಕಿತ್ಸೆಯ ಕುರಿತು ಬರವಣಿಗೆ ಇದೆ.

ಕಥಾನಾಯಕ ಪಂಡಿತ್ ಶಾರದಾಪ್ರಸಾದ್ ಬುವಾ ಅವರು ಆವಿಷ್ಕರಿಸಿದ ಹಾಡುವ ಗಡಿಯಾರ, ಚಿತ್ರದ ಜೊತೆಗೆ ವಿವರಣೆಯಲ್ಲೂ ರೋಮಾಂಚಕವಾಗಿದೆ. ಇಲ್ಲಿ ಆವಾಗಾವಾಗಿನ ರಾಗದ ಪ್ರಸ್ತಾಪವಿದೆ. ಸಂಗೀತದ ತಾಂತ್ರಿಕ ಮತ್ತು ಸುಪ್ತ ಸಂಗತಿಗಳ ಅರ್ಥ ಮತ್ತು ಟಿಪ್ಪಣಿಯೂ ಅದೇ ಪುಟದಲ್ಲಿ ಅಡಕವಾಗಿದೆ. ಸಂಗೀತದ ಪರಿಚಯವಿಲ್ಲದವರೂ ಇದನ್ನು ಓದಬಹುದು, ಅನುಭವಿಗಳಿಗೆ ಮತ್ತಷ್ಟು ರುಚಿಸಲೂಬಹುದು. ಒಂದರ್ಥದಲ್ಲಿ ಎಂಟು ಅಧ್ಯಾಯಗಳ ಈ ಕಾದಂಬರಿಯು ಸಂಗೀತವನ್ನು ಉಸಿರಾಡುತ್ತಿದೆ. ಜೊತೆಗೆ, ಮುನ್ನುಡಿ ಬರೆದ ಪಂ.ವಿನಾಯಕ ತೊರವಿ ಅವರು ಹೇಳಿದಂತೆ ಈ ಕೃತಿಯು ‘ನಶಿಸಿ ಹೋಗುತ್ತಿರುವ ರಾಗ ಸಮಯದ ಪ್ರಜ್ಞೆಯನ್ನು ಪುನಃ ಸ್ಥಾಪಿಸುವ ಗೋಡ್ಖಿಂಡಿ ಅವರ ಪ್ರಯತ್ನ’.

ಸಂಭಾಷಣೆಗಳು ಧಾರವಾಡ ಕನ್ನಡದ ಸೋಗು ತೊಟ್ಟಿದ್ದು, ಕಥೆ ಸರಾಗವಾಗಿ ಓದಿಸಿಕೊಂಡು ಹೋಗುವಂತಿದೆ.

ಜೀವಪ್ರಜ್ಞೆಯ ಪ್ರತಿನಿಧೀಕರಣದ ಕಥನ

ಲೋಕೇಶ ಅಗಸನಕಟ್ಟೆ

ಪುರಾಣ, ಇತಿಹಾಸ ಹಾಗೂ ಸಾಮಾಜಿಕ ವಸ್ತುವಿನ ಮುಖಾಂತರ ಈವರೆಗೂ ತಮ್ಮ ಬರಹದಲ್ಲಿ ಮನುಷ್ಯನ ಮಾನಸಿಕ ಕ್ಷೋಭೆಗಳನ್ನು ಶೋಧಿಸುತ್ತಾ ಬಂದ ಕಂನಾಡಿಗ ನಾರಾಯಣ ಅವರು ಈ ಕಾದಂಬರಿಯಲ್ಲಿ ಅವೆಲ್ಲವನ್ನು ಸಮನ್ವಯಗೊಳಿಸಿದ ಲೋಕದಂದುಗದ ಕಥನವನ್ನು ಫ್ಯಾಂಟಸಿ ಮಾದರಿಯಲ್ಲಿ ಮಂಡಿಸುವ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಹಾಗೆ ನೋಡಿದರೆ ಈ ಬಗೆಯ ತಂತ್ರ ಕನ್ನಡಕ್ಕೇನೂ ಹೊಸದಲ್ಲ. ಪ್ರಾಚೀನ ಪಂಚತಂತ್ರ ಕಥೆಯಿಂದ ಆರಂಭಗೊಂಡು ನವ್ಯರಲ್ಲಂತೂ ಉತ್ಕಟತೆಯನ್ನು ಪಡೆದುಕೊಂಡ ತಂತ್ರ ಕೌಶಲವಿದು. ಕಂನಾಡಿಗ ತಮ್ಮ ತಾತ್ವಿಕ ದೃಷ್ಟಿಯ ನಿರೂಪಣೆಗೆ ಈ ವಿಧಾನ ಪೂರಕವೆಂದು ಭಾವಿಸಿರುವುದು ಮತ್ತು ಅದು ಅವರ ಕೈಹಿಡಿದು ನಡೆಸಿರುವುದನ್ನು ಈ ಕಾದಂಬರಿಯ ಆಶಯ ಮತ್ತು ಆಕೃತಿಯ ನೆಲೆಯಲ್ಲಿ ಕಾಣಬಹುದು.

ಆಲದಮರವೊಂದರ ಆತ್ಮಸಾಕ್ಷಿಯಲ್ಲಿ ಸಾಗುವ ಈ ಕಥನ ಏಕಕಾಲಕ್ಕೆ ಮರದ ಆತ್ಮಕಥೆಯಂತೆಯೂ ಲೋಕಕಥೆಯಂತೆಯೂ ಒಂದರೊಳಗೊಂದು ಹೆಣೆಗೆ ಹಾಕಿಕೊಳ್ಳುತ್ತಾ ಮನುಷ್ಯಲೋಕದ ಕ್ರೌರ್ಯವನ್ನೂ, ಮಾನವೀಯ ಅಂತಃಕರಣದ ತೆಳುವಾದ ಎಳೆಗಳನ್ನೂ ಮುಖಾಮುಖಿಯಾಗಿಸುತ್ತಾ ಹೋಗುತ್ತದೆ. ಪ್ರೀತಿ, ಕರುಣೆ ಮತ್ತು ಔದಾರ್ಯಗಳು ಹೇಗೆ ಕಣ್ಮರೆಯಾಗುತ್ತಾ, ಮನುಷ್ಯನ ಸ್ವಾರ್ಥವೇ ಮೇಲುಗೈ ಪಡೆಯುತ್ತದೆಯೆಂದು ವಿಷಾದದಿಂದಲೇ ನಿರೂಪಿಸುತ್ತದೆ. ನೆಲದ ಎದೆಗೆ ಬೇರಿಳಿಸಿ ಆಕಾಶವನ್ನು ತಬ್ಬಿ ಸಕಲೆಂಟು ಪ್ರಾಣಿ, ಪಕ್ಷಿಗಳಿಗೆ ಆಸರೆ ನೀಡುತ್ತಾ, ಅದರಲ್ಲೇ ಸಾರ್ಥಕತೆ ಕಾಣುತ್ತಿರುವ ಒಂದು ಆಲದ ಸಸಿ, ಮಹಾವೃಕ್ಷವಾದಂತೆ ಮನುಷ್ಯನೇಕೆ ಮಹಾ ಮಾನವನಾಗಲಿಲ್ಲ – ಎಂಬ ದೊಡ್ಡ ಪ್ರಶ್ನೆಯೊಂದನ್ನು ಕಾದಂಬರಿ ಪ್ರತೀ ಹಂತದಲ್ಲೂ ಪರಿಶೀಲಿಸುತ್ತಾ ಹೋಗುತ್ತದೆ.



ಪು: 144
₹160

ಮಹಾವೃಕ್ಷ – ಕಾದಂಬರಿ
ಲೇ: ಕಂನಾಡಿಗ ನಾರಾಯಣ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080-22161900

ಇದಕ್ಕೆ ಪೂರಕವಾದ ಅನೇಕ ಸಂಗತಿಗಳನ್ನು ಮೌಖಿಕ ಹಾಗೂ ಲಿಖಿತ ಪಠ್ಯಗಳಿಂದ ಆಯ್ಕೆ ಮಾಡಿಕೊಂಡು ಕ್ರಮಾಗತವಾಗಿ ಮಂಡಿಸುತ್ತಾ ಹೋಗುತ್ತದೆ. ಹಾಗಾಗಿ ಆದಿಮ ಕಾಲದಿಂದ ಹಿಡಿದು ಕೊರೊನಾ ಕಾಲದವರೆಗಿನ ಅನೇಕ ಘಟನಾವಳಿಗಳನ್ನು ಕಾದಂಬರಿ ಮೆಲುಕು ಹಾಕುತ್ತದೆ. ಮರದ ನೋಟ ಕ್ರಮದಲ್ಲಿ ಅದನ್ನು ತತ್ಕಾಲೀನಗೊಳಿಸುತ್ತದೆ. ಹಾಗಾಗಿ ತ್ರಿಕಾಲದ ಸಂಭವಗಳನ್ನು ವರ್ತಮಾನಗೊಳಿಸುವ ರೀತಿಯಿಂದ ಕಾದಂಬರಿ ವಿಶಿಷ್ಟವೆನಿಸುತ್ತದೆ. ಅದು ತತ್ಕಾಲೀನವಾಗುವುದು ಪಠ್ಯಗಳ ಮರು ನಿರೂಪಣೆಯಿಂದ ಮಾತ್ರವಲ್ಲ, ಅವುಗಳ ಅಪವರ್ಗೀಕರಣಗೊಳಿಸುವ ಪ್ರಕ್ರಿಯೆಯಿಂದ.

ಮಲೆನಾಡಿನ ಶಾಂತ ಕಾಡು ಪರಿಸರದಲ್ಲಿ ಜರುಗುವ ಎಲ್ಲ ಘಟನೆಗಳಿಗೂ ಮರ ಸಾಕ್ಷಿಯಾಗುತ್ತಾ, ಗೃಹೀತ ಪಠ್ಯಗಳಿಗೆ ಇರುವ ಮತ್ತೊಂದು ಮುಖದ ಅನಾವರಣ ಕೂಡ ಮಾಡುತ್ತದೆ. ವಿಶೇಷವಾಗಿ ಪುಣ್ಯಕೋಟಿ ಪಠ್ಯದ ಹಿಂದಿರುವ ಸಂಸ್ಕೃತೀಕರಣದ ಹುನ್ನಾರವನ್ನು ಬಯಲು ಮಾಡುವುದು, ಶಿವಪ್ಪನಾಯಕ, ಕೃಷ್ಣದೇವರಾಯ, ಪುರಂದರದಾಸರ ಬದುಕಿನ ಕಥನಗಳನ್ನು ರೀತಿಯನ್ನು ವಿಭಿನ್ನವಾಗಿ ಮಂಡಿಸುತ್ತಾ ಹೋಗುವುದು.

ವಿಮರ್ಶೆ

ಅಳಲೆಕಾಯಿ ಪಂಡಿತ ಗುರುಪಾದಪ್ಪನ ಚಿಕಿತ್ಸೆ ಮತ್ತು ಕಾರ್ಪೊರೇಟ್ ಹೈಟೆಕ್ ಆಸ್ಪತ್ರೆಗಳ ಲೂಟಿಕೋರತನದ ನಡುವೆ ಕಳಚಿಹೋಗಿರುವ ಮಾನವೀಯ ಸಂಬಂಧದ ಕ್ರೂರ ಮುಖವನ್ನು ವಿಷಾದದೊಂದಿಗೆ ವಿಶ್ಲೇಷಿಸುತ್ತದೆ.

ಗಾಂಧಿ ವೇಷಧಾರಿ ಮುದುವೀರಪ್ಪನ ಆಶಯ ಮತ್ತು ಮುಗ್ಧತೆಯನ್ನು ದಾಖಲಿಸುತ್ತಾ, ಮೊಲೆಯ ಮೇಲೆ ವಿಧಿಸುತ್ತಿದ್ದ ಕರ ಮತ್ತು ಅದನ್ನು ಪ್ರತಿಭಟಿಸಿ ವ್ಯವಸ್ಥೆಯ ಮನೋಬಲವನ್ನೇ ಕುಗ್ಗಿಸುವ ಹೆಣ್ಣಿನ ಚಿತ್ರಣವನ್ನು ಮುಂದಿಡುತ್ತದೆ.

ಪರಿಸರವಾದಿಗಳು, ಅಪ್ಪಿಕೋ ಚಳವಳಿ–ಪ್ರಕೃತಿ ಹೋರಾಟದ ಪರವಾದ ಅನೇಕ ಸಂಗತಿಗಳ ಮಂಡನೆಯಾಗುವುದು ಕಥನ ಕುತೂಹಲವನ್ನು ಜೀವಂತವಾಗಿರಿಸಿವೆ. ಹಾಗಾಗಿಯೇ ಇದು ಜೀವಪ್ರಜ್ಞೆಯ ಪ್ರತಿನಿಧೀಕರಣದ ಕಥನವೂ ಆಗಿದೆ. ವೈಚಾರಿಕ ನೆಲೆ ಕಳೆದುಕೊಂಡು ಸ್ಥಾವರವಾಗುವ ಮತವ್ಯವಸ್ಥೆಯನ್ನು, ಪ್ರಗತಿಪರರ ಆಷಾಢಭೂತಿತನವನ್ನು ಕಾದಂಬರಿ ವಿಷಾದಪೂರ್ಣ ವ್ಯಂಗ್ಯದೊಂದಿಗೆ ಚಿತ್ರಿಸುತ್ತಾ ಹೋಗುತ್ತದೆ.

ಈ ಕಾದಂಬರಿಯಲ್ಲಿ ಪ್ರತಿಯೊಂದು ಅಧ್ಯಾಯವೂ ಸ್ವಾಯತ್ತವೇ. ಒಂದೊಂದನ್ನೂ ಒಂದು ‘ಕೊಂಬೆ’ ಎಂದು ಕರೆದಿದ್ದಾರೆ. ಓದುಗ ಎಲ್ಲಿಂದಲಾದರೂ ಓದಬಹುದೆಂಬ ರೀತಿಯಲ್ಲಿ ಪ್ರತೀ ಅಧ್ಯಾಯವನ್ನು ರೂಪಿಸಲಾಗಿದೆ. ಗಾಂಧಿ, ಅಂಬೇಡ್ಕರ್, ಮಾರ್ಕ್ಸ್, ಬುದ್ಧ, ಬಸವ, ಬರಹಗಾರರಾದ ಲಂಕೇಶ್, ಕುವೆಂಪು, ಕುಂವೀ ಎಲ್ಲರೂ ಇಲ್ಲಿ ಬಂದು ಹೋಗುತ್ತಾರೆ. ಸಿನಿಮಾ ಜಗತ್ತಿನ, ರಾಜಕಾರಣದ ಈ ಹೊತ್ತಿನ ವ್ಯಕ್ತಿಗಳೂ ಈ ಕಥನದ ಮಡಿಕೆಯಲ್ಲಿ ಸೇರಿಕೊಂಡಿದ್ದಾರೆ.


ಕಥೆಯ ಆಕೃತಿ ಹೇಗಿದೆಯೆಂದರೆ ಅದೊಂದು ಹೋಲ್ಡಾಲ್ ಇದ್ದ ಹಾಗೆ. ಕಾದಂಬರಿಕಾರ ಏನನ್ನಾದರೂ ಇಲ್ಲಿ ತುಂಬಬಹುದು. ತರ್ಕಕ್ಕೆ ಇಲ್ಲಿ ಆಸ್ಪದ ನೀಡದಂತೆ ಕಾದಂಬರಿಕಾರ ಆಕೃತಿ ಸಮಸ್ಯೆಯನ್ನು ಬಗೆಹರಿಸಿಕೊಂಡಿದ್ದಾರೆ. ಹಾಗಾಗಿ ಇದೊಂದು ಚಿತ್ರಸಂತೆಯನ್ನು ಹೊಕ್ಕಂಥ ಅನುಭವ, ಗಲಿಬಿಲಿ, ಗೊಂದಲ, ಓದುಗನಿಗೆ ಉಂಟಾಗುವುದುರ ಜೊತೆ ತಾನು ಒಪ್ಪಿದ ಪಠ್ಯವು ಇಷ್ಟೊಂದು ಜಾಳುಜಾಳಾಗಿದೆಯೇ ಎಂಬುದನ್ನು ಪುನರ್ ಪರಿಶೀಲಿಸುವ ಆಯಾಮಕ್ಕೂ ಕಾದಂಬರಿ ಎಡೆಮಾಡಿಕೊಡುತ್ತದೆ. ಹೀಗೆ ಘಟನೆಗಳ ಸರಮಾಲೆಯಿಂದ ಕಾದಂಬರಿ ಇಡುಕಿರಿದಿದೆ. ಇಂಥ ಮನುಷ್ಯನ ನಡಾವಳಿಗಳ ಎಷ್ಟೋ ಸಂಗತಿಗಳನ್ನು ತುಂಬಲು ಇಲ್ಲಿ ಅವಕಾಶವಿದೆ ಮತ್ತು ಸ್ವಾತಂತ್ರ್ಯವಿದೆ. ಇದು ಕಾದಂಬರಿಕಾರನ ಓದಿನ ವಿಸ್ತಾರ ಮತ್ತು ಬೌದ್ಧಿಕತೆಯನ್ನು ಅನಾವರಣ ಮಾಡುವ ವೇದಿಕೆಯೂ ಆದಂತಿದೆ. ಲೀಲಾಜಾಲವಾಗಿ ಕುತೂಹಲದಿಂದ ಓದಿಸಿಕೊಂಡು ಹೋಗುವ ಗುಣದಿಂದ ಕಾದಂಬರಿ ಓದುಗರಿಗೆ ಹಿತವಾದ ಅನುಭವವನ್ನು ನೀಡುವುದರಲ್ಲಿ ಯಶಸ್ವಿಯಾಗಿದೆ.

ಮೊದಲ ಓದು

‘ಕೃಷ್ಣಾಚಾರ್’ ಪ್ರಸಂಗ

ವೃತ್ತಿಯಲ್ಲಿ ಪತ್ರಕರ್ತರಾಗಿರುವ ನರಸಿಂಹಮೂರ್ತಿ ಪ್ಯಾಟಿ ಅವರ ಎರಡನೇ ಪ್ರಬಂಧ ಸಂಕಲನ ‘ಕೃಷ್ಣಾಚಾರ್ @ ಕಿಷ್ಕಿಂದಾ ಬಾರ್’. ಇದರಲ್ಲಿ ಒಟ್ಟು ಎಂಟು ಪ್ರಬಂಧಗಳಿವೆ. ಎಲ್ಲವೂ ಚಿಕ್ಕ, ಚೊಕ್ಕ. ಕಥೆಗಳಾದರೂ ಇಲ್ಲಿನ ಹಲವು ವಿಷಯಗಳು, ಘಟನೆಗಳು ಅನೇಕರ ಅನುಭವಗಳು.

ಇವುಗಳ ನಾಯಕ ಅಥವಾ ಪ್ರಧಾನ ಪಾತ್ರದಾರಿ ‘ಕೃಷ್ಣಾಚಾರ್’ ಎಂಬ ಪುರೋಹಿತ. ಹಲಗೇರಿ ಹಳ್ಳಿಯ ಕೃಷ್ಣಾಚಾರ್ ಹನುಮಂತ ದೇವರ ಗುಡಿಯ ಅರ್ಚಕ. ವ್ಯಕ್ತಿತ್ವ, ಮಾತು, ಜಾಣ್ಮೆ, ನಗುವಿನ ಟಾನಿಕ್‌ನಿಂದಲೇ ಜನರಿಗೆ ಕೃಷ್ಣಾಚಾರ್ ಅಚ್ಚುಮೆಚ್ಚು. ಪುರೋಹಿತನಾಗಿದ್ದರೂ ಆ ಪಾತ್ರವೇ ವರ್ಣರಂಜಿತ. ‘ರೈಟ್ ರೈಟ್ ಯಂಕಣ್ಣ’, ‘ಕಾಕಪಿಂಡ’, ‘ಭೂ ಪ್ರಹಸನ’ದಲ್ಲಿ ಎದುರಾಗುವ ಪ್ರಸಂಗ, ಅದಕ್ಕೆ ಕೃಷ್ಣಾಚಾರ್ ಅವರ ಉಪಾಯ, ಪರಿಹಾರ ಪಾತ್ರಕ್ಕೆ ಜೀವ ತುಂಬುತ್ತವೆ. ಇಲ್ಲಿ ಹಾಸ್ಯ ಶೈಲಿಯ ಬರವಣಿಗೆಯಲ್ಲಿ ಲವಲವಿಕೆಯಿದೆ. ಕಥೆಯೊಳಗೆ ಕಥೆಗಳು ಅಡಗಿವೆ. ಕೃಷ್ಣಾಚಾರ್ ಪಾತ್ರದ ಪ್ರತೀ ಮಾತಿನಲ್ಲಿ ಆಲೋಚನೆಗಳಿಗೂ ಅವಕಾಶವಿದೆ.



ಪು: 100
₹100

ಕೃಷ್ಣಾಚಾರ್ @ ಕಿಷ್ಕಿಂದಾ ಬಾರ್
ಲೇ: ನರಸಿಂಹಮೂರ್ತಿ ಪ್ಯಾಟಿ
ಪ್ರ: ಸಂಗಾತ ಪುಸ್ತಕ, ಗದಗ
ಸಂ: 9341757653

ದೇಶವನ್ನೂ ನೋಡು...

12ನೇ ಪುಟದಿಂದ...

ಅವರೊಮ್ಮೆ ಅತ್ಯಂತ ಮುಗ್ಧವಾಗಿ ‘ಈ ಲೋಹವನ್ನು ತೆಗೆದುಕೊಂಡು ಏನು ಮಾಡುತ್ತೀರಿ? ಇದರಿಂದ ಆಯುಧಗಳನ್ನು ಮಾಡಲೂ ಬರುವುದಿಲ್ಲ, ತಿನ್ನಲೂ ಬರುವುದಿಲ್ಲ, ಬಟ್ಟೆ ನೇಯಲೂ ಬರುವುದಿಲ್ಲ. ಒಂದಿಷ್ಟು ಆಭರಣಗಳನ್ನು ಮಾಡಿಕೊಳ್ಳಬಹುದು ಎಂಬುದು ಬಿಟ್ಟರೆ ಅದರಿಂದ ಯಾವ ಉಪಯೋಗವೂ ಇಲ್ಲ. ಅದರ ಬದಲು ಕೋಕೋ ಬೀಜಗಳೋ, ಆಹಾರ ಸಾಮಾಗ್ರಿಗಳೋ ನಿಮಗೆ ಹೆಚ್ಚು ಉಪಯೋಗಿ ಅಲ್ಲವೆ’ ಎಂದು ಕೇಳುತ್ತಾರೆ. ಇಂತಹ ಮುಗ್ಧರನ್ನು ಕಂಡ ಸ್ಪಾನಿಷ್ ಸೈನಿಕರು ಅತ್ಯಂತ ತಮಾಷೆಯ ಧ್ವನಿಯಲ್ಲಿ ‘ನಮ್ಮ ದೇಶದಲ್ಲಿ ಪ್ರತಿಯೊಬ್ಬರಿಗೂ ಹೃದಯದ ಬೇನೆ ಇದೆ. ಅದಕ್ಕೆ ಈ ಹಳದಿ ಲೋಹವೇ ಔಷಧಿ’ ಎಂದು ಹೇಳುತ್ತಾರೆ.

ಮುಗ್ಧ ಅಜ್‌ಟೆಕ್ ಸಾಮ್ರಾಜ್ಯವನ್ನು ಕೈವಶ ಮಾಡಿಕೊಳ್ಳುವುದು ಸ್ಪೇನ್‌ನವರಿಗೆ ಕಷ್ಟವಾಗುವುದಿಲ್ಲ. ಅಜ್‌ಟೆಕ್ ಸಾಮ್ರಾಜ್ಯದ ಹತ್ತಿರದಲ್ಲಿಯೇ ದಕ್ಷಿಣ ಅಮೆರಿಕದಲ್ಲಿದ್ದ ಇಂಕಾ ಸಾಮ್ರಾಜ್ಯಕ್ಕೂ ಜಗತ್ತಿನ ಪರಿಚಯ ಇರಲಿಲ್ಲ. ಅವರು ತಮ್ಮ ಹತ್ತಿರದಲ್ಲಿಯೇ ಇದ್ದ ಅಜ್‌ಟೆಕ್ ಸಾಮ್ರಾಜ್ಯದ ತನಕವೂ ಪ್ರವಾಸ ಮಾಡಿರಲಿಲ್ಲ. ಸಮುದ್ರಯಾನದಲ್ಲಿ ಪ್ರಾವಿಣ್ಯ ಪಡೆದುಕೊಂಡಿದ್ದ ಸ್ಪಾನಿಷ್ ಸೈನಿಕರು ಇಂಕಾ ಸಾಮ್ರಾಜ್ಯವನ್ನೂ ನುಂಗಿ ನೀರು ಕುಡಿಯುವುದು ಕಷ್ಟವೇನೂ ಆಗಲಿಲ್ಲ.

ಭಾರತವು ಜಾಗತೀಕರಣಗೊಂಡ ನಂತರ ಪ್ರವಾಸದ ಸಂಸ್ಕೃತಿ ನಮ್ಮಲ್ಲೂ ಕಂಡು ಬರುತ್ತಿದೆ. ಬಾಣಂತನಕ್ಕೆಂದು ಅಮೆರಿಕಕ್ಕೆ ಹೋಗುವ ಅತ್ತೆಯರಿಂದ ಹಿಡಿದು, ದೈಹಿಕ ಸುಖಕ್ಕೆ ಥಾಯ್ಲೆಂಡ್‌ಗೆ ಹೋಗುವ ಯುವಕರ ತನಕ ಇದು ಹಬ್ಬುತ್ತಿದೆ. ಆದರೆ ಬಹುತೇಕ ಈ ಪ್ರವಾಸಗಳ ಉದ್ದೇಶ ಆಕರ್ಷಣೀಯ ಸ್ಥಳಗಳನ್ನು ನೋಡುವುದಕ್ಕೋ, ಕುಡಿದು ಕುಣಿದು ಕುಪ್ಪಳಿಸುವುದಕ್ಕೋ, ನಮ್ಮ ಬಂಧು-ಬಳಗ ಸ್ನೇಹಿತರನ್ನು ಕಾಣುವುದಕ್ಕೋ ಸೀಮಿತವಾಗುತ್ತಿವೆ. ಆದರೆ ಹೋದ ದೇಶದ ಜನಜೀವನವನ್ನು ತಿಳಿದುಕೊಳ್ಳುವ, ಆ ಮೂಲಕ ನಮ್ಮ ಶಕ್ತಿ-ದೌರ್ಬಲ್ಯಗಳನ್ನು ಅರಿತುಕೊಂಡು ದಾಖಲಿಸುವ ಮನೋಭಾವ ಅಷ್ಟು ಹೆಚ್ಚಾಗಿ ಕಾಣುವುದಿಲ್ಲ. ಜೊತೆಗೆ ಇಂತಹ ಪ್ರವಾಸಗಳು ಅತ್ಯಂತ ದುಬಾರಿಯಾಗಿದ್ದು, ಜನಸಾಮಾನ್ಯರು ತಮಗೆ ಸಂಬಂಧಿಸಿದ್ದಲ್ಲವೇನೋ ಎಂದು ನಿರ್ಲಕ್ಷಿಸುವಂತೆ ಮಾಡುತ್ತವೆ.

ಪ್ರವಾಸ ಕೈಗೊಳ್ಳುವುದರ ಗೂಢ ಸತ್ಯವೇನೆಂದರೆ ಅದಕ್ಕೆ ಬೇಕಾದ್ದು ಮನೋನಿಶ್ಚಯ, ಧೈರ್ಯ ಮತ್ತು ಸಾಹಸ ಮನೋಭಾವಗಳು ಮಾತ್ರವಾಗಿವೆಯೇ ಹೊರತು ಹಣವಲ್ಲ. ಏಳನೆಯ ಶತಮಾನದಲ್ಲಿ ಹತ್ತು ಸಾವಿರ ಮೈಲಿಗಿಂತಲೂ ಹೆಚ್ಚು ದೂರ ನಡೆದು ಚೀನಾದಿಂದ ಭಾರತಕ್ಕೆ ಬಂದ ಹುಯೇನ್‌ತ್ಸಾಂಗ್, ತನ್ನ ಪ್ರವಾಸವನ್ನು ಪ್ರಾರಂಭಿಸಿದಾಗ ಒಂದು ಚಿಕ್ಕಾಸೂ ಇಟ್ಟುಕೊಂಡಿರಲಿಲ್ಲ ಎನ್ನುವುದನ್ನು ನಾವು ಮರೆಯುವಂತಿಲ್ಲ. ಬೌದ್ಧ ಧರ್ಮದ ಸೂತ್ರಗಳನ್ನು ಸರಿಯಾಗಿ ತಿಳಿದುಕೊಂಡು, ಅವುಗಳನ್ನು ಚೀನೀ ಭಾಷೆಗೆ ಅನುವಾದ ಮಾಡಿಕೊಡುವುದು ಮಾತ್ರ ಅವನ ಬದುಕಿನ ಪರಮ ಗುರಿಯಾಗಿತ್ತು. ಅಂತಹ ದಿಟ್ಟ ನಿರ್ಧಾರ ಅವನ ಪ್ರವಾಸದ ಬಂಡವಾಳಕ್ಕೆ ಸಾಕಾಗಿತ್ತು. ಆ ನಿಟ್ಟಿನಲ್ಲಿ ನೋಡಿದರೆ ಇಂದು ಸಾಕಷ್ಟು ಯುವಜನರು ಸೈಕಲ್ ಮೂಲಕ ಭಾರತ ಸುತ್ತುವುದು, ಅತ್ಯಂತ ಕಡಿಮೆ ಬಂಡವಾಳದಲ್ಲಿ ಹೆಗಲಿಗೆ ಚೀಲವನ್ನು ಹೇರಿಕೊಂಡು ಸಾಮಾನ್ಯ ದರ್ಜೆಯ ಸಾರಿಗೆಯಲ್ಲಿ ದೂರ ರಾಜ್ಯಗಳಿಗೆ ಪ್ರವಾಸ ಮಾಡಿ ಬರುವುದು, ಕಾಲ್ನಡಿಗೆಯಲ್ಲಿ ತೀರ್ಥಕ್ಷೇತ್ರಗಳಿಗೆ ಹೋಗಿ ಬರುವುದು, ಹಿಮಾಲಯದ ಚಾರಣಗಳನ್ನು ಮಾಡುವುದು ನನಗೆ ಹೆಚ್ಚು ಅರ್ಥಪೂರ್ಣವಾಗಿ ಕಾಣುತ್ತದೆ.

ಭಾರತೀಯರು ಪ್ರವಾಸದ ಮಹತ್ವದ ಕುರಿತು ತಪ್ಪದೆ ನೆನಪಿಡಬೇಕಾದ ಅಂಶವೊಂದಿದೆ. ಕಳೆದ ಎರಡೂವರೆ ಸಾವಿರ ವರ್ಷಗಳಿಂದಲೂ ದೂರ ದೇಶದ ಪ್ರವಾಸಿಗರು ನಮ್ಮ ದೇಶವನ್ನು ಹುಡುಕಿಕೊಂಡು ಬಂದಿದ್ದಾರೆ. ಮೊರಕ್ಕೋ, ವೆನಿಸ್, ಗ್ರೀಸ್, ಅರಬ್, ಪರ್ಷಿಯಾ, ಪೋರ್ಚ್‌ಗೀಸ್, ಚೀನಾ, ಬ್ರಿಟಿಷ್, ಜರ್ಮನಿ - ಎಲ್ಲಾ ಕಡೆಯಿಂದಲೂ ಇಲ್ಲಿಗೆ ಪ್ರವಾಸಕ್ಕೆ ಬಂದು, ತಾವು ಕಂಡ ಸಂಗತಿಗಳನ್ನು ತಮ್ಮ ಭಾಷೆಯಲ್ಲಿ ಪಠ್ಯವಾಗಿ ಬರೆದಿಟ್ಟು ಹೋಗಿದ್ದಾರೆ. ಅವು ಪೂರ್ಣ ಸತ್ಯವೋ, ಉತ್ಪ್ರೇಕ್ಷೆಯೋ, ತಮ್ಮ ದೇಶದ ಜನರಿಗೆ ರುಚಿಗಟ್ಟುವಂತೆ ಮಸಾಲೆ ಬೆರೆಸಿ ಬರೆದ ಬರವಣಿಗೆಯೋ - ನಮಗೆ ಅಷ್ಟಾಗಿ ತಿಳಿಯುವುದಿಲ್ಲ. ಆದರೂ ಇಂದು ಅವು ನಮಗೆ ಮುಖ್ಯವಾಗಿವೆ. ಒಂದು ವೇಳೆ ಅವರೇನಾದರೂ ಇಲ್ಲಿಗೆ ಬರದಿದ್ದರೆ, ತಮ್ಮ ಪ್ರವಾಸ ಚರಿತ್ರೆಗಳನ್ನು ಬರೆಯದಿದ್ದರೆ ಇಂದು ನಮಗೆ ಖಂಡಿತಾ ಈ ಮಟ್ಟಿಗೆ ನಮ್ಮ ದೇಶದ ಇತಿಹಾಸ ತಿಳಿಯುತ್ತಿರಲಿಲ್ಲ.

ನಮ್ಮವರು ಬರೆದ ಶಾಸನಗಳು, ತಾಳೆಗರಿಗಳು, ಪುಸ್ತಕಗಳು, ಸ್ಮಾರಕಗಳು ನಮ್ಮ ಇತಿಹಾಸವನ್ನು ದಟ್ಟವಾಗಿ ಕಟ್ಟಿಕೊಡುವುದಿಲ್ಲ. ನಮ್ಮವರು ರಾಮಾಯಣ, ಮಹಾಭಾರತ, ಪುರಾಣ, ರಾಜನ ವೈಭವಗಳನ್ನು ಮತ್ತೆ ಮತ್ತೆ ಚಿತ್ರಿಸುವುದರಲ್ಲಿ ತೊಡಗಿಕೊಂಡಿದ್ದರೇ ಹೊರತು, ಜನಸಾಮಾನ್ಯರ ಕುರಿತು ಬರೆಯುವುದು ಬಹುತೇಕರ ಉದ್ದೇಶವಾಗಿರಲಿಲ್ಲ. ‘ಪ್ರವಾಸಿ ಕಂಡ ಭಾರತ’ವೇ ಇಂದು ನಮ್ಮ ಬಹುಪಾಲು ಇತಿಹಾಸದ ತಳಹದಿ.

ಇತ್ತೀಚೆಗೆ ನಾವು ದೇಶ ಪ್ರಗತಿಯ ಕುರಿತು ವಿಪರೀತವಾಗಿ ಮಾತಾಡುತ್ತೇವೆ. ಅದಕ್ಕಾಗಿ ಸಾಕಷ್ಟು ಹಣವನ್ನೂ ಮುಡುಪಾಗಿಟ್ಟು, ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಳ್ಳುತ್ತೇವೆ. ಆದರೆ ಪ್ರಗತಿಯೆಂಬುದನ್ನು ರೂಢಿಸಿಕೊಳ್ಳಲು ಮೊದಲು ದೇಶಪ್ರಜೆಗಳು ಸಿದ್ಧರಾಗಬೇಕಾಗುತ್ತದೆ. ಅದಕ್ಕೆ ನಮ್ಮ ಪೂರ್ವಗ್ರಹಗಳನ್ನು ಬದಿಗಿಟ್ಟು, ವಿಶಾಲ ಮನಸ್ಸನ್ನು ಗಳಿಸಿಕೊಳ್ಳಬೇಕಾಗುತ್ತದೆ. ಬಾಲ್ಯದಿಂದಲೇ ನಮ್ಮಲ್ಲಿ ಗಟ್ಟಿಯಾಗಿ ಬೇರೂರಿರುವ ಪೂರ್ವಗ್ರಹಗಳು ಬಿಳಲುಗಳನ್ನೂ ಬಿಟ್ಟಿರುತ್ತವೆ. ಇಂತಹ ಪೂರ್ವಗ್ರಹಗಳನ್ನು ಕಳಚಲು ಪ್ರವಾಸ ಅತ್ಯಂತ ಉಪಯುಕ್ತ ಸಾಧನ. ವಿದೇಶಗಳಿಗೆ ಹೋದ ನಮ್ಮ ಹಲವಾರು ಉನ್ನತ ಜಾತಿಯ ಜನರು ‘ಜಾತಿ ದ್ವೇಷ’, ‘ಅಸ್ಪೃಶ್ಯತೆ’ ಇತ್ಯಾದಿಗಳನ್ನು ಅಲ್ಲಿ ಬೇರೆ ಬೇರೆ ರೂಪದಲ್ಲಿ ಅನುಭವಿಸಿ ಅದರ ಕಠೋರತೆಯನ್ನು ಅರಿಯುತ್ತಾರೆ. ಪ್ರವಾಸವು ಪೂರ್ವಗ್ರಹಗಳ ಕಳೆ ಕಿತ್ತು, ಮನಸ್ಸೆಂಬ ಹೊಲವನ್ನು ಹದ ಮಾಡಿಡುತ್ತದೆ. ಆಗ ಪ್ರಗತಿಯ ಬೀಜಗಳನ್ನು ಸುಲಭವಾಗಿ ಬಿತ್ತಬಹುದಾಗಿದೆ. ‘ಹಸಿಕಸ’, ‘ಒಣಕಸ’ವನ್ನು ಪ್ರತ್ಯೇಕಿಸುವಂತಹ ಸಣ್ಣಸಣ್ಣ ಸಂಗತಿಗಳೂ ಎಷ್ಟು ಪ್ರಾಮುಖ್ಯ ಎಂಬುದು ಆಗ ಅರಿವಾಗುತ್ತದೆ.


ಬೀಜದೊಳಗಿನ ಮರದಂತಹ ಸಂವಿಧಾನ ಪೀಠಿಕೆ

ದು.ಸರಸ್ವತಿ

ಪ್ರತಿಯೊಂದು ಜೀವವೂ ಅನನ್ಯ, ಸ್ವತಂತ್ರ ಅಸ್ತಿತ್ವದೊಂದಿಗೆ ಪರಸ್ಪರ ಬೆಸೆದುಕೊಂಡೂ ಇವೆ. ಉಣ್ಣುವ ಅನ್ನ, ಮಾಡುವ ಕೆಲಸ, ನಂಬುವ ದೈವ, ಪಂಥ, ಸಿದ್ಧಾಂತ, ಪ್ರೀತಿಸಿ ಒಟ್ಟಿಗಿರುವ/ ಮದುವೆಯಾಗುವ ವ್ಯಕ್ತಿಯ ಆಯ್ಕೆ ಎಲ್ಲವೂ ಪರಸ್ಪರ ಸಮ್ಮತಿ, ಇಚ್ಛೆ, ಒಲವಿನಂತೆ ನಡೆಯಬೇಕು. ಇವೆಲ್ಲವೂ ಹಕ್ಕಿನ ರೂಪದಲ್ಲಿ ಎಲ್ಲರಿಗೂ ದಕ್ಕಬೇಕೆಂಬ ಉದ್ದೇಶದಿಂದ ನಮ್ಮ ಸಂವಿಧಾನವು ಸರ್ವರಿಗೂ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವವನ್ನು ಮತ, ಧರ್ಮ, ಲಿಂಗತ್ವ, ವರ್ಗ ಇತ್ಯಾದಿ ಭೇದವಿಲ್ಲದೆ ನೀಡುತ್ತದೆ. ಅಂಬೇಡ್ಕರ್ ಅವರ ಪ್ರಕಾರ ಬಂಧುತ್ವವಿಲ್ಲದೆ ಸ್ವಾತಂತ್ರ್ಯ ಮತ್ತು ಸಮಾನತೆಗೆ ಅರ್ಥವೇ ಇಲ್ಲ.

ಮನುಷ್ಯರ ಬದುಕಿನ ಅಗತ್ಯಗಳನ್ನು ಆಧರಿಸಿ ಕಟ್ಟಿರುವ ಸಂವಿಧಾನ, ಈ ನೆಲದ ಮೂಲ ಕಾನೂನು. ದಮನ, ಶೋಷಣೆಗಳಿಗೆ ಒಳಗಾಗದಂತೆ ರಕ್ಷಾಕವಚವಾಗಿ ಸಂವಿಧಾನವನ್ನು ರಚಿಸಿದವರಲ್ಲಿ ಅಪ್ಪಟ ಪ್ರಜಾಪ್ರಭುತ್ವವಾದಿ ಅಂಬೇಡ್ಕರ್ ಪ್ರಮುಖರು. ಜನರೇ ಕೇಂದ್ರವಾದ ಸಂವಿಧಾನವನ್ನು ‘ಭಾರತದ ಜನತೆಯಾದ ನಾವು’ ‘ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ’.

ಜಾತಿ, ಲಿಂಗ, ಲಿಂಗತ್ವ, ವರ್ಗ ಇತ್ಯಾದಿ ಹೆಸರಿನಲ್ಲಿ ನಡೆದ ತಾರತಮ್ಯ ಮತ್ತು ಶೋಷಣೆಯಲ್ಲಿ ನಲುಗಿರುವ ಸಮುದಾಯಗಳಿಗೆ ಆಸರೆಯಾಗಿರುವಂತೆಯೇ ಶಿಕ್ಷೆಗೊಳಗಾದ ಕೈದಿಗಳಿಗೂ ಘನತೆ ಇದೆ, ಅದನ್ನು ರಕ್ಷಿಸಬೇಕು ಎಂಬ ಆಶಯವನ್ನೂ ಸಂವಿಧಾನವು ಹೊಂದಿದೆ. ಒಟ್ಟು 395 ಪರಿಚ್ಛೇದಗಳಿರುವ ಸಂವಿಧಾನವು ವಿಶಾಲ ಮರದಂತಿದ್ದರೆ, ಅದರ ಪೀಠಿಕೆಯು ಮರವನ್ನು ಹೊತ್ತ ಬೀಜದಂತಿದೆ. ಇಂತಹ ಪೀಠಿಕೆಯ ಕುರಿತು ವಕೀಲರಾದ ಅರವಿಂದ್ ನಾರಾಯಣ್ ಮತ್ತು ಪೂರ್ಣಾ ರವಿಶಂಕರ್ ಅವರು ‘ಸಂವಿಧಾನ ಪೀಠಿಕೆ-ಒಂದು ಪುಟ್ಟ ಮುನ್ನುಡಿ’ (ಭಾಷಾಂತರ: ಸತ್ಯಾ ಎಸ್.) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. 76 ಪುಟ್ಟಗಳ ಚಿಕ್ಕ ಪುಸ್ತಕಕ್ಕೆ ಏಳು ಪುಟಗಳ ಆಕರ ಟಿಪ್ಪಣಿಗಳಿರುವುದು ಅಧ್ಯಯನದ ಆಳಕ್ಕೆ ಸಾಕ್ಷಿಯಾಗಿವೆ.



ಪು: 83
₹80

ಸಂವಿಧಾನ ಪೀಠಿಕೆ: ಒಂದು ಪುಟ್ಟ ಮುನ್ನುಡಿ
ಲೇ: ಅರವಿಂದ್ ನಾರಾಯಣ್ ಮತ್ತು ಪೂರ್ಣಾ ರವಿಶಂಕರ್
ಅನುವಾದ: ಸತ್ಯಾ ಎಸ್.
ಪ್ರ: ಜನ ಪ್ರಕಾಶನ, ಬೆಂಗಳೂರು
ಸಂ: 6361774553 / 9448324727

ಪುಸ್ತಕದ ವಿಶೇಷವೆಂದರೆ, ಸಾಂವಿಧಾನಿಕ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವವನ್ನು ಮನಗಾಣಿಸಲು ಉಲ್ಲೇಖಿಸಿರುವ ನ್ಯಾಯಾಲಯ ಪ್ರಕರಣಗಳು ಮತ್ತು ವಿಶ್ಲೇಷಣೆಗಳು. ಸಂವಿಧಾನದ ಆಶಯಗಳು ವಾಸ್ತವವಾಗುವುದಕ್ಕೆ ಉಲ್ಲೇಖಿತ ಪ್ರಕರಣಗಳು ಸಾಕ್ಷಿಯಾದರೆ, ಎಚ್ಚೆತ್ತ ಜನರ ಹೋರಾಟಗಳಿಂದಾಗಿ ಸಾಂವಿಧಾನಿಕ ಮೌಲ್ಯಗಳ ಅರ್ಥವು ವಿವಿಧ ಕಾಲಘಟ್ಟದಲ್ಲಿ ಪಡೆದುಕೊಂಡ ವಿಭಿನ್ನ ಆಯಾಮಗಳಿಗೆ ಇಲ್ಲಿನ ವಿಶ್ಲೇಷಣೆಗಳು ಕನ್ನಡಿ ಹಿಡಿಯುತ್ತವೆ.

ಲೇಖಕರು ವಕೀಲರೂ ಆದ್ದರಿಂದ ಪುಸ್ತಕಕ್ಕೆ ಅಧಿಕೃತತೆ ದೊರೆತಿದೆ. ಕಾನೂನನ್ನು ಜನಸ್ನೇಹಿಯಾಗಿಸುವ ಉದ್ದೇಶದಿಂದ ಹುಟ್ಟುಹಾಕಿದ ‘ಪರ್ಯಾಯ ಕಾನೂನು ವೇದಿಕೆ’ಯ ಸಂಸ್ಥಾಪಕರಲ್ಲಿ ಈ ಕೃತಿಯ ಲೇಖಕ ಅರವಿಂದ್ ನಾರಾಯಣ್ ಅವರು ಒಬ್ಬರು. ಜೊತೆಗೇ ಸೆಕ್ಷನ್ 377 ರದ್ಧತಿ ಕುರಿತ ಕಾನೂನು ಹೋರಾಟದಲ್ಲಿಯೂ ಸಕ್ರಿಯವಾಗಿದ್ದವರು. ಪೂರ್ಣಾ ರವಿಶಂಕರ್ ಅವರು ಅದೇ ವೇದಿಕೆಯಲ್ಲಿ ಕೆಲಸ ಮಾಡುತ್ತಿರುವ ಸಾಮಾಜಿಕ ಕಳಕಳಿ ಇರುವ ಉತ್ಸಾಹಿ, ಯುವ ವಕೀಲೆ.

ಒಳನೋಟ

ಪುಸ್ತಕದಲ್ಲಿ ಉಲ್ಲೇಖಿಸಿರುವ ಕೆಲವು ಪ್ರಕರಣಗಳು ಗಮನಾರ್ಹವಾಗಿವೆ-

ಮರಣದಂಡನೆಗೆ ಗುರಿಯಾದ ಕೈದಿಗಳನ್ನು ಪ್ರತ್ಯೇಕಿಸಿ ಇಡುವುದನ್ನು ಪ್ರಶ್ನಿಸಿದ ಪ್ರಕರಣದಲ್ಲಿ ನ್ಯಾಯಾಲಯವು ‘ಸಂವಿಧಾನದ ವ್ಯಕ್ತಿಗಳಿಗೆ ನೀಡುವ ಹಕ್ಕು ಮತ್ತು ರಕ್ಷಣೆಗಳು ಜೈಲಿನ ಗೇಟಿಗೆ ಕೊನೆಯಾಗದೆ ಜೈಲಿನೊಳಗೂ ಕೈದಿಗಳ ಜೊತೆಗಿರುತ್ತವೆ. ಅವರ ಹಕ್ಕುಗಳನ್ನು ಜೈಲಿನ ಅಧಿಕಾರಿಗಳು ನಿರಾಕರಿಸಿದರೆ ನ್ಯಾಯಾಂಗದ ಕಣ್ಗಾವಲು ರಕ್ಷಿಸುತ್ತದೆ. ಮರಣ ದಂಡನೆಗೆ ಗುರಿಯಾದ ಕೈದಿಗಳು ಇನ್ನೂ ಹೆಚ್ಚಿನ ನೋವನ್ನು ಅನುಭವಿಸಬೇಕೆ? ಹಾಗಾದಲ್ಲಿ ನ್ಯಾಯಶಾಸ್ತ್ರವು ರೂಪಿಸಿರುವ ರೀತಿ ನೀತಿ ಹಾಗೂ ಸ್ವಾತಂತ್ರ್ಯಗಳು ಕೇವಲ ಸಾಂವಿಧಾನಿಕ ಮುಖಸ್ತುತಿಗಳಾಗಿ ಊಸರವಳ್ಳಿಯಂತೆ ಬಣ್ಣ ಬದಲಾಯಿಸುವ ಪದಗಳಾಗಿ ಬಿಡುತ್ತವೆ’ ಎಂದಿದೆ.

ಸಾಮಾಜಿಕ ನೈತಿಕತೆಯ ಮಾನದಂಡದಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ಕಳಂಕಿತರನ್ನಾಗಿಸುವ, ಅಪರಾಧಿಗಳನ್ನಾಗಿಸುವುದರ ಕುರಿತ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘ಸಂವಿಧಾನಾತ್ಮಕ ನೈತಿಕತೆಯನ್ನು ಸಾಮಾಜಿಕ ನೈತಿಕತೆಯ ಪದತಲದಲ್ಲಿ ಬಲಿ ಕೊಡಲು ಸಾಧ್ಯವೇ ಇಲ್ಲ, ಸಾಮಾಜಿಕ ನೈತಿಕತೆಯ ಹೆಸರಿನಲ್ಲಿ ಒಬ್ಬ ವ್ಯಕ್ತಿಯ ಮೂಲಭೂತ ಹಕ್ಕುಗಳು ಉಲ್ಲಂಘನೆಯಾಗಬಾರದು’ ಎಂದು ಹೇಳಿದೆ.

ಖಾಸಗಿತನದ ಹಕ್ಕನ್ನು ಕುರಿತ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘...ಕುಟುಂಬ, ಮದುವೆ, ಪ್ರಜನನ ಮತ್ತು ಲೈಂಗಿಕ ಒಲವು ಎಲ್ಲವೂ ವ್ಯಕ್ತಿ ಘನತೆಯ ಅವಿಭಾಜ್ಯ ಅಂಗವಾಗಿವೆ. ಘನತೆಯಿಂದ ಬದುಕಲು ಸಾಧ್ಯವಾದಾಗ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಬರುವುದು. ಖಾಸಗಿತನದ ಹಕ್ಕು, ಬದುಕುವ ಹಕ್ಕು ಹಾಗೂ ಸ್ವಾತಂತ್ರ್ಯದ ಹಕ್ಕುಗಳು ಘನತೆಯನ್ನು ಖಚಿತ ಪಡಿಸುತ್ತವೆ’ ಎಂದು ಸ್ಪಷ್ಟಪಡಿಸಿದೆ.

ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವುದರ ಕುರಿತ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘...ಸರ್ಕಾರಕ್ಕಾಗಲಿ ಅಥವಾ ಕಾನೂನಿಗಾಗಲಿ ಸಂಗಾತಿಗಳನ್ನು ಆಯ್ಕೆಮಾಡಿಕೊಳ್ಳುವ ಪ್ರತೀ ವ್ಯಕ್ತಿಯ ಮುಕ್ತ ಸಾಮರ್ಥ್ಯವನ್ನು ಕುಂಠಿತಗೊಳಿಸುವ ಅಧಿಕಾರವಿಲ್ಲ’ ಎಂದು ಹೇಳಿದೆ.

ರಾಜದ್ರೋಹದ ಆರೋಪ ಕುರಿತ ವಿಚಾರಣೆಯಲ್ಲಿ ಗಾಂಧೀಜಿ ಮತ್ತು ನ್ಯಾಯಮೂರ್ತಿ ಜೆ.ಬ್ರೂಮಿಫೀಲ್ಡ್ ಅವರ ನಡುವಿನ ವಾದವು ನ್ಯಾಯಶಾಸ್ತ್ರ ಮತ್ತು ಪ್ರಭುತ್ವಕ್ಕೂ ಮಿಗಿಲಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಸಾರುತ್ತದೆ.

ಇನ್ನೂ ಹಲವು ತೀರ್ಪುಗಳ ಉಲ್ಲೇಖಗಳು ಇರುವ ಪುಸ್ತಕವನ್ನು ಸತ್ಯಾ ಎಸ್. ಅವರು ಸಮರ್ಥವಾಗಿ ಭಾಷಾಂತರಿಸಿದ್ದಾರೆ. ಪುಸ್ತಕ ಓದಿದ ಮೇಲೆ ಸಮಾನತೆ, ಬಂಧುತ್ವವನ್ನು ನಂಬುವವರಿಗೆಲ್ಲಾ ಭಾರತೀಯ ಸಂವಿಧಾನದ ಬಗ್ಗೆ ಹೆಮ್ಮೆ ಎನಿಸದೆ ಇರಲಾರದು.

ತರ್ಸರ್ ಮರ್ಸರ್!

12ನೇ ಪುಟದಿಂದ...

ಈ ರಸ್ತೆ ಪಕ್ಕದಲ್ಲಿರುವ ಗೃಹ ಕೈಗಾರಿಕೆಗಳು ಸಿದ್ಧಮಾಡಿ ಒದಗಿಸುತ್ತವೆ. ಅದಕ್ಕಾಗಿ ಲೋಡುಗಟ್ಟಲೆ ಮರದ ತುಂಡುಗಳನ್ನು ಮನೆ ಮೇಲೆ ಪೇರಿಸಿ ನಿಲ್ಲಿಸಿದ್ದಾರೆ. ನಮ್ಮ ದೇಶದಲ್ಲಿ ಹನ್ನೆರಡು ಜನ ಮಾತ್ರ ಕ್ರಿಕೆಟ್ ಆಡುತ್ತಾರೆ; ಉಳಿದವರು ಅದನ್ನು ನೋಡುತ್ತಾರೆ ಎಂದು ತಿಳಿದಿದ್ದ ನನಗೆ ನಮ್ಮ ಹುಡುಗರು ಇಷ್ಟೊಂದು ಕ್ರಿಕೆಟ್ ಆಡುತ್ತಾರೆಯೇ ಎಂದು ಆಶ್ಚರ್ಯವಾಯಿತು.

ಅನಂತನಾಗ್ ಜಿಲ್ಲೆಯ ಪಹಲ್‌ಗಾಮ್, ಅಮರನಾಥ ಯಾತ್ರೆಗೆ ಹೋಗುವವರಿಗೂ ಬೇಸ್ ಕ್ಯಾಂಪ್ ಆಗಿರುವುದರಿಂದ ಅದು ವರ್ಷಂಪ್ರತಿ ಹತ್ತಾರು ಸಾವಿರ ಜನರನ್ನು ನಿರ್ವಹಿಸಬಲ್ಲ ಆವರಣ. ಈಗ ಎರಡು ವರ್ಷಗಳಿಂದ ಕೊರೊನಾದ ಕಾರಣಕ್ಕೆ ಅಮರನಾಥ ಯಾತ್ರೆಯನ್ನು ರದ್ದುಪಡಿಸಿದ್ದಾರೆ. ಅದನ್ನೇ ನಂಬಿಕೊಂಡು ಬದುಕುತ್ತ ಬಂದಿದ್ದ ಸಾವಿರಾರು ಸ್ಥಳೀಕರ ಬದುಕು ಮೂರಾಬಟ್ಟೆಯಾಗಿದೆ. ಆರು ತಿಂಗಳು ಮಾತ್ರ ಜೀವಂತವಾಗಿರುವ ಈ ಪಟ್ಟಣ ಇನ್ನಾರು ತಿಂಗಳು ಹಿಮನಿದ್ರೆಗೆ ಜಾರುತ್ತದೆ.

ಪಹಲ್‌ಗಾಮ್‌ನಲ್ಲಿ ಒಂದು ರಾತ್ರಿ ತಂಗಿದ ನಾವು ಮರುದಿನ ಇಲ್ಲಿಂದ ಸುಮಾರು ಹದಿನಾಲ್ಕು ಕಿ.ಮೀ ದೂರ ಇರುವ ಅರು ಕಣಿವೆಗೆ ವಾಹನದಲ್ಲಿ ಹೊರಟೆವು. ಸುಮಾರು ಅರ್ಧಗಂಟೆಯಲ್ಲಿ ಅರುಕಣಿವೆಯನ್ನು ತಲುಪಿ, ಅಲ್ಲಿಂದ ನಮ್ಮ ನಿಜವಾದ ಚಾರಣ ಆರಂಭವಾಯಿತು. ಅರು ಕಣಿವೆ ಸಮುದ್ರಮಟ್ಟದಿಂದ ಸುಮಾರು 8,900 ಅಡಿ ಎತ್ತರದಲ್ಲಿದೆ. ನಾವು ತಲುಪಬೇಕಾಗಿರುವ ಮರ್ಸರ್ ಸರೋವರವು ಸುಮಾರು 13,450 ಅಡಿಗಳ ಎತ್ತರದಲ್ಲಿದೆ. ಮೊದಲ ದಿನ ಸುಮಾರು ಹನ್ನೆರಡು ಕಿ.ಮೀ ಚಾರಣ ಮಾಡಿ ಲಿದ್ದರ್‌ವಾಟ್ ಎಂಬ ತಾಣವನ್ನು ತಲುಪಬೇಕು. ಲಿದ್ದರ್ ನದಿ ಝೀಲಂ ನದಿಯ ಒಂದು ಉಪನದಿ. ಮುಂದೆ ಪಾಕಿಸ್ತಾನದಲ್ಲಿ ಝೀಲಂ ನದಿಯನ್ನು ಕೂಡಿಕೊಳ್ಳುತ್ತದೆ. ನೀರ್ಗಲ್ಲುಗಳು ಕರಗಿ ಹರಿಯುವ ನದಿ. ಸ್ವಲ್ಪ ಮಟ್ಟಿನ ಸಲ್ಫರ್ ಕರಗಿರುವ ಕಾರಣಕ್ಕೆ ಹಸಿರು ಹಸಿರಾಗಿ ಕಾಣುತ್ತದೆ.

ನದಿಯುದ್ದಕ್ಕೂ ನೆಲದಿಂದ ಹುಟ್ಟಿವೆಯೇನೋ ಎನ್ನುವಂತೆ ಸುಮಾರು ಎಂಟು ಅಡಿಗಳಷ್ಟು ಎತ್ತರದ ಅಲ್ಲೇ ಸಿಕ್ಕ ಕಲ್ಲುಗಳನ್ನು ಜೋಡಿಸಿ ಮೇಲೆ ಮರದ ಮುಚ್ಚಿಗೆ ಹಾಕಿಕೊಂಡಿರುವ ಕುರಿಗಾಹಿಗಳ ಗೂಡುಗಳು. ವರ್ಷದ ಆರು ತಿಂಗಳು ಇಲ್ಲಿ ಕುರಿಗಾಹಿಗಳ ವಾಸ. ನಾವು ಕಲ್ಪಿಸಿಕೊಳ್ಳಲು ಸಾಧ್ಯವಾಗದಷ್ಟು ಎತ್ತರದಲ್ಲಿ ನೂರಾರು ಕುರಿಗಳು ಮೇಯುತ್ತಿದ್ದವು. ಕುರಿ ಕಾಯುತ್ತಿರುವ ಒಬ್ಬರು ಅಥವಾ ಇಬ್ಬರು, ಒಂದು ನಾಯಿ, ನೂರಾರು ಕುರಿ ಮೇಕೆಗಳು ಮತ್ತು ಆ ಗೂಡಿನ ಮನೆ- ಇವಿಷ್ಟು ಅವರ ಬದುಕು. ಒಬ್ಬ ಹುಡುಗ ನೂರಾರು ಕುರಿ ಮೇಕೆಗಳನ್ನು ದಿನವೆಲ್ಲ ಮೇಯಿಸಿಕೊಂಡು ಸಂಜೆಗೆ ಗೂಡು ಸೇರುವ ಈ ಸಾಹಸ ಸಾಮಾನ್ಯವಲ್ಲ. ಇನ್ನು ಆಕಸ್ಮಾತ್ ಒಂದು ಕುರಿ ತಪ್ಪಿಸಿಕೊಂಡಿದ್ದರೆ ಲಾಟೀನು ಹಿಡಿದು ರಾತ್ರಿಯೆಲ್ಲ ಬೆಟ್ಟ ಅಲೆದು ಹುಡುಕಿ ತರಬೇಕೆಂಬುದನ್ನು ಕೇಳಿ ನಡುಕ ಹುಟ್ಟಿತು.

ನದಿಯ ಆಸುಪಾಸಿನಲ್ಲಿ ನಡೆದು ಲಿದ್ದರ್‌ವಾಟ್ ಎಂಬ ಸ್ಥಳ ತಲುಪುವ ಹೊತ್ತಿಗೆ ಮಧ್ಯಾಹ್ನ ಎರಡು ಗಂಟೆಯಾಗಿತ್ತು. ಲಿದ್ದರ್ ನದಿಯ ದಡದಲ್ಲಿ ನಮಗಾಗಿ ಟೆಂಟುಗಳು ಸಿದ್ಧವಾಗಿದ್ದವು. ಕುಳಿತ ತಕ್ಷಣ ಬಿಸಿ ಬಿಸಿ ಮ್ಯಾಗಿ ತುಂಬಿದ ತಟ್ಟೆಗಳು ಕೈಗೆ ಬಂದವು. ಇನ್ನು ಒಂದು ಗಂಟೆಯಲ್ಲಿ ಊಟ ರೆಡಿ ಎಂದ ನಮ್ಮ ಚಾರಣ ಮಾರ್ಗದರ್ಶಕ ಆಸಿಫ್. ರಾತ್ರಿಯ ಊಟ ಮಾಡಿ ಟೆಂಟುಗಳನ್ನು ಸೇರಿಕೊಂಡೆವು. ರಾತ್ರಿಯೆಲ್ಲ ಲಿದ್ದರ್ ನದಿಯ ಭೋರ್ಗರೆತ ಮತ್ತು ಮೊರೆತ ಜೋಗುಳದಂತಿದ್ದು ಒಳ್ಳೆಯ ನಿದ್ದೆ ಬಂತು.

ಮಾರನೆಯ ಬೆಳಗ್ಗೆ ಬಿಸಿ ಬಿಸಿ ಕೆಹವಾ ಕೊಟ್ಟು ನಮ್ಮನ್ನು ಎಬ್ಬಿಸಿದ ಆಸಿಫ್. ಶಿಕ್‌ವಾಸ್ ಎಂಬ ಇನ್ನೊಂದು ತಂಗುದಾಣಕ್ಕೆ ತಲುಪುವುದು ಆ ದಿನದ ಗುರಿ. ಅದು ಸಮುದ್ರಮಟ್ಟದಿಂದ ಸುಮಾರು 9,000 ಅಡಿ ಎತ್ತರದ ತಾಣ. ಸುಮಾರು ಆರು ಕಿ.ಮೀ ಚಾರಣ. ಮಾರ್ಗಮಧ್ಯದಲ್ಲಿ ಅರ್ಧ ಕಿ.ಮೀ. ಗುಂಡುಕಲ್ಲುಗಳ ಮೇಲೆ ನಡೆಯಬೇಕು. ಮೊದಮೊದಲಿಗೆ ಸರ್ಕಸ್ ಎನ್ನಿಸಿದರೂ ಸ್ವಲ್ಪ ಹೊತ್ತಿನಲ್ಲಿಯೇ ಅದೂ ಒಗ್ಗಿಬಿಟ್ಟಿತು. ಮಧ್ಯಾಹ್ನ ಶಿಕ್‌ವಾಸ್ ತಲುಪಿ ಯಥಾಪ್ರಕಾರ ಮ್ಯಾಗಿ ತಿಂದು, ನಂತರ ಊಟ ಪೂರೈಸಿ ನಮ್ಮ ಗೂಡುಗಳನ್ನು ಸೇರಿಕೊಂಡೆವು.

ಬೆಳಗ್ಗೆ ತರ್ಸರ್ ಸರೋವರದ ದಂಡೆಗೆ ತಲುಪಿಸುವ ಚಾರಣ ಆರಂಭವಾಯಿತು. ಇದೂ ಬಹುಪಾಲು ಬಂಡೆಗುಂಡುಗಳ ಮೇಲಿನ ಸರ್ಕಸ್ ನಡಿಗೆ. ಸಮುದ್ರಮಟ್ಟದಿಂದ 10,600 ಅಡಿಗೆ ಏರಿಸುವ ಏರುನಡೆ. ತರ್ಸರ್ ಮತ್ತು ಮರ್ಸರ್ ಸರೋರವರಗಳು ಅಕ್ಕಪಕ್ಕದಲ್ಲಿ ಇವೆ. ಒಂದು ಕಡಿದಾದ ಬೆಟ್ಟಸಾಲು ಎರಡನ್ನೂ ಬೇರೆ ಬೇರೆಯಾಗಿಸಿದೆ. ತರ್ಸರ್ ಸರೋವರವನ್ನು ಸೃಷ್ಟಿಪೋಷಕ ಸರೋವರವೆಂದೂ ಮರ್ಸರ್ ಸರೋವರವನ್ನು ಲಯಕಾರಿ ಸರೋವರವೆಂದೂ ಅಲ್ಲಿಯ ಜನ ಭಾವಿಸುತ್ತಾರೆ. ಹಾಗಾಗಿ ತರ್ಸರ್ ಸರೋವರವನ್ನು ಹತ್ತಿರದಿಂದ ಮುಟ್ಟಿ ಬಳಸುತ್ತಾರೆ. ಸುಮಾರು ಮೂರು ಮೈಲು ಉದ್ದ ಒಂದು ಮೈಲು ಅಗಲದ ಶುದ್ಧ ನೀರಿನ ಸರೋವರ. ಅದರ ಸುತ್ತ ಚಾರಣ ಮಾಡುತ್ತಾರೆ. ಆದರೆ ಮರ್ಸರ್ ಸರೋವರವನ್ನು ದೂರದಿಂದ ನೋಡಿ ಬರುತ್ತಾರೆಯೇ ವಿನಾ ಯಾರೂ ಅಲ್ಲಿ ಇಳಿಯುವುದಿಲ್ಲ. ಅದರಹತ್ತಿರ ಹೋದರೆ ಸಾವಿನ ಹತ್ತಿರ ಹೋದಂತೆ ಎಂದು ಭಾವಿಸುತ್ತಾರೆ. ಒಂದು ಹುಟ್ಟನ್ನು ಸಂಕೇತಿಸಿದರೆ ಇನ್ನೊಂದು ಸಾವನ್ನು ಸಂಕೇತಿಸುತ್ತದೆ. ಎರಡೂ ಸುಂದರ ಸರೋವರಗಳೇ.

ತರ್ಸರ್ ತಲುಪಿದಾಗ ಮಧ್ಯಾಹ್ನ 12.30. ನಾವು ಬರುವುದನ್ನೇ ಕಾಯುತ್ತಿದ್ದಂತೆ ಮೋಡಗಳು ಆಕಾಶ ಮತ್ತು ನೆಲವನ್ನೂ ಕವಿದುಕೊಂಡವು. ಇದ್ದಕ್ಕಿದ್ದಂತೆ ಜೋರು ಮಳೆ ಆರಂಭವಾಗಿ ಒಂದೆರಡು ಸಿಡಿಲುಗಳು ಅಪ್ಪಳಿಸಿದವು. ಅತ್ಯಂತ ಅನಿರೀಕ್ಷಿತ ಹವಾಮಾನಕ್ಕೆ ಹೆಸರಾದ ಜಾಗ ಇದು. ಹತ್ತೇ ನಿಮಿಷದಲ್ಲಿ ನಾವು ಅಂದುಕೊಳ್ಳಲೂ ಸಾಧ್ಯವಾಗದ ಬದಲಾವಣೆಗಳು ಇಲ್ಲಿ ಸಂಭವಿಸುತ್ತವೆ. ಆಲಿಕಲ್ಲಿನ ಮಳೆ, ಹಿಮಪಾತ ಯಾವುದಾದರೂ ಶುರುವಾಗಿಬಿಡಬಹುದು. ಹವಾಮಾನ ಸೂಕ್ತವಾಗಿದ್ದರೆ ಮಾತ್ರ ಇಲ್ಲಿಂದ ಮುಂದಕ್ಕೋ ಹಿಂದಕ್ಕೋ ಹೋಗಲು ಸಾಧ್ಯ. ಅಲ್ಲಿಯವರೆಗೆ ಸುಮ್ಮನೆ ಟೆಂಟುಗಳಲ್ಲಿ ಕಾಯಬೇಕು. ನಮ್ಮ ನಾಯಕರು ನಾಳಿನ ಕಾರ್ಯಕ್ರಮ ಸಾಧ್ಯವಾಗುವುದೋ ಇಲ್ಲವೋ ಎಂಬ ಸಂಕಟದಲ್ಲಿದ್ದರು. ಆಗದಿದ್ದರೆ ಇನ್ನೊಂದು ದಿನ ಇಲ್ಲೇ ಕಾಯುವುದು ಎಂಬ ತೀರ್ಮಾನಕ್ಕೆ ಬಂದರು. ಮಳೆ ನಿಲ್ಲುವ ಸೂಚನೆ ಕಾಣಲಿಲ್ಲ. ಚಳಿ ತೀವ್ರವಾಗಹತ್ತಿತು. ಹಗಲಿನಲ್ಲಿಯೇ ಎಲ್ಲ ನಿದ್ದೆ ಬ್ಯಾಗಿನೊಳಕ್ಕೆ ತೂರಿಕೊಂಡರು.

ಬೆಳಗ್ಗೆ ಎದ್ದಾಗ ಆಕಾಶ ನಿಚ್ಚಳವಾಗಿತ್ತು. ಸುಮಾರು ಮೂರೂವರೆ ಕಿ.ಮೀ. ದೂರದ ಚಾರಣ ಮಾಡಿ ಸರೋವರಗಳ ನಡುವಿನ ಕಡಿದಾದ ಬೆಟ್ಟ ಹತ್ತಿ ಮರ್ಸರ್ ಸರೋವರವನ್ನು ನೋಡಿ ಮತ್ತೆ ವಾಪಸ್ ನೇರವಾಗಿ ಶೆಕ್‌ವಾಸ್‌ಗೆ ಹೋಗಿ ಅಲ್ಲಿ ತಂಗುವುದೆಂದು ತೀರ್ಮಾನವಾಯಿತು. ಒಟ್ಟು ಹದಿನಾಲ್ಕು ಕಿ.ಮೀ. ಚಾರಣ. ಅದರಲ್ಲಿ ಸುಮಾರು 10,400 ಅಡಿಯಿಂದ 13,400 ಅಡಿಗೆ ಏರಿ ಇಳಿಯಬೇಕು.

ತರ್ಸರ್ ಸರೋವರದ ದಂಡೆಗುಂಟ ನಮ್ಮ ಚಾರಣ ಆರಂಭವಾಯಿತು. ಬೆಟ್ಟಗಳಿಂದ ಜಾರಿಬಂದು ರಾಶಿಯಾಗಿರುವ ಬಂಡೆಗುಂಡುಗಳ ಮೇಲೆ ಜಂಪ್ ಮಾಡುತ್ತ ದಾರಿ ಹುಡುಕುತ್ತ ಸುಮಾರು ಎರಡು ಕಿ.ಮೀ. ದೂರ ಸಾಗಬೇಕು. ಲತಾಗೆ (ನನ್ನ ಶ್ರೀಮತಿ) ಇಡೀ ರಾತ್ರಿ ನಿದ್ದೆ ಬಂದಿರಲಿಲ್ಲ. ಚಾರಣ ಮಾಡುವುದು ಕಷ್ಟವೆನ್ನಿಸಹತ್ತಿತು. ವಾಪಸ್ಸು ಹೊರಡೋಣ ಎಂದುಕೊಳ್ಳುವಷ್ಟರಲ್ಲಿ ಹತ್ತು ನಿಮಿಷ ಬಂಡೆಯ ಮೇಲೆಯೇ ಮಲಗಿ ಎದ್ದು, ಹತ್ತಿಬಿಡೋಣ ನಡೆಯಿರಿ ಎಂದಳು. ಅಂತೂ ಅತ್ಯಂತ ಕಠಿಣವಾದ ಮರ್ಸರ್ ಸರೋವರ ಕಾಣುವ ಕಡಿದಾದ ಶಿಖರವನ್ನು ತಲುಪಿದಾಗ ಹನ್ನೆರಡು ಗಂಟೆಯಾಗಿತ್ತು. ಗುರಿ ತಲುಪಿದ ಸಂಭ್ರಮವನ್ನು ಎಲ್ಲರೂ ಅನುಭವಿಸುತ್ತಿದ್ದರು. ಲತಾ ಸಂತೋಷಕ್ಕೆ ಅತ್ತೇ ಬಿಟ್ಟಳು.

ಮರ್ಸರ್ ಸರೋವರ ಮೋಡಗಳಿಂದ ಮುಚ್ಚಿಹೋಗಿತ್ತು. ನಾವೆಲ್ಲ 13,400 ಅಡಿಗಳ ಎತ್ತರದಲ್ಲಿದ್ದೆವು. ಅಲ್ಲಿದ್ದ ಕಲ್ಲುರಾಶಿಯ ಸ್ತೂಪಕ್ಕೆ ನಾನೂ ಎರಡು ಕಲ್ಲುಗಳನ್ನು ಇಟ್ಟುಬರಲು ಅಷ್ಟುದೂರ ಹೋದೆ. ಬರುವಾಗ ಉಸಿರಾಟ ಲಯ ತಪ್ಪುತ್ತಿರುವುದು ಅರಿವಿಗೆ ಬಂತು. ಆಮ್ಲಜನಕದ ಕೊರತೆ ಗೊತ್ತಾಗುತ್ತಿತ್ತು. ಸ್ವಲ್ಪ ಹೊತ್ತು ಎಲ್ಲರೂ ಸುಧಾರಿಸಿಕೊಂಡು ವಾಪಸ್ಸು ಹೊರಡುವ ಹೊತ್ತಿಗೆ ಮರ್ಸರ್ ಸರೋವರವನ್ನು ಕವಿದುಕೊಂಡಿದ್ದ ಮೋಡಗಳು ತೆರವು ಮಾಡಿದವು. ದೂರದಿಂದಲೇ ಅದನ್ನು ನೋಡಿದೆವು.

ಅದೊಂದು ವಿಲಕ್ಷಣ ಅನುಭವ. ಸೃಷ್ಟಿ, ಸ್ಥಿತಿ, ಲಯ ಮೂರನ್ನೂ ಜೋಡಿಸಿಟ್ಟ ಹಾಗೆ. ಹುಟ್ಟು ಮತ್ತು ಸಾವಿನ ಸಂಕೇತಗಳಾದ ಎರಡು ಸರೋವರಗಳು ಅಕ್ಕಪಕ್ಕದಲ್ಲಿ ಇವೆ; ನಡುವೆ ನಾವಿದ್ದೇವೆ. ಒಂದು ಕಡೆ ಹುಟ್ಟು ಇನ್ನೊಂದು ಕಡೆ ಸಾವು. ಒಂದಕ್ಕೊಂದು ಪೂರಕ. ನಿಸರ್ಗಕ್ಕೆ ಎರಡೂ ಸಮ. ಇದನ್ನು ಅಭಿನಯಿಸಿ ತೋರುವಂತೆ ಎರಡೂ ಸರೋವರಗಳು ಮತ್ತು ನಡುವಿನ ಏಣು ನಮ್ಮ ನಿಜ ಅವಸ್ಥೆಯನ್ನು ಕಾಣಿಸಿಕೊಟ್ಟವು. ನೆಲ, ಸರೋವರ, ಬೆಟ್ಟ, ಮೋಡ ಎಲ್ಲ ಒಂದರೊಳಗೊಂದು ಬೆರೆತುಹೋಗಿರುವ ಆವರಣ.


ವಾಪಸ್ ಶೆಕ್‌ವಾಸ್ ತಲುಪಿದಾಗ ಮಧ್ಯಾಹ್ನ ಮೂರು ಗಂಟೆ. ಊಟ ಮಾಡಿ ದಿಂಬಿಗೆ ತಲೆ ಕೊಟ್ಟೆವು. ನಿದ್ರೆ ಆವರಿಸಿತು. ಸಂಜೆ ಹಿತವಾಗಿತ್ತು. ಕೆಹವಾ ಕುಡಿಯುತ್ತ ನಮ್ಮ ಕಾಶ್ಮೀರದ ಗೆಳೆಯರನ್ನು ಮಾತನಾಡಿಸಿದೆ. ಅವರ ಬದುಕಿನ ಸ್ಥಿತಿಗತಿಗಳನ್ನು ಕುರಿತು ಮನಬಿಚ್ಚಿ ಮಾತನಾಡಿದರು. ಈ ಹಿಂದೆ ಪಾಶ್ಚಾತ್ಯ ಚಾರಣಿಗರು ಮಾತ್ರ ತರ್ಸರ್, ಮರ್ಸರ್ ಮತ್ತು ಸುತ್ತಲಿನ ಕೆಲವು ಜಾಗಗಳಿಗೆ ಚಾರಣ ಮಾಡುತ್ತಿದ್ದರು. ಅವರನ್ನು ಬಿಟ್ಟರೆ ಕುರಿಗಾಹಿಗಳು ಮಾತ್ರ ಆ ಸರೋವರಗಳನ್ನು ಕಂಡವರು. ಈಗ ದಿನಕ್ಕೆ ಎರಡು ಮೂರು ಗುಂಪುಗಳು ತಮ್ಮ ತಮ್ಮ ಟೆಂಟುಗಳ ಸಮೇತ ಮಾದೇಶ್ವರನ ಜಾತ್ರೆಗೆ ಬರುವಂತೆ ಬರುತ್ತಾರೆ. ಎದುರಿಗೆ ಸಿಗುವ ಎಲ್ಲರದ್ದೂ ಆತಂಕದ ಒಂದೇ ಪ್ರಶ್ನೆ: 'ಹವಾಮಾನ ಹೇಗಿದೆ?'

ಶೆಕ್‌ವಾಸ್‌ನಲ್ಲಿ ರಾತ್ರಿ ಮೂರೂವರೆಗೆ ಆರಂಭವಾದ ಮಳೆ ಬೆಳಗ್ಗೆ ಎಂಟುಗಂಟೆಯಾದರೂ ಬಿಡಲಿಲ್ಲ. ಒಂಬತ್ತಕ್ಕೆ ಸ್ವಲ್ಪ ಬಿಡುವು ಕೊಟ್ಟಿತು. ತಕ್ಷಣವೇ ಹೊರಡಿರಿ ಎಂದರು ನಾಯಕರು. ರಾತ್ರಿಯ ಮಳೆಗೆ ಎಲ್ಲ ನದಿ ಹಳ್ಳಗಳೂ ಭೋರ್ಗರೆಯುತ್ತಿದ್ದವು. ದಾರಿಗುಂಟ ಅನೇಕ ಹಳ್ಳಗಳನ್ನು ದಾಟಲು ಕೈಕೈ ಹಿಡಿದು ನಡೆದೆವು. ಉದ್ದಕ್ಕೂ ಕೆಸರಿನ ಜಾರುದಾರಿ. ಪ್ರತಿ ಹೆಜ್ಜೆಯನ್ನೂ ಎಚ್ಚರದಿಂದ ಇಡುತ್ತಾ ಲಿದ್ದರ್‌ವಾಟ್ ತಲುಪಿದಾಗ ಮಧ್ಯಾಹ್ನ ಎರಡೂವರೆ ಆಗಿತ್ತು. ಒಂದು ವಾರ ಬರೀ ಆಲೂಪರೋಟ, ಪೋಹ, ಮ್ಯಾಗಿಗಳನ್ನು ತಿಂದು ಬಾಯಿಕೆಟ್ಟಿದ್ದ ನಮ್ಮ ನಾಯಕರು ಅಲ್ಲಿಯೇ ಇದ್ದ ಕುರಿಗಾಹಿಗಳ ಗೂಡುಗಳಲ್ಲಿ ಕೋಳಿಯ ಬೇಟೆಗೆಂದು ಹೋದರು. ರಾತ್ರಿಯ ಕೋಳಿಸಾರಿಗೆ ಆಗಲೇ ಜೊಲ್ಲುಸುರಿಸುತ್ತ ಕಾಯಲಾರಂಭಿಸಿದೆವು. ಲಿದ್ದರ್ ನದಿ ಭೋರ್ಗರೆಯುತ್ತಿತ್ತು. ಬೆಳಗ್ಗೆ ಹನ್ನೆರಡು ಕಿಲೋಮೀಟರು ನಡೆದು ಅರುವ್ಯಾಲಿಯನ್ನು ತಲುಪುವಾಗ ಮಧ್ಯಾಹ್ನವಾಗಿತ್ತು. ಇದಂತೂ ಅತ್ಯಂತ ಜಾರು ದಾರಿ. ಜಾರಿಬೀಳುವುದು ಸಾಮಾನ್ಯ. ಅದೇ ದಾರಿಯಲ್ಲಿ ಮೇಲಿನ ಬೆಟ್ಟದ ನಿವಾಸಿಗಳು ಸಣ್ಣ ಮಕ್ಕಳನ್ನು ಹೆಗಲ ಮೇಲೆ ಹೊತ್ತು ನಮಗಿಂತ ಎರಡುಪಟ್ಟು ವೇಗವಾಗಿ ಹೋಗುತ್ತಿದ್ದರು. ಅವರೂ ಜಾರುತ್ತಿದ್ದರು. ಆದರೆ ಬೇರೆ ಮಾರ್ಗವಿರಲಿಲ್ಲ. ಎದುರಿಗೆ ಸಿಕ್ಕ ನಮ್ಮನ್ನು 'ದವಾ ಹೈತೊ ದೇ' ಎನ್ನುತ್ತಿದ್ದರು. ಎಲ್ಲರೂ ಹಲ್ಲುನೋವಿಂದ ಬಳಲುತ್ತಿದ್ದರು. ಅತಿ ತಣ್ಣನೆಯ ನೀರನ್ನು ಅನಿವಾರ್ಯವಾಗಿ ಬಳಸಲೇಬೇಕಿದ್ದ ಕಾರಣದಿಂದಲೋ ಏನೋ ಎಲ್ಲರಿಗೂ ಹಲ್ಲುನೋವಿನ ಸಮಸ್ಯೆ. ಕೆಲವರು ಬೀಡಿ, ಸಿಗರೇಟು ಬೇಡುತ್ತಿದ್ದರು.

ಅಂದೇ ಶ್ರೀನಗರ ತಲುಪಿದ ನಾವು ಒಂದು ದಿನ ದಾಲ್ ಸರೋವರದ ದೋಣಿಮನೆಗಳಲ್ಲಿ ಇದ್ದು ಶ್ರೀನಗರದ ಹೂತೋಟಗಳು ಮತ್ತು ಪ್ರಸಿದ್ಧ ಹಜರತ್ ಬಾಲ್ ದರ್ಗಾ ನೋಡಿದೆವು. ಲತಾ ಒಂದಷ್ಟು ಕಾಶ್ಮೀರಿ ಶಾಲುಗಳನ್ನು ಕೊಂಡುಕೊಂಡಳು. ಮರುದಿನ ಬೆಂಗಳೂರಿನ ವಿಮಾನ ಏರಿದಾಗ ಒಮ್ಮೆ ಇಳಿದು ಮತ್ತೆ ಕಾಶ್ಮೀರದ ಬೆಟ್ಟಗಳಿಗೆ ಹೋಗಿಬರೋಣವೇ ಎನ್ನಿಸಹತ್ತಿತ್ತು. ಹಿಮಾಲಯದ ಸೆಳೆತವೇ ಹಾಗೆ. ಅದು ಇಲ್ಲವೆನ್ನಲು ಆಗದ ಹಾಗೆ ಮತ್ತೆ ಮತ್ತೆ ಕರೆಯುತ್ತಲೇ ಇರುತ್ತದೆ. ನಮ್ಮ ಚಾರಣ ವ್ಯವಸ್ಥೆಯನ್ನು ಪ್ರೀತಿಯಿಂದ ಮಾಡುವ ಕರ್ನಾಟಕ ಹೈಕ್ಸ್‌ನ (ಫೋನ್:9901996099) ಹುಡುಗರು ಆಗಲೇ ಮುಂದಿನ ಹಿಮಾಲಯ ಚಾರಣದ ದಿನಾಂಕಗಳನ್ನು ಪ್ರಕಟಿಸಿ ಅಲ್ಲಿ ಸಿಗೋಣ ಎನ್ನುತ್ತಿದ್ದರು. ಮತ್ತೆ ಸಿಗೋಣ ಎಂದು ಅಗಲಿದೆವು. ❖


ದೂರದಿಂದ ದರ್ಶನ ಕೊಟ್ಟ ಮರ್ಸರ್


ಹಿಮ ಪರ್ವತಗಳ ಶ್ರೇಣಿಯಲ್ಲಿ ಕಂಡ ಕುರಿಗಳ ಹಿಂಡು...



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರ ನೋಡಿರಣ್ಣ ಹೇಗಿದೆ?

1. 17094x13 = 222222
2. 25641x13 = 333333
3. 34188x13 = 444444
4. 42735x13 = 555555
5. 31282x13 = 666666
6. 59829x13 = 777777
7 68376x13 = 888888
8 76923x13 = 999999

ಟ್ವೆಂಟಿ – 20 ಮ್ಯಾಚ್

A (ವ್ಯಾಕರಣಕ್ಕೆ ತಕ್ಕಂತೆ ಹೊಂದಿಸಿ)

1.NOUN	A	BUT
2.PRONOUN	B	THE
3.ADJECTIVE	C	OH!
4.VERB	D	ON
5.ADVERB	E	WALK
6.PREPOSITION	F	BOY
7.INTERJUNCTION	G	INFRONT OF
8.ARTICLE	H	GREAT
9.CONJUNCTION	I	SLOWLY
10.PHRASE	J	HE

B ಗುಣಾಕಾರಗಳಿಗೂ ಗುಣಲಬ್ಧಕ್ಕೂ ಹೊಂದಿಸಿ

1 76 X 62	=	A 1152
2 52 X 36	=	B 3192
3 73 X 24	=	C 1872
4 84 X 33	=	D 7722
5 56 X 57	=	E 1752
6 27 X 36	=	F 4712
7 48X24	=	G 2432
8 64 X 38	=	H 2772
9 99X78	=	I 1682
10 38X29	=	J 972

ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಕಸಹರಿಸು = ____________
2. ಹೋರಿಗೆ ನೀರಾಟ = ____________
3. ಪ್ರತಿಗರಿ ತೋರಿಸು = ____________
4. ಸುಧಾಕರ = ____________

A ಶಬ್ದಗಳೊಡನೆ ಸರಸ

ಒಂದು ಪದ ಹಲವು ವಿಧ
ಇಲ್ಲಿ ಕೊಟ್ಟಿರುವ 'ಗಮ' ಪದಕ್ಕೆ ಹಿಂದೊಂದು ಅಕ್ಷರ ಸೇರಿಸಿ 5 ಪದ ರಚಿಸಿ

1 – ಗಮ
2 – ಗಮ
3 – ಗಮ
4 – ಗಮ
5 – ಗಮ

B ಇಲ್ಲಿ ಕೊಟ್ಟಿರುವ ಒತ್ತಕ್ಷರಕ್ಕೆ 2 ಅಕ್ಷರಗಳನ್ನು ಸೇರಿಸಿ 5 ಮರ ಗುರುತಿಸಿ

1 — ('ನ' ಒತ್ತಕ್ಷರ)
2 — ('ವ' ಒತ್ತಕ್ಷರ)
3 — ('ನ' ಒತ್ತಕ್ಷರ)
4 —('ಗ' ಒತ್ತಕ್ಷರ)
5 — ('ತ' ಒತ್ತಕ್ಷರ)






ಡಣ್ಣ ಚಿಕ್ಕು ಕೇಳಿದ್ದ ಕಥೆಯ — ತಾಯಿ ಮತ್ತು ಕಳ್ಳ ಮಗ


• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಜೈಲಿನಲ್ಲಿ ಕೊಲೆಗಡುಕನೊಬ್ಬನಿಗೆ ಗಲ್ಲು ಶಿಕ್ಷೆ ಆಯಿತು. ಶಿಕ್ಷೆ ಜಾರಿಯಾಗಲು ಕೆಲವೇ ದಿನಗಳಿರುವಾಗ ಅವನ ಕೊನೆಯ ಆಸೆ ಏನು ಎಂದು ಜೈಲಿನ ಅಧಿಕಾರಿ ಕೇಳಿದರು. ಆಗ ಅವನು ತನ್ನ ತಾಯಿಯನ್ನು ಕಾಣಬೇಕು ಎಂದ



ಶಿಕ್ಷೆಗೊಳಗಾದ ಕೈದಿಯ ಕೊನೆಯ ಆಸೆಯಂತೆ ಅವನ ತಾಯಿಯನ್ನು ಕರೆತರಲು ಪೊಲೀಸರು ಅವನ ಊರಿಗೆ ತೆರಳಿದರು. ಅದೊಂದು ಪುಟ್ಟ ಹಳ್ಳಿಯಾಗಿತ್ತು. ಗುಡಿಸಲಿನಲ್ಲಿ ಅವನ ತಾಯಿ ವಾಸಿಸುತ್ತಿದ್ದಳು


ಜೈಲಿಗೆ ಬಂದ ತಾಯಿ ಮಗನ ಸ್ಥಿತಿ ಕಂಡು ಕಣ್ಣೀರಿಟ್ಟಳು. ಆದರೆ, ಮಗ 'ನಾನು ಈ ಸ್ಥಿತಿಗೆ ಬರಲು ತಾಯಿಯಾದ ನೀನೇ ಕಾರಣ' ಎಂದು ಹೇಳಿದ. 'ಅದು ಹೇಗೆ' ಎಂದು ತಾಯಿ ಅಚ್ಚರಿಯಿಂದ ಕೇಳಿದಳು


ಬಾಲ್ಯದಲ್ಲಿ ನಾನು ಸಂತೆಯಲ್ಲಿ ಹಣ್ಣು ಕದಿಯುತ್ತಿದ್ದೆ. ಅದು ಯಾರಿಗೂ ತಿಳಿಯುತ್ತಿರಲಿಲ್ಲ. ಹೀಗೇ ನನ್ನ ಕಳ್ಳತನದ ಕೆಲಸ ಮುಂದುವರಿಸಿದೆ. ಅದು ನಿನಗೂ ಗೊತ್ತಿತ್ತು. ನಾನು ಮಾಡುವುದೆಲ್ಲವೂ ಸರಿ ಎನಿಸತೊಡಗಿತು


ಕದ್ದ ಹಣ್ಣುಗಳನ್ನು ನಿನಗೆ ತಂದು ಕೊಡುತ್ತಿದ್ದೆ. ಆಗ ನೀನು ಖುಷಿಯಿಂದ ತೆಗೆದುಕೊಂಡೆ. ಒಮ್ಮೆಯೂ ಕಳ್ಳತನ ತಪ್ಪು ಎಂದು ತಿಳಿಹೇಳಲೇ ಇಲ್ಲ. ಮುಂದೆ ನಾನು ದರೋಡೆ, ಕೊಲೆಯಂಥ ಕೃತ್ಯಗಳನ್ನು ಮಾಡಿದೆ


ಪೊಲೀಸರು ನನ್ನನ್ನು ಹುಡುಕಿ ಬಂದಾಗಲೂ ಅವರಿಗೆ ಸುಳ್ಳು ಹೇಳಿ ನನ್ನನ್ನು ಪಾರು ಮಾಡಿದೆ. ಒಂದು ವೇಳೆ ಅಂದೇ ಸಿಕ್ಕಿಬಿದ್ದಿದ್ದರೆ ಶಿಕ್ಷೆಯಾಗಿ ಬದಲಾಗುತ್ತಿದ್ದೆ. ಹಾಗಾಗಲಿಲ್ಲ. ಬಾಲ್ಯದಲ್ಲಿ ಕಲಿಸಿದ್ದು ಬದುಕಿಡೀ ಬಂದಿತು ಎಂದು ದುಃಖಿಸಿದ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ

1 ಪ್ರತಿ	3 ಜಾತಿ	5 ಹಾಲು	7 ಲೋಕ
2 ಉಂಡಿ	4 ಪ್ರತಿ	6 ಜೋಳ	8 ವಾದ

1		ಲ	
2		ಗ್ವಾ	
3		ಗ	
4		ಕೃ	
5		ಗೃ	
6		ಗು	
7		ಸ	
8		ಡಾ	

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಹಿಗ್ಗು: 1 ಗರುಡ 2 ಮಸೂರ 3 ಮುತ್ತಿಕ್ಕು 4 ತಳಿರು 5 ಉತಾರ 6 ನೇಕಾರ 7 ರಮಣ 8 ಕಾಲೇಜು

ಅದಲು ಬದಲು ಕಂಚಿ ಕದಲು: 1 ಉರಿ ಹಚ್ಚು 2 ಗುರಿಮುಟ್ಟು 3 ಕನವರಿಕೆ 4 ಮಧುರ ಭಾವನೆ

ಪದಶೋಧನೆ: ಲತಾ ಮಂಗೇಶ್ಕರ

ಟ್ವೆಂಟಿ – 20 ಮ್ಯಾಚ್:
1-F 2-I 3-L 4-G 5-J 6-A 7-K 8-H 9-D 10-O
11-Q 12-K 13-T 14-E 15-C 16-B 17-M 18-S 19-P 20-N

ಗಣಿತದಲ್ಲಿ ಗರ್ದಿ ಗಮ್ಮತ್ತು ಉತ್ತರ



ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು


ಆಕ್ಷರ ಎಂ.ಎಸ್, ಮೈಸೂರು


ಪಾರ್ಶ್ವನಾಥ ಪ್ರವೀಣ ಕಾಸಾರ, ಕಲಬುರಗಿ


ಅಮನ್ ಚಂದನ್‌ಶೆಟ್ಟಿ, ಹೊಳೆನರಸೀಪುರ